ಮಂಗಳವಾರ, ಜೂನ್ 11, 2024 | ₹ 7.00

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಕ್ರೋಶ

ನೀಟ್‌ನಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ವಿರುದ್ಧ ವಿವಿಧ ವಿದ್ಯಾರ್ಥಿ ಸಂಘಟನೆಗಳ ಕಾರ್ಯಕರ್ತರು ನವದೆಹಲಿಯಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು




SHRIJA 611
GURUSHANTAMMA 610
JEEVAN M 610
VANI D 610
PRAGATI 610
SWATI 609
JHANSIRANI 609
SOUMYA K 608
SHREYA I 608
SHRUSTI D 608
SHRASTI P 608
VISHAL 608
SUNIL S 607
SHARAN P 607
SPOORTI 607
ZAID JAMEEL 607
ISRA TAZEEN 607
SHIVANI 607
SUNIL.S 607
ABHISHEK G 606
DHEERAJ 606
ANUSHREE 605
VINAY R 605
PRATHAM D 605
SIDDALINGAYYA 605
SHIVAKUMAR 603
VARSHA 603
CHAITRA 603
SUSHMA 602
SHRINIDHI 602
SANDYA L 602
GANGA 602
NADIRA 602
SHRUSHTI K 601
KHADIJA REEM 601
BHAVANA 601
NAWAZ 601
VIGNA S 600
RISHU K 600
JANVI J 600
AKSHAY 600
AKSHATA 600
SUMA 599
ARCHANA 599
VIDYARANI 599
AKSHATA R 599
NISHITA 598
Z FATIMA 598
APOORVA 598
BHUMIKA 598
HARSHA 597
SWATHI G 597
PRASOON 596
CHANVEERESH 596
GURURAJ 596
RAJSHEKHAR 596
VAISHNAVI P 595
PRUTHVI RAJ 594
BHAVANA 594
SANJANA M 594
VARSHA P 594
RADHIKA 594
INDUMATI 594
SHALINI 593
CHETAN 593
AMAN 592
ZIYAUL M 591
BASAVAPRASAD 591
AMULYA 591
SUBIYA M 590
SANJANA P 590
NASHWA I 590
PRIYA P 589
BHAGYA R 589
RAGHAVENDRA 589
ROHAN SINGH 589
SAIKIRAN K 588
SAKSHI A 588
AKSHATA 588
BASAVARAJ B 588
ADITYA S 587
POOJA A 587
SRUSHTI B 587
AKANKSHA 586
SHIVATEJA M 585
MAHINDRA 585
BHARATH 585
SANIYA 585
VISMITA B 585
SHANTHREDDY 585
SUMIT P 585
SOURAV 584
SANOBAR 584
SANJANA 583
ABHISHEK 583
NEHA P 582
MAYUR M 582
KARTHIK N 581
MALLAREDDY 580
AKASH 580
SHIVARUDRAMANI 579
PRAGATI S 579
SHREEHARI 579
E TANVEER 578
SADIYA M 578
PRAGATI 578
ROOPA 578
SHREYA C 576
SHREYAS 575
AFRIN 575
DHANESHWARI 574
VEERESH S 574
VIKAS 573
SINDHU 573
AYESHA K 573
KIRANKUMAR 573
AMRA BEGAM 572
ADITYA 571
MADIVALAPPA 571
POOJA 571
SHALINI 570
MEGHANA 570
SAHEBGOUDA 570
ALISHA S 570
AFEEFA S 570
ADITYA B 569
DEVARAJ 569
BHAVYA 568
SHARANBASAV 568
MALLANGOUDA 568
POOJA R 567
RAMESH 566
VAISHNAVI 566
RAMYA P 566
POOJADEVI 566
KARTHIK M 565
BHOOMIKA 565
KHUSHI A 565
MANOJ P 565
BHAGYAJYOTI 563
SHRAVAN 562
PRADEEP 562
VAISHNAVI 562
ABHISHEK 561
OMKAR 561
CAUVERY 561
AKHILESH 560
JYOTHI 560
VANDANA S 559
BHAVANI 559
SHASHANK 559
BHARAT D 559
SHOBHA 558
POOJA 558
SIDDHARODH 558
V A PRANAV 557
SHARANAGOUDA 557
PREETI T 557
PRAKRUTI P 557
MUSKAN B 557
ABHINAV R 557
BASAVARAJ 556
CHANNABASAVA 556
TEJASHWINI 555
SHREYA 555
AISHWARYA 554
AMRAPALI 554
SAHANA 553
ANKUSH 553
SANGEETA 553
RENUKA 553
SAKSHI B 553
SUMIT 553
ARIF AKBAR 553
RUTUJA R 553
MD RAYHAN 552
VARSHINI A 552
RENUKA S 552
NIRANJAN 551
SAMARTH 551
AZIZUNNISA 550
GUNDA R 550
SNEHA O 550
SWAPNA 550
TANEISHA 550
AJAY 550
NAYANA 550
ADMISSIONS OPEN
FOR NEET LONG TERM BATCH 2024-25
(FOR REPEATERS)
3rd Batch Classes Starts from 11-06-2024
FOR DETAILS CONTACT:
99021 37339 / 99165 24276

ಮಂಗಳವಾರ, ಜೂನ್ 11, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 162 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ನಮಗೆ ಮಕ್ಕಳ ಸ್ವಭಾವಗಳ ಅರಿವು ಚೆನ್ನಾಗಿದ್ದಾಗ ಅವರನ್ನು ಸುಲಭವಾಗಿ ನಿಭಾಯಿಸಬಹುದು



ಆಳ-ಅಗಲ

ಆಟ: ಸಾಮರಸ್ಯದ ಪಾಠ

3 ಕೋಟಿ ಮನೆ ನಿರ್ಮಾಣಕ್ಕೆ ಸಂಪುಟ ಒಪ್ಪಿಗೆ 11

ಪರಪ್ಪನ ಅಗ್ರಹಾರ ಜೈಲಿಗೆ ಪ್ರಜ್ವಲ್ ರೇವಣ್ಣ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
76,490	23,259	₹73,400 (ಬೆಂಗಳೂರು)	₹91,200 (ಬೆಂಗಳೂರು)	83.50

ಕೇಂದ್ರ ಸಚಿವರಿಗೆ ಖಾತೆ ಹಂಚಿಕೆ

ರಾಜನಾಥ್– ರಕ್ಷಣೆ , ಅಮಿತ್ ಶಾ– ಗೃಹ, ನಿರ್ಮಲಾ–ಹಣಕಾಸು, ಜೈಶಂಕರ್– ವಿದೇಶಾಂಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಸರ್ಕಾರದ ನೂತನ ಸಚಿವರಿಗೆ ಸೋಮವಾರ ಖಾತೆ ಹಂಚಿಕೆ ಮಾಡಲಾಗಿದೆ.

ಖಾತೆ ಹಂಚಿಕೆ ಮಾಡುವ ಸಂದರ್ಭದಲ್ಲಿ ಮೋದಿ ಅವರು ಕಳೆದ ಸರ್ಕಾರದಲ್ಲಿ ಭದ್ರತೆಗೆ ಸಂಬಂಧಿಸಿದ ಸಂಪುಟ ಸಮಿತಿಯ ಭಾಗವಾಗಿದ್ದ ನಾಲ್ವರ ಖಾತೆಗಳಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಅಮಿತ್ ಶಾ (ಗೃಹ), ರಾಜನಾಥ್ ಸಿಂಗ್ (ರಕ್ಷಣೆ), ನಿರ್ಮಲಾ ಸೀತಾರಾಮನ್ (ಹಣಕಾಸು, ಕಾರ್ಪೊರೇಟ್ ವ್ಯವಹಾರ), ಎಸ್. ಜೈಶಂಕರ್ (ವಿದೇಶಾಂಗ) ಅದೇ ಖಾತೆಗಳಲ್ಲಿ ಮುಂದುವರಿಯಲಿದ್ದಾರೆ. ನಿತಿನ್ ಗಡ್ಕರಿ (ಹೆದ್ದಾರಿ), ಪೀಯೂಷ್ ಗೋಯಲ್ (ವಾಣಿಜ್ಯ), ಧರ್ಮೇಂದ್ರ ಪ್ರಧಾನ್ (ಶಿಕ್ಷಣ), ಭೂಪೇಂದ್ರ ಯಾದವ್ (ಪರಿಸರ) ಅವರಿಗೆ ಹಿಂದಿನ ಖಾತೆಗಳನ್ನೇ ನೀಡಲಾಗಿದೆ. ಇದು ಹಿಂದಿನ ಸರ್ಕಾರದ ಆಡಳಿತದ ನಿರಂತರತೆಗೆ ಒತ್ತು ನೀಡಿರುವುದನ್ನು ಸೂಚಿಸುತ್ತದೆ. ಜತೆಗೆ, ಮೋದಿ ಅವರು ಖಾತೆ ಹಂಚಿಕೆಯಲ್ಲಿ ಅಚ್ಚರಿಯ ಪ್ರಯೋಗಗಳಿಗೆ ಕೈ ಹಾಕಿಲ್ಲ. ಮಿತ್ರ ಪಕ್ಷಗಳ ಒತ್ತಡಗಳಿಗೂ ಮಣೆ ಹಾಕಿಲ್ಲ.

ನಿರ್ಮಲಾ ಅವರು ಸತತ ಮೂರನೇ ಅವಧಿಗೆ ಮೋದಿ ಸಂಪುಟಕ್ಕೆ ಸೇರ್ಪಡೆಗೊಂಡ ಏಕೈಕ ಮಹಿಳೆ. ಅವರ ಮುಂದಿರುವ ಮೊದಲ ಸವಾಲು 2024–25ರ ಹಣಕಾಸು ವರ್ಷಕ್ಕೆ ಪೂರ್ಣ ಬಜೆಟ್ ಮಂಡಿಸುವುದಾಗಿದೆ.

ನಿರ್ಮಲಾ ಅವರು 2024ರ ಫೆಬ್ರುವರಿಯ ಮಧ್ಯಂತರ ಬಜೆಟ್ ಸೇರಿದಂತೆ ಸತತ ಆರು ಬಜೆಟ್‌ಗಳನ್ನು ಮಂಡಿಸಿದ್ದಾರೆ. ಜುಲೈನಲ್ಲಿ ಮಂಡಿಸುವ ಬಜೆಟ್ ನಿರ್ಮಲಾ ಅವರ ಸತತ ಏಳನೇ ಬಜೆಟ್ ಆಗಲಿದೆ. ಈ ಮೂಲಕ ಅವರು, ಸತತ ಆರು ಬಜೆಟ್ ಮಂಡಿಸಿರುವ ಮೊರಾರ್ಜಿ ದೇಸಾಯಿ ದಾಖಲೆಯನ್ನು ಮುರಿಯಲಿದ್ದಾರೆ.

ಮಾಜಿ ಮುಖ್ಯಮಂತ್ರಿಗಳಾದ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ, ಮನೋಹರ್ ಲಾಲ್ ಖಟ್ಟರ್ ಅವರಿಗೆ ವಸತಿ ಹಾಗೂ ನಗರ ವ್ಯವಹಾರಗಳು, ವಿದ್ಯುತ್ ಖಾತೆ ಕೊಡಲಾಗಿದೆ. ಹಿಂದಿನ ಸರ್ಕಾರದಲ್ಲಿ ನರೇಂದ್ರ ಸಿಂಗ್ ತೋಮರ್ ಅವರು ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದರು. ಬಳಿಕ ಮಧ್ಯಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದಿದ್ದರು. ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತರು 13 ತಿಂಗಳು ಸತ್ಯಾಗ್ರಹ ನಡೆಸಿದ್ದರು. ಲೋಕಸಭಾ ಚುನಾವಣೆಗೆ ಮುನ್ನ ಕನಿಷ್ಠ ಬೆಂಬಲ ಬೆಲೆಗೆ ಆಗ್ರಹಿಸಿ ಕೃಷಿಕರು ಬೀದಿಗಿಳಿದಿದ್ದರು.

ಆರೋಗ್ಯ, ರಾಸಾಯನಿಕ ಹಾಗೂ ರಸಗೊಬ್ಬರ ಖಾತೆಯು ಜೆ.ಪಿ.ನಡ್ಡಾ ಪಾಲಾಗಿದೆ. ಅವರು 2014ರಿಂದ 2019ರ ವರೆಗೆ ಆರೋಗ್ಯ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಕಿರಣ್ ರಿಜಿಜು ಅವರು ಹಿಂದೆ ಭೂವಿಜ್ಞಾನ ಸಚಿವರಾಗಿದ್ದರು. ಅವರಿಗೆ ಈ ಸಲ ಸಂಸದೀಯ ವ್ಯವಹಾರಗಳ ಖಾತೆ ಕೊಡಲಾಗಿದೆ.

ಅಶ್ವಿನಿ ವೈಷ್ಣವ್ ಅವರಿಗೆ ರೈಲ್ವೆ ಖಾತೆಯ ಜತೆಗೆ ಮಾಹಿತಿ ಮತ್ತು ಪ್ರಸಾರ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆಗಳನ್ನು ಹಂಚಿಕೆ ಮಾಡಲಾಗಿದೆ. ಈ ಹಿಂದೆ ಜಲಶಕ್ತಿ ಸಚಿವರಾಗಿದ್ದ ಗಜೇಂದ್ರ ಸಿಂಗ್ ಶೆಖಾವತ್ ಅವರಿಗೆ ಸಂಸ್ಕೃತಿ ಹಾಗೂ ಪ್ರವಾಸೋದ್ಯಮ ಖಾತೆ ನೀಡಲಾಗಿದೆ.

11ನೇ ಪುಟ ನೋಡಿ

ರಾಜ್ಯದವರಿಗೆ ಯಾವ ಖಾತೆ?



- ನಿರ್ಮಲಾ ಸೀತಾರಾಮನ್
ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರ



- ಎಚ್.ಡಿ. ಕುಮಾರಸ್ವಾಮಿ
ಬೃಹತ್ ಕೈಗಾರಿಕೆ ಮತ್ತು ಉಕ್ಕು



- ಪ್ರಲ್ಹಾದ ಜೋಶಿ
ಗ್ರಾಹಕರ ವ್ಯವಹಾರ, ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಹೊಸ ಮತ್ತು ನವೀಕರಿಸಬಹುದಾದ ಇಂಧನ



- ವಿ.ಸೋಮಣ್ಣ
ಜಲಶಕ್ತಿ ಮತ್ತು ರೈಲ್ವೆ (ರಾಜ್ಯ ದರ್ಜೆ)



- ಶೋಭಾ ಕರಂದ್ಲಾಜೆ
ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಕಾರ್ಮಿಕ ಮತ್ತು ಉದ್ಯೋಗ (ರಾಜ್ಯ ದರ್ಜೆ)

ಜೋಶಿ ಖಾತೆ ಬದಲು

ಕೇಂದ್ರ ಸಂಪುಟದಲ್ಲಿ ಜೆಡಿಎಸ್‌ನ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಉಕ್ಕು ಹಾಗೂ ಬೃಹತ್ ಕೈಗಾರಿಕೆ, ಪ್ರಲ್ಹಾದ ಜೋಶಿ ಅವರಿಗೆ ಆಹಾರ, ಗ್ರಾಹಕ ವ್ಯವಹಾರಗಳು ಹಾಗೂ ನವೀಕರಿಸಬಹುದಾದ ಇಂಧನ ಖಾತೆ ಕೊಡಲಾಗಿದೆ. ಕುಮಾರಸ್ವಾಮಿ ಅವರು ಕೃಷಿ ಖಾತೆ ಮೇಲೆ ಆಸೆ ವ್ಯಕ್ತಪಡಿಸಿದ್ದರು. ಜೋಶಿ ಅವರು ಹಿಂದಿನ ಸಂಪುಟದಲ್ಲಿ ಸಂಸದೀಯ ವ್ಯವಹಾರಗಳು ಹಾಗೂ ಗಣಿ ಸಚಿವರಾಗಿದ್ದರು.

ವಿ.ಸೋಮಣ್ಣ ಅವರಿಗೆ ಜಲಶಕ್ತಿ ಹಾಗೂ ರೈಲ್ವೆ ರಾಜ್ಯ ಖಾತೆಗಳನ್ನು ನೀಡಲಾಗಿದೆ. 'ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ₹5,300 ಕೋಟಿ ಅನುದಾನ ಪ್ರಕಟಿಸಿದೆ. ಈ ಯೋಜನೆಯಡಿ ಹನಿ ನೀರಾವರಿ ಮೂಲಕ ಮಧ್ಯ ಕರ್ನಾಟಕಕ್ಕೆ ನೀರು ಉಣಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯಡಿ ತುಮಕೂರು ಕ್ಷೇತ್ರದ ಚಿಕ್ಕನಾಯನಹಳ್ಳಿ, ಪಾವಗಡ, ಶಿರಾ ಮತ್ತಿತರ ಪ್ರದೇಶಗಳಿಗೆ ಅನುಕೂಲವಾಗಲಿದೆ. ಜಲಶಕ್ತಿ ಖಾತೆ ನೀಡಿದರೆ ಈ ಯೋಜನೆಯನ್ನು ತ್ವರಿಗತಿಯಲ್ಲಿ ಅನುಷ್ಠಾನ ಮಾಡಲು ಅನುಕೂಲವಾಗುತ್ತದೆ' ಎಂದು ಸೋಮಣ್ಣ ಅವರು ನರೇಂದ್ರ ಮೋದಿ ಹಾಗೂ ಅಮಿತ್ ಶಾ ಅವರಿಗೆ ಮನವಿ ಮಾಡಿದ್ದರು.

ಭದ್ರಾ ಮೇಲ್ದಂಡೆ ಯೋಜನೆ ಅನುದಾನ ಬಿಡುಗಡೆ ಸಂಬಂಧ ಕೇಂದ್ರದ ಬಿಜೆಪಿ ಸರ್ಕಾರ ಹಾಗೂ ಕರ್ನಾಟಕದ ಕಾಂಗ್ರೆಸ್ ಸರ್ಕಾರದ ನಡುವೆ ಜಟಾಪಟಿ ನಡೆದಿದೆ. ಶೋಭಾ ಕರಂದ್ಲಾಜೆ ಅವರಿಗೆ ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಉದ್ಯಮ ಖಾತೆ ಸಿಕ್ಕಿದೆ. ಅವರು ಈ ಹಿಂದೆ ಕೃಷಿ ಖಾತೆ ರಾಜ್ಯ ಸಚಿವರಾಗಿದ್ದರು.

'ಕಿಸಾನ್ ನಿಧಿ'ಗೆ ₹20 ಸಾವಿರ ಕೋಟಿ



ಸತತ ಮೂರನೇ ಅವಧಿಗೆ ದೇಶದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ಮರುದಿನವಾದ ಸೋಮವಾರ ನರೇಂದ್ರ ಮೋದಿ ಅವರು 'ಕಿಸಾನ್ ನಿಧಿ'ಯ ಹಣ ಬಿಡುಗಡೆಗೆ ಸಂಬಂಧಿಸಿದ ಕಡತಕ್ಕೆ ಸಹಿ ಹಾಕಿದರು.

'ಕಿಸಾನ್ ನಿಧಿ'ಯ 17ನೇ ಕಂತಿನ ಸುಮಾರು ₹20 ಸಾವಿರ ಕೋಟಿ ಬಿಡುಗಡೆಗೆ ಪ್ರಧಾನಿ ಸಮ್ಮತಿ ನೀಡಿದ್ದು, ಇದರಿಂದ ದೇಶದ ಸುಮಾರು 9.3 ಕೋಟಿ ರೈತರಿಗೆ ನೆರವಾಗಲಿದೆ.

11ನೇ ಪುಟ ನೋಡಿ



ಸಭೆ ಪ್ರಧಾನಿ ನರೇಂದ್ರ ಮೋದಿ ಅವರ ನಿವಾಸದಲ್ಲಿ ಸೋಮವಾರ ನಡೆದ ಎನ್‌ಡಿಎ ನೂತನ ಸರ್ಕಾರದ ಮೊದಲ ಸಂಪುಟ ಸಭೆಯಲ್ಲಿ ಮಿತ್ರಪಕ್ಷಗಳ ಎಲ್ಲ ಸಚಿವರೂ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಬಿಜೆಪಿ ಕಾರ್ಯಕರ್ತರಿಗೆ ಚೂರಿ ಇರಿತ: ಐವರ ಬಂಧನ

ಪ್ರಜಾವಾಣಿ ವಾರ್ತೆ

ಮುಡಿಪು (ದಕ್ಷಿಣ ಕನ್ನಡ): ನರೇಂದ್ರ ಮೋದಿ ಅವರು ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ ಪ್ರಯುಕ್ತ ಭಾನುವಾರ ರಾತ್ರಿ ವಿಜಯೋತ್ಸವ ಮುಗಿಸಿ ಮರಳುತ್ತಿದ್ದ ಬಿಜೆಪಿಯ ಇಬ್ಬರು ಕಾರ್ಯಕರ್ತರಿಗೆ ಉಳ್ಳಾಲ ತಾಲ್ಲೂಕಿನ ಬೋಳಿಯಾರ್‌ನಲ್ಲಿ ಚೂರಿಯಿಂದ ಇರಿಯಲಾಗಿದೆ. ಪೊಲೀಸರು ಐವರನ್ನು ಬಂಧಿಸಿದ್ದಾರೆ.

ಬೋಳಿಯಾರ್ ನಿವಾಸಿಗಳಾದ ಮೊಹಮ್ಮದ್ ಶಾಕಿರ್ (28), ಅಬ್ದುಲ್ ರಜಾಕ್ (40), ಅಬೂಬಕರ್ ಸಿದ್ದಿಕ್ (35), ಸವದ್ (18), ಮೋನು ಅಲಿಯಾಸ್ ಹಫೀಜ್ (24) ಬಂಧಿತ ಆರೋಪಿಗಳು ಎಂದು ಪೊಲೀಸರು ತಿಳಿಸಿದ್ದಾರೆ.

ಬಿಜೆಪಿ ಕಾರ್ಯಕರ್ತರಾಗಿರುವ ಇನ್ನೋಳಿ ಧರ್ಮನಗರದ ನಿವಾಸಿಗಳಾದ ಹರೀಶ್ (41) ಹಾಗೂ ನಂದಕುಮಾರ (24) ಚೂರಿ ಇರಿತಕ್ಕೆ ಒಳಗಾದವರು. ಅದೇ ಊರಿನ ಕಿಶನ್ ಕುಮಾರ್ ಹಲ್ಲೆಗೊಳಗಾದವರು. ಚೂರಿ ಇರಿತಕ್ಕೊಳಗಾದ ಇಬ್ಬರು ಗಾಯಾಳುಗಳಿಗೆ ದೇರಳಕಟ್ಟೆಯ ಕೆ.ಎಸ್ ಹೆಗ್ಡೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

7ನೇ ಪುಟ ನೋಡಿ

ಮಸೀದಿಯಿಂದ ಪ್ರತಿದೂರು

ಬೋಳಿಯಾರ್‌ನ ಮೊಹಿಯುದ್ದೀನ್ ಜುಮ್ಮಾ ಮಸೀದಿ ಎದುರು ಪ್ರಚೋದನಕಾರಿ ಘೋಷಣೆ ಕೂಗಿ ಬೆದರಿಕೆ ಒಡ್ಡಿದ ಆರೋಪದ ಮೇಲೆ ಬಿಜೆಪಿ ಕಾರ್ಯಕರ್ತರು ಎನ್ನಲಾದ ಸುರೇಶ್, ವಿನಯ್, ಸುಭಾಷ್, ರಂಜಿತ್ ಹಾಗೂ ಧನಂಜಯ ವಿರುದ್ಧ ಕೊಣಾಜೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಈ ಬಗ್ಗೆ ಮಸೀದಿ ಆಡಳಿತ ಸಮಿತಿಯ ಅಧ್ಯಕ್ಷ ಪಿ.ಕೆ.ಅಬ್ದುಲ್ ಅವರು ಪೊಲೀಸರಿಗೆ ದೂರು ನೀಡಿದ್ದರು. 'ಮೆರವಣಿಗೆಯಲ್ಲಿ ಸಾಗಿ ಬಂದ ಗುಂಪು ಮಸೀದಿ ಎದುರು ಧ್ವನಿವರ್ಧಕದಲ್ಲಿ ಗಟ್ಟಿಯಾಗಿ ಹಾಡುಗಳನ್ನು ಕೇಳಿಸಿ, 'ಜೈಶ್ರೀರಾಮ್' ಎಂದು ಘೋಷಣೆ ಕೂಗಿತ್ತು. ಅಲ್ಲದೇ ಮಸೀದಿಯನ್ನು ಧ್ವಂಸಗೊಳಿಸುವುದಾಗಿ ಬೆದರಿಕೆ ಹಾಕಿತ್ತು' ಎಂದು ಪಿ.ಕೆ.ಅಬ್ದುಲ್ ಆರೋಪಿಸಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಮಾನಹಾನಿಕರ ಆರೋಪ ಮಾಳವೀಯ ನೋಟಿಸ್



ನವದೆಹಲಿ (ಪಿಟಿಐ): ಮಾನಹಾನಿಕರ ಆರೋಪಗಳನ್ನು ತಮ್ಮ ವಿರುದ್ಧ ಹೊರಿಸಿದ್ದಾರೆ ಎಂಬ ಕಾರಣಕ್ಕೆ ಬಿಜೆಪಿಯ ಐ.ಟಿ. ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಅವರು ಕೋಲ್ಕತ್ತದ ವಕೀಲ ಶಂತನು ಸಿನ್ಹಾ ಅವರಿಗೆ ನೋಟಿಸ್ ನೀಡಿದ್ದಾರೆ. ಆರೋಪಗಳಿಗೆ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದ್ದಾರೆ.

ಆರೋಪಗಳು ಲೈಂಗಿಕ ಶೋಷಣೆಗೆ ಸಂಬಂಧಿಸಿವೆ, ಹೀಗಾಗಿ ಮಾಳವೀಯ ಅವರನ್ನು ಬಿಜೆಪಿಯ ಐ.ಟಿ. ವಿಭಾಗದ ಮುಖ್ಯಸ್ಥ ಹುದ್ದೆಯಿಂದ ವಜಾಗೊಳಿಸಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ. ಅಲ್ಲದೆ, ಮಾಳವೀಯ ಅವರ ವಿರುದ್ಧ ಸ್ವತಂತ್ರ ತನಿಖೆಯೊಂದರ ಅಗತ್ಯವಿದೆ ಎಂದು ಕೂಡ ಹೇಳಿದೆ.

ಪ್ರತಿಕ್ರಿಯೆಗೆ ಸಂಪರ್ಕಿಸಿದಾಗ, ಮಾಳವೀಯ ಅವರು ಆರೋಪಗಳ ಬಗ್ಗೆ ನೇರವಾಗಿ ಏನೂ ಹೇಳಲಿಲ್ಲ. ಆದರೆ, ತಾವು ಸಿನ್ಹಾ ಅವರಿಗೆ ಕಳುಹಿಸಿದ ನೋಟಿಸ್ ಬಗ್ಗೆ ತಿಳಿಸಿದರು. ಆ ನೋಟಿಸ್‌ನಲ್ಲಿ ಮಾಳವೀಯ ಅವರ ವಕೀಲರು, ಶಂತನು ಅವರು ಮಾಳವೀಯ ಅವರ ಹೆಸರು ಹಾಳುಮಾಡುವ ಉದ್ದೇಶದಿಂದ ಫೇಸ್‌ಬುಕ್ ಬರಹದ ಮೂಲಕ ಮಾನಹಾನಿಕರ ಆರೋಪ ಮಾಡಿದ್ದಾರೆ ಎಂದು ಹೇಳಿದ್ದಾರೆ.

'ನನ್ನ ಫೇಸ್‌ಬುಕ್ ಬರಹವು ಯಾರನ್ನೂ ನಿರ್ದಿಷ್ಟವಾಗಿ ಉದ್ದೇಶಿಸಿಲ್ಲ. ದೆಹಲಿಯ ಮುಖ್ಯಸ್ಥರನ್ನು ಮೆಚ್ಚಿಸಲು, ಆ ಮೂಲಕ ಇಲ್ಲಿ ತಮ್ಮ ಹುದ್ದೆಗಳಿಗೆ ಅಂಟಿಕೊಂಡಿರಲು ಸಂಶಯಾಸ್ಪದ ಮಾರ್ಗ ಅನುಸರಿಸುವ ರಾಜ್ಯದ ಬಿಜೆಪಿ ನಾಯಕರನ್ನು ಪ್ರಶ್ನಿಸಲು ನಾನು ಬಯಸಿದ್ದೆ. ನನ್ನ ಫೇಸ್‌ಬುಕ್ ಪೋಸ್ಟ್ ಅನ್ನು ತಪ್ಪಾಗಿ ಅರ್ಥೈಸಲಾಗಿದೆ' ಎಂದು ಸಿನ್ಹಾ ಹೇಳಿದ್ದಾರೆ.

'ನಾನು ಹೇಳಿರುವ ವಿಚಾರಗಳಿಗೆ ಬದ್ಧನಾಗಿದ್ದೇನೆ. ನನ್ನ ಪೋಸ್ಟ್ ಹಿಂಪಡೆದಿಲ್ಲ, ಯಾವುದೇ ಬೆದರಿಕೆಗೆ ಮಣಿಯುವುದೂ ಇಲ್ಲ' ಎಂದು ಹೇಳಿದ್ದಾರೆ. ಸಿನ್ಹಾ ಅವರು ಸಾರ್ವಜನಿಕವಾಗಿ ಕ್ಷಮೆ ಯಾಚಿಸಬೇಕು ಎಂದು ಮಾಳವೀಯ ಅವರು ಆಗ್ರಹಿಸಿದ್ದಾರೆ.

ತೆರಿಗೆ ಪಾಲು: ರಾಜ್ಯಕ್ಕೆ ₹ 5,096 ಕೋಟಿ

ನವದೆಹಲಿ: ಕೇಂದ್ರ ಸರ್ಕಾರವು ಕರ್ನಾಟಕ ಸರ್ಕಾರಕ್ಕೆ ತೆರಿಗೆ ಪಾಲಿನ ಕಂತಿನ ರೂಪದಲ್ಲಿ ₹5,096 ಕೋಟಿಯನ್ನು ಸೋಮವಾರ ಬಿಡುಗಡೆ ಮಾಡಿದೆ. ಕೇಂದ್ರವು 28 ರಾಜ್ಯಗಳಿಗೆ ಒಟ್ಟು ₹1,39,750 ಕೋಟಿ ಬಿಡುಗಡೆಗೊಳಿಸಿದೆ.

15ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ, ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರ ಸಂಗ್ರಹಿಸುವ ತೆರಿಗೆಯಲ್ಲಿ ಶೇ 41 ರಷ್ಟನ್ನು ರಾಜ್ಯ ಸರ್ಕಾರಗಳಿಗೆ 14 ಕಂತುಗಳಲ್ಲಿ ಹಂಚಿಕೆ ಮಾಡಲಾಗುತ್ತದೆ. 'ಜೂನ್ ತಿಂಗಳ ಕಂತಿನ ಹೊರತಾಗಿ, ಒಂದು ಹೆಚ್ಚುವರಿ ಕಂತು ಬಿಡುಗಡೆಗೊಳಿಸಲಾಗಿದೆ. ಇದು ರಾಜ್ಯ ಸರ್ಕಾರಗಳಿಗೆ ಅಭಿವೃದ್ಧಿ ಹಾಗೂ ಬಂಡವಾಳ ವೆಚ್ಚಕ್ಕೆ ಹೆಚ್ಚಿನ ಹಣ ತೊಡಗಿಸಲು ಅನುಕೂಲವಾಗುತ್ತದೆ' ಎಂದು ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ. 2024–25ನೇ ಸಾಲಿನ ಮಧ್ಯಂತರ ಬಜೆಟ್‌ನಲ್ಲಿ ರಾಜ್ಯಗಳಿಗೆ ತೆರಿಗೆ ಪಾಲಿನ ರೂಪದಲ್ಲಿ ₹12,19,783 ಕೋಟಿ ನೀಡಲು ಹಂಚಿಕೆ ಮಾಡಲಾಗಿತ್ತು. ಜೂನ್ ಕಂತಿನ ಬಿಡುಗಡೆ ಬಳಿಕ ರಾಜ್ಯಗಳಿಗೆ ಈವರೆಗೆ ಒಟ್ಟು 2,79,500 ಕೋಟಿ ಬಿಡುಗಡೆ ಮಾಡಿದಂತಾಗಿದೆ.

5 ಭಾಗಗಳಾಗಿ ಬೆಂಗಳೂರು?

ಕಾಂಗ್ರೆಸ್ ಶಾಸಕರ ನಿಯೋಗದ ಜತೆ ಸಿ.ಎಂ, ಡಿಸಿಎಂ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಲಿಕೆ ವ್ಯಾಪ್ತಿಯನ್ನು ಸರ್ಜಾಪುರ, ಎಲೆಕ್ಟ್ರಾನಿಕ್ ಸಿಟಿ ಸೇರಿ ಹೊರವಲಯದ ಹಲವು ಭಾಗಗಳಿಗೆ ವಿಸ್ತರಿಸಿ, ಐದು ಪಾಲಿಕೆಗಳನ್ನಾಗಿ ವಿಭಾಗಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.

ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಕೇಂದ್ರ ಎಂದು ಬೆಂಗಳೂರು ಪಾಲಿಕೆಯನ್ನು ಐದು ಭಾಗ ಮಾಡಿ, ತಲಾ 80 ವಾರ್ಡ್‌ಗಳಾಗಿ ಮರು ವಿಂಗಡಿಸುವ ಕುರಿತು ಬೆಂಗಳೂರು ಕಾಂಗ್ರೆಸ್ ಶಾಸಕರ ನಿಯೋಗದ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚರ್ಚೆ ನಡೆಸಿದರು.

ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾದಲ್ಲಿ ಸೋಮವಾರ ಈ ಸಭೆ ನಡೆಯಿತು.

'ನ್ಯಾಯಾಲಯದ ಆದೇಶ ಇರುವುದರಿಂದ ಯಾವುದೇ ನೆಪ ಮುಂದಿಟ್ಟು ಬಿಬಿಎಂಪಿ ಚುನಾವಣೆ ಮುಂದೂಡಲು ಅವಕಾಶ ಇಲ್ಲ. ಚುನಾವಣೆ ಮಾಡಲೇಬೇಕೆಂಬ ಒತ್ತಡವೂ ಇದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚಿಸಿ, ಈಗಾಗಲೇ ಮರು ವಿಂಗಡಿಸಿದಂತೆ 225 ವಾರ್ಡ್‌ಗಳಿಗೆ ಚುನಾವಣೆ ನಡೆಸಬೇಕು ಎಂಬ ಬಗ್ಗೆಯೂ ಚರ್ಚೆ ನಡೆಯಿತು' ಎಂದು ಮೂಲಗಳು ಹೇಳಿವೆ.

ಬೆಂಗಳೂರು ಹೊರವಲಯ ಸಾಕಷ್ಟು ಬೆಳೆದಿದೆ. ಹೆಚ್ಚು ಆದಾಯವಿರುವ ಸರ್ಜಾಪುರ, ಎಲೆಕ್ಟ್ರಾನಿಕ್ ಸಿಟಿ ಭಾಗದ ಪ್ರದೇಶಗಳು ಬಿಬಿಎಂಪಿಯಿಂದ ಹೊರಗಿವೆ. ಈ ಪ್ರದೇಶಗಳನ್ನು ಬಿಬಿಎಂಪಿ ವ್ಯಾಪ್ತಿಗೆ ತಂದರೆ ಹೆಚ್ಚಿನ ತೆರಿಗೆ ಸಂಗ್ರಹಕ್ಕೂ ಅವಕಾಶವಾಗಲಿದೆ. ಈ ಹಿನ್ನೆಲೆಯಲ್ಲಿ ಪಾಲಿಕೆ ವ್ಯಾಪ್ತಿಯನ್ನು ವಿಸ್ತರಿಸಿ, ಐದು ವಿಭಾಗಗಳಾಗಿ ವಿಂಗಡಿಸುವುದು ಸೂಕ್ತ ಎಂಬ ಅಭಿಪ್ರಾಯವನ್ನು ಕ್ಷೇತ್ರ ಮರು ವಿಂಗಡಣಾ ಸಮಿತಿ ಸಲಹೆ ನೀಡಿದೆ. ಈ ಬಗ್ಗೆ ಸಭೆಯಲ್ಲಿ ಸಮಾಲೋಚನೆ ನಡೆದಿದೆ.

3ನೇ ಪುಟ ನೋಡಿ

ಪ್ರತಿ ಮನೆಗೆ ₹100 ತ್ಯಾಜ್ಯ ಸೇವಾ ಶುಲ್ಕ

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಪ್ರತಿ ಮನೆಗೆ ತ್ಯಾಜ್ಯ ನಿರ್ವಹಣೆಗಾಗಿ ತಿಂಗಳಿಗೆ ₹100 ಸೇವಾ ಶುಲ್ಕ ವಿಧಿಸಲು ಸರ್ಕಾರ ಮುಂದಾಗಿದೆ.

ಜೂನ್ 1ರಿಂದ ನಗರದ ತ್ಯಾಜ್ಯ ನಿರ್ವಹಣೆ ಜವಾಬ್ದಾರಿ ವಹಿಸಿಕೊಂಡಿರುವ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ಕಂಪನಿ (ಬಿಎಸ್‌ಡಬ್ಲ್ಯುಎಂಎಲ್) ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದ್ದು, ಈ ಸೇವಾ ಶುಲ್ಕವನ್ನು ಜೂನ್‌ನಿಂದಲೇ ಸಂಗ್ರಹಿಸಲು ಅನುವು ಮಾಡಿಕೊಡಬೇಕು ಎಂದು ಮನವಿ ಮಾಡಿದೆ. ಇದಕ್ಕೆ ಸರ್ಕಾರ ಒಪ್ಪಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಸತಿ ಪ್ರದೇಶದಲ್ಲಿ ಪ್ರತಿ ಮನೆಗೆ ತಿಂಗಳಿಗೆ ₹100, ಒಂದೇ ಕಟ್ಟಡದಲ್ಲಿ ಮೂರ್ನಾಲ್ಕು ಮನೆಗಳಿದ್ದರೆ ಪ್ರತಿ ಮನೆಗೆ ತಲಾ ₹100 ಹಾಗೂ ಅಪಾರ್ಟ್‌ಮೆಂಟ್‌ನಲ್ಲಿ ಪ್ರತಿ ಫ್ಲ್ಯಾಟ್‌ಗೆ ₹100 ವಿಧಿಸಲು ನಿರ್ಧರಿಸಲಾಗಿದೆ.

3ನೇ ಪುಟ ನೋಡಿ

ಷೇರುಪೇಟೆ: ಏರಿಳಿತದ ಆಟ

ಮುಂಬೈ (ಪಿಟಿಐ): ಸತತ ಮೂರು ದಿನದ ಓಟದ ನಂತರ ಸೋಮವಾರ ಷೇರು ಸೂಚ್ಯಂಕಗಳು ಇಳಿಕೆ ಕಂಡಿವೆ.

ಆರಂಭಿಕ ವಹಿವಾಟಿನಲ್ಲಿ ಏರಿಕೆ ಕಂಡಿದ್ದ ಷೇರು ಸೂಚ್ಯಂಕಗಳು ಐ.ಟಿ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಕುಸಿತ ಕಂಡವು. ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 203 ಅಂಶ ಇಳಿಕೆಯಾಗಿ 76,490ಕ್ಕೆ ಅಂತ್ಯಗೊಂಡಿತು. 10

ಪವನ್ ಕಲ್ಯಾಣ್‌ಗೆ ಡಿಸಿಎಂ ಸ್ಥಾನ?

ಹೈದರಾಬಾದ್: ರಾಷ್ಟ್ರ ರಾಜಧಾನಿ ನವದೆಹಲಿಯ ಪ್ರವಾಸದಿಂದ ಮರಳಿರುವ ತೆಲುಗುದೇಶಂ ಪಕ್ಷದ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಈಗ ರಾಜ್ಯ ಸಚಿವ ಸಂಪುಟ ರಚನೆಯತ್ತ ಚಿತ್ತ ಹರಿಸಿದ್ದಾರೆ.

ತೆಲುಗುದೇಶಂ ಪಕ್ಷ ಸ್ಪಷ್ಟ ಬಹುಮತ ಪಡೆದು ರಾಜ್ಯದಲ್ಲಿ ಅಧಿಕಾರಕ್ಕೆ ಮರಳಿದೆ. ಮುಖ್ಯಮಂತ್ರಿಯಾಗಿ ನಾಯ್ಡು ಅವರು ಇದೇ 12ರಂದು ಪ್ರಮಾಣವಚನ ಸ್ವೀಕರಿಸಲಿದ್ದಾರೆ. 11

ಬ್ಯಾಂಕ್‌ಗಳಲ್ಲಿ ₹1,731.16 ಕೋಟಿ ಠೇವಣಿ

ನಿಗಮ ಮುಖ್ಯಸ್ಥರಿಗೆ ನೋಟಿಸ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದೇಶ ಉಲ್ಲಂಘಿಸಿ ಸಂಸ್ಥೆಯ ಹಣವನ್ನು ಬ್ಯಾಂಕ್ ಖಾತೆಗಳಲ್ಲಿ ಇರಿಸಿರುವ ನಿಗಮ ಮತ್ತು ಮಂಡಳಿಗಳ ವ್ಯವಸ್ಥಾಪಕ ನಿರ್ದೇಶಕರು ಮತ್ತು ಲೆಕ್ಕಾಧಿಕಾರಿಗಳಿಗೆ ನೋಟಿಸ್ ನೀಡಲು ಸಿದ್ಧತೆ ಆರಂಭಿಸಿದೆ.

ನಿಗಮ, ಮಂಡಳಿಗಳು ಬ್ಯಾಂಕ್ ಖಾತೆಗಳಲ್ಲಿ ಹಣ ಇರಿಸದಂತೆ 2023ರಲ್ಲೇ ಆದೇಶ ಹೊರಡಿಸಲಾಗಿತ್ತು. ರಾಜ್ಯ ಹುಜೂರ್ ಖಜಾನೆಯಲ್ಲಿ ಆಯಾ ಸಂಸ್ಥೆಗಳ ಖಾತೆ ತೆರೆದು ಹಣ ಠೇವಣಿ ಇರಿಸುವಂತೆ ಆದೇಶದಲ್ಲಿ ಸೂಚಿಸಲಾಗಿತ್ತು. ಆದರೆ, ಬಹುತೇಕ ನಿಗಮ, ಮಂಡಳಿಗಳು ಅದನ್ನು ಪಾಲಿಸಿಲ್ಲ.

ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿರುವ ಹಗರಣ ಬಹಿರಂಗವಾದ ಬಳಿಕ ಹಣಕಾಸು ಇಲಾಖೆಯು ಪರಿಶೀಲನೆ ಆರಂಭಿಸಿದೆ. ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡಗಳ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಕಂದಾಯ ಇಲಾಖೆಯ ಅಧೀನದಲ್ಲಿರುವ ಜಾತಿವಾರು ನಿಗಮ, ಮಂಡಳಿಗಳು ಬ್ಯಾಂಕ್‌ಗಳಲ್ಲಿ ಖಾತೆ ತೆರೆದು ₹1,731.16 ಕೋಟಿ ಇರಿಸಿರುವುದು ಪತ್ತೆಯಾಗಿದೆ. ಈ ಎಲ್ಲ ನಿಗಮ, ಮಂಡಳಿಗಳು ಖಾತೆಗಳಲ್ಲಿ ಇರಿಸಿರುವ ಮೊತ್ತವನ್ನು ಹುಜೂರ್ ಖಜಾನೆಗೆ ವರ್ಗಾಯಿಸುವಂತೆ ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್. ಕೆ. ಅತೀಕ್ ಅವರು ಸಂಬಂಧಿಸಿದ ಬ್ಯಾಂಕ್‌ಗಳ ಮುಖ್ಯಸ್ಥರಿಗೆ ಪತ್ರ ಬರೆದಿದ್ದಾರೆ.

'ಇನ್ನೂ ಹಲವು ಇಲಾಖೆಗಳ ಅಧೀನದಲ್ಲಿರುವ ನಿಗಮ, ಮಂಡಳಿಗಳ ಹಣದ ವಹಿವಾಟಿನ ಕುರಿತು ಮಾಹಿತಿ ಸಂಗ್ರಹಿಸಲಾಗುತ್ತಿದೆ. ಎಲ್ಲ ನಿಗಮ, ಮಂಡಳಿಗಳ ಹಣವನ್ನೂ ಬ್ಯಾಂಕ್‌ಗಳಿಂದ ಹುಜೂರ್ ಖಜಾನೆಯ ಖಾತೆಗೆ ವರ್ಗಾಯಿಸಲು ಕ್ರಮ ಕೈಗೊಳ್ಳಲಾಗುವುದು' ಎಂದು ಹಣಕಾಸು ಇಲಾಖೆ ಮೂಲಗಳು ತಿಳಿಸಿವೆ.

ಸಿದ್ಧತೆ ಏನು?

- ಆದೇಶ ಉಲ್ಲಂಘಿಸಿದ ನಿಗಮ, ಮಂಡಳಿ ವ್ಯವಸ್ಥಾಪಕ ನಿರ್ದೇಶಕರಿಗೆ ನೋಟಿಸ್
- ಉತ್ತರ ಬಂದ ಬಳಿಕ ಕೈಗೊಳ್ಳುವ ಕ್ರಮದ ಕುರಿತು ನಿರ್ಧಾರ
- ಮುಖ್ಯಮಂತ್ರಿ ನೇತೃತ್ವದಲ್ಲಿ ಮಂಗಳವಾರ ನಡೆಯುವ ಸಭೆಯಲ್ಲಿ ತೀರ್ಮಾನ

ಸಾರಿಗೆ ಸಂಸ್ಥೆಗಳ ಆದಾಯ ಗಣನೀಯ ಏರಿಕೆ

ಮಹಿಳೆಯರಿಗೆ ಹರ್ಷ ತಂದ 'ಶಕ್ತಿ'ಗೆ ವರ್ಷ

- ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಮಹಿಳೆಯರಿಗೂ, ಸಾರಿಗೆ ನಿಗಮಗಳಿಗೂ ಶಕ್ತಿ ತುಂಬಿದ ರಾಜ್ಯ ಸರ್ಕಾರದ ಮಹತ್ವದ ಯೋಜನೆ 'ಶಕ್ತಿ' ಜಾರಿಯಾಗಿ ಒಂದು ವರ್ಷ ತುಂಬಿದೆ. ಬಸ್‌ಗಳಲ್ಲಿ 225 ಕೋಟಿ ಬಾರಿ ಮಹಿಳೆಯರು ಪ್ರಯಾಣಿಸಿದ್ದಾರೆ. ಉಚಿತ ಪ್ರಯಾಣದ ಟಿಕೆಟ್ ಮೌಲ್ಯ ₹5,450 ಕೋಟಿಯಾಗಿದೆ.

2023ರ ವಿಧಾನಸಭಾ ಚುನಾವಣೆಯ ಪೂರ್ವದಲ್ಲಿ ಕಾಂಗ್ರೆಸ್ ಘೋಷಿಸಿದ್ದ 'ಗ್ಯಾರಂಟಿ'ಗಳಲ್ಲಿ ಮಹಿಳೆಯರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣದ ಯೋಜನೆಯೂ ಒಂದಾಗಿತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಜೂನ್ 11ರಂದು ಯೋಜನೆ ಜಾರಿಯಾಗಿತ್ತು. ಕೆಎಸ್‌ಆರ್‌ಟಿಸಿ, ಬಿಎಂಟಿಸಿ,



ಎನ್‌ಡಬ್ಲ್ಯುಕೆಆರ್‌ಟಿಸಿ ಮತ್ತು ಕೆಕೆಆರ್‌ಟಿಸಿ ಬಸ್‌ಗಳಲ್ಲಿ ಅಲ್ಲಿಯವರೆಗೆ ದಿನಕ್ಕೆ 84.5 ಲಕ್ಷ ಜನ ಪ್ರಯಾಣಿಸುತ್ತಿದ್ದರು. ಯೋಜನೆ ಜಾರಿಯಾದ ಮೇಲೆ ನಿತ್ಯ 1.06 ಕೋಟಿಗೆ ಏರಿಕೆಯಾಗಿದೆ. ದುಡಿಯುವ ವರ್ಗದ ಮಹಿಳೆಯರಿಗೆ ಉಪಯೋಗವಾಗಿದೆ. ಜೊತೆಗೆ ಧಾರ್ಮಿಕ ಕೇಂದ್ರ, ಪ್ರವಾಸಿ ತಾಣಗಳಿಗೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಳವಾಗಲು ಕೂಡ ಕಾರಣವಾಗಿದೆ.

6ನೇ ಪುಟ ನೋಡಿ

ನಾಲ್ಕು ನಿಗಮಗಳ ಅಂಕಿ ಅಂಶ

- 390.58 ಕೋಟಿ — ಶಕ್ತಿ ಜಾರಿಯಾದಲ್ಲಿಂದ ಇಲ್ಲಿವರೆಗಿನ ಒಟ್ಟು ಪ್ರಯಾಣಿಕರ ಸಂಖ್ಯೆ
- 225.15 — ಕೋಟಿ ಮಹಿಳೆಯರ ಪ್ರಯಾಣದ ಸಂಖ್ಯೆ
- ₹5,481.40 — ಉಚಿತವಾಗಿ ಪ್ರಯಾಣಿಸಿದವರ ಟಿಕೆಟ್ ಮೌಲ್ಯ

₹1,070 ಕೋಟಿ ಬಾಕಿ



ಸರ್ಕಾರವು ಶಕ್ತಿ ಯೋಜನೆಗೆ 2023–24ನೇ ಸಾಲಿನಲ್ಲಿ ₹3,200 ಕೋಟಿ ಬಿಡುಗಡೆ ಮಾಡಿದೆ. ₹1,070 ಕೋಟಿ ಬಾಕಿ ಇದೆ. 2024–25ನೇ ಸಾಲಿನ ಬಜೆಟ್‌ನಲ್ಲಿ ₹5,015 ಕೋಟಿ ಇಡಲಾಗಿದ್ದು, ಇಲ್ಲಿವರೆಗೆ ₹1,254 ಕೋಟಿ ಬಿಡುಗಡೆ ಮಾಡಿದೆ ಎಂದು ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

ಈ ಆರ್ಥಿಕ ವರ್ಷದಲ್ಲಿ ಪ್ರತಿ ತಿಂಗಳು 'ಶಕ್ತಿ' ಹಣವನ್ನು ನಿಗಮಗಳಿಗೆ ಪಾವತಿ ಮಾಡಲಾಗುತ್ತಿದೆ. ಹಳೆ ಬಾಕಿ ಪಾವತಿಗೆ ಕ್ರಮ ವಹಿಸಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪ್ರತಿಕ್ರಿಯಿಸಿದರು.

ದತ್ತಿ ಪ್ರಶಸ್ತಿಗೆ ಕೃತಿಗಳ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘ ನೀಡುವ 'ಲೇಖಕಿ ಎಚ್.ವಿ. ಸಾವಿತ್ರಮ್ಮ ದತ್ತಿ ಪ್ರಶಸ್ತಿ'ಗೆ ಲೇಖಕಿಯರಿಂದ ಕೃತಿಗಳನ್ನು ಆಹ್ವಾನಿಸಲಾಗಿದೆ.

ಪ್ರಶಸ್ತಿ ವಿವರಗಳು: 2020ನೇ ಸಾಲಿಗೆ 'ಕಥಾ ಸಂಕಲನ', 2021ನೇ ಸಾಲಿಗೆ 'ಅನುವಾದ ಸಾಹಿತ್ಯ' (ಯಾವುದೇ ಭಾಷೆಯಿಂದ ಕನ್ನಡಕ್ಕೆ ಅನುವಾದಗೊಂಡಿರಬೇಕು), 2022ನೇ ಸಾಲಿಗೆ 'ಕಾದಂಬರಿ' ಹಾಗೂ 2023ನೇ ಸಾಲಿಗೆ ಕಥಾ ಸಂಕಲನಗಳನ್ನು ಆಹ್ವಾನಿಸಲಾಗಿದೆ. ಆಯಾ ಪ್ರಕಾರಗಳಲ್ಲಿ ಮೂರು ಪ್ರತಿಗಳನ್ನು ಕಳುಹಿಸಬೇಕು. ಕೃತಿಗಳನ್ನು ಕಳುಹಿಸಲು ಜೂನ್ 26 ಕೊನೆಯ ದಿನ. ಪ್ರಶಸ್ತಿಯು ₹25,000 ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ ಎಂದು ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲೇಖಕಿಯರ ವಿಳಾಸ ಹಾಗೂ ದೂರವಾಣಿ ಸಂಖ್ಯೆಯನ್ನು ಪ್ರತ್ಯೇಕ ಹಾಳೆಯಲ್ಲಿ ಬರೆದು ಕಳಿಸಬೇಕು. ಈಗಾಗಲೇ ಸಾವಿತ್ರಮ್ಮ ಮತ್ತು ಅನುಪಮಾ ಪ್ರಶಸ್ತಿಗಳನ್ನು ಪಡೆದವರು ಇದರಲ್ಲಿ ಭಾಗವಹಿಸುವಂತಿಲ್ಲ.

ಕೃತಿಗಳನ್ನು ಕಳುಹಿಸುವ ವಿಳಾಸ: ಕರ್ನಾಟಕ ಲೇಖಕಿಯರ ಸಂಘ, 206, 2ನೇ ಮಹಡಿ, ವಿಜಯ ಮ್ಯಾನ್ಶನ್, 2ನೇ ಮುಖ್ಯರಸ್ತೆ, ಚಾಮರಾಜಪೇಟೆ ಬೆಂಗಳೂರು -560018

ಹೆಚ್ಚಿನ ವಿವರಗಳಿಗೆ: 9480051222, 8073765665

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸಂಪರ್ಕ ರಸ್ತೆ ಕಾಮಗಾರಿ

ರೈಲ್ವೆ ಕೆಳಸೇತುವೆ ನಿರ್ಮಾಣಕ್ಕೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಸ್ತೆ ಮತ್ತು ಮಾಗಡಿ ರಸ್ತೆ ನಡುವೆ ಸಂಪರ್ಕ ಕಲ್ಪಿಸುವ ಪ್ರಮುಖ ಮುಖ್ಯರಸ್ತೆ ನಿರ್ಮಾಣಕ್ಕೆ (ಎಂಎಆರ್) ಇದ್ದ ತಡೆ ನಿವಾರಣೆಯಾಗಿದೆ. ಚಲ್ಲಘಟ್ಟದ ಬಳಿ ರೈಲ್ವೆ ಕೆಳಸೇತುವೆ ನಿರ್ಮಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸಮ್ಮತಿ ದೊರೆತಿದೆ.

ನಾಡಪ್ರಭು ಕೆಂಪೇಗೌಡ ಬಿಡಿಎ ಬಡಾವಣೆಯಲ್ಲಿ ಹಾದುಹೋಗುವ ಎಂಎಆರ್ ಕಾಮಗಾರಿಗೆ ಮೈಸೂರು ರಸ್ತೆ ಸಂಪರ್ಕಿಸುವ ಚಲ್ಲಘಟ್ಟ ಬಳಿ ರೈಲ್ವೆ ಕೆಳಸೇತುವೆ ನಿರ್ಮಿಸಬೇಕಿದೆ. 2019ರಿಂದಲೂ ರೈಲ್ವೆ ಇಲಾಖೆಯಿಂದ ಅನುಮತಿಗೆ ಕಾಯಲಾಗುತ್ತಿತ್ತು. ಇದರಿಂದ ಈ ಭಾಗದಲ್ಲಿ ಕಾಮಗಾರಿ ಬಹುತೇಕ ಸ್ಥಗಿತಗೊಂಡಿತ್ತು.

ಕೆಂಗೇರಿ ಮತ್ತು ಹೆಜ್ಜಾಲ ರೈಲು ನಿಲ್ದಾಣಗಳ ನಡುವೆ ಚಲ್ಲಘಟ್ಟದ ಸಮೀಪ ರೈಲ್ವೆ ಕೆಳಸೇತುವೆಯನ್ನು ನಿರ್ಮಿಸಲು ಬಿಡಿಎ, ರೈಲ್ವೆ ಇಲಾಖೆಯ ಅನುಮತಿ ಕೇಳಿತ್ತು. ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಈ ಕಡತಕ್ಕೆ ಮೇ 30ರಂದು ರೈಲ್ವೆ ಇಲಾಖೆ ಸಮ್ಮತಿಸಿದೆ. ಹೀಗಾಗಿ ಇನ್ನು ಕೆಲವೇ ದಿನಗಳಲ್ಲಿ ರೈಲ್ವೆ ಕೆಳಸೇತುವೆ ಕಾಮಗಾರಿ ಆರಂಭವಾಗಲಿದೆ ಎಂದು ಬಿಡಿಎ ಎಂಜಿನಿಯರ್‌ಗಳು ತಿಳಿಸಿದರು.

ಮುಖ್ಯಾಂಶಗಳು
- ಚಲ್ಲಘಟ್ಟ ಬಳಿ ನಿರ್ಮಾಣ ಆಗಲಿದೆ ರೈಲ್ವೆ ಕೆಳಸೇತುವೆ
- ನನೆಗುದಿಗೆ ಬಿದ್ದಿದ್ದ ಕಡತಕ್ಕೆ ಕೊನೆಗೂ ಸಿಕ್ಕ ಅನುಮೋದನೆ
- ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಇರಲಿವೆ 35 ಕಿರುಸೇತುವೆಗಳು



ರೈಲ್ವೆ ಕೆಳಸೇತುವೆ ನಿರ್ಮಾಣವಾಗದ್ದರಿಂದ ಚಲ್ಲಘಟ್ಟದ ಬಳಿ ಬಹುತೇಕ ಸ್ಥಗಿತಗೊಂಡಿರುವ ಪ್ರಮುಖ ಮುಖ್ಯರಸ್ತೆ ಕಾಮಗಾರಿ

ಅಂಕಿ ಅಂಶಗಳು

10.75 ಕಿ.ಮೀ. ಎಂಎಆರ್ ಉದ್ದ	35 ಸಣ್ಣ ಸೇತುವೆಗಳು	₹26.91 ಕೋಟಿ ಒಟ್ಟು ವೆಚ್ಚ
₹450 ಕೋಟಿ ಯೋಜನೆ ಅಂದಾಜು ವೆಚ್ಚ	3 ಅಂಡರ್‌ಪಾಸ್‌ಗಳು	₹39.31 ಕೋಟಿ ನಿರ್ಮಾಣ ವೆಚ್ಚ
100 ಮೀಟರ್ ಅಗಲದ ರಸ್ತೆ		
9 ಬ್ಲಾಕ್ ಸಂಪರ್ಕಿಸುವ ಪ್ರವೇಶ ರಸ್ತೆ	1 ರೈಲು ಕೆಳಸೇತುವೆ	₹38.42 ಕೋಟಿ ನಿರ್ಮಾಣ ವೆಚ್ಚ

ನಾಡಪ್ರಭು ಕೆಂಪೇಗೌಡ ಬಿಡಿಎ ಬಡಾವಣೆಯಲ್ಲಿ ಎಂಎಆರ್‌ನಲ್ಲಿ 35 ಕಿರುಸೇತುವೆಗಳಿರಲಿವೆ. ಇದರಲ್ಲಿ ಈಗಾಗಲೇ 15 ಕಿರುಸೇತುವೆಗಳ ಕಾಮಗಾರಿ ಮುಗಿದಿದ್ದು, ಇನ್ನು 10 ಕಿರುಸೇತುವೆಗಳ ಕಾಮಗಾರಿ ಅಂತಿಮ ಹಂತದಲ್ಲಿದೆ. ಇದೀಗ ಪ್ರಮುಖ ಕೆಳಸೇತುವೆ ಕಾರ್ಯವೂ ಆರಂಭ ಆಗುವುದರಿಂದ ಎಂಎಆರ್ ನಿರ್ಮಾಣ ಮತ್ತಷ್ಟು ಚುರುಕುಗಳ್ಳಲಿದೆ.

ಎಂಎಆರ್‌ನಲ್ಲಿ 2.90 ಕಿ.ಮೀ, 5.10 ಕಿ.ಮೀ. ಹಾಗೂ 9.70 ಕಿ.ಮೀನಲ್ಲಿ ಅಂಡರ್‌ಪಾಸ್ ನಿರ್ಮಾಣವಾಗುತ್ತಿದ್ದು, ಇನ್ನೊಂದು ವರ್ಷದಲ್ಲಿ ಬಳಕೆಗೆ ಲಭ್ಯವಾಗಲಿವೆ. ಸುಮಾರು 1 ಕಿ.ಮೀ. ವ್ಯಾಪ್ತಿಯ ಪ್ರದೇಶದ ಭೂಸ್ವಾಧೀನ ಪ್ರಕ್ರಿಯೆ ನ್ಯಾಯಾಲಯದಲ್ಲಿದೆ. ಮಿಕ್ಕೆಲ್ಲ ರಸ್ತೆಯ ಕಾಮಗಾರಿ ಕ್ಷಿಪ್ರಗತಿಯಲ್ಲಿ ನಡೆಯುತ್ತಿದೆ ಎಂದು ತಿಳಿಸಿದರು.

ಎಂಎಆರ್‌ನಿಂದ ಮೈಸೂರು ರಸ್ತೆ ಮತ್ತು ಮಾಗಡಿ ರಸ್ತೆಗೆ ಸಂಪರ್ಕ ಸಿಗುವ ಜತೆಗೆ, ಸೂಲಿಕೆರೆ– ರಾಮಸಂದ್ರ, ಕೆಂಚಾಪುರ, ಕನ್ನಹಳ್ಳಿ ಗ್ರಾಮಗಳಿಗೂ ಸಂಪರ್ಕ ಕಲ್ಪಿಸಲಿದೆ. ಇದಲ್ಲದೆ, ನಾಡಪ್ರಭು ಕೆಂಪೇಗೌಡ ಬಡಾವಣೆಯ 56 ರಸ್ತೆಗಳಿಗೆ ಸಂಪರ್ಕ ಒದಗಿಸಲಿದೆ.

ಉಮೇಶ ಶೆಟ್ಟಿ ಮೇಲೆ ಸೋಮಣ್ಣ ಗರಂ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ತುಮಕೂರು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಲಕ್ಷ ಮತಗಳ ಅಂತರದಿಂದ ಸೋಲಲಿದ್ದಾರೆ ಎಂದು ಹೇಳಿಕೆ ನೀಡಿದ್ದಾರೆಂದು ಬಿಜೆಪಿ ಮುಖಂಡ ಉಮೇಶ ಶೆಟ್ಟಿ ಮೇಲೆ ಕೇಂದ್ರದ ನೂತನ ಸಚಿವ ವಿ.ಸೋಮಣ್ಣ ರೇಗಾಡಿದರು.

ತುಮಕೂರು ಲೋಕಸಭಾ ಕ್ಷೇತ್ರದಲ್ಲಿ ಸೋಮಣ್ಣ ಅವರು 1.72ಲಕ್ಷ ಮತಗಳ ಅಂತರದಿಂದ ಗೆದ್ದಿದ್ದಾರೆ. ಕೇಂದ್ರ ಸಂಪುಟದಲ್ಲಿ ರಾಜ್ಯ ಖಾತೆ ಸಚಿವರಾಗಿದ್ದಾರೆ. ನೂತನ ಸಚಿವರನ್ನು ಬಿಜೆಪಿಯ ಅನೇಕ ಮುಖಂಡರು ಹಾಗೂ ಅಭಿಮಾನಿಗಳು ಕರ್ನಾಟಕ ಭವನದಲ್ಲಿ ಸೋಮವಾರ ಅಭಿನಂದಿಸಿದರು. ಈ ವೇಳೆ ಶಾಸಕರಾದ ಎಲ್.ಎ.ರವಿ ಸುಬ್ರಹ್ಮಣ್ಯ, ಸಿ.ಕೆ. ರಾಮಮೂರ್ತಿ, ಉಮೇಶ ಶೆಟ್ಟಿ ಹಾಗೂ ಇತರರು ಅಭಿನಂದಿಸಲು ಮುಂದೆ ಬಂದರು. ಆಗ ಪಕ್ಷದ ಮುಖಂಡರೊಬ್ಬರು ಉಮೇಶ ಶೆಟ್ಟಿ ಅವರ ಹೇಳಿಕೆಯನ್ನು ಉಲ್ಲೇಖಿಸಿದರು.



ವಿ. ಸೋಮಣ್ಣ

ಆಗ ಕುಪಿತರಾದ ಸೋಮಣ್ಣ, 'ಉಮೇಶ ಶೆಟ್ಟಿ ಎಲ್ಲೋ ಇದ್ದರು. ಪಕ್ಷದ ಸ್ಥಳೀಯ ಮುಖಂಡರ ವಿರೋಧದ ನಡುವೆಯೂ ಅವರನ್ನು ಕರೆತಂದು, ಎರಡು ಸಲ ಪಾಲಿಕೆ ಸದಸ್ಯರನ್ನಾಗಿ ಮಾಡಿದೆ. ಅವರನ್ನು ಬೆಳೆಸಿದೆ. ವಿಧಾನಸಭಾ ಚುನಾವಣೆಯಲ್ಲಿ ಸೋತ ನಂತರ ಕುಗ್ಗಿದ್ದೆ. ಅಂತಹ ಸಂದರ್ಭದಲ್ಲಿ ಅವರು ಇಂತಹ ಹೇಳಿಕೆ ನೀಡಬಾರದಿತ್ತು' ಎಂದು ಆಕ್ಷೇಪಿಸಿದರು.

ಆಗ ರಾಮಮೂರ್ತಿ ಅವರು ಮಧ್ಯ ಪ್ರವೇಶಿಸಿ ಸಮಜಾಯಿಷಿ ನೀಡಲು ಯತ್ನಿಸಿದರು. ಆಗ ಸಚಿವರು, 'ನೀವು ಈ ವಿಷಯದಲ್ಲಿ ಮಧ್ಯ ಪ್ರವೇಶಿಸುವುದು ಬೇಡ' ಎಂದು ತಾಕೀತು ಮಾಡಿದರು. ಉಮೇಶ ಶೆಟ್ಟಿ ದೂರದಲ್ಲಿ ನೋಡುತ್ತಾ ನಿಂತರು. ಈ ವೇಳೆ ರಾಜರಾಜೇಶ್ವರಿ ನಗರದ ಶಾಸಕ ಮುನಿರತ್ನ ಮಧ್ಯಪ್ರವೇಶಿಸಿ ಸೋಮಣ್ಣ ಅವರನ್ನು ಸಮಾಧಾನಪಡಿಸಿದರು.

ಮುದ್ದಣ ಕಾವ್ಯ ಪ್ರಶಸ್ತಿಗೆ ಹಸ್ತಪ್ರತಿ ಆಹ್ವಾನ

ಮಂಗಳೂರು: ಕಾಂತಾವರ ಕನ್ನಡ ಸಂಘವು 2024ರ ಸಾಲಿನ 'ಮುದ್ದಣ ಕಾವ್ಯ ಪ್ರಶಸ್ತಿ'ಗೆ, ಮುದ್ರಣಕ್ಕೆ ಸಿದ್ಧವಾಗಿರುವ ಕವನ ಸಂಗ್ರಹದ ಹಸ್ತಪ್ರತಿಗಳನ್ನು ಆಹ್ವಾನಿಸಿದೆ.

ಪ್ರಶಸ್ತಿಯು ₹10 ಸಾವಿರ ನಗದು ಮತ್ತು ಪ್ರಶಸ್ತಿ ಪತ್ರ ಒಳಗೊಂಡಿದೆ. ಹೆಚ್ಚಿನ ಮಾಹಿತಿಗೆ ಕನ್ನಡ ಸಂಘದ ಇ-ಮೇಲ್ kannadasanghakanthavara@gmail.com ಅಥವಾ ಸಂಘದ ಅಧ್ಯಕ್ಷರು (9900701666), ಪ್ರಧಾನ ಕಾರ್ಯದರ್ಶಿ (9008978366) ಅವರನ್ನು ಸಂಪರ್ಕಿಸಬಹುದು. ಹಸ್ತಪ್ರತಿ ಸ್ವೀಕಾರಕ್ಕೆ ಕೊನೆಯ ದಿನಾಂಕ ಸೆಪ್ಟೆಂಬರ್ 15.

ಸುದ್ದಿ 2 ನಿಮಿಷ

'ನೀರಿನ ಗುಣಮಟ್ಟ ಪರಿಶೀಲಿಸಿ'

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಶುದ್ಧ ಕುಡಿಯುವ ನೀರಿನ ಘಟಕಗಳು ಹಾಗೂ ಕೊಳವೆಬಾವಿಗಳಲ್ಲಿ ನೀರಿನ ಗುಣಮಟ್ಟದ ಪರೀಕ್ಷೆ ನಡೆಸಿ, ವರದಿ ಸಲ್ಲಿಸಲು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಅಧಿಕಾರಿಗಳ ಸಭೆಯಲ್ಲಿ ಸೋಮವಾರ ಮಾತನಾಡಿದ ಅವರು, ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯ ನಿರಂತರವಾಗಿ ನಡೆಸಬೇಕು. ರಸ್ತೆ ಗುಂಡಿ ಮುಚ್ಚುವ ಕಾರ್ಯ ಕ್ಕಾಗಿ ಹೊಸ ತಂತ್ರಾಂಶವನ್ನು ಸಿದ್ಧಪಡಿಸಲಾಗುತ್ತಿದ್ದು, ತುರ್ತಾಗಿ ಅನುಷ್ಠಾನಗೊಳಿಸಬೇಕು ಎಂದು ಪ್ರಧಾನ ಎಂಜಿನಿಯರ್‌ಗೆ ಹೇಳಿದರು.



198 ಪ್ರವಾಹ ಪೀಡಿತ ಪ್ರದೇಶಗಳ ಜೊತೆಗೆ ಹೊಸದಾಗಿ 11 ಪ್ರವಾಹ ಪೀಡಿತ ಪ್ರದೇಶಗಳನ್ನು ಗುರುತಿಸಲಾಗಿದೆ. ಒಟ್ಟಾರೆ 209 ಪ್ರವಾಹ ಪೀಡಿತ ಪ್ರದೇಶಗಳ ಪೈಕಿ 163 ಸ್ಥಳಗಳಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ. ಉಳಿದ 46 ಸ್ಥಳಗಳಲ್ಲಿ ತಾತ್ಕಾಲಿಕ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಈ ಪ್ರದೇಶಗಳ ಮೇಲೆ ನಿಗಾ ವಹಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ವಿಶೇಷ ಆಯುಕ್ತರಾದ ಡಾ.ಕೆ.ಹರೀಶ್ ಕುಮಾರ್, ಸುರಳ್ಕರ್ ವಿಕಾಸ್ ಕಿಶೋರ್, ಶಿವಾನಂದ ಕಲ್ಕೆರೆ, ವಲಯ ಆಯುಕ್ತರಾದ ಸ್ನೇಹಲ್, ವಿನೋತ್ ಪ್ರಿಯಾ, ರಮೇಶ್, ರಮ್ಯಾ, ಪ್ರೀತಿ ಗೆಹ್ಲೋಟ್, ಕರೀಗೌಡ ಉಪಸ್ಥಿತರಿದ್ದರು.

ಹೊಸಹಳ್ಳಿ: ಮೆಟ್ರೊ ಹಳಿಗೆ ಹಾರಿದ ಯುವಕನ ರಕ್ಷಣೆ

ಬೆಂಗಳೂರು: 'ನಮ್ಮ ಮೆಟ್ರೊ' ಹೊಸಹಳ್ಳಿ ನಿಲ್ದಾಣದಲ್ಲಿ ಸೋಮವಾರ ರಾತ್ರಿ 23 ವರ್ಷದ ಯುವಕನೊಬ್ಬ ಆತ್ಮಹತ್ಯೆಗೆ ಯತ್ನಿಸಿದ್ದು, ಬಿಎಂಆರ್‌ಸಿಎಲ್ ಸಿಬ್ಬಂದಿಯ ಸಮಯ ಪ್ರಜ್ಞೆಯಿಂದಾಗಿ ಜೀವಾಪಾಯದಿಂದ ಪಾರಾಗಿದ್ದಾನೆ.

ಯುವಕ ಸೋಮವಾರ ರಾತ್ರಿ 8.56ಕ್ಕೆ ರೈಲು ಬರುವುದನ್ನು ಕಂಡು ಹಳಿಯತ್ತ ಹಾರಿದ್ದ. ಆದರೆ, ರೈಲಿನ ಕೋಚ್‌ಗೆ ಅಪ್ಪಳಿಸಿ ಪಕ್ಕಕ್ಕೆ ಬಿದ್ದ. ಬಿಎಂಆರ್‌ಸಿಎಲ್ ಸಿಬ್ಬಂದಿ ಕೂಡಲೇ ಆತನನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಿದರು. ನಂತರ ರೈಲು ಸಂಚಾರ ಸ್ಥಗಿತಗೊಳಿಸಿ, ವಿದ್ಯುತ್ ಸರಬರಾಜು ಕಡಿತಗೊಳಿಸಲಾಯಿತು. ಘಟನೆಯಿಂದಾಗಿ ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ಮೆಟ್ರೊ ನಿಲ್ದಾಣದಿಂದ ಮೈಸೂರು ರಸ್ತೆವರೆಗೆ ಮೆಟ್ರೊ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಂಡಿತ್ತು. ರಾತ್ರಿ 9.30ರಿಂದ ರೈಲು ಸಂಚಾರ ಆರಂಭಗೊಂಡಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ನಾಲ್ಕನೇ ಘಟನೆ: ಈ ವರ್ಷ ಮೆಟ್ರೊ ಹಳಿಗೆ ಹಾರಿದ ನಾಲ್ಕನೇ ಘಟನೆ ಇದಾಗಿದೆ. ಮಾರ್ಚ್‌ನಲ್ಲಿ ಅತ್ತಿಗುಪ್ಪೆ ಮೆಟ್ರೊ ನಿಲ್ದಾಣದಲ್ಲಿ ಯುವಕನೊಬ್ಬ ಜೀವ ಕಳೆದುಕೊಂಡಿದ್ದ. ಜನವರಿಯಲ್ಲಿ ಜಾಲಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ಕೇರಳದ ಯುವಕ ಹಳಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ್ದ. ಇಂದಿರಾನಗರ ನಿಲ್ದಾಣದಲ್ಲಿ ಮಹಿಳೆಯೊಬ್ಬರು ಕೆಳಗೆ ಬಿದ್ದ ಮೊಬೈಲ್ ಎತ್ತಿಕೊಳ್ಳಲು ಹಳಿಗೆ ಹಾರಿದ್ದರು.

ವೀರಶೈವ ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆಯು 2024–25ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನಿಸಿದೆ.

ವೈದ್ಯಕೀಯ, ತಾಂತ್ರಿಕ, ಸ್ನಾತಕೋತ್ತರ, ಎಲ್‌ಎಲ್‌ಬಿ, ನರ್ಸಿಂಗ್ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡುವ ಬಡ ಹಾಗೂ ಪ್ರತಿಭಾನ್ವಿತ ವೀರಶೈವ ವಿದ್ಯಾರ್ಥಿನಿಯರು ಜುಲೈ 7ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಕಾರ್ಯದರ್ಶಿಗಳು, ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆ, ಎಸ್.ಜೆ.ಎಂ ಟವರ್ಸ್, ನಂ. 18/1, ಕಲ್ಯಾಣ ಸಮುಚ್ಚಯ, 2ನೇ ಮಹಡಿ, 6ನೇ ಅಡ್ಡ ರಸ್ತೆ, ಗಾಂಧಿನಗರ, ಬೆಂಗಳೂರು -560009.

ಮಾಹಿತಿಗೆ: 080–2226 6416ಗೆ ಸಂಪರ್ಕಿಸಬಹುದು.



ಗೌರವ...

'ಕನ್ನಡ ಸಂಘರ್ಷ ಸಮಿತಿ'ಯು ನಗರದಲ್ಲಿ ಸೋಮವಾರ ಆಯೋಜಿಸಿದ್ದ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಡಾ. ಶಿವಸ್ವಾಮಿ ಎಂ ಅವರಿಗೆ 'ಡಾ.ಕೋ.ವೆಂ.ರಾ. ಕನ್ನಡ ಪರಿಚಾರಕ ಪ್ರಶಸ್ತಿ' ನೀಡಿ ಗೌರವಿಸಲಾಯಿತು. (ನಿಂತವರು ಎಡದಿಂದ) ಡಾ.ಕೋ.ವೆಂ.ರಾಮಕೃಷ್ಣೇಗೌಡರ ಪತ್ನಿ ನಾಗರತ್ನ, ಸಮಿತಿ ಪದಾಧಿಕಾರಿ ಶಾಂತಲಾ ಸುರೇಶ್, ಸಾಹಿತಿ ಜಿ. ರಾಮಕೃಷ್ಣ, ವಿಮರ್ಶಕ ಎಚ್.ದಂಡಪ್ಪ, ಕನ್ನಡ ಸಾಹಿತ್ಯ ಪರಿಷತ್ತಿನ ಬೆಂಗಳೂರು ನಗರ ಜಿಲ್ಲಾಧ್ಯಕ್ಷ ಎಂ. ಪ್ರಕಾಶಮೂರ್ತಿ ಎಂ.ಪ್ರಕಾಶಮೂರ್ತಿ ಮತ್ತು 'ಕನ್ನಡ ಸಂಘರ್ಷ ಸಮಿತಿ' ಪ್ರಧಾನ ಕಾರ್ಯದರ್ಶಿ ತಾ.ಸಿ ತಿಮ್ಮಯ್ಯ ಇದ್ದರು -ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಗಂಗಮ್ಮ ದೇವಿಯ ಜಾತ್ರೆ, ಹಸಿ ಕರಗ: ಬೆಳಿಗ್ಗೆ 6ಕ್ಕೆ ಮಾಂಗಲ್ಯ ಸೂತ್ರಧಾರಣೆ, ಮಹಾಮಂಗಳಾರತಿ, ಮಧ್ಯಾಹ್ನ 12ಕ್ಕೆ ಕುಂಭನೈವೇದ್ಯ, ಮಹಾಮಂಗಳಾರತಿ, ಹಸಿ ಹೂವಿನ ಕರಗ ಆಯೋಜನೆ ಮತ್ತು ಸ್ಥಳ: ಗಂಗಮ್ಮ ದೇವಿ ದೇವಸ್ಥಾನ, ಮಲ್ಲೇಶ್ವರ, ಸಂಜೆ 7ಕ್ಕೆ

ಮುಖ್ಯಮಂತ್ರಿಗಳ ಪದಕ ಪ್ರದಾನ, ಅಗ್ನಿಶಾಮಕರ ನಿರ್ಗಮನ ಪಥ ಸಂಚಲನ ಸಮಾರಂಭ: ಪದಕ ಪ್ರದಾನ: ಸಿದ್ದರಾಮಯ್ಯ, ಜಿ. ಪರಮೇಶ್ವರ, ಆಯೋಜನೆ: ಅಗ್ನಿಶಾಮಕ ಮತ್ತು ತುರ್ತು ಸೇವೆಗಳು, ಗೃಹರಕ್ಷಕ ದಳ, ಪೌರ ರಕ್ಷಣೆ ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆ, ಸ್ಥಳ: ಆರ್.ಎ. ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 9

ಸಿದ್ಧಲಿಂಗಯ್ಯ ಅವರ 3ನೇ ವರ್ಷದ ಪರಿನಿಬ್ಬಾಣ ಸ್ಮರಣಾ ಕಾರ್ಯಕ್ರಮ ಉದ್ಘಾಟನೆ: ಎಚ್.ಸಿ. ಮಹದೇವಪ್ಪ, ಮುದಲ್ ವಿಜಯ್ ಅವರ 'ಸಿದ್ಧಲಿಂಗಯ್ಯ ಮಧುರ ಮೈತ್ರಿ' ಪುಸ್ತಕ ಬಿಡುಗಡೆ: ಬೈರಮಂಗಲ ರಾಮೇಗೌಡ, ಅತಿಥಿಗಳು: ಜಯಕರ ಎಸ್.ಎಂ., ಕಾವಲಮ್ಮ, ಎನ್. ವೆಂಕಟೇಶ್, ಗೊಲ್ಲಹಳ್ಳಿ ಶಿವಪ್ರಸಾದ್, ಉಪಸ್ಥಿತಿ: ಸಿ. ರಮಾಕುಮಾರಿ ಸಿದ್ಧಲಿಂಗಯ್ಯ, ಮಾನಸ ಸಿದ್ಧಲಿಂಗಯ್ಯ, ಅಧ್ಯಕ್ಷತೆ: ಮಾವಳ್ಳಿ ಶಂಕರ್, 'ಪಂಚಮ' ನಾಟಕ ಪ್ರದರ್ಶನ: ರಚನೆ: ಸಿದ್ಧಲಿಂಗಯ್ಯ, ನಿರ್ದೇಶನ: ರವೀಂದ್ರನಾಥ ಸಿರಿವರ, ಪ್ರಸ್ತುತಿ: ಬೆಂಗಳೂರು ಸಮುದಾಯ, ಆಯೋಜನೆ: ನಾಡೋಜ ಡಾ. ಸಿದ್ಧಲಿಂಗಯ್ಯ ಸ್ಮಾರಕ ಪ್ರತಿಷ್ಠಾನ, ಸ್ಥಳ: ವೆಂಕಟಗಿರಿಗೌಡ ಸ್ಮಾರಕ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಳಿಗ್ಗೆ 10.30

ವಿಧಾನಸಭಾ ಕ್ಷೇತ್ರದ ಅಧ್ಯಕ್ಷರ ಪದಗ್ರಹಣ, ಹೊಣೆಗಾರಿಕೆ ಪತ್ರ ವಿತರಣಾ ಸಮಾರಂಭದ ಉದ್ಘಾಟನೆ: ಮಹೇಶ್ ಜೋಷಿ, ಹೊಣೆಗಾರಿಕೆ ಪತ್ರ ವಿತರಣೆ: ಡಾ.ಸಿ.ಆರ್. ಚಂದ್ರಶೇಖರ್, ಅತಿಥಿ: ಈ. ಬಸವರಾಜು, ಅಧ್ಯಕ್ಷತೆ: ನಾ. ಶ್ರೀಧರ, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

'ಅಭಿನಯದ ಪಾಠಗಳು–ಕಲಿಕೆ ಮತ್ತು ಪ್ರಾತ್ಯಕ್ಷಿಕೆ': ಅತಿಥಿ: ಪ್ರದೀಪ್ ಪ್ರರಾಕ್ರಮ, ಅಧ್ಯಕ್ಷತೆ: ಕೆ.ಎಸ್. ಗೋಪಾಲಕೃಷ್ಣ, ಸ್ಥಳ: ಬಿಇಎಸ್ ಕಲೆ ಮತ್ತು ವಾಣಿಜ್ಯ ಸಂಜೆ ಮಹಾವಿದ್ಯಾಲಯ, 16ನೇ ಮುಖ್ಯರಸ್ತೆ, 4ನೇ ಬ್ಲಾಕ್, ಜಯನಗರ, ಸಂಜೆ 6.30

ವಿವಿಧ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ. nagaradalli_indu@prajavani.co.in

ಪ್ರತಿ ಮನೆಗೆ ₹100 ತ್ಯಾಜ್ಯ ಸೇವಾ ಶುಲ್ಕ

ಒಂದನೇ ಪುಟದಿಂದ

ವಾಣಿಜ್ಯ ಹಾಗೂ ಸಂಘ-ಸಂಸ್ಥೆಗಳಿಗೆ ತಿಂಗಳಿಗೆ ತಲಾ ₹200 ತ್ಯಾಜ್ಯ ಸೇವಾ ಶುಲ್ಕ ಸಂಗ್ರಹಿಸಲು, ಕೊಳೆಗೇರಿಗಳಲ್ಲಿ ತ್ಯಾಜ್ಯ ಸೇವಾ ಶುಲ್ಕ ವಿಧಿಸದಿರಲು ನಿರ್ಧರಿಸಲಾಗಿದೆ. ಹೆಚ್ಚು ತ್ಯಾಜ್ಯ ಉತ್ಪಾದಿಸುವ ದೊಡ್ಡ ಕಟ್ಟಡಗಳಲ್ಲಿಗೊಬ್ಬರ ತಯಾರಿಕೆ ವ್ಯವಸ್ಥೆ ಇದ್ದರೆ ಶೇ 50ರಷ್ಟು ರಿಯಾಯಿತಿ ನೀಡಲಾಗುತ್ತದೆ.

ಬೆಸ್ಕಾಂನ ವಿದ್ಯುತ್ ಬಿಲ್‌ನಲ್ಲಿ ಈ ತ್ಯಾಜ್ಯ ಸೇವಾ ಶುಲ್ಕವನ್ನು ವಿಧಿಸಿ, ಸಂಗ್ರಹಿಸಲು ಈ ಮೊದಲು ನಿರ್ಧರಿಸಲಾಗಿತ್ತು. ಆದರೆ, ಬೆಸ್ಕಾಂ ಇದಕ್ಕೆ ಸಮ್ಮತಿ ನೀಡಿಲ್ಲ. ಹೀಗಾಗಿ, ಆಸ್ತಿ ತೆರಿಗೆ ಸಂಗ್ರಹಿಸುವುದೇ ಅಥವಾ ವೈಯಕ್ತಿಕ ಬಿಲ್ ನೀಡಿ ಸಂಗ್ರಹ ಮಾಡಬೇಕೆ ಎಂಬ ಬಗ್ಗೆ ಪಾಲಿಕೆ ಯೋಚಿಸುತ್ತಿದೆ. ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಸೂಚನೆಯಂತೆ ಅಂತಿಮಗೊಳಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.

ಬಿಬಿಎಂಪಿ ಈಗಾಗಲೇ ತ್ಯಾಜ್ಯ ನಿರ್ವಹಣೆ ಕರ ಎಂದು ಆಸ್ತಿ ತೆರಿಗೆ ಸಂಗ್ರಹಿಸುತ್ತಿದೆ. ಈಗ ಮತ್ತೆ ಸೇವಾ ಶುಲ್ಕ ವಿಧಿಸಲು ಮುಂದಾಗಿದೆ. ಈ ತ್ಯಾಜ್ಯ ನಿರ್ವಹಣೆ ಸೇವಾ ಶುಲ್ಕದಿಂದ ಪಾಲಿಕೆಗೆ ವಾರ್ಷಿಕ ಸುಮಾರು ₹800 ಕೋಟಿ ಸಂಗ್ರಹವಾಗುವ ನಿರೀಕ್ಷೆಯಿದೆ. ಇದನ್ನು ತ್ಯಾಜ್ಯ ನಿರ್ವಹಣೆಗೆ ಬಳಸಲು ನಿರ್ಧರಿಸಲಾಗಿದೆ.

ಚುನಾವಣೆಗೆ ಮುನ್ನವೇ ಬಿಎಸ್‌ಡಬ್ಲ್ಯುಎಂಎಲ್ ಕಂಪನಿ ತ್ಯಾಜ್ಯ ನಿರ್ವಹಣೆ ಸೇವಾ ಶುಲ್ಕ ಸಂಗ್ರಹಿಸಲು ಸರ್ಕಾರಕ್ಕೆ ಪ್ರಸ್ತಾಪ ಸಲ್ಲಿಸಿತ್ತು. ಚುನಾವಣೆ ನೀತಿ ಸಂಹಿತೆ ಮುಗಿದ ನಂತರ ಸರ್ಕಾರ ಸೇವಾ ಶುಲ್ಕ ಸಂಗ್ರಹಿಸಲು ಸಮ್ಮತಿಸಿದೆ. ಆದರೆ ಇನ್ನೂ ಅಧಿಕೃತ ಆದೇಶ ಹೊರಬಿದ್ದಿಲ್ಲ.

'50 ಕೆರೆಗಳಿಗೆ ಸಂಸ್ಕರಿತ ನೀರು ಭರ್ತಿ'


ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅಂತರ್ಜಲ ವೃದ್ಧಿಗೆ ಯೋಜನೆ ರೂಪಿಸಿರುವ ಬೆಂಗಳೂರು ಜಲಮಂಡಳಿ, 50 ಕೆರೆಗಳಿಗೆ ಸಂಸ್ಕರಿತ ನೀರು ತುಂಬಿಸಲು ತುಂಬಲು ಯೋಜಿಸಿದೆ.

ಜಲಮಂಡಳಿಯ ತ್ಯಾಜ್ಯ ನೀರು ಸಂಸ್ಕರಣೆ ಘಟಕಗಳಿಂದ (ಎಸ್‌ಟಿಪಿ) 18 ಕೆರೆಗಳಿಗೆ ಸಂಸ್ಕರಿತ ನೀರನ್ನು ತುಂಬಿಸಲಾಗಿದೆ. ಈ ಸಂಖ್ಯೆಯನ್ನು 30ಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿತ್ತು. ಇದೀಗ ಅದನ್ನು 50 ಕೆರೆಗಳಿಗೆ ನಿಗದಿಗೊಳಿಸಿ, ಯೋಜನೆ ರೂಪಿಸಲಾಗುತ್ತಿದೆ.

'ನಗರದಲ್ಲಿ ಈಗ ಮಳೆ ಆಗುತ್ತಿದ್ದು, ಕೆರೆಗಳು ನೈಸರ್ಗಿಕವಾಗಿ ತುಂಬುತ್ತಿವೆ. ಆದರೆ, ಎಲ್ಲ ಕಾಲದಲ್ಲೂ ಇದೇ ಪರಿಸ್ಥಿತಿ ಇರುವುದಿಲ್ಲ. ನಿಯಂತ್ರಿತ ಮಾದರಿಯಲ್ಲಿ ಕೆರೆಗಳಿಗೆ ನೀರು ಹರಿಸಲಾಗುತ್ತಿದೆ' ಎಂದು ಜಲಮಂಡಳಿ ಅಧ್ಯಕ್ಷ ಡಾ. ವಿ. ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ದುಬಾಸಿಪಾಳ್ಯ, ಚುಂಚಘಟ್ಟ, ಕೊತ್ತನೂರು, ಅಬ್ಬಿಗೆರೆ, ಶೆಟ್ಟಿಹಳ್ಳಿ, ದೊಡ್ಡಬಿದರಕಲ್ಲು ಕೆರೆಗಳಿಗೆ ಜಲಮಂಡಳಿ ಸದ್ಯ ಸಂಸ್ಕರಿಸಲಾದ ನೀರನ್ನು ತುಂಬಿಸಿದೆ.



ಟಿ20 ವಿಶ್ವಕಪ್ ನಲ್ಲಿ ಬುಮ್ರಾ ಬೌಲಿಂಗ್ ಪಾಕಿಸ್ತಾನದ ವಿರುದ್ಧ ಭಾರತದ ಗೆಲುವಿಗೆ ಕಾರಣವಾಯಿತು!

ಕಾರ್ಯಕರ್ತ ವಿಕಾಸ ವರ್ಗದ ಸಭೆಯಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್

'ಮಣಿಪುರ ಹಿಂಸೆ: ತಕ್ಷಣವೇ ಗಮನಿಸಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಒಂದು ವರ್ಷದಿಂದ ಮಣಿಪುರ ಹೊತ್ತಿ ಉರಿಯುತ್ತಿದೆ. ಇತ್ತ ತಕ್ಷಣವೇ ಗಮನಹರಿಸ ಬೇಕಾಗಿದೆ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ.

ಸೋಮವಾರ ಮಾತನಾಡಿದ ಅವರು, 'ಚುನಾವಣೆ ಪ್ರಚಾರದ ವೇಳೆ ಪರಸ್ಪರ ಆರೋಪ ಮಾಡುವುದು, ತಂತ್ರಜ್ಞಾನಗಳನ್ನು ದುರ್ಬಳಕೆ ಮಾಡಿಕೊಂಡು ಸುಳ್ಳುಗಳನ್ನು ಹಬ್ಬಿಸುವ ಪ್ರವೃತ್ತಿಯು ತಪ್ಪಬೇಕು. ವಿರೋಧ ಪಕ್ಷಗಳನ್ನು 'ಪ್ರತಿಪಕ್ಷ' ಎಂದೇ ಉಲ್ಲೇಖಿಸಬೇಕು' ಎಂದು ಅವರು ಪ್ರತಿಪಾದಿಸಿದ್ದಾರೆ..

ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಮತ್ತು ಬಿಜೆಪಿ ನಡುವಣ ಸಂಬಂಧ ಹಳಸಿದೆ ಎಂಬ ಅಭಿಪ್ರಾಯ ದಟ್ಟವಾಗುತ್ತಿರುವ ಹೊತ್ತಿನಲ್ಲಿಯೇ ಆರ್‌ಎಸ್‌ಎಸ್ ಮುಖ್ಯಸ್ಥರಿಂದ ಈ ಮಾತು ಕೇಳಿಬಂದಿದೆ.

ಇಲ್ಲಿ, ಸದ್ಯ ನಡೆಯುತ್ತಿರುವ ಕಾರ್ಯಕರ್ತ ವಿಕಾಸ ವರ್ಗದ ಸಭೆಯಲ್ಲಿ ಅವರು ಮಾತನಾಡಿದರು.

'ಚುನಾವಣೆ ಎಂಬುದು ಸಮಾನ ಮನಸ್ಸುಗಳ ನಡುವೆ ಸಹಮತ ಮೂಡಿಸುವ ಒಂದು ಪ್ರಕ್ರಿಯೆ. ಯಾವುದೇ ಪ್ರಶ್ನೆಗೆ ಸಂಬಂಧಿಸಿದ ಎರಡೂ ಆಯಾಮಗಳನ್ನು ಸಂಸತ್ತಿನಲ್ಲಿಯೇ ಮಂಡಿಸುವ ವ್ಯವಸ್ಥೆಯು ನಿರ್ಮಾಣವಾಗಬೇಕು' ಎಂದು ಭಾಗವತ್ ಅವರು ಪ್ರತಿಪಾದಿಸಿದ್ದಾರೆ.

'ಚುನಾವಣೆ ಪ್ರಚಾರದ ವೇಳೆ ಜನರು ಪರಸ್ಪರ ಟೀಕಿಸುವುದು, ತಂತ್ರಜ್ಞಾನದ ದುರ್ಬಳಕೆ ಮಾಡಿಕೊಂಡು ಸುಳ್ಳು ಹಬ್ಬಿಸುತ್ತಿರುವುದು ಸರಿಯಲ್ಲ. ಚುನಾವಣೆಯ ಉದ್ವೇಗದಿಂದ ನಮ್ಮನ್ನು ನಾವು ಬಿಡುಗಡೆ ಮಾಡಿಕೊಳ್ಳಬೇಕಾಗಿದೆ. ದೇಶವು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕಾಗಿದೆ' ಎಂದು ಅಭಿಪ್ರಾಯಪಟ್ಟರು.

'ಈ ಬಾರಿಯ ಚುನಾವಣೆಯಲ್ಲಿಯೂ ಎಲ್ಲ ಚುನಾವಣೆಗಳಂತೆ ಆರ್‌ಎಸ್‌ಎಸ್, ಸಾರ್ವಜನಿಕ ಅಭಿಪ್ರಾಯಗಳನ್ನು ರೂಪಿಸುವ 'ಕರ್ತವ್ಯ'ವನ್ನು ನಿಭಾಯಿಸಿದೆ. ನಾವು ಪ್ರತಿ ವರ್ಷವೂ ಇದನ್ನು ಮಾಡುತ್ತೇವೆ. ಈ ವರ್ಷವೂ ಮಾಡಿದ್ದೇವೆ' ಎಂದು ಅವರು ಪುನರುಚ್ಚರಿಸಿದರು.

ಸದ್ಯ, ಆರ್‌ಎಸ್‌ಎಸ್ ಮತ್ತು ಬಿಜೆಪಿ ನಡುವಣ ಬಾಂಧವ್ಯ ಹಳಸಿದೆ. ವಿರೋಧಪಕ್ಷಗಳಿಂದ ಹಲವು ನಾಯಕರನ್ನು ಸೇರಿಸಿಕೊಳ್ಳುವ ಬಿಜೆಪಿಯ ನಡೆ ಕುರಿತು ಆರ್‌ಎಸ್‌ಎಸ್ ಬೇಸರ ಗೊಂಡಿದೆ ಎಂಬ ಮಾತುಗಳು ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ಈ ಹೇಳಿಕೆಯು ಗಮನಾರ್ಹವಾಗಿದೆ.



ಬಲ ಉಳ್ಳವರು 'ವಿನಯಶೀಲ'ರಾಗಿ ಇರಬೇಕು. ನಮ್ರತೆ ಎಂಬುದು ಎಂದಿಗೂ ಒಬ್ಬರಿಗೆ ಧರ್ಮ ಮತ್ತು ಸಂಸ್ಕೃತಿಯಿಂದ ಬರಲಿದೆ
ಮೋಹನ್ ಭಾಗವತ್
ಆರ್‌ಎಸ್‌ಎಸ್ ಮುಖ್ಯಸ್ಥ

ಸಿಬಿಎಸ್‌ಇಗೆ ಎನ್‌ಒಸಿ: ಮನವಿ ಪರಿಗಣಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಪಠ್ಯಕ್ರಮದಿಂದ ಕೇಂದ್ರ ಪಠ್ಯಕ್ರಮಕ್ಕೆ (ಸಿಬಿಎಸ್‌ಇ) ಸಂಯೋಜನೆಗೆ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆಯುವುದಕ್ಕೆ; ಮೂರು ವರ್ಷಗಳ ಲೆಕ್ಕ ಪರಿಶೋಧನಾ ವರದಿಯನ್ನು ಕಡ್ಡಾಯವಾಗಿ ಸಲ್ಲಿಸಲು ಬಲವಂತಪಡಿಸಬಾರದು. ಎನ್‌ಒಸಿ ನೀಡುವಂತೆ ಕೋರಿ ಮೈಸೂರಿನ ಬೆಳವಾಡಿ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಸಲ್ಲಿಸಿರುವ ಮನವಿಯನ್ನು ಕಾನೂನು ರೀತ್ಯಾ ಪರಿಗಣಿಸಬೇಕು' ಎಂದು ಹೈಕೋರ್ಟ್, ಶಿಕ್ಷಣ ಇಲಾಖೆಗೆ ನಿರ್ದೇಶಿಸಿದೆ.

ರಾಷ್ಟ್ರೋತ್ಥಾನ ಪರಿಷತ್ ಪ್ರಧಾನ ಕಾರ್ಯದರ್ಶಿ ಎನ್.ದಿನೇಶ್ ಹೆಗ್ಡೆ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಎನ್‌ಒಸಿ ಮಂಜೂರು ಮಾಡುವಂತೆ ಕೋರಿ ರಾಷ್ಟ್ರೋತ್ಥಾನ ಪರಿಷತ್ 2024ರ ಮೇ 20ರಂದು ಸಲ್ಲಿಸಿರುವ ಮನವಿಯನ್ನು ಕಾನೂನು ರೀತ್ಯಾ ಪರಿಗಣಿಸಿ, ಎರಡು ವಾರಗಳಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಿ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತರಿಗೆ ನಿರ್ದೇಶಿಸಿರುವ ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿದೆ. ರಾಷ್ಟ್ರೋತ್ಥಾನ ಪರಿಷತ್ ಪರ ಹೈಕೋರ್ಟ್ ವಕೀಲ ಎಸ್.ರಾಜು ವಾದ ಮಂಡಿಸಿದರು.

ಏನಿದು ಅರ್ಜಿ?: ಮೈಸೂರಿನ ಬೆಳವಾಡಿಯಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರವು 1ರಿಂದ 8ನೇ ತರಗತಿವರೆಗೆ ಆಂಗ್ಲ ಮಾಧ್ಯಮದಲ್ಲಿ ರಾಜ್ಯ ಪಠ್ಯಕ್ರಮದ ಅನುಸಾರ ಶಾಲೆ ನಡೆಸಲು ಸರ್ಕಾರದಿಂದ ಅನುಮತಿ ಹೊಂದಿದೆ. ಈ ಶಾಲೆಯಲ್ಲಿ ನರ್ಸರಿಯಿಂದ 8ನೇ ತರಗತಿವರೆಗೆ 591 ವಿದ್ಯಾರ್ಥಿಗಳಿದ್ದು, 2024-25ನೇ ಶೈಕ್ಷಣಿಕ ವರ್ಷದಲ್ಲಿ 306 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಶಾಲೆಯು ರಾಜ್ಯ ಪಠ್ಯಕ್ರಮದಿಂದ ಕೇಂದ್ರ ಪಠ್ಯಕ್ರಮಕ್ಕೆ ಸಂಯೋಜನೆ ಹೊಂದಲು ಎನ್‌ಒಸಿಗಾಗಿ ಆನ್‌ಲೈನ್‌ನಲ್ಲಿ ಮನವಿ ಸಲ್ಲಿಸಿತ್ತು. ಆದರೆ, ಶಿಕ್ಷಣ ಇಲಾಖೆ ನೀಡಿರಲಿಲ್ಲ.

ಇದನ್ನು ಪ್ರಶ್ನಿಸಿ ಸಂಸ್ಥೆಯವರು ಹೈಕೋರ್ಟ್ ಮೆಟ್ಟಿಲೇರಿದ್ದರು.

5 ಭಾಗಗಳಾಗಿ ಬೆಂಗಳೂರು ಮರು ವಿಂಗಡಣೆ?

ಒಂದನೇ ಪುಟದಿಂದ

ಐದು ಭಾಗಗಳಾಗಿ ವಿಂಗಡಿಸುವ ಮತ್ತು ಮೀಸಲಾತಿ ನಿಗದಿಪಡಿಸುವ ಪ್ರಸ್ತಾವವನ್ನು ಸುಪ್ರೀಂ ಕೋರ್ಟ್‌ನ ಮುಂದಿಡುವ ಬಗ್ಗೆಯೂ ಚರ್ಚೆ ನಡೆಯಿತು. ಆ ಮೂಲಕ, ಅಧಿಕಾರ ವಿಕೇಂದ್ರೀಕರಣಗೊಳಿಸಬಹುದು. ಈ ಉದ್ದೇಶದಿಂದ ಮುಂಬರುವ ವಿಧಾನ ಮಂಡಲ ಅಧಿವೇಶನದಲ್ಲಿ ಮಸೂದೆ ಮಂಡಿಸುವ ಬಗ್ಗೆಯೂ ಚರ್ಚೆ ನಡೆಯಿತು ಎಂದೂ ಗೊತ್ತಾಗಿದೆ.

ಸಭೆಯಲ್ಲಿ ಸಚಿವರಾದ ರಾಮಲಿಂಗಾ ರೆಡ್ಡಿ, ಕೆ.ಜೆ. ಜಾರ್ಜ್, ಜಮೀರ್ ಅಹಮದ್ ಖಾನ್, ಶಾಸಕರಾದ ಎನ್.ಎ. ಹ್ಯಾರಿಸ್, ರಿಜ್ವಾನ್ ಅರ್ಷದ್, ಕೃಷ್ಣಪ್ಪ, ವಿಧಾನ ಪರಿಷತ್ ಸದಸ್ಯರಾದ ಯು.ಬಿ. ವೆಂಕಟೇಶ್, ಸುಧಾಮ ದಾಸ್, ನಾಗರಾಜ್ ಯಾದವ್, ರಾಜ್ಯಸಭಾ ಸದಸ್ಯರಾದ ಜಿ.ಸಿ. ಚಂದ್ರಶೇಖರ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಕೆ. ಗೋವಿಂದರಾಜು ಇದ್ದರು.

ಕತ್ತಲಿನಲ್ಲಿ ನಡೆದ ವಿಪತ್ತು ನಿರ್ವಹಣಾ ಸಭೆ!

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಇಲ್ಲಿನ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ನೇತೃತ್ವದಲ್ಲಿ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ 20 ನಿಮಿಷಗಳಿಗೂ ಹೆಚ್ಚು ಕಾಲ ಕತ್ತಲು ಆವರಿಸಿತ್ತು.

ಸಭೆಯ ನಡುವೆ ವಿದ್ಯುತ್ ವ್ಯತ್ಯಯವಾದ ಬಳಿಕ, ಸಿಬ್ಬಂದಿ ಜನರೇಟರ್ ವ್ಯವಸ್ಥೆ ಮಾಡಲಿಲ್ಲ. ಹೀಗಾಗಿ ಒಬ್ಬರ ಮುಖ ಮತ್ತೊಬ್ಬರಿಗೆ ಕಾಣದಷ್ಟು ಕತ್ತಲು ಕವಿದಿತ್ತು. ಆದರೂ ಸಚಿವರು ಸಭೆ ನಿಲ್ಲಿಸಲಿಲ್ಲ.

ಯಾರಿಗೆ ಸಚಿವರು ಪ್ರಶ್ನೆ ಕೇಳುತ್ತಿದ್ದಾರೆ, ಯಾವ ಅಧಿಕಾರಿ ಉತ್ತರ ನೀಡುತ್ತಿದ್ದಾರೆ ಎಂಬ ಗೊಂದಲವೂ ಏರ್ಪಟ್ಟಿತ್ತು. ಕೆಡಿಪಿಯಂತಹ ಮಹತ್ವದ ಸಭೆಯಲ್ಲಿ ವಿದ್ಯುತ್ ಕೈಕೊಟ್ಟಾಗ ಪರ್ಯಾಯ ವ್ಯವಸ್ಥೆ ಮಾಡದ ಬಗ್ಗೆ ಕೆಲವು ಅಧಿಕಾರಿಗಳೂ ಅಸಮಾಧಾನ ವ್ಯಕ್ತಪಡಿಸಿದರು.

ಕಟೀಲು, ಕೊಲ್ಲೂರಿಗೆ ಮಯಂಕ್ ಭೇಟಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಭಾರತ ಕ್ರಿಕೆಟ್ ತಂಡದ ಆರಂಭಿಕ ಬ್ಯಾಟರ್ ಮಯಂಕ್ ಅಗರವಾಲ್ ಇಲ್ಲಿನ ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ ಮತ್ತು ಉಡುಪಿ ಜಿಲ್ಲೆ ಕುಂದಾಪುರದ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನಕ್ಕೆ ಸೋಮವಾರ ಭೇಟಿ ನೀಡಿದರು.

ಪತ್ನಿ ಆಶಿತಾ ಸೂದ್ ಜೊತೆ ಕಟೀಲು ದೇವಸ್ಥಾನಕ್ಕೆ ತೆರಳಿದ ಅವರು ಅಕ್ಕಿ, ಬೆಲ್ಲ ಅರಿಶಿನ ಒಳಗೊಂಡ ಮಡಿಲಕ್ಕಿಯನ್ನು ದೇವಿಗೆ ಸಮರ್ಪಿಸಿದರು. ಆನುವಂಶಿಕ ಅರ್ಚಕರಾದ ಕುಮಾರ್ ಅಸ್ರಣ್ಣ ಅವರು ವಸ್ತ್ರ ಮತ್ತು ಪ್ರಸಾದ ನೀಡಿ ಮಯಂಕ್‌ಗೆ ಗೌರವ ಸಲ್ಲಿಸಿದರು. ಆನುವಂಶಿಕ ಮೊಕ್ತೇಸರ ವಾಸುದೇವ ಅಸ್ರಣ್ಣ, ಟ್ರಸ್ಟಿ ವೆಂಕಟರಮಣ ಅಸ್ರಣ್ಣ ಇದ್ದರು.

ಕಟೀಲಿನಿಂದ ಕೊಲ್ಲೂರಿಗೆ ತೆರಳಿದ ಮಯಂಕ್ ದಂಪತಿ ದಾರಿಮಧ್ಯೆ ಕುಂದಾಪುರದ ಮಾರಣಕಟ್ಟೆಯಲ್ಲಿರುವ ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದರು. ಮಧ್ಯಾಹ್ನ ಕೊಲ್ಲೂರಿಗೆ ತಲುಪಿದ ಅವರು ದರ್ಶನ ಮುಗಿಸಿದರು. ಸಂಜೆ ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನಕ್ಕೂ ಭೇಟಿ ನೀಡಿದರು.

₹2 ಕೋಟಿ ವೆಚ್ಚದ ಪುನರುಜ್ಜೀವನ ಕಾರ್ಯದಲ್ಲಿ ವಿಳಂಬ

ಶಿವಪುರ ಕೆರೆ: ಕಾಮಗಾರಿ ವೇಗಕ್ಕೆ ಮೊರೆ

• ಪ್ರಸನ್ನಕುಮಾರ್ ಯಾದವ್

ಮುಖ್ಯಾಂಶಗಳು

- ಒಂದೂವರೆ ವರ್ಷ ಕಳೆದರೂ ಮುಗಿಯದ ಕೆರೆ ಪುನರುಜ್ಜೀವನ ಕಾಮಗಾರಿ
- ನಾಲ್ಕು ದಶಕಗಳಿಂದ ಜನ–ಜಾನುವಾರುಗಳಿಗೆ ನೀರಾಸರೆಯಾಗಿದ್ದ ಕೆರೆ
- ಕಾಮಗಾರಿ ನಡೆಯುತ್ತಿರುವ ರೀತಿಗೆ ಆಕ್ಷೇಪ ವ್ಯಕ್ತಪಡಿಸಿದ ಸ್ಥಳೀಯರು




ಶಿವಪುರ ಕೆರೆಯ ಕೋಡಿ (ಎಡಚಿತ್ರ). ಶಿವಪುರ ಕೆರೆಯಲ್ಲಿ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದೆ

ಪೀಣ್ಯ ದಾಸರಹಳ್ಳಿ: ಒಂದೂವರೆ ವರ್ಷದ ಹಿಂದೆ ಆರಂಭವಾಗಿರುವ ಶಿವಪುರ ಕೆರೆ ಪುನರುಜ್ಜೀವನ ಕಾರ್ಯ ನಿಧಾನಗತಿಯಲ್ಲಿ ಸಾಗುತ್ತಿದ್ದು, ಕಾಮಗಾರಿಯೂ ಸಮರ್ಪಕವಾಗಿಲ್ಲವೆಂದು ಸ್ಥಳೀಯರು ದೂರುತ್ತಿದ್ದಾರೆ.

ಅಮೃತ ನಗರೋತ್ಥಾನ ಯೋಜನೆಯಡಿ ಶಿವಪುರ ಕೆರೆ ಅಭಿವೃದ್ಧಿಗಾಗಿ ₹2 ಕೋಟಿ ಅನುದಾನ ನೀಡಲಾಗಿದೆ. ಸದ್ಯಕ್ಕೆ ಕೆರೆ ಹೂಳೆತ್ತುವ ಕಾರ್ಯ ಮುಗಿದಿದೆ. ಕೆರೆಯ ಸುತ್ತಲೂ ನಡಿಗೆ ಪಥ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಕೈಗಾರಿಕೆಗಳ ತ್ಯಾಜ್ಯ ಮತ್ತು ಒಳಚರಂಡಿ ನೀರು ಕೆರೆಗೆ ಸೇರದಂತೆ ಪೈಪ್‌ಲೈನ್ ಅಳವಡಿಸಲಾಗಿದೆ.

ಕೆರೆ ಏರಿಯ ಒಳಭಾಗಕ್ಕೆ ಕಲ್ಲಿನ ಜೋಡಣೆ (ಪಿಚ್ಚಿಂಗ್) ನಡೆಯುತ್ತಿದೆ. ಕೋಡಿ ನಿರ್ಮಾಣ ಮುಗಿದಿದೆ. ಕೆರೆಯ ಸುತ್ತ ತಂತಿ ಬೇಲಿ ಹಾಕುವುದು, ಗೇಟ್ ಅಳವಡಿಕೆ ಮತ್ತು ಶೌಚಾಲಯ ನಿರ್ಮಾಣ ಕಾರ್ಯ ಬಾಕಿ ಇದೆ. ಕಾಮಗಾರಿ ಮುಂದುವರಿದೆ.

ಶಿವಪುರ ಕೆರೆ ಆರು ಎಕರೆ ಹನ್ನೊಂದು ಗುಂಟೆ ವಿಸ್ತೀರ್ಣವಿದ್ದು, ಇದರಲ್ಲಿ ಐದು ಅಡಿ ಜಾಗವನ್ನು ಕಾರ್ಖಾನೆಯವರು ಒತ್ತುವರಿ ಮಾಡಿದ್ದಾರೆ. ಅದನ್ನು ತೆರವುಗೊಳಿಸಲಾಗುವುದು ಎಂದು ಸಹಾಯಕ ಎಂಜಿನಿಯರ್ ಶ್ರೀಧರ್ ಮಾಹಿತಿ ನೀಡಿದರು.

ಹೀಗಿತ್ತು ಕೆರೆ: ನಾಲ್ಕು ದಶಕಗಳ ಹಿಂದೆ ಇದೇ ಶಿವಪುರ ಕೆರೆ ಜನ–ಜಾನುವಾರುಗಳಿಗೆ ನೀರಾಸರೆಯಾಗಿತ್ತು. ನಗರ ಬೆಳೆದಂತೆ ಕೆರೆಯ ಸುತ್ತ ಕಟ್ಟಡದ ಅವಶೇಷಗಳನ್ನು ರಾಶಿ ಹಾಕಲಾಯಿತು. ನಂತರ ಕೈಗಾರಿಕಾಗಳ ತ್ಯಾಜ್ಯ, ಒಳಚರಂಡಿ ನೀರು ಕೆರೆ ಸೇರಿ, ನೀರು ಕಲುಷಿತಗೊಂಡಿತು. ದನ–ಕರುಗಳು ಸಹ ನೀರು ಕುಡಿಯಲು ಸಾಧ್ಯವಾಗದಷ್ಟು ಮಲಿನವಾಯಿತು. ಎಷ್ಟೋ ಸಾರಿ ಬೀಡಾಡಿ ದನಗಳು ಬಾಯಾರಿ ನೀರು ಕುಡಿಯಲು ಕೆರೆಗೆ ಹೋಗಿ ಕೆಸರಲ್ಲಿ ಸಿಕ್ಕಿಹಾಕಿಕೊಳ್ಳುತ್ತಿದ್ದವು ಎಂದು ಸ್ಥಳೀಯರು ವಿವರಿಸಿದರು.

ಕೆರೆ ಅಭಿವೃದ್ಧಿಪಡಿಸಬೇಕೆಂದು ಸ್ಥಳೀಯರು ಸರ್ಕಾರಕ್ಕೆ ಮನವಿ ಮಾಡಿದ್ದರು. ಜನರ ಮನವಿಗೆ ಸ್ಪಂದಿಸಿದ ಪಾಲಿಕೆ, ಕೆರೆ ಪುನರುಜ್ಜೀವನಕ್ಕೆ ಮುಂದಾಗಿದೆ.

‘ಕಲುಷಿತವಾಗಿದ್ದ ಕೆರೆಯ ಪುನರುಜ್ಜೀವನ ಕಾರ್ಯ ಆರಂಭವಾಗಿದೆ. ಆದರೆ, ಬಹಳ ನಿಧಾನಗತಿಯಲ್ಲಿ ಸಾಗುತ್ತಿದೆ. ತ್ವರಿತಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು’ ಎಂದು ಸ್ಥಳೀಯ ನಿವಾಸಿ ದಾಸಪ್ಪ ಒತ್ತಾಯಿಸಿದರು.

'ಕೆರೆ ಅಭಿವೃದ್ಧಿ ಕಾಮಗಾರಿ ಸರಿಯಾಗಿ ನಡೆಯುತ್ತಿಲ್ಲ. ಸಂಬಂಧಪಟ್ಟವರು ಪರಿಶೀಲಿಸಿ, ಕ್ರಮ ಜರುಗಿಸಬೇಕು'ಎಂದು ಸ್ಥಳೀಯ ನಿವಾಸಿ ಕೆಂಪರಾಜು ಆಗ್ರಹಿಸಿದರು.

ಮದ್ಯದ ಅಮಲಿನಲ್ಲಿದ್ದ ಪುಂಡರಿಂದ ಹೆದ್ದಾರಿಯಲ್ಲಿ ಕೃತ್ಯ: ಮೂವರ ಬಂಧನ

ಆಂಬುಲೆನ್ಸ್ ಚಾಲಕನ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ



ಲತೀಶ್



ಮಂಜುನಾಥ್



ಯುವರಾಜ್

ನೆಲಮಂಗಲ: ಪಟ್ಟಣದ ಜಾಸ್‌ಟೋಲ್ ಬಳಿ ಆಂಬುಲೆನ್ಸ್‌ವೊಂದನ್ನು ಅಡ್ಡಗಟ್ಟಿ ಚಾಲಕನ ಮೇಲೆ ಹಲ್ಲೆ ನಡೆಸಿದ್ದ ಆರೋಪ ಸಂಬಂಧ ಮೂವರು ಆರೋಪಿಗಳನ್ನು ನೆಲಮಂಗಲ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಯಲಚೇನಹಳ್ಳಿಯ ಯುವರಾಜ್ ಸಿಂಗ್, ಮಂಜುನಾಥ್, ಲತೀಶ್ ಬಂಧಿತರು. ಮತ್ತೊಬ್ಬ ತಲೆಮರೆಸಿಕೊಂಡಿದ್ದಾನೆ ಎಂದು ಮೂಲಗಳು ತಿಳಿಸಿವೆ.

‘ತುಮಕೂರು ಆಸ್ಪತ್ರೆಯಿಂದ ಬೆಂಗಳೂರಿನ ವಾಣಿವಿಲಾಸ್ ಆಸ್ಪತೆಗೆ ಭಾನುವಾರ ಸಂಜೆ 5 ತಿಂಗಳ ಮಗುವನ್ನು ತುರ್ತು ಚಿಕಿತ್ಸೆಗೆ ಆಮ್ಲಜನಕದ ನೆರವಿನೊಂದಿಗೆ ಕರೆತರಲಾಗುತ್ತಿತ್ತು. ಹೆದ್ದಾರಿಯಲ್ಲಿ ಆಂಬುಲೆನ್ಸ್ ವೇಗವಾಗಿ ಬರುತ್ತಿತ್ತು. ಅದೇ ಮಾರ್ಗದಲ್ಲಿ ಕಾರು ಸಹ ಬರುತ್ತಿತ್ತು. ಮಾರ್ಗ ಮಧ್ಯದಲ್ಲಿ ಕಾರನ್ನು ಆಂಬುಲೆನ್ಸ್ ಹಿಂದಿಕ್ಕಿದ್ದರಿಂದ ಕುಪಿತರಾದ ಕಾರಿನಲ್ಲಿದ್ದ ಆರೋಪಿಗಳು, ಆರು ಕಿ.ಮೀ ದೂರದಿಂದಲೂ ಆಂಬುಲೆನ್ಸ್ ಅನ್ನು ಹಿಂಬಾಲಿಸಿಕೊಂಡು ಬಂದಿದ್ದಾರೆ. ಜಾಸ್‌ಟೋಲ್ ಬಳಿ ಆಂಬುಲೆನ್ಸ್ ನಿಲ್ಲಿಸಿದ್ದರಿಂದ ಅಡ್ಡಗಟ್ಟಿ ವೇಗವಾಗಿ ಓಡಿಸುತ್ತೀಯಾ ಎಂದು ಅವಾಚ್ಯವಾಗಿ ನಿಂದಿಸಿದ್ದಾರೆ. ಹಲ್ಲೆ ನಡೆಸಿ ಆಂಬುಲೆನ್ಸ್ ಕೀ ಕಿತ್ತುಕೊಳ್ಳಲು ಪ್ರಯತ್ನಿಸಿದ್ದಾರೆ. ಆಂಬುಲೆನ್ಸ್ ಚಾಲಕಜಾನ್ ಮೇಲೆ ಹಲ್ಲೆ ನಡೆಸಲಾಗಿದೆ’ ಎಂದು ಮೂಲಗಳು ಹೇಳಿವೆ.

‘ಮಗುವಿನ ಪೋಷಕರು ಎಷ್ಟು ಮನವಿ ಮಾಡಿದರೂ ಬಿಡಲಿಲ್ಲ’ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ‘ಟೋಲ್‌ನಲ್ಲಿದ್ದ ಸಿಬ್ಬಂದಿ ನೀಡಿದ ಮಾಹಿತಿ ಆಧರಿಸಿ ಸ್ಥಳಕ್ಕೆ ಬಂದ ನೆಲಮಂಗಲ ಠಾಣೆ ಪೊಲೀಸರು, ಮೊದಲು ಆಂಬುಲೆನ್ಸ್ ಅನ್ನು ಮುಂದಕ್ಕೆ ಕಳುಹಿಸಿದ್ದರು. ನಂತರ ಆರೋಪಿಗಳನ್ನು ವಶಕ್ಕೆ ಪಡೆದುಕೊಂಡರು’ ಎಂದು ಮೂಲಗಳು ಹೇಳಿವೆ.

‘ಹಲ್ಲೆ ನಡೆಸಿದ ಯುವಕರು ಮದ್ಯದ ಅಮಲಿನಲ್ಲಿ ಇದ್ದರು ಎಂದು ಆಂಬುಲೆನ್ಸ್ ಚಾಲಕ ತಿಳಿಸಿದ್ದಾರೆ. ಅವರು ನೀಡಿದ ದೂರು ಆಧರಿಸಿ ಮೂವರನ್ನು ಬಂಧಿಸಲಾಗಿದೆ. ಆರೋಪಿಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

‘ಕಂಡಕಂಡಲ್ಲಿ ಪುಂಡರ ಅಟ್ಟಹಾಸ, ಸುಲಿಗೆಗಳು ನಡೆಯುತ್ತಿದ್ದರೂ ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ರಸ್ತೆಗಳಲ್ಲಿ ಹಗಲಲ್ಲೇ ಕುಡಿದ ಮತ್ತಿನಲ್ಲಿ ವಾಹನ ಓಡಿಸಿದರೂ ಪೊಲೀಸರು ಅಡ್ಡಗಟ್ಟುವುದಿಲ್ಲ. ಆಂಬುಲೆನ್ಸ್‌ನ್ನೇ ತಡೆಗಟ್ಟಿ ಚಾಲಕನಿಗೆ ಥಳಿಸಿ ಪುಂಡರು ಅಟ್ಟಹಾಸ ಮೆರೆಯುತ್ತಿರುವುದು ಅರಾಜಕತೆ ಹೇಗೆ ತಾಂಡವವಾಡು-ತ್ತಿದೆ ಎಂಬುದನ್ನು ತೋರಿಸುತ್ತಿದೆ. ಗೃಹ ಸಚಿವ ಜಿ.ಪರಮೇಶ್ವರ ಅವರು ಹೇಳಿಕೆ ಕೊಡುವುದಕ್ಕೆ ಸೀಮಿತ-ವಾಗಿದ್ದಾರೆ’ ಎಂದು ಸಾಮಾಜಿಕ ಮಾಧ್ಯಮ ‘ಎಕ್ಸ್’ನಲ್ಲಿ ಬಿಜೆಪಿ ಆಕ್ರೋಶ ವ್ಯಕ್ತಪಡಿಸಿದೆ.

ಸಂಚಾರ ಠಾಣೆ ಹೆಡ್ ಕಾನ್‌ಸ್ಟೆಬಲ್ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಂಚ ಪಡೆಯುತ್ತಿದ್ದ ಆರೋಪ ಮೇಲ್ನೋಟಕ್ಕೆ ಸಾಬೀತಾದ ಹಿನ್ನೆಲೆಯಲ್ಲಿ ಕೆ.ಆರ್. ಮಾರುಕಟ್ಟೆ ಸಂಚಾರ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ವಸಂತಕುಮಾರ್ ಎಂಬವರನ್ನು ಅಮಾನತು ಮಾಡಲಾಗಿದೆ.

‘ಈ ಸಂಬಂಧ ಸಾರ್ವಜನಿಕರಿಂದ ದೂರುಗಳು ಬಂದಿದ್ದವು. ಇಲಾಖೆ ವಿಚಾರಣೆ ಕಾಯ್ದಿರಿಸಿ ಅಮಾನತು ಮಾಡಲಾಗಿದೆ’ ಎಂದು ಸಂಚಾರ ಪಶ್ಚಿಮ ವಿಭಾಗದ ಅನಿತಾ ಅವರು ತಿಳಿಸಿದ್ದಾರೆ.

‘ಕೆ.ಆರ್.ಮಾರುಕಟ್ಟೆಯಲ್ಲಿ ವ್ಯಾಪಾರಿಗಳಿಂದ ವಸಂತಕುಮಾರ್ ಲಂಚ ಪಡೆ-ಯುತ್ತಿದ್ದರು ಎಂಬ ಆರೋಪವಿತ್ತು. ವ್ಯಾಪಾರಿಗಳಿಂದ ದಾಖಲಾತಿ ಕೇಳುತ್ತಿದ್ದರು. ದಾಖಲೆಗಳನ್ನು ಕೊಡದಿದ್ದರೆ ಹಣಕ್ಕೆ ಬೇಡಿಕೆ ಇಡುತ್ತಿದ್ದರು ಎಂಬ ಆರೋಪ ಇದೆ. ಈ ಸಂಬಂಧ ವಿಡಿಯೊವೊಂದು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿತ್ತು. ಅದನ್ನೂ ಪರಿಶೀಲಿಸಲಾಗಿದೆ. ನಗರ ಪೊಲೀಸ್ ಕಮಿಷನರ್ ಅವರು ಅಮಾನತು ಮಾಡಿ ಆದೇಶಿಸಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಬಾಲಕಿ ಮೇಲೆ ಅತ್ಯಾಚಾರ: ಸೆರೆ

ಕಲಬುರಗಿ: ನಗರದ ಬಾಲಕಿಯೊಬ್ಬಳ ಮೇಲೆ ಅತ್ಯಾಚಾರ ಮಾಡಿದ್ದು ಸಾಬೀತಾಗಿದ್ದರಿಂದ ಇಬ್ಬರು ಅಪರಾಧಿಗಳಿಗೆ ಇಲ್ಲಿನ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು 30 ವರ್ಷ ಜೈಲು ಶಿಕ್ಷೆ ವಿಧಿಸಿದೆ. ತಲಾ ₹20 ಸಾವಿರ ದಂಡ ವಿಧಿಸಿದೆ.

ನಗರದ ಮಿಲ್ಲತ್ ನಗರದ ಖಂಡಾಲಾ ಗ್ರೌಂಡ್ ನಿವಾಸಿ ಸೈಯದ್ ಅಮಾನ್ ಅಲಿ (19) ಹಾಗೂ ಬಿಲಾಲಾಬಾದ್ ಕಾಲೊನಿ ನಿವಾಸಿ ಸೈಯದ್ ತಲಹಾ ನೂಮಾನ್ (22) ಶಿಕ್ಷೆಗೊಳಗಾದ ಅಪರಾಧಿಗಳು.

2020ರ ಫೆ. 10ರಂದು ರಾತ್ರಿ ವೇಳೆ ಬಾಲಕಿ ಮನೆಯ ಚಾವಣಿ ಮೇಲೆ ತಿರುಗಾಡುತ್ತಿದ್ದುದನ್ನು ಗಮನಿಸಿದ ಇಬ್ಬರು ಯುವಕರು ಅತ್ಯಾಚಾರ ಮಾಡಿದ್ದರು. ಸೈಯದ್ ತಲಹಾ ನೂಮಾನ್ ಅತ್ಯಾಚಾರ ಮಾಡುತ್ತಿದ್ದ ಸಂದರ್ಭದಲ್ಲಿ ಸೈಯದ್ ಅಮಾನ್ ಅಲಿ ಮೊಬೈಲ್ ಹಿಡಿದು ವಿಡಿಯೊ ಚಿತ್ರೀಕರಣ ಮಾಡುವುದಾಗಿ ಬೆದರಿಕೆ ಹಾಕಿದ್ದ. ನಂತರ ಸೈಯದ್ ಅಮಾನ್ ಅಲಿ ಬಾಲಕಿಯ ಮೇಲೆ ಅತ್ಯಾಚಾರ ಮಾಡುತ್ತಿದ್ದಾಗ ಸೈಯದ್ ತಲಹಾ ವಿಡಿಯೊ ಚಿತ್ರೀಕರಣ ಮಾಡಿದಂತೆ ನಟಿಸಿದ. ಘಟನೆ ಬಗ್ಗೆ ಯಾರಿಗಾದರೂ ಹೇಳಿದರೆ ವಿಡಿಯೊ ಬಹಿರಂಗ ಮಾಡುವುದಾಗಿ ಬೆದರಿಕೆ ಹಾಕಿದ್ದರು. ಈ ಬಗ್ಗೆ ದೂರು ದಾಖಲಿಸಿಕೊಂಡಿದ್ದ ಮಹಿಳಾ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ದಿಲೀಪ್ ಸಾಗರ್ ತನಿಖೆ ನಡೆಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ನ್ಯಾಯಾಧೀಶ ಯಮನಪ್ಪ ಬಮ್ಮಣಗಿ ಅವರು ಅಪರಾಧಿಗಳಿಗೆ ಶಿಕ್ಷೆ ವಿಧಿಸಿದ್ದಾರೆ. ಸಂತ್ರಸ್ತ ಬಾಲಕಿಗೆ ಕಾನೂನು ಪ್ರಾಧಿಕಾರದಿಂದ ₹7 ಲಕ್ಷ ಪರಿಹಾರ ನೀಡುವಂತೆ ಆದೇಶದಲ್ಲಿ ತಿಳಿಸಿದ್ದಾರೆ.

ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಶಾಂತವೀರ ಬಿ. ತುಪ್ಪದ ವಾದ ಮಂಡಿಸಿದ್ದರು.

ಎಂಬಿಬಿಎಸ್ ವಿದ್ಯಾರ್ಥಿ ಆತ್ಮಹತ್ಯೆ

ಬೆಂಗಳೂರು: ನಗರದ ಬೌರಿಂಗ್ ವೈದ್ಯಕೀಯ ಕಾಲೇಜಿನ (ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ) ಎಂಬಿಬಿಎಸ್ ವಿದ್ಯಾರ್ಥಿಯೊಬ್ಬರು ಸೋಮವಾರ ಹಾಸ್ಟೆಲ್ ಕೋಣೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ರಾಜಸ್ತಾನದ ಲೋಕೇಂದ್ರ ಕುಮಾರ್ ಸಿಂಗ್(22) ಆತ್ಮಹತ್ಯೆ ಮಾಡಿಕೊಂಡವರು.

ಶಿವಾಜಿನಗರದ ಬೌರಿಂಗ್ ಕಾಲೇಜಿನಲ್ಲಿ ಪ್ರಥಮ ವರ್ಷದ ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದ ಲೋಕೇಂದ್ರ ಕುಮಾರ್ ಸಿಂಗ್ ಕಾಲೇಜಿನ ಹಾಸ್ಟೆಲ್‌ನಲ್ಲಿ ವಾಸ್ತವ್ಯ ಮಾಡಿದ್ದರು.

‘ಸೋಮವಾರ ಬೆಳಿಗ್ಗೆ ಪ್ರಾಯೋಗಿಕ ಪರೀಕ್ಷೆಗೆ ಹಾಜರಾಗಿ ಮಧ್ಯಾಹ್ನ ಹಾಸ್ಟೆಲ್‌ಗೆ ತೆರಳಿದ್ದರು. ಬಳಿಕ, ಕೋಣೆಯ ಚಿಲಕ ಹಾಕಿಕೊಂಡು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆಗೆ ಕಾರಣ ತಿಳಿದುಬಂದಿಲ್ಲ. ತನಿಖೆ ನಡೆಯುತ್ತಿದೆ. ರಾಜಸ್ಥಾನದಲ್ಲಿರುವ ಪೋಷಕರರಿಗೆ ಮಾಹಿತಿ ನೀಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸಹಪಾಠಿ ಸೋಮವಾರ ಮಧ್ಯಾಹ್ನ 3.30ಕ್ಕೆ ಹಾಸ್ಟೆಲ್ ಬಂದು ನೋಡಿದಾಗ ಕೊಠಡಿಯ ಬಾಗಿಲು ಬಂದ್ ಆಗಿತ್ತು. ಬಾಗಿಲು ತಟ್ಟಿದರೂ ಆ ಕಡೆಯಿಂದ ಪ್ರತಿಕ್ರಿಯೆ ಬಂದಿರಲಿಲ್ಲ. ಅನುಮಾನುಗೊಂಡು ಬಾಗಿಲು ಒಡೆದು ಪರಿಶೀಲಿಸಿದಾಗ ನೇಣು ಬಿಗಿದ ಸ್ಥಿತಿಯಲ್ಲಿ ಮೃತದೇಹ ಪತ್ತೆ ಆಗಿತ್ತು. ಘಟನಾ ಸ್ಥಳದಲ್ಲಿ ಯಾವುದೇ ಡೆತ್‌ನೋಟ್ ಪತ್ತೆಯಾಗಿಲ್ಲ. ಮೃತನ ಪೋಷಕರು ನಗರಕ್ಕೆ ಬಂದ ಬಳಿಕ ದೂರು ಪಡೆದು ಮರಣೋತ್ತರ ಪರೀಕ್ಷೆ ನಡೆಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಕಮರ್ಷಿಯಲ್ ಸ್ಟ್ರೀಟ್ ಠಾಣೆ ಪೊಲೀಸರು ಹೇಳಿದರು.

ಬೈಕ್ ವಿಚಾರಕ್ಕೆ ಗಲಾಟೆ: ಪುತ್ರನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಕ್ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ತಂದೆಯಿಂದ ಮಗನ ಕೊಲೆ ನಡೆದಿದೆ ಎನ್ನಲಾಗಿದ್ದು, ಅನ್ನಪೂರ್ಣೇಶ್ವರಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅನ್ನಪೂರ್ಣೇಶ್ವರಿ ನಗರದ ‘ಡಿ’ ಗ್ರೂಪ್ ಲೇಔಟ್‌ನ ಮುದ್ದಿನಪಾಳ್ಯ ನಿವಾಸಿ ಅಂಜನ್ ಕುಮಾರ್ (27) ಕೊಲೆಯಾದ ವ್ಯಕ್ತಿ. ಕೃತ್ಯ ಎಸಗಿದ ಆರೋಪ ಮೇಲೆ ಅಂಜನ್‌ಕುಮಾರ್ ತಂದೆ ವೆಂಕಟೇಶ್ (53) ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ವೆಂಕಟೇಶ್ ಅವರು ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದರು. ಪತ್ನಿ, ಪುತ್ರ ಹಾಗೂ ಪುತ್ರಿ ಜೊತೆಗೆ ಮುದ್ದಿನಪಾಳ್ಯದಲ್ಲಿ ನೆಲೆಸಿದ್ದರು. ಪುತ್ರ ಅಂಜನ್ ಕುಮಾರ್ ಪಿಯುಸಿ ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿದ್ದ. ಬೇರೆಲ್ಲೂ ಕೆಲಸಕ್ಕೆ ಹೋಗುತ್ತಿರಲಿಲ್ಲ. ಖಾಸಗಿ ಕಂಪನಿಯಲ್ಲಿ ಪುತ್ರಿ ಉದ್ಯೋಗದಲ್ಲಿ ಇದ್ದರು. ಭಾನುವಾರ ಸಂಜೆ ವೆಂಕಟೇಶ್ ಅವರು, ಮಗಳ ಬೈಕ್ ಅನ್ನು ತೆಗೆದುಕೊಂಡು ಹೊರಗೆ ಹೋಗಿದ್ದರು. ರಾತ್ರಿ ಮನೆಗೆ ಬಂದಾಗ ಬೈಕ್ ತಂದಿರಲಿಲ್ಲ. ಪುತ್ರ ಬೈಕ್ ಬಗ್ಗೆ ಪ್ರಶ್ನಿಸಿದ್ದರು. ಆಗ ಗಲಾಟೆ ನಡೆದಿದೆ’ ಎಂದು ಮೂಲಗಳು ಹೇಳಿವೆ.

‘ಬೈಕ್ ಬಗ್ಗೆ ಪ್ರಶ್ನಿಸಿದಾಗ ತಂದೆ ಉಡಾಫೆಯಿಂದ ಉತ್ತರಿಸಿದ್ದರು ಎನ್ನಲಾಗಿದೆ. ಬೈಕ್ ಎಲ್ಲೋ ನಿಲ್ಲಿಸಿದ್ದೇನೆ; ತರುತ್ತೇನೆ ಎಂದಿದ್ದರು. ಗಲಾಟೆ ವಿಕೋಪಕ್ಕೆ ಹೋದಾಗ ಅಂಜನ್‌ಕುಮಾರ್, ಹೆಲ್ಮೆಟ್‌ನಿಂದ ತಂದೆಯ ಮೇಲೆ ಹಲ್ಲೆ ಮಾಡಿದ್ದರು. ಇದರಿಂದ ಕೋಪಗೊಂಡ ತಂದೆ, ಅಡುಗೆ ಕೋಣೆಗೆ ತೆರಳಿ ಚಾಕು ತಂದು, ಪುತ್ರನ ಎದೆಯ ಭಾಗಕ್ಕೆ ಇರಿದಿದ್ದಾರೆ. ಅಂಜನ್ ಕುಮಾರ್ ತೀವ್ರ ರಕ್ತಸ್ರಾವವಾಗಿ ಕುಸಿದುಬಿದ್ದು, ಮೃತಪಟ್ಟರು’ ಎಂದು ಮೂಲಗಳು ತಿಳಿಸಿವೆ.

ಜೈಲಿನಲ್ಲಿ ರೌಡಿಗಳ ನಡುವೆ ಮಾರಾಮಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಕರಣವೊಂದರಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ರೌಡಿಶೀಟರ್ ‘ಕುಳ್ಳ’ ರಿಜ್ವಾನ್ ಹಾಗೂ ರೌಡಿಶೀಟರ್ ಸಾಗರ್ ಸಹಚರರ ನಡುವೆ ಗಲಾಟೆ ನಡೆದಿದ್ದು, ಈ ಸಂಬಂಧ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೂನ್ 7ರಂದು ಸಂಜೆ ಕೇಂದ್ರ ಕಾರಾಗೃಹದ ವಿಚಾರಣಾಧೀನ ಕೈದಿಗಳ ವಿಭಾಗದ ಬ್ಯಾರಕ್ 3 ಮತ್ತು 4ರ ಎದುರು ಈ ಗಲಾಟೆ ನಡೆದಿದೆ ಎಂದು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ಮಲ್ಲಿಕಾರ್ಜುನ್ ನೀಡಿದ ದೂರಿನ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

‘ವಿಚಾರಣಾಧೀನ ಕೈದಿಗಳಾದ ವಿಶ್ವನಾಥ್, ಮುನಿರಾಜ್, ಜಾಫರ್ ಸಾದಿಕ್, ವಿಶಾಲ್‌ಗೌಡ, ಟಿಪ್ಪು ಸುಲ್ತಾನ್, ಸೆಂಥಿಲ್ ಕುಮಾರ್, ಅಜಯ್ ಸಿಂಗ್, ಕುಮಾರ್, ಇರ್ಷಾದ್ ಪಾಷಾ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಗಲಾಟೆಯಲ್ಲಿ ಗಾಯಗೊಂಡಿರುವ ವಿಚಾರಣಾಧೀನ ಕೈದಿಗಳಾದ ತೇಜಸ್, ಅಮಿತ್ ಕುಮಾರ್, ಶೇಷಾದ್ರಿ, ಧನುಷ್ ಅವರನ್ನು ಕೇಂದ್ರ ಕಾರಾಗೃಹದ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.

‘ರೌಡಿ ಕುಳ್ಳ ರಿಜ್ವಾನ್ ಸಹಚರರು ಮತ್ತು ರೌಡಿ ಸಾಗರ್ ಸಹಚರರ ಜತೆ ಅಂದು ಏಕಾಏಕಿ ಜಗಳ ನಡೆದಿತ್ತು. ಪರಸ್ಪರ ಕಲ್ಲಿನಿಂದ ಹಲ್ಲೆ ಮಾಡಿಕೊಂಡಿದ್ದರು. ಲಘು ಲಾಠಿ ಪ್ರಹಾರ ನಡೆಸಿ ಗುಂಪುಗಳನ್ನು ಚದುರಿಸಿದ್ದರು’ ಎಂದು ಮೂಲಗಳು ಹೇಳಿವೆ.

‘ಎರಡೂ ಗುಂಪುಗಳ ನಡುವೆ ಜೈಲಿನಿಂದ ಹೊರಗಿದ್ದಾಗಲೇ ದ್ವೇಷವಿತ್ತು. ಹಫ್ತಾ ವಸೂಲಿ ವಿಚಾರಕ್ಕೆ ಆಗಾಗ್ಗೆ ಗಲಾಟೆ ನಡೆದಿತ್ತು. ಇದೇ ಪ್ರಕರಣದಲ್ಲಿ ಆರೋಪಿಗಳು ಜೈಲು ಸೇರಿದ್ದರು. ಹಳೇ ದ್ವೇಷಕ್ಕೆ ಮತ್ತೆ ಜೈಲಿನಲ್ಲಿ ಗಲಾಟೆ ಆಗಿದೆ’ ಎಂದು ಮೂಲಗಳು ತಿಳಿಸಿವೆ.

ಆಟ: ಗುಂಪುಗಳ ನಡುವೆ ಗಲಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಬದಿಯಲ್ಲಿ ನೆಟ್ ಕಟ್ಟಿಕೊಂಡು ವಾಲಿಬಾಲ್ ಆಡುತ್ತಿದ್ದ ವಿಚಾರಕ್ಕೆ ಎರಡು ಗುಂಪುಗಳ ನಡುವೆ ಗಲಾಟೆ ನಡೆದಿದ್ದು, ದೂರು–ಪ್ರತಿದೂರು ದಾಖಲಾಗಿದೆ. ಗಲಾಟೆಯಲ್ಲಿ ಕಿಡಿಗೇಡಿಗಳು ಮಹಿಳೆ ಮೇಲೆ ಹಲ್ಲೆ ನಡೆಸಿದ್ದು, ಆಕೆ ಗಾಯಗೊಂಡಿದ್ದಾರೆ.

ತಲಘಟ್ಟಪುರ ಆವಲಹಳ್ಳಿಯಲ್ಲಿ ಭಾನುವಾರ ಸಂಜೆ ಗಲಾಟೆ ನಡೆದಿದ್ದು, ನೇತ್ರಾವತಿ ಎಂಬವರು ಯೋಗೇಶ್ ಮತ್ತು ಭಾಸ್ಕರ್ ವಿರುದ್ಧ ದೂರು ನೀಡಿದ್ದಾರೆ. ಭಾಸ್ಕರ್ ಅವರು ನೇತ್ರಾವತಿ ಮತ್ತು ಆಕೆಯ ಪುತ್ರ ಸಂಜಯ್ ವಿರುದ್ಧ ಪ್ರತಿದೂರು ನೀಡಿದ್ದಾರೆ. ಎರಡು ಪ್ರತ್ಯೇಕ ಎಫ್‌ಐಆರ್ ದಾಖಲು ಮಾಡಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ದೂರುದಾರರಾದ ನೇತ್ರಾವತಿ ಪುತ್ರ ಸಂಜಯ್ ಮತ್ತು ಪುತ್ರಿ ಸೇರಿ ಕೆಲವು ಸ್ಥಳೀಯರು ಭಾನುವಾರ ಸಂಜೆ ರಸ್ತೆ ಬದಿ ನೆಟ್ ಕಟ್ಟಕೊಂಡು ವಾಲಿಬಾಲ್ ಆಡುತ್ತಿದ್ದರು. ಇದರಿಂದ ಸ್ಥಳೀಯರ ಓಡಾಟಕ್ಕೆ ತೊಂದರೆಯಾಗುತ್ತಿತ್ತು. ಹೀಗಾಗಿ, ಸ್ಥಳೀಯರಾದ ಬಾಲಾಜಿ, ಯೋಗಿ ಹಾಗೂ ಭಾಸ್ಕರ್ ಅದನ್ನು ಪ್ರಶ್ನಿಸಿದ್ದರು. ಅಷ್ಟರಲ್ಲಿ ಸಂಜಯ್ ತಾಯಿ ಸ್ಥಳಕ್ಕೆ ಬಂದರು. ಆಗ ಪರಸ್ಪರ ವಾಗ್ವಾದ ನಡೆಯಿತು. ಅದು ವಿಕೋಪಕ್ಕೆ ತಿರುಗಿ ಎರಡೂ ಗುಂಪುಗಳಲ್ಲಿ ಇದ್ದವರು ಹೊಡೆದಾಡಿಕೊಂಡಿದ್ದಾರೆ. ಗಲಾಟೆ ವೇಳೆ ಕೆಲವರು ನೇತ್ರಾವತಿ ಮತ್ತು ಆಕೆಯ ಪುತ್ರಿಯ ತಲೆ ಕೂದಲು ಹಿಡಿದು ರಸ್ತೆಯಲ್ಲಿ ಎಳೆದಾಡಿದ್ದಾರೆ ಎಂದು ಆರೋಪಿಸಲಾಗಿದೆ.

ನೇತ್ರಾವತಿ, ಆಕೆಯ ಪುತ್ರ ಸಂಜಯ್ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿ ಭಾಸ್ಕರ್ ಪ್ರತಿದೂರು ದಾಖಲಿಸಿದ್ದಾರೆ. ಹೀಗಾಗಿ ಎರಡೂ ಗುಂಪುಗಳ ಆರೋಪಿಗಳಿಗೆ ನೋಟಿಸ್ ಜಾರಿಗೊಳಿಸಲಾಗಿದೆ ಪೊಲೀಸ್ ಮೂಲಗಳು ತಿಳಿಸಿವೆ.

‘ಯುಎಸ್‌ಎ, ಭಾರತ: ವಿಶ್ವಾಸಾರ್ಹ ಪಾಲುದಾರರು’

ಪ್ರಜಾವಾಣಿ ವಾರ್ತೆ



ಯುಎಸ್ ಡಿಫೆನ್ಸ್ ಅಟ್ಯಾಚ್ ರಿಯರ್ ಅಡ್ಮಿರಲ್ ಮೈಕೆಲ್ ಬೇಕರ್ ಅವರು ಮಾತನಾಡಿದರು.

ಬೆಂಗಳೂರು: ‘ಸ್ಪರ್ಧಾತ್ಮಕ ಜಗತ್ತಿನಲ್ಲಿ ತೊಂದರೆಗಳು ಎದುರಾದಾಗ ಪರಸ್ಪರ ಸಹಕರಿಸಲು ಭಾರತ ಮತ್ತು ಅಮೆರಿಕ ಸಮಾನ ಮನಸ್ಕ ಮತ್ತು ವಿಶ್ವಾಸಾರ್ಹ ಪಾಲುದಾರ ದೇಶಗಳಾಗಿ ಹೊರಹೊಮ್ಮಿವೆ’ ಎಂದು ಭಾರತೀಯ ನೌಕಾಪಡೆಯ ಸಹಾಯಕ ಮುಖ್ಯಸ್ಥ ರಿಯರ್ ಅಡ್ಮಿರಲ್ ನಿರ್ಭಯ್ ಬಾಪ್ನಾ ತಿಳಿಸಿದರು.

ಎಲಿಯಟ್ ಸ್ಕೂಲ್ ಆಫ್ ಇಂಟರ್ ನ್ಯಾಷನಲ್ ಅಫೇರ್ಸ್, ಜಾರ್ಜ್ ವಾಷಿಂಗ್ಟನ್ ವಿಶ್ವವಿದ್ಯಾಲಯ, ಬೆಂಗಳೂರಿನ ಕ್ರೈಸ್ಟ್ ವಿಶ್ವವಿದ್ಯಾಲ-ಯದ ಸಹಯೋಗದಲ್ಲಿ ನಗರದಲ್ಲಿ ಸೋಮವಾರ ನಡೆದ ‘ಪ್ರಗತಿಯಲ್ಲಿ ಪಾಲುದಾರರು’ ಅಧಿವೇಶನದಲ್ಲಿ ಈ ಎರಡು ದೇಶಗಳ ನಡುವಿನ 75 ವರ್ಷಗಳ ಪಾಲುದಾರಿಕೆಯು ಇಂದು ಸಮಗ್ರ ಜಾಗತಿಕ ಕಾರ್ಯತಂತ್ರವಾಗಿ ಮಾರ್ಪಟ್ಟಿದೆ. ಶಾಂತಿ ಮತ್ತು ಸಮೃದ್ಧ ‘ಇಂಡೋ-ಪೆಸಿಫಿಕ್ ಪ್ರದೇಶ’ಕ್ಕಾಗಿ ಎರಡು ರಾಷ್ಟ್ರಗಳ ದೃಷ್ಟಿಕೋನದಲ್ಲಿ ಒಮ್ಮತವಿದೆ ಎಂದರು.

ಯುಎಸ್‌ಎ ರಿಯರ್ ಅಡ್ಮಿರಲ್ ಮೈಕೆಲ್ ಬೇಕರ್ ಮಾತನಾಡಿ, ‘ಭಾರತ ಮತ್ತು ಅಮೆರಿಕದ ಪ್ರಮುಖ ರಕ್ಷಣಾ ಪಾಲುದಾರಿಕೆಯು ಜಾಗತಿಕ ಶಾಂತಿ ಮತ್ತು ಭದ್ರತೆಯ ಆಧಾರಸ್ತಂಭವಾಗಿದೆ. ಜಂಟಿ ರಕ್ಷಣಾಭ್ಯಾಸಗಳು, ರಕ್ಷಣಾ ಕೈಗಾರಿಕಾ ಸಹಕಾರದ ಬಲವರ್ಧನೆ, ಸಂವಾದ ಮತ್ತು ಇತರ ಸಲಹಾ ಕಾರ್ಯವಿಧಾನಗಳ ಮೂಲಕ ನಮ್ಮ ದೇಶಗಳು ಗಣನೀಯ ಪ್ರಗತಿಯನ್ನು ಸಾಧಿಸುತ್ತಿವೆ’ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಅಧಿವೇಶನದಲ್ಲಿ ಭಾರತ ಮತ್ತು ಅಮೆರಿಕದ 50 ವಿಷಯ ತಜ್ಞರು ಭಾಗ-ವಹಿಸಿದ್ದರು. ಪೂರ್ವ ಏಷ್ಯಾ ಅಧ್ಯಯನ ಕೇಂದ್ರದ ಎನ್. ಮನೋಹರನ್, ಕ್ರೈಸ್ಟ್ ವಿಶ್ವವಿದ್ಯಾಲಯದ ಕುಲಪತಿ ಜೋಸ್ ಸಿ.ಸಿ. ಪಾಲ್ಗೊಂಡಿದ್ದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಮಾಡಿದ ನ್ಯಾ. ಶಿವರಾಜ್ ವಿ. ಪಾಟೀಲ

ಪ್ರಜಾಪ್ರಭುತ್ವದ ಬೀಜ ಬಿತ್ತಿದ್ದ ನಾಲ್ವಡಿ ಒಡೆಯರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ನ್ಯಾಯ, ಜನಕಲ್ಯಾಣ ಸೇರಿದಂತೆ ಸಂವಿಧಾನದ ಎಲ್ಲ ಆಶಯಗಳನ್ನು ನಾಲ್ವಡಿ ಕೃಷ್ಣರಾಜ ಒಡೆಯರ್ ಆಡಳಿತದಲ್ಲಿ ಕಾಣಬಹುದು. ಅವರು ರಾಜರಾಗಿದ್ದರೂ ಪ್ರಜಾಪ್ರಭುತ್ವದ ಬೀಜವನ್ನು ಬಿತ್ತಿದ್ದರು ಎಂದು ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ ಅವರು ಹೇಳಿದರು.

ಕನ್ನಡ ಜನಶಕ್ತಿ ಕೇಂದ್ರದ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅವರಿಗೆ ‘ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ’ ಪ್ರದಾನ ಮಾಡಿ ಮಾತನಾಡಿದರು.

ಪ್ರಜಾಪ್ರತಿನಿಧಿ ವ್ಯವಸ್ಥೆ, ಹಿಂದುಳಿದ ವರ್ಗಗಳ ಆಯೋಗ, ಹೆಣ್ಣುಮಕ್ಕಳಿಗೆ ಕಡ್ಡಾಯ ಶಿಕ್ಷಣ, ಏಷ್ಯಾದಲ್ಲೇ ಮೊದಲ ಬಾರಿಗೆ ಜಲವಿದ್ಯುತ್ ಉತ್ಪಾದನೆ, ಅಣೆಕಟ್ಟುಗಳ ನಿರ್ಮಾಣ, ನೀರಾವರಿ ವ್ಯವಸ್ಥೆ, ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆ, ಕೈಗಾರಿಕೆಗಳ ಸ್ಥಾಪನೆ ಹೀಗೆ ಅವರ ಕಾಲದಲ್ಲಿ ಹಲವಾರು ಕ್ಷೇತ್ರಗಳು ಅಭಿವೃದ್ಧಿ ಕಂಡಿದ್ದವು. ದೇಶದಲ್ಲಿ ನೂರಾರು ರಾಜರಿದ್ದರೂ ಮಾದರಿ ರಾಜ ಇವರೊಬ್ಬರೇ ಆಗಿದ್ದರು ಎಂದು ನೆನಪು ಮಾಡಿಕೊಂಡರು.

ಎಲ್ಲ ಸಂಘ, ಸಂಸ್ಥೆಗಳಿಗೆ, ಇಲಾಖೆಗಳಿಗೆ, ಸಾರ್ವಜನಿಕ ರಂಗದಲ್ಲಿರುವವರಿಗೆ ಅಧಿಕಾರ, ಅಂತಸ್ತು, ಆಸ್ತಿ ಶಕ್ತಿಯಾಗಬಾರದು. ಜನರ ಪ್ರೀತಿ, ವಿಶ್ವಾಸವೇ ಶಕ್ತಿಯಾಗಬೇಕು. ಅಂಥ ವಿಶ್ವಾಸವನ್ನು ನಾಗಮೋಹನದಾಸ್ ಗಳಿಸಿದ್ದಾರೆ ಎಂದು ಶ್ಲಾಘಿಸಿದರು.

ಪ್ರಶಸ್ತಿ ಸ್ವೀಕರಿಸಿದ ನ್ಯಾ.ನಾಗಮೋಹನದಾಸ್ ಮಾತನಾಡಿ, ‘ಈ ಪ್ರಶಸ್ತಿ ಜೊತೆಗೆ ನೀಡಿರುವ ₹ 25 ಸಾವಿರವನ್ನು ಸಂವಿಧಾನ ಓದು ಅಭಿಯಾನಕ್ಕೆ ಬಳಸಿಕೊಳ್ಳಲಾಗುವುದು’ ಎಂದು ತಿಳಿಸಿದರು.

‘ಮುಂದಿನ ಚುನಾವಣೆ ಗೆಲ್ಲುವುದು ಹೇಗೆ ಎಂಬ ಯೋಚನೆ ಮಾತ್ರ ನಮ್ಮನ್ನು ಆಳುವವರ ಮುಂದೆ ಇರುವುದು. ಮುಂದಿನ ಪೀಳಿಗೆಗೆ ಏನು ಕೊಡುವುದು ಎಂಬ ಚಿಂತನೆ ಇಲ್ಲ. ಅವರಿಗೆ ಸಂವಿಧಾನದ ಶಿಕ್ಷಣವನ್ನು ಮೊದಲು ನೀಡಬೇಕು. ಅದರ ಜೊತೆಗೆ ಜನಸಾಮಾನ್ಯರಿಗೂ ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸಬೇಕು’ ಎಂದು ಹೇಳಿದರು.



ನಗರದಲ್ಲಿ ಸೋಮವಾರ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿಯನ್ನು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ ಅವರು ನ್ಯಾ.ಎಚ್.ಎನ್. ನಾಗಮೋಹನದಾಸ್ ಅವರಿಗೆ ಪ್ರದಾನ ಮಾಡಿದರು. ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ, ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ರಾಜಪ್ಪ ದಳವಾಯಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಕೋಶಾಧ್ಯಕ್ಷ ಪಿ.ಮಲ್ಲಿಕಾರ್ಜುನಪ್ಪ ಉಪಸ್ಥಿತರಿದ್ದರು
—ಪ್ರಜಾವಾಣಿ ಚಿತ್ರ.

ಸಾಲ ಕೊಟ್ಟ ಸಂಬಂಧಿ ಮಹಿಳೆ ಕೊಲೆ: ದಂಪತಿ ಸೆರೆ

ಕನಕಪುರ: ಸಾಲದ ಹಣ ಮರಳಿ ಕೊಡುವುದಾಗಿ ನಂಬಿಸಿ ಕರೆಸಿಕೊಂಡು ಸಂಬಂಧಿ ಮಹಿಳೆಯನ್ನು ಕೊಲೆ ಮಾಡಿ ತಲೆಮರೆಸಿಕೊಂಡಿದ್ದ ದಂಪತಿಯನ್ನು ಪೊಲೀಸರು ಭಾನುವಾರ ರಾತ್ರಿ ಬಂಧಿಸಿದ್ದಾರೆ.

ತಾಲ್ಲೂಕಿನ ಕಸಬಾ ಹೋಬಳಿ ಶ್ರೀನಿವಾಸನಹಳ್ಳಿ ಗ್ರಾಮದ ರವಿಕುಮಾರ್(40) ಮತ್ತು ಅವರ ಪತ್ನಿ ಆಶಾ(30) ಬಂಧಿತರು. ಬೆಂಗಳೂರಿನ ರೈಲು ನಿಲ್ದಾಣದಲ್ಲಿ ಭಾನುವಾರ ರಾತ್ರಿ ಇಬ್ಬರನ್ನೂ ಬಂಧಿಸಿದ ಪೊಲೀಸರು ಕನಕಪುರಕ್ಕೆ ಕರೆ ತಂದಿದ್ದಾರೆ.

ಕೋಡಿಹಳ್ಳಿ ಹೋಬಳಿ ಟಿ.ಗೊಲ್ಲಹಳ್ಳಿ ಗ್ರಾಮದ ಸಂಬಂಧಿ ಮಹಿಳೆ ಸುನಂದಮ್ಮ (56) ಅವರನ್ನು ಜೂನ್ 4ರಂದು ಚೌಕಸಂದ್ರದ ರೇಷ್ಮೆತೋಟದಲ್ಲಿ ಕೊಲೆ ಮಾಡಿ ಹೂತಿದ್ದರು.

ಸುನಂದಮ್ಮ ಅವರಿಂದ ₹20 ಸಾವಿರ ಸಾಲ ಪಡೆದಿದ್ದ ಆರೋಪಿಗಳು ಸಾಲ ಹಿಂದಿರುಗಿಸುವುದಾಗಿ ಕನಕಪುರಕ್ಕೆ ಕರೆಸಿಕೊಂಡು ಕೊಲೆ ಮಾಡಿ, ಪರಾರಿಯಾಗಿದ್ದರು.

ಇಲಾಖೆ ಅಧಿಕಾರಿಗಳೊಂದಿಗೆ ಕರ್ನಾಟಕ ಭವನದಲ್ಲಿ ಸಭೆ ನಡೆಸಿದ ಸಚಿವ

15 ದಿನಗಳಲ್ಲಿ ನೀಲನಕ್ಷೆ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಮುಂದಿನ 15 ದಿನಗಳಲ್ಲಿ ಉಕ್ಕು ಹಾಗೂ ಬೃಹತ್ ಕೈಗಾರಿಕೆ ಖಾತೆಗಳ ಕುರಿತು ಅಭಿವೃದ್ಧಿ ಮುನ್ನೋಟ ಹಾಗೂ ನೀಲನಕ್ಷೆ ಸಿದ್ಧಪಡಿಸುತ್ತೇನೆ’ ಎಂದು ಕೇಂದ್ರದ ನೂತನ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಉಭಯ ಇಲಾಖೆಗಳ ಅಧಿಕಾರಿಗಳೊಂದಿಗೆ ಕರ್ನಾಟಕ ಭವನದಲ್ಲಿ ಸೋಮವಾರ ರಾತ್ರಿ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ನನ್ನ ಮೇಲೆ ವಿಶ್ವಾಸ ಇಟ್ಟು ಮೋದಿ ಅವರು ಒಳ್ಳೆಯ ಖಾತೆಯನ್ನೇ ನೀಡಿದ್ದಾರೆ. ದೇಶದ ಅಭಿವೃದ್ಧಿಯು ಈ ಖಾತೆಯಲ್ಲಿ ಅಡಗಿದೆ ಎಂಬುದು ನನ್ನ ನಂಬಿಕೆ’ ಎಂದರು.

‘ಇಂಥ ದೊಡ್ಡ ಇಲಾಖೆ ನಿರ್ವಹಣೆ ಮಾಡಬೇಕಿದೆ. ವಿಐಎಸ್ಎಲ್ ಸೇರಿ ಕೈಗಾರಿಕೆಗಳಿಗೆ ಸಂಬಂಧಿಸಿದ ಹಲವು ಸಮಸ್ಯೆಗಳು ಇವೆ. ಇದಕ್ಕೆ ಪರಿಹಾರ ಹುಡುಕಬೇಕಿದೆ. ಯುವಕರಿಗೆ ಉದ್ಯೋಗ ನೀಡಲು ಗಮನ ಕೊಡಬೇಕಿದೆ’ ಎಂದು ಹೇಳಿದರು.

‘ತಯಾರಿಕಾ ಕ್ಷೇತ್ರದಲ್ಲಿ ಬಹಳ ನಿರೀಕ್ಷೆಗಳು ಇವೆ. ಇಲಾಖೆಯಲ್ಲಿ ಹೊಸ ಬದಲಾವಣೆ ತರಲು ಪ್ರಯತ್ನ ಮಾಡುತ್ತೇನೆ. ಉದ್ಯಮಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುತ್ತೇನೆ. ಕರ್ನಾಟಕಕ್ಕೆ ಒಳ್ಳೆಯ ದಿನಗಳು ಪ್ರಾರಂಭವಾಗಿವೆ. ಹಾಗಾಗಿ, ಪ್ರಧಾನಿ ನಮಗೆ ಉತ್ತಮ ಖಾತೆ ನೀಡಿದ್ದಾರೆ’ ಎಂದರು.

‘ಎಚ್.ಡಿ.ದೇವೇಗೌಡರ ರಾಜಕೀಯ ಮುಗಿದೇಹೋಯಿತು ಎಂದವರಿಗೆ ಉತ್ತರ ಸಿಕ್ಕಿದೆ. ನಮ್ಮ ಪಕ್ಷ ಪುಟಿದೆದ್ದು ಬಂದಿದೆ. ಕುಮಾರಸ್ವಾಮಿ ರಾಜಕೀಯ ಮುಗಿಯಿತು ಎಂದು ಅಪಪ್ರಚಾರ ನಡೆಸಿದರು. ಯಾವುದೋ ಒಂದು ಶಕ್ತಿ ಪಕ್ಷಕ್ಕೆ ಬಂದಿದೆ’ ಎಂದು ಪ್ರತಿಪಾದಿಸಿದರು.

ಕೆಜಿಎಫ್ ಗಣಿ ಪ್ರದೇಶದಲ್ಲಿ 12,000 ಎಕರೆ ಭೂಮಿಯನ್ನು ಕೈಗಾರಿಕೆ ಅಭಿವೃದ್ಧಿಗೆ ಬಳಸುವ ಬಗ್ಗೆ ಕೋಲಾರ ಸಂಸದ ಮಲ್ಲೇಶ್ ಬಾಬು ಪ್ರಸ್ತಾಪಿಸಿದರು. ಯಾವುದೇ ಉದ್ದೇಶಕ್ಕೆ ಬಳಕೆಯಾಗದೆ ಗಣಿ ಭೂಮಿ ವ್ಯರ್ಥವಾಗಿ ಉಳಿದಿದೆ ಎಂದು ಸಚಿವರ ಗಮನ ಸೆಳೆದರು.

ಮೈತ್ರಿ ಅಭ್ಯರ್ಥಿಯಾಗಲು ಯೋಗೇಶ್ವರ ಕಸರತ್ತು

ನವದೆಹಲಿ: ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಲು ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ ಪ್ರಯತ್ನ ಆರಂಭಿಸಿದ್ದಾರೆ. ಒಂದು ವೇಳೆ, ಈ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟರೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಲು ಸಿದ್ಧತೆ ನಡೆಸಿದ್ದಾರೆ.

ಕಳೆದ ಎರಡು ದಿನಗಳಿಂದ ದೆಹಲಿಯಲ್ಲಿ ಬೀಡು ಬಿಟ್ಟಿರುವ ಅವರು ಬಿಜೆಪಿಯ ವರಿಷ್ಠರನ್ನು ಭೇಟಿ ಮಾಡಿ ತಮ್ಮ ಇಂಗಿತ ವ್ಯಕ್ತಪಡಿಸಿದ್ದಾರೆ.

2023ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಚನ್ನಪಟ್ಟಣದಿಂದ ಸ್ಪರ್ಧಿಸಿದ್ದ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರು ಯೋಗೇಶ್ವರ ಅವರನ್ನು 15 ಸಾವಿರ ಮತಗಳ ಅಂತರದಿಂದ ಸೋಲಿಸಿದ್ದರು. ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಲ್ಲಿ ಕುಮಾರಸ್ವಾಮಿ ಜಯ ಗಳಿಸಿದ್ದಾರೆ. ಕೇಂದ್ರ ಸಚಿವರಾಗಿದ್ದಾರೆ. ಶಾಸಕ ಸ್ಥಾನಕ್ಕೆ 14 ದಿನಗಳ ಒಳಗೆ ಅವರು ರಾಜೀನಾಮೆ ನೀಡಬೇಕಿದೆ. ಶೀಘ್ರದಲ್ಲಿ ಉಪಚುನಾವಣೆ ಘೋಷಣೆಯಾಗುವ ನಿರೀಕ್ಷೆ ಇದೆ.

ಉಪ ಚುನಾವಣೆಯಲ್ಲೂ ಬಿಜೆಪಿ–ಜೆಡಿಎಸ್ ಮೈತ್ರಿ ಇರುತ್ತದೆ. ಜೆಡಿಎಸ್ ಶಾಸಕರಿದ್ದ ಈ ಕ್ಷೇತ್ರವನ್ನು ಬಿಜೆಪಿಗೆ ಬಿಟ್ಟುಕೊಟ್ಟರೆ ವಿಧಾನಸಭೆಯಲ್ಲಿ ಪಕ್ಷದ ಬಲ ಕುಸಿಯುತ್ತದೆ. ಆ ಕಾರಣದಿಂದ ಜೆಡಿಎಸ್ ಅಭ್ಯರ್ಥಿಯನ್ನೇ ಕಣಕ್ಕಿಳಿಸಬೇಕು. ಪಕ್ಷದ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರೇ ಅಭ್ಯರ್ಥಿಯಾಗಬೇಕು ಎಂಬ ಚರ್ಚೆ ಜೆಡಿಎಸ್‌ನಲ್ಲಿ ಆರಂಭವಾಗಿದೆ.

‘ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಡಾ.ಸಿ.ಎನ್.ಮಂಜುನಾಥ್ ಅವರ ಗೆಲುವಿನಲ್ಲಿ ಬಿಜೆಪಿ ನಾಯಕರ ಪಾತ್ರ ದೊಡ್ಡದು. ಈ ಮೂಲಕ ಎಚ್.ಡಿ.ದೇವೇಗೌಡರ ಕುಟುಂಬಕ್ಕೆ ಶಕ್ತಿ ತುಂಬಿದ್ದೇವೆ. ಹೀಗಾಗಿ, ಜೆಡಿಎಸ್‌ನವರು ಈ ಕ್ಷೇತ್ರವನ್ನು ಬಿಜೆಪಿಗೆ ಬಿಟ್ಟುಕೊಡಬೇಕು. ಈ ಬಗ್ಗೆ ಬಿಜೆಪಿ ವರಿಷ್ಠರು ಕುಮಾರಸ್ವಾಮಿ ಮನವೊಲಿಸಬೇಕು’ ಎಂದು ಪಕ್ಷದ ಹಿರಿಯ ನಾಯಕರ ಗಮನಕ್ಕೆ ಯೋಗೇಶ್ವರ ತಂದಿದ್ದಾರೆ.

‘ರಾಜ್ಯದ ಅಭಿವೃದ್ಧಿಗೆ ಶ್ರಮ’

‘ಜಲಶಕ್ತಿ ಮತ್ತು ರೈಲ್ವೆ ರಾಜ್ಯ ಖಾತೆ ನನಗೆ ಸಿಕ್ಕಿದ್ದು, ಉತ್ತಮ ಕೆಲಸ ಮಾಡಲು ಅವಕಾಶ ದೊರೆತಿದೆ’ ಎಂದು ನೂತನ ಸಚಿವ ವಿ.ಸೋಮಣ್ಣ ತಿಳಿಸಿದರು.

ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ರಾಜ್ಯದ ಐವರು ಸಚಿವರಿಗೆ ಉತ್ತಮ ಖಾತೆಗಳು ದೊರಕಿವೆ. 40 ವರ್ಷಗಳ ರಾಜಕೀಯ ಅನುಭವವನ್ನು ಬಳಸಿಕೊಂಡು ಕರ್ನಾಟಕದ ಅಭಿವೃದ್ಧಿಗೆ ಹೆಚ್ಚಿನ ಶ್ರಮ ವಹಿಸುತ್ತೇವೆ’ ಎಂದರು.

‘ರೈತರಿಗೆ ₹3 ಸಾವಿರ ಪರಿಹಾರ’

ಸರ್ಕಾರದಿಂದ ನಿರ್ಧಾರ: ಕಂದಾಯ ಸಚಿವ ಕೃಷ್ಣ ಬೈರೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 17.09 ಲಕ್ಷ ಸಣ್ಣ, ಅತಿ ಸಣ್ಣ ರೈತ ಕುಟುಂಬಗಳಿಗೆ ಜೀವನೋಪಾಯ ನಷ್ಟ ಪರಿಹಾರವಾಗಿ ತಲಾ ₹2,800ರಿಂದ ₹3,000 ನೀಡಲು ಸರ್ಕಾರ ನಿರ್ಧರಿಸಿದೆ.

ಬರ, ಪ್ರವಾಹ ಮತ್ತು ಇತರ ನೈಸರ್ಗಿಕ ವಿಕೋಪಗಳಿಂದ ಉದ್ಭವಿಸಬಹುದಾದ ಪರಿಸ್ಥಿತಿಯನ್ನು ಪರಾಮರ್ಶಿಸಿ, ನಿರ್ಣಯ ಕೈಗೊಳ್ಳಲು ರಚಿಸಲಾದ ಸಚಿವ ಸಂಪುಟ ಉಪ ಸಮಿತಿಯ ಸಭೆಯ ಬಳಿಕ ಈ ಮಾಹಿತಿ ನೀಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ, ‘ಜೀವನೋಪಾಯ ನಷ್ಟ ಪರಿಹಾರ ವಿತರಿಸಲು ರೈತರ ಪಟ್ಟಿ ಸಿದ್ಧಪಡಿಸಲಾಗಿದೆ’ ಎಂದರು.

‘ಮಳೆ ಆಶ್ರಿತ ಮತ್ತು ನಾಲೆಗಳ ಕೊನೆಯ ಭಾಗದಲ್ಲಿರುವ ರೈತರಿಗೂ ಬೆಳೆ ನಷ್ಟ ಪರಿಹಾರ ನೀಡಲು ತೀರ್ಮಾನಿಸಲಾಗಿದೆ. ಇದರಿಂದ ಸುಮಾರು 7 ಲಕ್ಷ ರೈತರಿಗೆ ಲಾಭವಾಗಲಿದೆ. ಜಿಲ್ಲಾಧಿಕಾರಿಗಳ ವರದಿ ಆಧಾರದಲ್ಲಿ ಈ ಪರಿಹಾರ ವಿತರಿಸಲಾಗುವುದು’ ಎಂದರು.

‘ಕೇಂದ್ರದಿಂದ ಎನ್‌ಡಿಆರ್‌ಎಫ್ ಪರಿಹಾರ ₹3,454 ಕೋಟಿ ಬಂದಿತ್ತು. 27.50 ಲಕ್ಷ ರೈತರಿಗೆ ₹2,451 ಕೋಟಿಯನ್ನು ಮೇ ತಿಂಗಳ ಮೊದಲ ವಾರದಲ್ಲಿಯೇ ವಿತರಿಸಲಾಗಿದೆ. ಎನ್‌ಡಿಆರ್‌ಎಫ್‌ನ ಉಳಿದ ಹಣ ಮತ್ತು ರಾಜ್ಯ ಸರ್ಕಾರದಿಂದ ₹272 ಕೋಟಿ ಸೇರಿಸಿ ನಷ್ಟ ಪರಿಹಾರ ನೀಡಲು ಉದ್ದೇಶಿಸಲಾಗಿದೆ. ಇನ್ನೊಂದು ವಾರದಲ್ಲಿ ಪರಿಹಾರ ಪಾವತಿಸಲು ಸಾಧ್ಯವಾಗುವಂತೆ ಅಧಿಕಾರಿಗಳು ಎಲ್ಲ ತಯಾರಿ ಮಾಡಿಕೊಂಡಿದ್ದಾರೆ’ ಎಂದರು.

‘ಮುಂಗಾರು ಸ್ಥಿತಿಯ ಬಗ್ಗೆಯೂ ಸಭೆಯಲ್ಲಿ ಅವಲೋಕನ ನಡೆಸಲಾಗಿದೆ. ವಾಡಿಕೆಯಂತೆ ಪೂರ್ವ ಮುಂಗಾರು ಮಳೆ 115 ಮಿಮೀ ಆಗುತ್ತದೆ. ಆದರೆ, ಈ ಬಾರಿ 150 ಮಿಮೀ ಮಳೆ ಆಗಿದೆ. ಕಳೆದ ವರ್ಷ ಶೇ 71ರಷ್ಟು ಮಳೆ ಕೊರತೆ ಆಗಿತ್ತು. ಈ ಬಾರಿ ಒಂದು ಭಾಗಕ್ಕೆ ಸೀಮಿತವಾಗದೆ, ಎಲ್ಲ ಭಾಗಗಳಲ್ಲೂ ಮಳೆ ಬಂದಿದೆ. ಐದು ಜಿಲ್ಲೆಗಳಲ್ಲಿ ವಾಡಿಕೆ, ನಾಲ್ಕು ಜಿಲ್ಲೆಗಳಲ್ಲಿ ಅಧಿಕ ಮತ್ತು ಉಳಿದ ಜಿಲ್ಲೆಗಳಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಮಳೆಯಾಗಿದೆ’ ಎಂದರು.

‘ಕೃಷಿ ವಿಮೆ ಮೂಲಕವೂ ರೈತರಿಗೆ ಈ ಬಾರಿ ಅತೀ ಹೆಚ್ಚು ₹1,654 ಕೋಟಿ ಪರಿಹಾರ ಸಿಕ್ಕಿದೆ. ಇನ್ನೂ ₹130 ಕೋಟಿ ಪರಿಹಾರ ನೀಡಲು ಬಾಕಿ ಇದೆ’ ಎಂದರು.

ಒಂಬತ್ತು ಕಾಯ್ದೆಗಳ ಜಾರಿಗೆ ಅಧಿಸೂಚನೆ

ಬೆಂಗಳೂರು: ವಕೀಲರ ಮೇಲಿನ ಹಿಂಸೆ ತಡೆ ಕಾಯ್ದೆ, ವಿಧಾನಸಭಾ ಕ್ಷೇತ್ರದಲ್ಲಿ ಒಂದಕ್ಕಿಂತ ಹೆಚ್ಚು ಬಗರ್ ಹುಕುಂ ಸಮಿತಿಗಳನ್ನು ನೇಮಿಸುವುದಕ್ಕೆ ಅವಕಾಶ ಕಲ್ಪಿಸುವ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಕಾಯ್ದೆ ಸೇರಿದಂತೆ ಒಂಬತ್ತು ಕಾಯ್ದೆಗಳ ಜಾರಿಗೆ ಸೋಮವಾರ ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಲಾಗಿದೆ.

ವಿಧಾನಮಂಡಲದ ಬಜೆಟ್ ಅಧಿವೇಶನದಲ್ಲಿ ಈ ಮಸೂದೆಗಳಿಗೆ ಒಪ್ಪಿಗೆ ನೀಡಲಾಗಿತ್ತು. ರಾಜ್ಯಪಾಲರು ಮಾರ್ಚ್‌ನಲ್ಲೇ ಈ ಮಸೂದೆಗಳಿಗೆ ಅಂಕಿತ ಹಾಕಿದ್ದರು. ಆದರೆ, ಲೋಕಸಭಾ ಚುನಾವಣೆಯ ನೀತಿಸಂಹಿತೆ ಜಾರಿಯಲ್ಲಿದ್ದ ಕಾರಣದಿಂದ ರಾಜ್ಯಪತ್ರದಲ್ಲಿ ಪ್ರಕಟಿಸಿರಲಿಲ್ಲ. ನೀತಿಸಂಹಿತೆ ಸಡಿಲಿಕೆ ಆದ ಬಳಿಕ ಅಧಿಸೂಚನೆ ಪ್ರಕಟಿಸಲಾಗಿದೆ.

ಕರ್ನಾಟಕ ಸಿವಿಲ್ ಎಂಜಿನಿಯರ್‌ಗಳ ಕಾಯ್ದೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ, ಅಂತರ್ ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ (ತಿದ್ದುಪಡಿ) ಕಾಯ್ದೆ, ಕರಾವಳಿ ಅಭಿವೃದ್ಧಿ ಮಂಡಳಿ ಕಾಯ್ದೆ, ಕರ್ನಾಟಕ ಮುದ್ರಾಂಕ (ತಿದ್ದುಪಡಿ) ಕಾಯ್ದೆ ಮತ್ತು ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ (ತಿದ್ದುಪಡಿ) ಕಾಯ್ದೆಗಳನ್ನು ಸೋಮವಾರದಿಂದ ಜಾರಿಗೊಳಿಸಲಾಗಿದೆ.

‘ವಿದ್ಯುತ್ ಕೊರತೆ ನೀಗಿದ ವಿನಿಮಯ’

ಪ್ರಜಾವಾಣಿ ವಾರ್ತೆ



ಕೆ.ಜೆ. ಜಾರ್ಜ್

ಬೆಂಗಳೂರು: ಉತ್ತರಪ್ರದೇಶ ಮತ್ತು ಪಂಜಾಬ್ ರಾಜ್ಯಗಳಿಂದ ವಿದ್ಯುತ್ ವಿನಿಮಯ ಮಾಡಿಕೊಂಡಿದ್ದರಿಂದ ರಾಜ್ಯದಲ್ಲಿ ಈ ಬೇಸಿಗೆಯಲ್ಲಿ ವಿದ್ಯುತ್ ಕೊರತೆ ಆಗಲಿಲ್ಲ ಮತ್ತು ಬೊಕ್ಕಸಕ್ಕೂ ಹೊರೆಯಾಗಲಿಲ್ಲ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ಇವೆರಡೂ ರಾಜ್ಯಗಳಿಂದ ಪಡೆದ ವಿದ್ಯುತ್ ಅನ್ನು ಇದೇ ಜೂ.16ರ ಬಳಿಕ ಹಿಂತಿರುಗಿಸಲಾಗುವುದು. ಈ ವಿಧಾನ ಅನುಸರಿಸಿದ್ದರಿಂದ ವಿದ್ಯುತ್ ಖರೀದಿ ಅಗತ್ಯ ಕಡಿಮೆ ಆಗಿತ್ತು ಎಂದರು.

ಮಳೆ ಕೊರತೆ, ಜಲಾಶಯಗಳಲ್ಲಿ ನೀರಿನ ಕೊರತೆ ಮಧ್ಯೆಯೂ ಬೇಸಿಗೆಯಲ್ಲಿ ಲೋಡ್ ಶೆಡ್ಡಿಂಗ್ ಇಲ್ಲದೆ, ರೈತರು, ವಿದ್ಯಾರ್ಥಿ ಸಮುದಾಯಕ್ಕೆ ಹೆಚ್ಚು ಸಮಸ್ಯೆ ಆಗದಂತೆ ಇಂಧನ ಇಲಾಖೆ ವಿದ್ಯುತ್ ಪೂರೈಕೆ ಮಾಡಿದೆ ಎಂದರು.

ಈ ಬಾರಿ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಗರಿಷ್ಠ ವಿದ್ಯುತ್ ಉತ್ಪಾದನೆ ಮಾಡಲಾಗಿದೆ. ಅದರಲ್ಲೂ ಕಳೆದ ಜನವರಿಯಿಂದ ಮೇ ಅಂತ್ಯದವರೆಗೆ ಪ್ರತಿನಿತ್ಯ ಸರಾಸರಿ 200 ಕೋಟಿ ಯೂನಿಟ್ ವಿದ್ಯುತ್ ಉತ್ಪಾದನೆ ಮಾಡಲಾಗಿದೆ. ಏಪ್ರಿಲ್‌ನಲ್ಲಿ 240 ಕೋಟಿ ಯೂನಿಟ್ ವಿದ್ಯುತ್ ಉತ್ಪಾದನೆ ಮಾಡಿದ್ದು, ಇದು ದಾಖಲೆಯಾಗಿದೆ ಎಂದು ಜಾರ್ಜ್ ಹೇಳಿದರು.

ಆರ್‌ಟಿಪಿಎಸ್ ವಿದ್ಯುತ್ ಘಟಕಗಳಿಂದ ನಿಗದಿತ ಗುರಿ ಮೀರಿ ಹೆಚ್ಚಿನ ವಿದ್ಯುತ್ ಉತ್ಪಾದನೆ ಆಗಿದೆ. ದಿನಕ್ಕೆ 210 ಮೆಗಾವಾಟ್ ಸಾಮರ್ಥ್ಯದ ಮೂರನೇ ವಿದ್ಯುತ್ ಘಟಕದಲ್ಲಿ ಏಪ್ರಿಲ್ 4ರಂದು 216 ಮೆಗಾವಾಟ್ ಉತ್ಪಾದನೆ ಮಾಡಲಾಗಿದ್ದು, ಆ ಮೂಲಕ ಇತಿಹಾಸ ಬರೆಯಲಾಗಿದೆ. ತಾಂತ್ರಿಕ ಸಮಸ್ಯೆಗಳ ನಡುವೆಯೂ ಆರ್‌ಟಿಪಿಎಸ್‌ನ ಏಳು ವಿದ್ಯುತ್ ಘಟಕಗಳು ಶೇ 85ರಷ್ಟು ವಿದ್ಯುತ್ ಉತ್ಪಾದಿಸಿವೆ ಎಂದು ಅವರು ತಿಳಿಸಿದರು.

ಕಾಂಗ್ರೆಸ್ ಯೋಜನೆಗಳ ಬಗ್ಗೆ ಆರ್. ಅಶೋಕ ವ್ಯಂಗ್ಯ

‘ಮತ ತಂದುಕೊಡದ ಗ್ಯಾರಂಟಿ’

ಪ್ರಜಾವಾಣಿ ವಾರ್ತೆ



ಆರ್. ಅಶೋಕ

ಬೆಂಗಳೂರು: ‘ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಗ್ಯಾರಂಟಿಗಳಿಂದ ಮತ ಬಂದಿಲ್ಲ. ಸರ್ಕಾರ ದಿವಾಳಿಯಾಗಿದ್ದು, ಅಭಿವೃದ್ಧಿ ಶೂನ್ಯವಾಗಿ ಕಾಂಗ್ರೆಸ್ ಸೋತಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

‘ಗ್ಯಾರಂಟಿ ಜಾರಿ ಮಾಡಿದ್ದರಿಂದ ಈಗ ಸಾಲ ಮಾಡಿ ಸಂಬಳ ಕೊಡುವ ಸ್ಥಿತಿ ಬಂದಿದೆ. ಗ್ಯಾರಂಟಿಗಳಿಂದ ಲೋಕಸಭಾ ಚುನಾವಣೆ ಗೆಲ್ಲಲು ಸಾಧ್ಯವಾಗಿಲ್ಲ. ಶಾಸಕರು ಅನುದಾನ ಯಾವಾಗ ಕೊಡುತ್ತೀರಿ ಎಂದು ಪ್ರಶ್ನಿಸುತ್ತಿದ್ದಾರೆ’ ಎಂದು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

‘ಪಾಪರ್ ಆಗಿರುವ ಸರ್ಕಾರ ಎಲ್ಲ ಕಡೆಗಳಲ್ಲಿ ಬಿಲ್ ಪಾವತಿ ಬಾಕಿ ಇರಿಸಿಕೊಂಡಿದೆ. ಬಿಜೆಪಿ ಸರ್ಕಾರವಿದ್ದಾಗ ಶಾಸಕರು, ಶಾಲೆ, ಆಸ್ಪತ್ರೆ, ನೀರಾವರಿ ಯೋಜನೆ ತಂದರು. ಕಾಂಗ್ರೆಸ್‌ನ ಶಾಸಕರು ಏನೂ ತಂದಿಲ್ಲವೆಂದು ಜನರೇ ಹೀಯಾಳಿಸುತ್ತಿದ್ದಾರೆ. ಅಭಿವೃದ್ಧಿ ಇಲ್ಲದೆ ಜನರು ಶಾಸಕರು ಮತ್ತು ಸಚಿವರ ಮಾತಿಗೆ ವಿರುದ್ಧವಾಗಿ ಲೋಕಸಭಾ ಚುನಾವಣೆಯಲ್ಲಿ ಮತ ಚಲಾಯಿಸಿದ್ದಾರೆ’ ಎಂದರು.

‘ಕಾಂಗ್ರೆಸ್ ಸರ್ಕಾರ ದಲಿತರ ಹಣ ಲೂಟಿ ಹೊಡೆದು, ಶೂನ್ಯ ಸಾಧನೆ ಮಾಡಿ, ಜನರ ಪಾಲಿಗೆ ಸತ್ತುಹೋಗಿದೆ. ಒಬ್ಬ ಸಚಿವರೂ ಮಳೆ ಹಾನಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿಲ್ಲ. ಲೋಕಸಭೆ ಚುನಾವಣೆಯಲ್ಲಿ ಸಚಿವರಿರುವ ಕಡೆಗಳಲ್ಲಿ ಹಿನ್ನಡೆಯಾಗಿದ್ದು, ಸ್ಥಾನ ಕಳೆದುಕೊಳ್ಳುವ ಆತಂಕವಿದೆ’ ಎಂದು ಅಶೋಕ ಹೇಳಿದರು.

‘ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಹೋದರ ಡಿ.ಕೆ.ಸುರೇಶ್ ಕನಕಪುರದಲ್ಲೇ ಹೀನಾಯವಾಗಿ ಸೋತಿದ್ದಾರೆ. ರಾಜ್ಯದಲ್ಲಿ ಸರ್ಕಾರವಿದ್ದು, ಏಕೆ ಸೋತಿದ್ದೀರಿ ಎಂದು ರಾಹುಲ್ ಗಾಂಧಿ ಪ್ರಶ್ನಿಸಿದ್ದಾರೆ. ದಲಿತರ ₹187 ಕೋಟಿ ಲೂಟಿ ಮಾಡಿದ್ದರಿಂದಲೇ ಇವರು ಸೋತಿದ್ದಾರೆ ಎಂದು ಕಾಂಗ್ರೆಸ್ ಹೈಕಮಾಂಡ್‌ಗೆ ತಿಳಿದುಬಂದಿದೆ. ಲೋಕಸಭಾ ಚುನಾವಣೆಯ ಫಲಿತಾಂಶದಿಂದ ಸರ್ಕಾರ ಮೂಲೆ ಸೇರಿದೆ’ ಎಂದರು.

‘ಅಲ್ಪಸಂಖ್ಯಾತರು ಏನು ಮಾಡಿದರೂ ನಡೆಯುತ್ತದೆ ಎಂಬ ನಂಬಿಕೆ ಬಂದಿದೆ. ಹಿಂದೂಗಳ ಮೇಲೆ ಹಲ್ಲೆಗಳು ಹೆಚ್ಚಾಗುತ್ತಿದೆ. ಮಾಫಿಯಾ, ರೌಡಿಗಳಿಗೆ ಭಯ ಕಡಿಮೆಯಾಗಿದೆ. ಗೃಹ ಇಲಾಖೆ ದಿಕ್ಕು ದೆಸೆಯಿಲ್ಲದಂತೆ ನಡೆಯುತ್ತಿದೆ. ಜನರು ತಮ್ಮನ್ನು ತಾವೇ ರಕ್ಷಣೆ ಮಾಡಿಕೊಳ್ಳುವ ಸ್ಥಿತಿ ಬಂದಿದೆ’ ಎಂದು ಹೇಳಿದರು.

ಪ್ರಾಣಿ ಆರೈಕೆ–ನಿರ್ವಹಣೆ ಡಿಪ್ಲೊಮಾ

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಕಲಿಕೆ • ವಿ.ವಿ. ಮಾನ್ಯತೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಪ್ರಾಣಿಗಳ ಆರೈಕೆ ಮತ್ತು ನಿರ್ವಹಣೆ (ಅನಿಮಲ್ ಕೇರ್ ಅಂಡ್ ಮ್ಯಾನೇಜ್‌ಮೆಂಟ್) ವಿಷಯ ಕುರಿತ ಡಿಪ್ಲೊಮಾ ಕೋರ್ಸ್ ಆರಂಭಿಸಲು ಅರಣ್ಯ ಸಚಿವ ಈಶ್ವರ ಖಂಡ್ರೆ ಅನುಮೋದನೆ ನೀಡಿದರು.

ಈ ಕೋರ್ಸ್ 10 ತಿಂಗಳ ಅವಧಿಯದ್ದಾಗಿರುತ್ತದೆ. ಮೃಗಾಲಯಗಳಲ್ಲಿ ವನ್ಯಜೀವಿಗಳ ಆರೈಕೆಗೆ ನುರಿತ ಸಿಬ್ಬಂದಿಯ ಅಗತ್ಯವಿದ್ದು, ಬೆಂಗಳೂರು ವಿಶ್ವವಿದ್ಯಾಲಯಗಳ ಮಾನ್ಯತೆಯೊಂದಿಗೆ ಬೆಂಗಳೂರಿನ ಲೈಫ್ ಸೈನ್ಸ್ ಎಜುಕೇಷನ್ ಟ್ರಸ್ಟ್ ಸಹಯೋಗದಲ್ಲಿ ಆರಂಭಿಸಲಾಗುವುದು ಎಂದು ಅವರು ವಿಕಾಸಸೌಧದಲ್ಲಿ ಸೋಮವಾರ ನಡೆದ ಮೃಗಾಲಯ ಪ್ರಾಧಿಕಾರದ ಸಭೆಯಲ್ಲಿ ವಿವರಿಸಿದರು.

ಈ ಡಿಪ್ಲೊಮಾ ಪದವಿ ಪಡೆದವರಿಗೆ ಉದ್ಯೋಗಾವಕಾಶಗಳು ಲಭಿಸುವಂತಿರಬೇಕು. ದೀರ್ಘಕಾಲ ಈ ಕೋರ್ಸ್‌ನ ಪ್ರಾಮುಖ್ಯ ಪಡೆಯುವಂತಿರಬೇಕು. ಇದಕ್ಕಾಗಿ ಪಠ್ಯಕ್ರಮ ಮತ್ತು ಪ್ರಾಯೋಗಿಕ ತರಬೇತಿ ಕಾರ್ಯಕ್ರಮ ರೂಪಿಸುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಸಾಧಕ–ಬಾಧಕ ಚರ್ಚಿಸಿ, ಮುಂದಿನ ಸಭೆಯಲ್ಲಿ ಪ್ರಸ್ತಾವನೆ ಮಂಡಿಸುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಪ್ರಾಣಿಗಳ ಆರೈಕೆ ಹಾಗೂ ನಿರ್ವಹಣೆ ಮಾಡಲು ಆಸಕ್ತ ವಿದ್ಯಾರ್ಥಿಗಳಿಗೆ ವೈಜ್ಞಾನಿಕವಾಗಿ ವನ್ಯಜೀವಿ ಮತ್ತು ಸಾಕುಪ್ರಾಣಿಗಳ ಸಂರಕ್ಷಣೆ, ನಿರ್ವಹಣೆ, ಆರೈಕೆ ಕುರಿತಂತೆ ಅಗತ್ಯ ಜ್ಞಾನ ಮತ್ತು ಕೌಶಲ ನೀಡುವ ಈ ಡಿಪ್ಲೊಮಾ ಕೋರ್ಸ್ ಪಡೆದವರು ಮೃಗಾಲಯಗಳಲ್ಲಿ, ಪುನರ್ವಸತಿ ಕೇಂದ್ರಗಳಲ್ಲಿ ಪ್ರಾಣಿ ಪಾಲಕರಾಗಿ ಕೆಲಸ ನಿರ್ವಹಿಸಬಹುದು. ಅದೇ ರೀತಿ ಖಾಸಗಿಯಾಗಿಯೂ ಸಾಕುಪ್ರಾಣಿಗಳ ಆರೈಕೆ ಕೇಂದ್ರಗಳನ್ನು ನಡೆಸಬಹುದು. ಶಾಲಾ, ಕಾಲೇಜುಗಳಲ್ಲಿ ಪ್ರಾಣಿ ಆರೈಕೆಯ ತರಬೇತಿ ನೀಡಬಹುದು ಎಂದು ಹೇಳಿದರು.

ಬನ್ನೇರುಘಟ್ಟ: ಚಿರತೆ ಸಫಾರಿ ಶೀಘ್ರ

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಸಿಂಹ, ಹುಲಿ ಸಫಾರಿಯ ಜತೆಗೆ ಜೂನ್ ಕೊನೆಗೆ ಚಿರತೆ ಸಫಾರಿಯನ್ನೂ ಆರಂಭಿಸಲು ಸಚಿವ ಈಶ್ವರ ಖಂಡ್ರೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೈಸೂರಿನ ಶ್ರೀಚಾಮರಾಜೇಂದ್ರ ಮೃಗಾಲಯ ಹಾಗೂ ಕಾರಂಜಿ ಕೆರೆ ಮಧ್ಯ ಭಾಗದಲ್ಲಿ ಸಾರ್ವಜನಿಕ ಮತ್ತು ಖಾಸಗಿ ಪಾಲುದಾರಿಕೆ (ಪಿಪಿಪಿ) ಮಾದರಿಯಲ್ಲಿ ಮತ್ಸ್ಯಾಗಾರ ನಿರ್ಮಿಸಲು, ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಮತ್ತು ಸಮಾಲೋಚನಾ ಸಂಸ್ಥೆ ಆಯ್ಕೆ ಮಾಡಲು 15 ದಿನಗಳ ಒಳಗಾಗಿ ಪ್ರಸ್ತಾವನೆ ಮಂಡಿಸಲು ಅವರು ನಿರ್ದೇಶನ ನೀಡಿದರು.

ಮೈಸೂರು ಮೃಗಾಲಯ ಮತ್ತು ಕಾರಂಜಿ ಕೆರೆ ಪ್ರಕೃತಿ ಉದ್ಯಾನದಲ್ಲಿ ಕ್ಯಾಮೆರಾ ಕಾಂಬೊ ಟಿಕೆಟ್ ಪರಿಚಯಿಸಿ ಸ್ಥಿರ ಕ್ಯಾಮರಾಗೆ ₹150 ಮತ್ತು ವಿಡಿಯೋ ಕ್ಯಾಮರಾಗೆ ₹300 ವಿಧಿಸಲು ಅನುಮತಿ ನೀಡಿದರು.

ಅದೇ ರೀತಿ ಬನ್ನೇರುಘಟ್ಟ ರಾಷ್ಟ್ರೀಯ ಜೈವಿಕ ಉದ್ಯಾನವನದಲ್ಲಿ ಪಿಪಿಪಿ ಮಾದರಿಯಲ್ಲಿ ಸಿಹಿ ನೀರು ಮತ್ತು ಉಪ್ಪು ನೀರಿನ ಮತ್ಸ್ಯಾಗಾರಗಳನ್ನು ನಿರ್ಮಿಸಲು ಈಗಾಗಲೇ ನಡೆದಿರುವ ಪರಿಕಲ್ಪನೆ ಅಧ್ಯಯನ ವರದಿ ಮತ್ತು ಕಾರ್ಯಸಾಧ್ಯತೆ ವರದಿ ಪರಿಶೀಲಿಸಿ ಜಾಗತಿಕ ಮಾನದಂಡಗಳ ರೀತಿ ಮತ್ಸ್ಯಾಗಾರ ನಿರ್ಮಾಣಕ್ಕೆ ಅನುಮೋದನೆ ನೀಡಲಾಯಿತು.

ಮೃಗಾಲಯಗಳಲ್ಲಿ ವನ್ಯಜೀವಿ ಪಶುವೈದ್ಯರ ಕೊರತೆ ಆಗದಂತೆ ಮತ್ತು ಮೃಗಾಲಯದಲ್ಲಿರುವ ವನ್ಯಜೀವಿಗಳ ಸೋಂಕು ಇತ್ಯಾದಿಯಿಂದ ಸಾವಿಗೀಡಾಗದಂತೆ ಕ್ರಮವಹಿಸಲು ಪಶುವೈದ್ಯರ ನೇಮಕಾತಿ ಬಗ್ಗೆ ಚರ್ಚಿಸಿ, ವೈದ್ಯರ ನೇಮಕಾತಿಗೆ ಅನುಮೋದನೆ ನೀಡಲಾಯಿತು.

ಅಲ್ಲದೆ, ಚಿತ್ರದುರ್ಗದ ಆಡು ಮಲ್ಲೇಶ್ವರ ಕಿರು ಮೃಗಾಲಯಕ್ಕೆ ಸ್ಥಳೀಯ ಪಶು ವೈದ್ಯಾಧಿಕಾರಿಗಳ ಸೇವೆ ಪಡೆಯಲು ಘಟನೋತ್ತರ ಅನುಮೋದನೆ ನೀಡಲಾಯಿತು.

ಸಭೆಯ ಪ್ರಮುಖ ಅಂಶಗಳು

- ಬನ್ನೇರುಘಟ್ಟ ಜೈವಿಕ ಉದ್ಯಾನದ ಪ್ರಾಣಿ, ಪಕ್ಷಿಗಳಿಗೆ ಮತ್ತು ಪ್ರವಾಸಿಗರಿಗೆ ಅನುಕೂಲವಾಗುವಂತೆ ಬೆಂಗಳೂರು ಜಲಮಂಡಳಿಯಿಂದ ಕಾವೇರಿ ನೀರು ಒದಗಿಸಲು ಈಗಾಗಲೇ ಸರ್ಕಾರ ಅನುಮತಿ ನೀಡಿದ್ದು, ಕೊಳವೆ ಮಾರ್ಗ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ನೀರು ಹರಿಸಲು ಒಪ್ಪಿಗೆ
- ಬನ್ನೇರುಘಟ್ಟ ಉದ್ಯಾನದಲ್ಲಿ ನೇರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮತ್ತು ತಿಂಗಳಿಗೆ ₹21,000 ವೇತನ ಮೀರಿದ 153 ಸಿಬ್ಬಂದಿಗೆ ಸಿಜಿಎಚ್‌ಎಸ್ ದರದಂತೆ ವೈದ್ಯಕೀಯ ವೆಚ್ಚ ಭರಿಸಲು ಅನುಮೋದನೆ
- ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ನಿರ್ಮಾಣದಲ್ಲಿ ಮಾಡಿರುವ ರಣಹದ್ದು ಸಂರಕ್ಷಣಾ ಸಂತಾನೋತ್ಪತ್ತಿ ಕೇಂದ್ರವನ್ನು ಬನ್ನೇರುಘಟ್ಟ ಜೈವಿಕ ಉದ್ಯಾನದ ಸ್ಯಾಟಲೈಟ್ ಕೇಂದ್ರವಾಗಿ ಕಾರ್ಯ ನಿರ್ವಹಣೆಗೆ ಒಪ್ಪಿಗೆ
- ಗದಗ ಮೃಗಾಲಯದ ವಿಸ್ತರಣೆ ಮತ್ತು ಅಭಿವೃದ್ಧಿಗೆ 13.20 ಎಕರೆ ಜಮೀನು ಭೂಸ್ವಾಧೀನ ಮತ್ತು ಮೃಗಾಲಯದ ಸಿಬ್ಬಂದಿಗೆ ರಿಯಾಯಿತಿ ದರದಲ್ಲಿ ಮಧ್ಯಾಹ್ನ ಊಟ ಪೂರೈಕೆಗೆ ಸಮ್ಮತಿ

ಇದು ನನ್ನ ವೈಯಕ್ತಿಕ ಸೋಲು: ಡಿ.ಕೆ. ಸುರೇಶ್

‘ಜಾತಿ ಪಾತ್ರ ಏನೆಂದು ಈಗ ಗೊತ್ತಾಗಿದೆ’

ಪ್ರಜಾವಾಣಿ ವಾರ್ತೆ

ರಾಮನಗರ: ‘ನನಗೆ ಹಿತಶತ್ರುಗಳಿಲ್ಲ. ನನಗೆ ನಾನೇ ಶತ್ರು. ಚುನಾವಣೆ ಸೋಲಿಗೆ ನಾನು ಬೇರೆಯವರನ್ನು ದೂರಲಾರೆ. ಇದು ನನ್ನ ವೈಯಕ್ತಿಕ ಸೋಲು. ಅದಕ್ಕೆ ನಾನೇ ಹೊಣೆ. ಜನರ ತೀರ್ಮಾನ ಸ್ವಾಗತಿಸಿ, ಸಾಮಾನ್ಯ ಕಾರ್ಯಕರ್ತನಂತೆ ಪಕ್ಷದ ಕೆಲಸ ಮಾಡುತ್ತೇನೆ’

– ಇದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಪರಾಜಿತ ಅಭ್ಯರ್ಥಿ ಡಿ.ಕೆ. ಸುರೇಶ್ ಅವರ ಆತ್ಮಾವಲೋಕನದ ಮಾತು.

‘ಮಂಜುನಾಥ್ ಗೆಲುವು ಬಿಜೆಪಿ-ಜೆಡಿಎಸ್ ಗೆಲುವಲ್ಲ. ಬದಲಿಗೆ ಜಾತಿ, ಧರ್ಮ, ಭಾವನಾತ್ಮಕ ವಿಷಯ ಹಾಗೂ ಅಸೂಯೆಯ ಗೆಲುವು. ಅವು ನಮ್ಮ ಗ್ಯಾರಂಟಿ ಯೋಜನೆಗಳಿಗಿಂತಲೂ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಿದವು. ರಾಜಕಾರಣದಲ್ಲಿ ಜಾತಿ ಇಷ್ಟೊಂದು ಮಹತ್ವದ ಪಾತ್ರ ವಹಿಸುತ್ತದೆ ಎಂದು ನಿರೀಕ್ಷಿಸಿರಲಿಲ್ಲ’ ಎಂದು ತಮ್ಮ ಸೋಲನ್ನು ವಿಶ್ಲೇಷಿಸಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನಾನು ಮಾಡಿದ ಕೆಲಸಕ್ಕೆ ಮತದಾರರು ಕೂಲಿ ಕೊಡಲಿಲ್ಲ’ ಎಂದು ಬೇಸರಿಸಿಕೊಂಡರು.

‘ಚುನಾವಣೆಯಲ್ಲಿ ನಾನು ಬೇರೆಯವರ ಹೆಸರಿನಲ್ಲಿ ಮತ ಕೇಳದೆ, ನಾನು ಮಾಡಿದ ಕೆಲಸವನ್ನು ಮುಂದಿಟ್ಟು ಮತ ಯಾಚಿಸಿದೆ. ಕನ್ನಡಿಗರಿಗೆ ಆಗುತ್ತಿದ್ದ ತೆರಿಗೆ ಅನ್ಯಾಯ ಖಂಡಿಸಿ ಕೇಂದ್ರ ಸರ್ಕಾರದ ವಿರುದ್ಧ ಗಟ್ಟಿ ದನಿ ಎತ್ತಿ ಟೀಕೆಗೂ ಒಳಗಾದೆ. ರಾಜಕಾರಣದಲ್ಲಿ ಸೋಲು–ಗೆಲುವು ಸಹಜ’ ಎಂದು ಸಮಾಧಾನಪಟ್ಟುಕೊಂಡರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಮುಂದುವರಿಯುತ್ತವೆ. ಆ ಬಗ್ಗೆ ಅನುಮಾನ ಬೇಡ ಎಂಬ ಭರವಸೆಯ ಮಾತುಗಳನ್ನಾಡಿದರು.

‘ಚನ್ನಪಟ್ಟಣದಿಂದ ಸ್ಪರ್ಧಿಸಲ್ಲ’

‘ಈಗಾಗಲೇ ಸೋತಿರುವ ನಾನು ಮುಂಬರುವ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ಅಲ್ಲಿ ಹಲವರು ಸಮರ್ಥರಿದ್ದಾರೆ’ ಎಂದು ಡಿ.ಕೆ. ಸುರೇಶ್ ಸ್ಪಷ್ಟಪಡಿಸಿದ್ದಾರೆ.

ಕ್ಷೇಮ ಕುಶಲ

‘ನನ್ನ ಸ್ವಭಾವ ಅರ್ಥ ಮಾಡಿಕೊಳ್ಳಿ ಪ್ಲೀಸ್!’

ಡಾ. ಕೆ. ಎಸ್. ಶುಭ್ರತಾ

ಪುಟ್ಟ ಮಕ್ಕಳನ್ನು ನೋಡುವುದಕ್ಕೆ ಎರಡು ಕಣ್ಣುಗಳು ಸಾಲದು. ಸುಂದರವಾದ ಬ್ಯಾಕ್‌ಡ್ರಾಪ್ ಮುಂದೆ ಬಣ್ಣ ಬಣ್ಣದ ಬಟ್ಟೆಗಳನ್ನು ತೊಟ್ಟು, ಕೈಗಳಲ್ಲಿ ಫಳ ಫಳ ಹೊಳೆಯುವಂತ ಬಂಗಾರದ ಬಣ್ಣದ ಗೊಂಚಲು ಹಿಡಿದು, ಸುಮಾರು 5-6 ವರ್ಷದ ಹುಡುಗ-ಹುಡುಗಿಯರು, ಸಿನಿಮಾದ ಅಬ್ಬರದ ಸಂಗೀತಕ್ಕೆ ಹೆಜ್ಜೆ ಹಾಕುತ್ತಿದ್ದಾರೆ. ಎಂಥವರಿಗೂ ಖುಷಿಯೇ. ಇನ್ನು ಅಪ್ಪ-ಅಮ್ಮನಿಗೆ ಕೇಳಬೇಕೇ? ಎಲ್ಲರೂ ಒಂದೇ ರೀತಿಯಲ್ಲಿ ತಯಾರಾಗಿ, ಒಂದೇ ರೀತಿಯ ಹೆಜ್ಜೆಗಳನ್ನು ಹಾಕುತ್ತಿದ್ದರೂ ಮಕ್ಕಳಲ್ಲಿ ವ್ಯತ್ಯಾಸ ಕಂಡೇ ಕಾಣುತ್ತದೆ. ಕೂಲಂಕಷವಾಗಿ ಗಮನಿಸಿದರೆ, ಕೆಲವು ಮಕ್ಕಳು ದಿಟ್ಟವಾಗಿ, ವೃತ್ತಿಪರವಾಗಿ ನೃತ್ಯ ಮಾಡುತ್ತಿದ್ದರೆ, ಇನ್ನೂ ಕೆಲವರು, ನಾಚಿಕೆಯಿಂದ ಹೆಜ್ಜೆ ಇಡಲೋ ಬೇಡವೋ, ಜನರನ್ನು ನೋಡಲೋ ಬೇಡವೋ ಎಂಬಂತೆ ಇರುತ್ತಾರೆ. ಅಲ್ಲೊಂದು, ಇಲ್ಲೊಂದು ಮಗು ಕಣ್ಣಲ್ಲಿ ನೀರಿಳಿಸುತ್ತಾ ವೇದಿಕೆಯಿಂದ ಕೆಳಗೆ ಎಷ್ಟು ಹೊತ್ತಿಗೆ ಇಳಿಸುತ್ತಾರೋ ಎಂದು ಹಾತೊರೆಯುತ್ತಿರುತ್ತದೆ. ಈ ಎಲ್ಲಾ ಮಕ್ಕಳಿಗೂ ಒಂದೇ ಟೀಚರ್, ಒಂದೇ ರೀತಿಯಲ್ಲಿ ನೃತ್ಯಾಭ್ಯಾಸ ಮಾಡಿಸಿರುತ್ತಾರೆ. ಆದರೂ ಏಕೆ ಈ ವ್ಯತ್ಯಾಸಗಳು? ಈ ಪ್ರಶ್ನೆಗೆ ಉತ್ತರ ತಿಳಿಯಬೇಕೆಂದರೆ ಮಕ್ಕಳ ಗುಣ–ಸ್ವಭಾವದ ಬಗ್ಗೆ ಅರಿಯಬೇಕು. ಪುಟ್ಟ ಮಕ್ಕಳ ಗುಣಸ್ವಭಾವಗಳಲ್ಲಿ ಒಂದು ಮಗುವಿಗೂ ಇನ್ನೊಂದು ಮಗುವಿಗೂ ವ್ಯತ್ಯಾಸಗಳಿರುತ್ತವೆ. ಇದನ್ನು ತಂದೆ-ತಾಯಿಯರು ತಿಳಿದರೆ, ಮಕ್ಕಳನ್ನು ಬೆಳೆಸುವಲ್ಲಿ ಅದು ಸಹಾಯಕವಾಗುತ್ತದೆ.

ಶಿಶುಗಳ ಅಧ್ಯಯನ

1950ರಲ್ಲಿ ಮನಃಶಾಸ್ತ್ರಜ್ಞ ಅಲೆಕ್ಸಾಂಡರ್ ಥಾವಸ್ ಮತ್ತು ಸ್ಟೆಲ್ಲಾ ಚೆಸ್ ಇಬ್ಬರೂ ಕೂಡಿ, ಮಕ್ಕಳ ಸ್ವಭಾವದ ಬಗ್ಗೆ ಮೂವತ್ತು ವರ್ಷಗಳ ಸುದೀರ್ಘ ಅಧ್ಯಯನ ನಡೆಸಿದರು. ಮಗುವಿನ ಪರೀಕ್ಷೆ, ವರ್ತನೆಗಳ ಗಮನಿಸುವಿಕೆ ಮತ್ತು ಅವರ ತಂದೆ-ತಾಯಿಯರ ಸಂದರ್ಶನ ನಿಯಮಿತವಾಗಿ ನಡೆಸಲಾಯಿತು. ಮಗುವಿನ ನಿದ್ರೆ-ಆಹಾರ ಪದ್ಧತಿ, ಚಟುವಟಿಕೆ, ಏಕಾಗ್ರತೆ, ಹಠ, ವರ್ತನೆಗಳು, ಆತಂಕದ ಲಕ್ಷಣಗಳು, ಪೋಷಕರೊಂದಿಗಿನ ಬಾಂಧವ್ಯ – ಹೀಗೆ ವಿಧವಿಧವಾದ ಮಾಹಿತಿಗಳನ್ನು ಕಲೆ ಹಾಕಿದರು.

ಸ್ಟೆಲ್ಲಾ ಮತ್ತು ಥಾಮಸ್ ಈ ಫಲಿತಾಂಶಗಳನ್ನು ವಿಮರ್ಶಿಸಿದಾಗ, ಸುಮಾರು ಶೇ 40ರಷ್ಟು ಮಕ್ಕಳು ‘ಸುಲಭ ಮಗು’ (Easy child) ಎಂಬ ವಿಭಾಗದಲ್ಲಿ ಬಂದರು. ಈ ಮಕ್ಕಳ ನಿದ್ರಾ-ಆಹಾರ ಪದ್ಧತಿಗಳು ನಿಯಮಿತವಾಗಿದ್ದು, ಯಾವಾಗಲೂ ಖುಷಿ ಖುಷಿಯಾಗಿದ್ದರು. ಹೊಸ ವಾತಾವರಣಕ್ಕೆ ಬೇಗ ಹೊಂದಾಣಿಕೆ ಮಾಡಿಕೊಂಡು, ಒಳ್ಳೆಯ ಏಕಾಗ್ರತೆ ಉಳ್ಳವರಾಗಿದ್ದರು.

ಎರಡನೆಯ ವಿಭಾಗದಲ್ಲಿ ಅಂದರೆ ‘ಕಠಿಣವಾದ ಮಗು’ ಅಥವಾ ‘Difficult child’ ವಿಭಾಗದಲ್ಲಿ ಸುಮಾರು ಶೇ 10ರಷ್ಟು ಮಕ್ಕಳು ಬಂದರು. ಈ ಮಕ್ಕಳ ಆರೈಕೆ ಮಾಡಲು ತಂದೆ-ತಾಯಿಗೆ ಕಠಿಣವಾಗುತ್ತಿತ್ತು. ನಿದ್ರೆ ಮಾಡುವುದಕ್ಕೆ ಕಿರಿಕಿರಿ, ಊಟ ಮಾಡಿಸಲು ತೊಂದರೆ, ಸಿಕ್ಕಾಪಟ್ಟೆ ಹಠ, ಹೊಸ ವಾತಾವರಣಕ್ಕೆ / ಸಂದರ್ಭಗಳಿಗೆ ಹೊಂದಿಕೊಳ್ಳಲು ನಿರಾಕರಣೆ.

ಮೂರನೆಯ ವಿಭಾಗ ‘Slow to warm up child’ ಎಂದರೆ, ಸಂಕೋಚ ಸ್ವಭಾವದ ಮಗು ವಿಭಾಗದಲ್ಲಿ ಸುಮಾರು ಶೇ 15ರಷ್ಟು ಮಕ್ಕಳು ಬಂದರು. ಈ ಮಕ್ಕಳು ಸ್ವಲ್ಪ ಹಿಂಜರಿಕೆ ಉಳ್ಳವರಾಗಿದ್ದು, ಹೊಸ /ಹೊರಗಿನ ಪರಿಸರಕ್ಕೆ ಸ್ವಲ್ಪ ಸಮಯ/ ಒತ್ತಾಯದ ನಂತರ ಹೊಂದಿಕೊಳ್ಳುತ್ತಿದ್ದರು. ಈ ಎಲ್ಲ ಅಂಕಿ-ಅಂಶಗಳನ್ನು ಕೂಡಿದಾಗ, ಶೇ 65 ರಷ್ಟು ಮಕ್ಕಳನ್ನು ಮಾತ್ರ ಈ ಮೂರು ವಿಭಾಗಗಳಲ್ಲಿ ಕಂಡಂತಾಯಿತು. ಹಾಗಾದರೆ ಇನ್ನು ಶೇ 35ರಷ್ಟು ಮಕ್ಕಳು? ಇವರಲ್ಲಿ ಎಲ್ಲಾ ವಿಭಾಗಗಳ ಗುಣಲಕ್ಷಣಗಳೂ ಮಿಶ್ರಿತವಾಗಿತ್ತು. ಉದಾಹರಣೆಗೆ, ಒಂದು ಮಗುವಿಗೆ ನಿದ್ರೆಗೆ ತುಂಬಾ ಕಿರಿಕಿರಿ ಇದ್ದರೂ ಊಟದ ವಿಷಯದಲ್ಲಿ ಸಮಸ್ಯೆಯೇ ಇರಲಿಲ್ಲ. ಇನ್ನೊಂದು ಮಗು, ನಿದ್ರೆ. ಊಟದ ವಿಷಯದಲ್ಲಿ ಸುಲಭವಾಗಿದ್ದರೂ, ಅತಿ ಚಟುವಟಿಕೆ, ಏಕಾಗ್ರತೆಯ ಕೊರತೆ ಇತ್ತು.

ಪಾಠಗಳು

ಎಲ್ಲಾ ಮಕ್ಕಳ ಗುಣ ಸ್ವಭಾವಗಳೂ ಒಂದೇ ರೀತಿ ಇರುವುದಿಲ್ಲ. ಅವರಿಂದ ತಂದೆ ತಾಯಿಯಾಗಿ, ಶಿಕ್ಷಕರಾಗಿ ನಾವು ಯಾವುದೇ ಕಾರ್ಯವನ್ನು ಅಪೇಕ್ಷಿಸಿದಾಗ, ಈ ಗುಣ–ಸ್ವಭಾವದ ಪರಿಚಯ ಅತ್ಯಗತ್ಯ. ಸೂಕ್ಷ್ಮಸ್ವಭಾವದ, ಹಿಂಜರಿಕೆ ಇರುವ ಮಗುವಿಗೆ, ನೀವು ಗಟ್ಟಿಯಾಗಿ ಹೆದರಿಸಿ, ಏಕ್‌ದಂ ವೇದಿಕೆಗೆ ತಳ್ಳಿದಿರೆಂದರೆ, ಮಗುವಿಗೆ ಬಾವಿಗೆ ಬಿದ್ದ ಅನುಭವವೇ. ತುಂಬಾ ಹಠಮಾರಿಯಾದ ಮಗುವಿಗೆ ಅಜ್ಜ-ಅಜ್ಜಿಯರೊಂದಿಗೆ ಬಿಟ್ಟು ನೋಡಿಕೊಳ್ಳುವುದಕ್ಕೆ ಹೇಳಿದರೆ, ಅಜ್ಜ-ಅಜ್ಜಿಯರೇ ಕಾಯಿಲೆ ಬೀಳಬಹುದು ಅಥವಾ ಮಗು ಮತ್ತಷ್ಟು ಹಠಮಾರಿಯಾಗಬಹುದು. ಸುಲಭ ಸ್ವಭಾವ ಲಕ್ಷಣದ ಮಗುವಾದರೆ, ನೀವು ಯಾವುದೇ ಒತ್ತಡಗಳನ್ನು ಹಾಕಿದರೂ ತಡೆಯಬಹುದು. ಹಾಗೆಯೇ ಪಕ್ಕದ ಮನೆಯ ಮಗು ಎಷ್ಟು ಚೆನ್ನಾಗಿ ಎಲ್ಲರೊಂದಿಗೆ ಮದುವೆಮನೆಯಲ್ಲೂ ಮಾತನಾಡುವುದು, ನಮ್ಮ ಮಗು ಸುಮ್ಮನೆ ಇರುತ್ತಲ್ಲಾ ಎಂದು ಹೋಲಿಕೆ ಮಾಡಿಕೊಂಡು ಕೊರಗುವ ಪೋಷಕರಿಗೂ ತಿಳಿವಳಿಕೆ ಅಗತ್ಯ.



ನಾವೇನು ಮಾಡಬಹುದು?

ಒಂದೇ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಲ್ಲಿ ಕೂಡ ಸ್ವಭಾವದ ಗುಣ–ಲಕ್ಷಣಗಳಲ್ಲಿ ವ್ಯತ್ಯಾಸ ಇರಬಹುದು. ಮಕ್ಕಳ ಸ್ವಭಾವದ ಅಂದಾಜಿದ್ದರೆ, ನಾವು ಮಕ್ಕಳನ್ನು ನಿಭಾಯಿಸುವ ರೀತಿಯಲ್ಲಿ, ಅದರಿಂದ ಅಪೇಕ್ಷೆ ಪಡುವ ವಿಷಯದಲ್ಲಿ, ಅವರಲ್ಲಿ ಶಿಸ್ತನ್ನು ರೂಢಿಸುವ ವಿಧಾನದಲ್ಲಿ ಮಾರ್ಪಾಡು ಮಾಡಬಹುದು. ಹಾಗಾದಾಗ, ಪೋಷಕರು ಮತ್ತು ಮಕ್ಕಳು ಇಬ್ಬರಿಗೂ ಬಾಲ್ಯ ಸಹನೀಯ ಮತ್ತು ಸುಂದರವಾಗಿರುತ್ತದೆ. ❖



ಮಣ್ಣಿನಲ್ಲಿ ಆಟವಾಡುವ ಮಕ್ಕಳೇ...

ಡಾ. ಕುಶ್ವಂತ್ ಕೋಳಿಬೈಲು

ಮಣ್ಣಿನಿಂದ ಹರಡುವ ಹೆಲ್ಮಿನ್ತ್ (helminth)ಸೋಂಕುಗಳು ಭಾರತದ ಲಕ್ಷಾಂತರ ಮಕ್ಕಳ ಮೇಲೆ ಪರಿಣಾಮ ಬೀರುತ್ತದೆ. ಈ ಹುಳುಗಳು ದೇಹದೊಳಗೆ ಸೇರಿಕೊಂಡು ಪರಾವಲಂಬಿಜೀವಿಗಳಾಗಿ ಜೀವಿಸುತ್ತಾ ಮಕ್ಕಳಲ್ಲಿ ದೈಹಿಕ ಅಸ್ವಸ್ಥತೆಯನ್ನು ಉಂಟುಮಾಡುವುದರ ಜೊತೆಗೆ ಅಗತ್ಯ ಪೋಷಕಾಂಶಗಳ ಹೀರಿಕೊಳ್ಳುವಿಕೆಗೆ ಅಡ್ಡಿಪಡಿಸುತ್ತವೆ. ಇದು ಮಕ್ಕಳಲ್ಲಿ ಅನಾರೋಗ್ಯ, ಅಪೌಷ್ಟಿಕತೆ, ರಕ್ತಹೀನತೆ ಮತ್ತು ದುರ್ಬಲವಾದ ಬೆಳವಣಿಗೆಗೆ ಕಾರಣವಾಗುತ್ತದೆ. ಈ ಕಾರಣಗಳಿಂದಾಗಿ ಮಕ್ಕಳ ಶೈಕ್ಷಣಿಕ ಕಾರ್ಯಕ್ಷಮತೆ ಮತ್ತು ಜೀವನದ ಗುಣಮಟ್ಟವು ಕಡಿಮೆಯಾಗುತ್ತದೆ.

ಮಕ್ಕಳ ದೇಹದೊಳಗೆ ಜಂತುಹುಳುಗಳು ಮೊಟ್ಟೆ ಅಥವಾ ಮರಿಗಳ ರೂಪದಲ್ಲಿ ಪ್ರವೇಶಿಸಬಹುದು. ಆರಂಭದಲ್ಲಿ ಕೆಲವೇ ಹುಳುಗಳು ಇದ್ದರೆ ಅವುಗಳು ತಮ್ಮ ಇರುವಿಕೆಯನ್ನು ಪ್ರದರ್ಶಿಸುವುದಿಲ್ಲ. ಮಕ್ಕಳ ಕರುಳಿನ ವಾತಾವರಣಕ್ಕೆ ಅವುಗಳು ಹೊಂದಿಕೊಂಡ ನಂತರ ಅವುಗಳ ಸಂತತಿ ಗಣನೀಯವಾಗಿ ಹೆಚ್ಚಾಗುತ್ತದೆ. ನಂತರದ ದಿನಗಳಲ್ಲಿ ಅವುಗಳ ಇರುವಿಕೆಯಿಂದಾಗಿ ಕಂಡು ಬರುವ ರೋಗಲಕ್ಷಣಗಳು ಮಕ್ಕಳಲ್ಲಿ ಹೆಚ್ಚು ಸ್ಪಷ್ಟವಾಗುತ್ತದೆ. ಜಂತುಹುಳಗಳ ಸಂಖ್ಯೆ ಹೆಚ್ಚಾದಂತೆ ಮಕ್ಕಳ ಜೀರ್ಣಾಂಗ ವ್ಯವಸ್ಥೆಯು ಹದಗೆಡುವ ಕಾರಣ ಅತಿಸಾರವು ಉಂಟಾಗಬಹುದು. ಮಕ್ಕಳಲ್ಲಿ ಕಿಬ್ಬೊಟ್ಟೆಯಲ್ಲಿ ನೋವು ಮತ್ತು ಸೆಳೆತ ಕಾಣಿಸಿಕೊಳ್ಳಬಹುದು. ದೇಹಕ್ಕೆ ಬೇಕಾದ ಅಗತ್ಯ ಪೌಷ್ಟಿಕಾಂಶವನ್ನು ಹೀರಿಕೊಳ್ಳುವ ಕರುಳು ಈ ಹುಳಗಳ ಇರುವಿಕೆಯ ಕಾರಣದಿಂದಾಗಿ ತನ್ನ ಕಾರ್ಯವನ್ನು ನಿರ್ವಹಿಸುವಲ್ಲಿ ವಿಫಲವಾಗುತ್ತದೆ. ಇದರಿಂದಾಗಿ ಮಕ್ಕಳಲ್ಲಿ ರಕ್ತಹೀನತೆ ಮತ್ತು ಕುಂಠಿತ ಬೆಳವಣಿಕೆ ಕಾಣಿಸಿಕೊಳ್ಳುತ್ತದೆ. ರಕ್ತಹೀನತೆಯು ಮಕ್ಕಳ ಕಲಿಕೆ ಮತ್ತು ಶಾಲಾ ಚಟುವಟಿಕೆಗಳ ಮೇಲೆ ಪರಿಣಾಮವನ್ನು ಬೀರಬಲ್ಲದು. ಜಂತುಹುಳಗಳು ದೇಹದೊಳಗೆ ಉಂಟುಮಾಡುವ ಅಲರ್ಜಿಯ ಕಾರಣದಿಂದಾಗಿ ಅದು ಚರ್ಮದ ಮೇಲೆ ದದ್ದು ಮತ್ತು ತುರಿಕೆಯನ್ನು ಉಂಟುಮಾಡಬಲ್ಲದು. ಜಂತುಹುಳಗಳ ಸೋಂಕುಗಳು ಹರಡುವುದರ ಪ್ರಮಾಣವನ್ನು ಕಡಿಮೆ ಮಾಡಲು ಹಲವು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬಹುದು.

ತೆರೆದ ಶೌಚಾಲಯಗಳು ನಮ್ಮ ಗ್ರಾಮೀಣ ಭಾಗಗಳಲ್ಲಿ ಕಡಿಮೆಯಾಗಬೇಕು. ಇದರಿಂದಾಗಿ ಹುಳಗಳ ಮೊಟ್ಟೆಗಳು ಪರಿಸರದಲ್ಲಿ ಹರಡಿ ನಮ್ಮ ನೀರು ಮತ್ತು ಆಹಾರದಲ್ಲಿ ಸೇರಿಕೊಳ್ಳುವುದು ಕಡಿಮೆಯಾಗುತ್ತದೆ. ಮಕ್ಕಳು ಮಣ್ಣಿನ ಮೇಲೆ ಬರಿಗಾಲಿನಲ್ಲಿ ತಿರುಗಾಡುವುದನ್ನು ನಿಲ್ಲಿಸಿ ಸೂಕ್ತ ಪಾದರಕ್ಷೆಗಳನ್ನು ಧರಿಸುವುದರಿಂದ ಕಲುಷಿತ ಮಣ್ಣು ಮತ್ತು ಹುಳಗಳ ಮೊಟ್ಟೆಗಳು ಮಕ್ಕಳ ಸಂಪರ್ಕಕ್ಕೆ ಬರುವುದನ್ನು ಕಡಿಮೆ ಮಾಡಬಹುದು.

ಮಕ್ಕಳು ಸೇವಿಸುವ ಹಣ್ಣು ಮತ್ತು ತರಕಾರಿಗಳನ್ನು ಚೆನ್ನಾಗಿ ತೊಳೆದು ಸ್ವಚ್ಛಗೊಳಿಸಿದ ನಂತರವೇ ಅವರಿಗೆ ಸೇವಿಸಲು ನೀಡಬೇಕು. ಮಾಂಸ ಮತ್ತು ತರಕಾರಿಗಳನ್ನು ಸಂಪೂರ್ಣವಾಗಿ ಬೇಯಿಸುವುದರಿಂದ ನಮ್ಮ ಆಹಾರಪದಾರ್ಥಗಳಲ್ಲಿ ಗುಪ್ತವಾಗಿ ಅಡಗಿರುವ ಹುಳಗಳ ಮೊಟ್ಟೆಗಳನ್ನು ನಾಶಗೊಳಿಸಬಹುದು. ಮಕ್ಕಳಿಗೆ ಬೀದಿಬದಿಯ ಆಹಾರಪದಾರ್ಥಗಳನ್ನು ನೀಡುವ ಮೊದಲು ಎರಡು ಬಾರಿ ಯೋಚಿಸಬೇಕು. ಅಂತಹ ಕಡೆಗಳಲ್ಲಿ ಚೆನ್ನಾಗಿ ತೊಳೆಯದ ಮತ್ತು ಬೇಯಿಸದ ಆಹಾರಗಳು ಹೆಚ್ಚಾಗಿರುವುದರಿಂದ ಜಂತುಹುಳಗಳ ಸೋಂಕು ಮಕ್ಕಳಿಗೆ ಹರಡುವ ಸಾಧ್ಯತೆ ಹೆಚ್ಚಾಗಿರುತ್ತದೆ. ಮಕ್ಕಳಿಗೆ ಕುದಿಸಿ ಆರಿಸಿದ ನೀರನ್ನು ಕುಡಿಯಲು ನೀಡುವುದರಿಂದಲೂ ಜಂತುಹುಳದ ಪ್ರಸರಣಕ್ಕೆ ಕಡಿವಾಣವನ್ನು ಹಾಕಬಹುದು. ಮಕ್ಕಳ ಆರೋಗ್ಯವು ಅಡುಗೆಮನೆಯಲ್ಲಿ ನಿರ್ಧಾರವಾಗುವ ಕಾರಣದಿಂದ ಅಡುಗೆ ಮನೆಯ ಶುಚಿತ್ವವನ್ನು ಕಾಪಾಡುವುದು ಅತ್ಯಗತ್ಯ. ಅಡುಗೆ ತಯಾರಿಸಲು ಮತ್ತು ಬಡಿಸಲು ಬಳಸುವ ಪಾತ್ರೆಗಳನ್ನು ಮತ್ತು ಕಟ್ಲರಿಗಳನ್ನು ಉಪಯೋಗಿಸಿದ ನಂತರ ಸರಿಯಾಗಿ ತೊಳೆಯಬೇಕು. ಇದರಿಂದಾಗಿ ತರಕಾರಿ ಮತ್ತು ಅಹಾರ ಪದಾರ್ಥಗಳೊಂದಿಗೆ ಅಡುಗೆಮನೆ ಸೇರಿದ ಹುಳುಗಳ ಮೊಟ್ಟೆಗಳು ನಮ್ಮ ದೇಹದೊಳಗೆ ಸೇರಿಕೊಳ್ಳುವುದನ್ನು ತಡೆಯಬಹುದು. ಜಂತು ಹುಳುಗಳ ಪ್ರಸರಣವನ್ನು ತಡೆಯುವಲ್ಲಿ ನಮ್ಮ ಕೈಗಳ ನೈರ್ಮಲ್ಯವು ಅತ್ಯಂತ ಪ್ರಮುಖವಾಗಿದೆ. ಒಪ್ಪವಾದ ಮತ್ತು ಸ್ವಚ್ಛವಾದ ಉಗುರುಗಳನ್ನು ಕಾಪಾಡಿಕೊಳ್ಳುವುದರಿಂದ ಹುಳುಗಳ ಮೊಟ್ಟೆಗಳು ಮಣ್ಣಿನಲ್ಲಿ ಆಡುವಾಗ ಮಕ್ಕಳ ಉಗುರುಗಳ ಸಂಧಿಗಳಲ್ಲಿ ಸೇರಿ ಅವರ ಹೊಟ್ಟೆಯೊಳಗೆ ಪ್ರವೇಶಿಸುವುದನ್ನು ತಡೆಯಬಹುದು. ಆಹಾರವನ್ನು ಸೇವಿಸುವ ಮೊದಲು ಮತ್ತು ಸ್ನಾನಗೃಹವನ್ನು ಬಳಸಿದ ನಂತರ ತಮ್ಮ ಕೈಗಳನ್ನು ಸಾಬೂನು ಮತ್ತು ನೀರಿನಿಂದ ತೊಳೆಯುವ ಅಭ್ಯಾಸವನ್ನು ಮಕ್ಕಳಲ್ಲಿ ರೂಢಿಸಬೇಕು. ಈ ಸರಳ ಕ್ರಮಗಳು ‘ವರ್ಮ್’ ಪ್ರಸರಣದ ಸರಪಳಿಯನ್ನು ಮುರಿಯುವಲ್ಲಿ ಬಹಳ ಸಹಕಾರಿಯಾಗಬಲ್ಲದು.

ಉಗುರುಗಳ ಆರೈಕೆ: ಒಪ್ಪವಾದ ಮತ್ತು ಸ್ವಚ್ಛವಾದ ಉಗುರುಗಳನ್ನು ಕಾಪಾಡಿಕೊಳ್ಳಿ. ಇದು ಹುಳುಗಳ ಮೊಟ್ಟೆಗಳನ್ನು ಮರೆಮಾಡಲು ಜಾಗವನ್ನು ಕಡಿಮೆ ಮಾಡುತ್ತದೆ; ಆಕಸ್ಮಿಕ ಸೇವನೆಯನ್ನು ತಡೆಯಲೂ ಸಹಾಯ ಮಾಡುತ್ತದೆ.

ಮಣ್ಣಿನ ಸಂಪರ್ಕ ಮತ್ತು ಕೈಗಳನ್ನು ಸ್ವಚ್ಛಗೊಳಿಸಿ: ತೋಟಗಾರಿಕೆ ಅಥವಾ ಯಾವುದೇ ಮಣ್ಣಿನ ಸಂಪರ್ಕ ಚಟುವಟಿಕೆಯ ನಂತರ, ನಿಮ್ಮ ಕೈಗಳನ್ನು ಸಾಬೂನು ಮತ್ತು ನೀರಿನಿಂದ ಚೆನ್ನಾಗಿ ತೊಳೆಯಿರಿ. ಇದು ಯಾವುದೇ ವರ್ಗಾವಣೆಗೊಂಡ ಹುಳುಗಳ ಮೊಟ್ಟೆಗಳು ನಿಮ್ಮ ದೇಹವ್ಯವಸ್ಥೆಯಲ್ಲಿ ತಮ್ಮ ದಾರಿಯನ್ನು ಕಂಡುಕೊಳ್ಳುವುದನ್ನು ತಡೆಯುತ್ತದೆ. ಮಕ್ಕಳು ಇಷ್ಟಪಡುವ ಮತ್ತು ಆಟವಾಡುವ ನಾಯಿ, ಬೆಕ್ಕು ಮುಂತಾದ ಸಾಕುಪ್ರಾಣಿಗಳ ಮೂಲಕವೂ ಹುಳಗಳು ಮತ್ತು ಚಿಗಟುಗಳು ಮಕ್ಕಳ ಸಂಪರ್ಕಕ್ಕೆ ಬರಬಹುದು. ಹಾಗಾಗಿ ಸಾಕುಪ್ರಾಣಿಗಳಲ್ಲಿಯೂ ಈ ಸೋಂಕುಗಳು ಬರದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಜಂತುಹುಳಗಳು ಮಕ್ಕಳಲ್ಲಿ ಉಂಟು ಮಾಡುವ ಆರೋಗ್ಯ ಸಮಸ್ಯೆಗಳ ಅಗಾಧತೆಯನ್ನು ಕಂಡ ಭಾರತ ಸರಕಾರವು 2015ನೇ ವರ್ಷದಿಂದ ಪ್ರತಿ ವರ್ಷದ ಫೆಬ್ರುವರಿ ಹತ್ತರಂದು ರಾಷ್ಟ್ರೀಯ ಜಂತುಹುಳು ನಿವಾರಣಾ ದಿನವನ್ನು ಆಚರಿಸಲು ಪ್ರಾರಂಭಿಸಿದೆ. ಅಂಗನವಾಡಿ ಮತ್ತು ಶಾಲೆಗಳಲ್ಲಿ ಮಕ್ಕಳಿಗೆ ಜಂತುಹುಳಗಳನ್ನು ನಿವಾರಿಸಬಲ್ಲ ‘ಅಲ್ಬೆಂಡಜೋಲ್’ ಮಾತ್ರೆಗಳನ್ನು ಆ ದಿನದಂದು ದೇಶದಾದ್ಯಂತ ನೀಡುವ ಕಾರ್ಯಕ್ರಮವನ್ನು ಮಾಡಬಹುದು. ಮುಂದಿನ ವರ್ಷಗಳಲ್ಲಿ ಮಕ್ಕಳ ಆರೋಗ್ಯವನ್ನು ಬಾಧಿಸುವ ಸಮಸ್ಯೆಗಳ ಪ್ರಮಾಣ ಆಗ ಗಣನೀಯವಾಗಿ ಕಡಿಮೆಮಾಡಬಹುದು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ಸಮಾಜವಿಜ್ಞಾನ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

49) ಪ್ಲಾಸಿ ಕದನದ ಕುರಿತು ಸಂಕ್ಷಿಪ್ತವಾಗಿ ಬರೆಯಿರಿ

ಉತ್ತರ:– ಬಂಗಾಳದ ನವಾಬನಾದ ಅಲಿವರ್ದಿ ಖಾನನು 1756ರಲ್ಲಿ ನಿಧನನಾದನು. ನಂತರ ಅವನ ಮೊಮ್ಮಗನಾದ ಸಿರಾಜ್–ಉದ್–ದೌಲನು ಅಧಿಕಾರಕ್ಕೆ ಬಂದನು. ಯುವ ನವಾಬನಾದ ಸಿರಾಜ್–ಉದ್–ದೌಲನಿಗೂ ಮತ್ತು ಬ್ರಿಟಿಷರಿಗೂ 1757ರಲ್ಲಿ ಇತಿಹಾಸ ಪ್ರಸಿದ್ಧ ಪ್ಲಾಸಿ ಕದನ ನಡೆಯಿತು. ಮೊದಲು ನವಾಬನ ವಿರೋಧಿಗಳಾದ ಮಾಣಿಕ್‌ಚಂದ್, ನೇಮಿಚಂದ್, ಜಗತ್‌ಸೇಠ್ (ಬಂಗಾಳದ ಲೇವಾದೇವಿಗಾರ) ಮೊದಲಾದ ಶ್ರೀಮಂತರನ್ನು ತನ್ನತ್ತ ಸೆಳೆದುಕೊಂಡನು. ನಂತರ ಸಿರಾಜನ ಸೇನಾಪತಿಯಾದ ಮೀರ್ ಜಾಫರನಿಗೆ ನವಾಬನನ್ನಾಗಿ ಮಾಡುವ ಆಮಿಷವೊಡ್ಡಿ ಯುದ್ಧದಲ್ಲಿ ತಟಸ್ಥವಾಗಿರಲು ರಾಜ್ಯವನ್ನು ಒಪ್ಪಿಸಿದನು, ಇದರಿಂದ ಧೈರ್ಯಗೊಂಡ ರಾಬರ್ಟ್ ಕ್ಲೈವನು 1757 ಜೂನ್ 23ರಂದು ಸಿರಾಜ್–ಉದ್–ದೌಲನ ಮೇಲೆ ಕದನ ಸಾರಿದನು. ಪ್ಲಾಸಿ ಎಂಬಲ್ಲಿ ನಡೆದ ಕದನದಲ್ಲಿ ಕ್ಲೈವನು ಯೋಜಿಸಿದಂತೆಯೇ ಎಲ್ಲವೂ ನಡೆಯಿತು. ಯುದ್ಧ ಭೂಮಿಯಿಂದ ತಪ್ಪಿಸಿಕೊಂಡ ಸಿರಾಜ್–ಉದ್–ದೌಲನನ್ನು ಸೆರೆಹಿಡಿದು ಕೊಲ್ಲಲಾಯಿತು.

50) ಬಕ್ಸಾರ್ ಯುದ್ಧದ ಪರಿಣಾಮಗಳು ಯಾವುವು?

ಉತ್ತರ:– ಬಕ್ಸಾರ್ ಯುದ್ಧದ ಪರಿಣಾಮಗಳು:–

1. ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ಮೇಲಿನ ‘ದಿವಾನಿ’ ಹಕ್ಕನ್ನು ಎರಡನೇ ಷಾ ಆಲಂ ನೀಡಿದನು.
2. ಷಾ ಆಲಂ ವಾರ್ಷಿಕ 26 ಲಕ್ಷ ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟುಕೊಡಬೇಕಾಯಿತು
3. ಔದ್‌ನ ನವಾಬನಾದ ಷುಜಾ–ಉದ್–ದೌಲನು ಕಂಪನಿಗೆ ಯುದ್ಧ ನಷ್ಟದ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು.
4. ಮೀರ್‌ಜಾಫರ್ ಮರಣ ಹೊಂದಿದ್ದರಿಂದ ಅವನ ಮಗನಿಗೆ ವಿಶ್ರಾಂತಿ ವೇತನ ನೀಡಿ ಬಂಗಾಳದ ಪೂರ್ಣ ಆಡಳಿತವನ್ನು ಕಂಪನಿಯು ನಿರ್ವಹಿಸತೊಡಗಿತು

ಅಂತಿಮವಾಗಿ ಬಕ್ಸಾರ್ ಕದನವು ಬ್ರಿಟಿಷರು ಬಂಗಾಳ, ಬಿಹಾರ ಮತ್ತು ಒರಿಸ್ಸಾದ ನಿಜವಾದ ಒಡೆಯರೆಂದು ದೃಢೀಕರಿಸಿತು ಹಾಗೂ ಔದ್ ಕೂಡ ಅವರ ಅಧೀನದಲ್ಲಿ ಉಳಿಯುವಂತಾಯಿತು. 1765ರಲ್ಲಿ ರಾಬರ್ಟ್ ಕ್ಲೈವನು ಬಂಗಾಳದಲ್ಲಿ ‘ದ್ವಿ ಪ್ರಭುತ್ವ’ ಪದ್ಧತಿಯನ್ನು ಜಾರಿಗೆ ತಂದನು.

51) ‘ದ್ವಿ ಪ್ರಭುತ್ವ’ ಪದ್ಧತಿ ಎಂದರೇನು?

ಉತ್ತರ:– ಬ್ರಿಟಿಷರು ಭೂ ಕಂದಾಯ ವಸೂಲಿ ಮಾಡುವ ಹಕ್ಕನ್ನು ಹೊಂದಿದರು ಹಾಗೂ ನವಾಬನು ಆಡಳಿತ, ನ್ಯಾಯ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ಇದನ್ನೇ ‘ದ್ವಿ ಪ್ರಭುತ್ವ’ ಎನ್ನುವರು.

52) ಬಕ್ಸಾರ್ ಕದನದ ಕುರಿತು ವಿವರವಾಗಿ ಬರೆಯಿರಿ

ಉತ್ತರ: ಮೀರ್ ಖಾಸಿಂ ಒಬ್ಬ ಸಮರ್ಥ ಆಡಳಿತಗಾರ. ಈತನು ಸಹ ಆರಂಭದಲ್ಲಿ ಕಂಪನಿಗೆ ನಿಷ್ಠೆಯಿಂದಿದ್ದನು. ಎರಡು ಲಕ್ಷ ಪೌಂಡ್ ಹಣದ ಜೊತೆಗೆ ಕೆಲವು ಪ್ರದೇಶಗಳನ್ನು ಕಂಪನಿಗೆ ಬಿಟ್ಟುಕೊಟ್ಟನು. ಆದರೆ, ಶೀಘ್ರವೇ ಮೀರ್ ಖಾಸಿಂ ತನ್ನನ್ನು ಸ್ವತಂತ್ರ ರಾಜನೆಂದು ಭಾವಿಸಿದನು. ದಸ್ತಕ್‌ನ ದುರ್ಬಳಕೆಯನ್ನು ಪರಿಶೀಲಿಸಿ ಬಂಗಾಳದ ಎಲ್ಲಾ ವ್ಯಾಪಾರವನ್ನು ಸುಂಕ ಮುಕ್ತ ಎಂದು ಘೋಷಿಸಿದನು. ಇದರಿಂದಾಗಿ ಭಾರತೀಯರು ಸುಂಕವಿಲ್ಲದೆ ವ್ಯಾಪಾರ ನಡೆಸುವ ಮೂಲಕ ಬ್ರಿಟಿಷರೊಡನೆ ನೇರ ಸ್ಪರ್ಧಿಗಳಾದರು. ಪರಿಣಾಮ, ಬ್ರಿಟಿಷರ ವ್ಯಾಪಾರಕ್ಕೆ ಭಾರಿ ಹೊಡೆತ ಬಿದ್ದಿತು. ಬ್ರಿಟಿಷರಿಗೆ ನವಾಬನನ್ನು ವಿರೋಧಿಸಲು ಇದಿಷ್ಟೇ ಸಾಕಿತ್ತು, ಅವರು ಮೀರ್ ಖಾಸಿಂನನ್ನು ಇಳಿಸಿ ಮತ್ತೆ ಮೀರ್ ಜಾಫರ್‌ನನ್ನು ನವಾಬನಾಗಿ ಮಾಡಿದರು. ಬ್ರಿಟಿಷರ ಕುಟಿಲತೆಯನ್ನೆಲ್ಲ ಅರಿತಿದ್ದ ಮೀರ್ ಖಾಸಿಮನು ಬ್ರಿಟಿಷರ ವಿರುದ್ಧ ಸಂಘಟನಾತ್ಮಕ ಹೋರಾಟಕ್ಕೆ ಮುಂದಾದನು. ಭಾರತೀಯ ವ್ಯಾಪಾರಿಗಳು ಮತ್ತು ವಿವಿಧ ಕಸುಬುದಾರರು ಅವನ ಬೆಂಬಲಕ್ಕೆ ನಿಂತರು. ಈ ನಿಟ್ಟಿನಲ್ಲಿ ಮುಂದುವರೆದ ಮೀರ್ ಖಾಸಿಮನು ಮೊಗಲ್ ದೊರೆ ಎರಡನೇ ಷಾ ಆಲಂ ಮತ್ತು ಔದ್‌ನ ನವಾಬ ಷುಜ್–ಉದ್–ದೌಲರೊಂದಿಗೆ ಒಪ್ಪಂದ ಮಾಡಿಕೊಂಡನು. ಪರಿಣಾಮವಾಗಿ, ಮೀರ್ ಖಾಸಿಂ ನೇತೃತ್ವದ ಮೂರೂ ಸಂಯುಕ್ತ ಸೇನೆಗಳು ಹೆಕ್ಟರ್ ಮನ್ರೋ ನೇತೃತ್ವದ ಬ್ರಿಟಿಷ್ ಸೇನೆಯನ್ನು 1764ರಲ್ಲಿ ಬಕ್ಸರ್ ಎಂಬಲ್ಲಿ ಮುಖಾಮುಖಿಯಾದವು. ಅಂತಿಮವಾಗಿ ಯುದ್ಧದಲ್ಲಿ ಮೀರ್ ಖಾಸಿಂ ಸೋತು ಪಲಾಯನ ಮಾಡಿದರೆ, ಷಾ ಆಲಂ ಶರಣಾಗತನಾದನು. ಬ್ರಿಟಿಷ್ ಶಕ್ತಿಗೆ ತಡೆಯೊಡ್ಡುವ ಈ ಒಕ್ಕೂಟದ ಪ್ರಯತ್ನ ಸಂಪೂರ್ಣ ವಿಫಲವಾಯಿತು..

ಬಹುಆಯ್ಕೆ ಪ್ರಶ್ನೆಗಳು

1) ಬ್ರಿಟಿಷ್ ಮತ್ತು ಫ್ರೆಂಚರ ನಡುವಿನ ಸೆಣಸಾಟದಲ್ಲಿ ಕರ್ನಾಟಿಕ್ ಪ್ರದೇಶದ ನವಾಬ ....ನನ್ನು ಬ್ರಿಟಿಷರು ದಾಳವಾಗಿ ಬಳಸಿಕೊಂಡರು.

ಎ) ಅರ್ಜುನದೇವ ಬಿ) ಫರೂಕ್ ಸಿಯಾರ್
ಸಿ) ಅಕ್ಬರ್–2 ಡಿ) ಅನ್ವರುದ್ದೀನ

2) 1741ರ ಆಗಸ್ಟ್ 10ರಂದು .... ಎಂಬಲ್ಲಿ ಮಾರ್ತಾಂಡ ವರ್ಮ ಮತ್ತು ಡಚ್ಚರ ನಡುವೆ ನಾಲ್ಕು ದಿನಗಳ ಕಾಲ ಭೀಕರ ಕದನ ನಡೆಯಿತು. ಅಂತಿಮವಾಗಿ ತಿರುವಾಂಕೂರು ಸೈನ್ಯ ಯುದ್ಧದಲ್ಲಿ ಮೇಲುಗೈ ಸಾಧಿಸಿತು.

ಎ) ಕೊಳಚ್ಚಲ್ ಬಿ) ಕಾಯಂ ಕುಳಂ
ಸಿ) ತಿರುವಾಂಕೂರು ಡಿ) ಕೊಚ್ಚಿನ್

3) ಬ್ರಿಟಿಷ್ ಭಾರತದ ಸೃಷ್ಟಿಗೆ ಕಾರಣನಾದ ಪ್ರಥಮ ಅಧಿಕಾರಿ ರಾಬರ್ಟ್‌ಕ್ಲೈವ್. ಈತನು ಈಸ್ಟ್ ಇಂಡಿಯಾ ಕಂಪನಿಯಲ್ಲಿ ....ನಾಗಿ ಸೇವೆಗೆ ಸೇರಿದ್ದನು.

ಎ) ಸೇನಾಧಿಕಾರಿಯಾಗಿ ಬಿ) ಕಾರಕೂನ
ಸಿ) ದಿವಾನ ಡಿ) ಮೇಲಿನ ಯಾವುದೂ ಅಲ್ಲ

4) ಬಂಗಾಲದಲ್ಲಿ ದ್ವಿ ಸರ್ಕಾರ ಪದ್ಧತಿ ಜಾರಿಗೆ ತಂದವನು ಯಾರು?

ಎ) ರಾಬರ್ಟ್ ಕ್ಲೈವ್ ಬಿ) ಡೂಪ್ಲೆ
ಸಿ) ವಾಸ್ಕೋಡಿಗಾಮ ಡಿ) ಮೇಲಿನ ಯಾರೂ ಅಲ್ಲ

5) ಬಕ್ಸಾರ್ ಕದನದಲ್ಲಿ ಮೊಘಲ್ ಚಕ್ರವರ್ತಿ ಷಾ ಅಲಂ, ಔಧ್‌ನ ನವಾಬ ಷೂಜ ಉದ್ದೌಲ ಮತ್ತು ಮೀರ್ ಖಾಸಿಮರ ತ್ರಿಮೈತ್ರಿಕೂಟದ ಸೈನ್ಯವು ಇಂಗ್ಲಿಷರ ವಿರುದ್ಧ ಹೋರಾಡಿ ಸೋತಿತು. ಈ ಘಟನೆ ನಡೆದ ವರ್ಷ ಯಾವುದು?

ಎ) 1734 ಬಿ) 1526
ಸಿ) 1764 ಡಿ) 1943

6) ಡೂಪ್ಲೆಯು 1746ರ ಮದ್ರಾಸ್ ಕದನದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿ ಯಶಸ್ವಿಯಾಗಿದ್ದನು. ಫ್ರೆಂಚರು ಮತ್ತು ....ನಡುವಿನ ಸಂಘರ್ಷವು 1754ರವರೆಗೆ ನಡೆಯಿತು.

ಎ) ಡಚ್ಚರ ಬಿ) ಬ್ರಿಟಿಷರ
ಸಿ) ಪೋರ್ಚುಗೀಸರ ಡಿ) ಡ್ಯಾನಿಷರು

7) 1453ರಲ್ಲಿ ಆಟೋಮಾನ್ ಟರ್ಕರು .... ನಗರವನ್ನು ವಶಪಡಿಸಿಕೊಂಡರು. ಇದರಿಂದಾಗಿ ಆ ನಗರವನ್ನು ಸಂಧಿಸುವ ಎಲ್ಲಾ ವ್ಯಾಪಾರ ಮಾರ್ಗಗಳು ಟರ್ಕರ ನಿಯಂತ್ರಣಕ್ಕೆ ಹೋದವು.

ಎ) ವೆನ್ನಿಸ್ ಬಿ) ವ್ಯಾಟಿಕನ್
ಸಿ) ಕಾನ್‌ಸ್ಟಾಂಟಿನೋಪಲ್ ಡಿ) ಕಾಬೂಲ್

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC PHYSICS

Chapter – 2

ELECTROSTATIC POTENTIAL AND CAPACITANCE

27. Write a note on the Electric Polarization

Ans:- (.......Contd)

$$E_o = \frac{\sigma}{\epsilon_o} \quad ...(1)$$

When a non-polar dielectric slab is introduced between the plates shown in the figure. Each atom will be elongated due to the displacement of its charges under the effect of applied electric field and hence becomes a polar atom.

Now, each atom/molecule of the dielectric having dipole moment experiences a torque in the direction of the field $(\vec{E_o})$ and all the dipoles get aligned in the direction of the applied electric field.

The interior charges shown in the dotted rectangle cancel the effect of one another. Therefore, the net effect is that the opposite faces of the dielectric will have equal and opposite charges. These charges are called **induced charges** and the process is called ***polarization of the dielectric.*** Induced charges are bound charges and not free.

Induced charges set up an electric field known as **induced electric field,** $\vec{E_p}$.

If σ_p and $-\sigma_p$ be the surface charge densities of the opposite faces of the dielectric, then the magnitude of electric field due to polarization is given by – $E_p = \frac{\sigma_p}{\epsilon_o}$

directed opposite to that of applied electric field $\vec{E_0}$.

∴ net electric field inside the dielectric is -

$$E = E_o - E_p \text{ (or) } E = \frac{\sigma}{\epsilon_o} - \frac{\sigma_p}{\epsilon_o} \text{ (or)}$$

$$E = \frac{\sigma - \sigma_p}{\epsilon_o} ....(2)$$

Thus, on placing a dielectric slab between 2 parallel plates, the electric field intensity inside parallel plates gets reduced. Therefore, the net electric field (E) inside the dielectric is known as reduced value of electric field.

28. Write a note on dielectric constant.

Ans:- *The ratio of applied electric field intensity (E_0) to the reduced value of electric field intensity (E) on placing a dielectric between two oppositely charged the plates is called dielectric constant. It is given by -*

$$K = \frac{E_0}{E} = \frac{\sigma}{\sigma - \sigma_p}$$

Since, $E_0 > E$, ∴ K is always more than 1.

Dielectric constant is a pure number. It is also known as ***specific Inductive Capacity i.e. SIC*** of a medium.

29. Give the relation between Surface Charge Density (σ) and Induced Surface charge Density (σ_p).

Ans:- ***Relation between Surface Charge Density(σ) & Induced Surface charge Density (σ_p)***

[1] The reduced value of electric field in the gap between two oppositely charged plates, when filled with a dielectric of dielectric constant K is given by

$$E = E_o - E_p \quad ....(i)$$

$$\text{Now, } E_o = \frac{\sigma}{\epsilon_0}, E_p = \frac{\sigma_p}{\epsilon_0} \text{ and } E = \frac{E_o}{K} = \frac{\sigma}{\epsilon_0 K}$$

$$\therefore \text{eqn.(i) becomes } \frac{\sigma}{\epsilon_0 K} = \frac{\sigma}{\epsilon_0} - \frac{\sigma_p}{\epsilon_0}$$

$$\text{(or) } \sigma_p = \left(\sigma - \frac{\sigma}{K}\right) = \left(\frac{K-1}{K}\right)\sigma$$

Since $K > 1$, ∴ $\sigma_p < \sigma$

Thus, induced surface charge density on the dielectric is less than the surface charge density.

[2] If the gap between two oppositely charged plates is filled with a conductor instead of a dielectric, then E = O.

Hence eqn. (i) becomes

$$E_p = E_o \text{ (or) } \frac{\sigma_p}{\epsilon_0} = \frac{\sigma}{\epsilon_0}$$

$$\text{(or) } \sigma_p = \sigma$$

Thus, induced surface charge density on a conductor is equal to the surface charge density.

30. What is Dielectric constant also referred to as?

Ans:- Dielectric constant is also referred to as relative permittivity of a dielectric.

31. What is Polarization Vector? Explain.

Ans:- Polarization Vector is defined as the dipole moment per unit volume of the polarized dielectric. The polarization vector measures the degree of polarization of the dielectric.

Consider a homogeneous (i.e., of same kind or nature) dielectric slab placed in the uniform electric field $\vec{E_o}$. Due to polarization, all the atoms or molecules get aligned in the direction of the applied field. Since dielectric is homogeneous, so each atom or molecule have the same dipole moment $\vec{P}$. If n is the number of atoms or molecules per unit volume of the dielectric, then the polarization vector ($\vec{P}$) is given by

$$\vec{P} = n\vec{p}$$

$$\Rightarrow P = np$$

SI unit of polarization vector is

$$\frac{\text{Coulomb}}{\text{meter}^2} = (Cm^{-2})$$

Dimensional formula of polarization vector,

$$P = \frac{p}{V} = \frac{Cm}{m^3} = \frac{C}{m^2} = \frac{It}{m^2} = [M^0L^{-2}TA]$$

(Contd....)



PROGRAMMES OFFERED

■ **Bachelor of Engineering in**

• Artificial Intelligence & Machine Learning • Civil Engineering • Computer Science & Business Systems • Computer Science & Engineering • Computer Science & Engineering (Data Science) • Electronics & Communication Engineering • Electrical & Electronics Engineering • Mechanical Engineering

■ **MBA** ■ **MBA-IEV** ■ **MCA** ■ **PhD**

1,200+ PLACEMENT OFFERS Batch of 2023	185+ COMPANIES for campus drives

SALIENT FEATURES

- Innovation and Entrepreneurial Support through Innoventure : SJEC Innovation Platform
- Experiential learning through SJEC AICTE IDEA lab
- Campus to Corporate Placement Readiness Program
- Collaborations with International Universities.
- Coursera for Campus : 2500 student licences per year
- MATLAB : Campus wide licences
- Spacious Play Grounds for Outdoor & Indoor Games
- Hackathons and TechFests focussed on problem solving skills
- NCC & NSS
- Green, Clean, and Eco-Frendly Campus
- Student Run Technical Clubs
  - SAEINDIA SJEC Collegiate Club (e-BAJA & m-BAJA)
  - Automation and Robotic Club (ARC-SJEC)
  - Google Developer Students Club
  - Mars Rover
  - ISTE & IEEE Student Chapters
- 24 Hours Wi-Fi Connectivity and Campus Security
- Hostel, Transport & Counseling Centre Facility

NAAC A+ Grade | NBA NATIONAL BOARD of ACCREDITATION **B.E.- CSE, ECE, EEE, ME, CIV MBA, MCA** | **Affiliated to VTU, Belagavi** | **Recognised by AICTE, New Delhi**

ST JOSEPH ENGINEERING COLLEGE

AN AUTONOMOUS INSTITUTION

Vamanjoor, Mangaluru - 575 028, Karnataka

Ph: 91 - 824 - 2263753 / 54 / 55 / 2868155 / 106 / + 91 99729 32972 / 99726 95974

office@sjec.ac.in | sjec@sjec.ac.in | www.sjec.ac.in

CET CODE: E129

ಕಾರ್ಮಿಕರ ಕಲ್ಯಾಣದ ಹಣದ ಬಳಕೆ ಕುರಿತು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಪ್ರಶ್ನೆ

₹6,700 ಕೋಟಿ ಖರ್ಚಾಗಿದ್ದೆಲ್ಲಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ನಿಧಿಯಲ್ಲಿ ಕಾರ್ಮಿಕರ ಮಕ್ಕಳ ಕಲ್ಯಾಣಕ್ಕಾಗಿ ಬಳಕೆಯಾಗದೆ ಎನ್ನಲಾಗುತ್ತಿರುವ ₹6,700 ಕೋಟಿ ಮೊತ್ತದ ಬಗ್ಗೆ ಸಮಗ್ರ ವಿವರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಖಡಕ್ ತಾಕೀತು ಮಾಡಿದೆ.



ಎಂ.ನಾಗಪ್ರಸನ್ನ ನ್ಯಾಯಮೂರ್ತಿ

ಈ ಸಂಬಂಧ, 'ಕರ್ನಾಟಕ ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಫೆಡರೇಶನ್' ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ್ ಹಾಗೂ ಇತರರು ಸಲ್ಲಿಸಿರುವ ರಿಟ್ ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಆದೇಶಿಸಿದೆ.

ಮುಖ್ಯಾಂಶಗಳು
- ಶೈಕ್ಷಣಿಕ ನೆರವು ನಿರಾಕರಣೆ
- ಹೈಕೋರ್ಟ್ ಆದೇಶಕ್ಕೂ ದಕ್ಕದ ಮನ್ನಣೆ
- ಅಧಿಕಾರಿಗಳ ನಿರ್ಲಕ್ಷ್ಯ: ಕಿಡಿ

ಕಟ್ಟಡ ಕಾರ್ಮಿಕರ ಮಕ್ಕಳಿಗೆ ಮೀಸಲಾದ ವರ್ಗದಲ್ಲಿ ಶೈಕ್ಷಣಿಕ ಧನ ಸಹಾಯಕ್ಕಾಗಿ ಅರ್ಜಿ ಸಲ್ಲಿಸಿದ್ದ ಇಬ್ಬರು ಸ್ನಾತಕೋತ್ತರ ವಿದ್ಯಾರ್ಥಿನಿಯರಿಗೆ ತಕ್ಷಣವೇ ನೆರವು ನೀಡುವಂತೆ ಮಾಡಿದ್ದ ಮಧ್ಯಂತರ ಆದೇಶ ಪಾಲನೆ ಮಾಡದ, 'ಕರ್ನಾಟಕ ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ'ಯ ಉದಾಸೀನ ನಿಲುವನ್ನು ನ್ಯಾಯಮೂರ್ತಿ ನಾಗಪ್ರಸನ್ನ ವಿಚಾರಣೆ ವೇಳೆ ತೀವ್ರ ತರಾಟೆಗೆ ತೆಗೆದುಕೊಂಡರು.

'ಬಿಸಿಲು, ಮಳೆ ಎನ್ನದೆ ಶ್ರಮಪಡುವ ಕಟ್ಟಡ ಕಾರ್ಮಿಕರ ದುಡಿಮೆಯಿಂದಾಗಿ ಸಾವಿರಾರು ಕೋಟಿ ರೂಪಾಯಿ ಸೆಸ್ ಸಂಗ್ರಹವಾಗುತ್ತಿದ್ದರೂ ಅದನ್ನು ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಖರ್ಚು ಮಾಡದೆ, ಅಧಿಕಾರಿಗಳು ಐಷಾರಾಮಿ ಜೀವನ ಸಾಗಿಸುತ್ತಿರುವುದು ದುಃಖಕರ' ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಮೂರ್ತಿಗಳು 'ಮುಂದಿನ ವಿಚಾರಣೆ ವೇಳೆ ಈ ಕುರಿತ ಸಮಗ್ರ ವಿವರಗಳನ್ನು ನ್ಯಾಯಪೀಠಕ್ಕೆ ಒದಗಿಸಬೇಕು' ಎಂದು ಆದೇಶಿಸಿದರು.

ಪ್ರಕರಣವೇನು?: ಈ ಹಿಂದಿನ ಅಂದರೆ 2024ರ ಏಪ್ರಿಲ್ 23ರಂದು ಈ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ನಾಗಪ್ರಸನ್ನ ಅವರು, 'ನಾಲ್ಕು ವಾರ ದೊಳಗೆ ಎಲ್.ಎಲ್.ಬಿ ಹಾಗೂ ಎಂ.ಬಿ.ಎ ವಿದ್ಯಾಭ್ಯಾಸ ಮಾಡುತ್ತಿರುವ ಇಬ್ಬರು ಅರ್ಜಿದಾರ ವಿದ್ಯಾರ್ಥಿನಿಯರಿಗೆ ದಂಡಸಹಿತ ಶೈಕ್ಷಣಿಕ ಧನಸಹಾಯ ಪಾವತಿಸಬೇಕು' ಎಂದು 'ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ'ಗೆ ಆದೇಶಿಸಿದ್ದರು.

ಈ ಆದೇಶದ ನಂತರ ಅರ್ಜಿಯು ಪುನಃ ಇದೇ 7ರಂದು ವಿಚಾರಣೆಗೆ ನಿಗದಿಯಾಗಿತ್ತು. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಅದಿತ್ಯ ಚಟರ್ಜಿ, 'ಹೈಕೋರ್ಟ್ ನೀಡಿದ್ದ ಮಧ್ಯಂತರ ಆದೇಶ ಪಾಲನೆಯಾಗಿಲ್ಲ' ಎಂದು ಪೀಠದ ಗಮನಕ್ಕೆ ತಂದರು.

ಈ ಮಾತಿಗೆ ವ್ಯಗ್ರವಾದ ನ್ಯಾಯಮೂರ್ತಿ ಮಧ್ಯಂತರ ಆದೇಶ ಜಾರಿ ಮಾಡಲು ವಿಫಲವಾದ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ವಿರುದ್ಧ ಕಿಡಿ ಕಾರಿದರು. 'ಮುಂದಿನ ವಿಚಾರಣೆಯ ಸಂದರ್ಭದಲ್ಲಿ ಕಲ್ಯಾಣ ಮಂಡಳಿಯಲ್ಲಿ ಸಂಗ್ರಹವಾಗಿರುವ ₹6,700 ಕೋಟಿ ಹಣ ಇದೆ, ಅದು ಹೊಂದಿರುವ ಬ್ಯಾಂಕ್ ಖಾತೆಯ ವಿವರಗಳು ಹಾಗೂ ಯಾವ ಸೌಲಭ್ಯಗಳಿಗೆ ಎಷ್ಟು ಖರ್ಚು ಮಾಡಲಾಗುತ್ತಿದೆ ಎನ್ನುವ ವಿವರಗಳನ್ನು ಒಳಗೊಂಡ ಪ್ರಮಾಣ ಪತ್ರವನ್ನು ಸಲ್ಲಿಸಿ' ಎಂದು ಸರ್ಕಾರದ ಪರ ವಕೀಲರಿಗೆ ಆದೇಶಿಸಿದರು. ವಿಚಾರಣೆಯನ್ನು ಇದೇ 14ಕ್ಕೆ ಮುಂದೂಡಲಾಗಿದೆ.

₹8,200 ಕೋಟಿ ಇದ್ದರೂ ಪ್ರಯೋಜನವಾಗಿಲ್ಲ...

'ಕಾರ್ಮಿಕರ ಶ್ರಮದಿಂದ ಸಂಗ್ರಹವಾಗಿರುವ ₹ 8,200 ಕೋಟಿ ಕಲ್ಯಾಣ ನಿಧಿ ಇದ್ದರೂ ಅವರ ಮಕ್ಕಳಿಗೆ ನ್ಯಾಯಬದ್ಧವಾಗಿ ನೀಡಬೇಕಾದ ಶೈಕ್ಷಣಿಕ ಧನಸಹಾಯ ನಿರಾಕರಿಸುತ್ತಿರುವುದನ್ನು ಯಾವ ಕಾರಣದಿಂದಲೂ ಸಮರ್ಥನೆ ಮಾಡಲು ಸಾಧ್ಯವಿಲ್ಲ' ಎಂದು ನ್ಯಾಯಪೀಠ ಈ ಹಿಂದಿನ ವಿಚಾರಣೆ ವೇಳೆ ಅಸಮಾಧಾನ ಹೊರಹಾಕಿತ್ತು. 'ಅಂದಂದಿನ ತುತ್ತು ಅನ್ನವನ್ನು ಅಂದೇ ದುಡಿದು ತಿನ್ನುವ ಬಡವರ್ಗದ ವಿದ್ಯಾರ್ಥಿನಿಯರ ಶೈಕ್ಷಣಿಕ ಧನಸಹಾಯ ಕೋರಿದ ಅರ್ಜಿಗಳನ್ನು ಕಳೆದ 10 ತಿಂಗಳಿನಿಂದ ಶೈತ್ಯಾಗಾರದಲ್ಲಿ ಇರಿಸಿದ ನಿಮ್ಮ ನಿಲುವು ಭಯಾನಕವಾದದ್ದು' ಎಂದು ಆಘಾತ ವ್ಯಕ್ತಪಡಿಸಿತ್ತು.

ಕರಾವಳಿಗೆ ಮುಂಗಾರಿನ ತಂಪು

ಮಂಗಳೂರು/ಮಡಿಕೇರಿ: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಾದ್ಯಂತ ಮಳೆ ಮುಂದುವರಿದಿದ್ದು, ಕರಾವಳಿ ಪ್ರದೇಶವನ್ನು ತಂಪಾಗಿಸಿದೆ. ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಪ್ರದೇಶದಲ್ಲಿ ಅಬ್ಬರದ ಮಳೆಯಾಗಿದೆ. ಕೊಡಗು ಜಿಲ್ಲೆಯ ಕೆಲವೆಡೆ ಸೋಮವಾರ ಸಾಧಾರಣ ಮಳೆ ಮುಂದುವರಿದಿದೆ.

ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಸೋಮವಾರ ಬೆಳಗಿನ ಅವಧಿಯಲ್ಲಿ ಬಿರುಸಿನ ಮಳೆಯಾಗಿದ್ದು, ಮಧ್ಯಾಹ್ನದ ನಂತರ ಆಗಾಗ ತುಂತುರು ಮಳೆಯಾಯಿತು.

ಸೋಮವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡ 24 ಗಂಟೆಗಳ ಅವಧಿಯಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ 10 ಸೆಂ.ಮೀ, ಕಾರ್ಕಳ ತಾಲ್ಲೂಕಿನಲ್ಲಿ 9.4 ಸೆಂ.ಮೀ, ಕಾಪು ತಾಲ್ಲೂಕಿನಲ್ಲಿ 9.2 ಸೆಂ.ಮೀ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ 8.5 ಸೆಂ.ಮೀ ದಾಖಲಾಗಿದೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನೊಳಗೊಂಡ ಕರಾವಳಿ ಜಿಲ್ಲೆಗಳಲ್ಲಿ ಮಂಗಳವಾರ ಭಾರಿ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರು, ಮೂಡಿಗೆರೆ, ಕಳಸ, ಶೃಂಗೇರಿ, ಎನ್.ಆರ್.ಪುರ ಭಾಗದಲ್ಲಿ ಉತ್ತಮ ಮಳೆಯಾಗಿದೆ. ಕೆರೆಕಟ್ಟೆಯಲ್ಲಿ 8 ಸೆಂ.ಮೀ ಮಳೆಯಾಗಿದೆ. ಕಡೂರು, ಬೀರೂರು, ತರೀಕೆರೆ, ಅಜ್ಜಂಪುರ ಭಾಗದಲ್ಲಿ ಮೋಡ ಕವಿದ ವಾತಾವರಣ ಇತ್ತು, ತುಂತುರು ಮಳೆಯಾಗಿದೆ.



ಸತತ ಮಳೆ ನೀರು ಹೆದ್ದಾರಿ ಬದಿಯಿಂದ ಹರಿದು ಅರಬ್ಬಿ ಸಮುದ್ರ ಸೇರುವ ಮಾರ್ಗದಲ್ಲಿ ಕಾರವಾರದ ಟ್ಯಾಗೋರ್ ಕಡಲತೀರದ ಬಳಿ ನೈಸರ್ಗಿಕ ಕಾಲುವೆ ಸೃಷ್ಟಿಯಾಗಿದೆ. – ಪ್ರಜಾವಾಣಿ ಚಿತ್ರ, ದಿಲೀಪ್ ರೇವಣಕರ್

ಜಲಪಾತದಲ್ಲಿ ಜಾರಿ ಬಿದ್ದು ಯುವಕ ಸಾವು

ಚಿಕ್ಕಮಗಳೂರು: ಕೆಮ್ಮಣ್ಣುಗುಂಡಿ ಬಳಿ ಇರುವ ಹೆಬ್ಬೆ ಜಲಪಾತ ವೀಕ್ಷಣೆಗೆ ತೆರಳಿದ್ದ ಹೈದರಾಬಾದ್‌ನ ಶ್ರವಣ್ (25) ಕಾಲುಜಾರಿ ನೀರಿಗೆ ಬಿದ್ದು ಮೃತಪಟ್ಟಿದ್ದಾರೆ.

ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಶ್ರವಣ್ ಮತ್ತು ಶ್ರೀಕಾಂತ್ ಚಿಕ್ಕಮಗಳೂರಿಗೆ ಭಾನುವಾರ ಬಂದಿದ್ದರು. ಬಾಡಿಗೆ ಬೈಕ್ ಪಡೆದು ಸುತ್ತಾಡುತ್ತಿದ್ದ ಅವರು, ಸೋಮವಾರ ಕೆಮ್ಮಣ್ಣುಗುಂಡಿ ಭಾಗದ ಹೆಬ್ಬೆ ಜಲಪಾತ ವೀಕ್ಷಣೆಗೆ ತೆರಳಿದ್ದರು.

ಜಲಪಾತದಲ್ಲಿ ಆಟವಾಡುತ್ತಿದ್ದಾಗ ಕಾಲುಜಾರಿ ನೀರಿಗೆ ಬಿದ್ದು ಶ್ರವಣ್ ಮೃತಪಟ್ಟಿದ್ದಾರೆ. ತರೀಕೆರೆಯಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಮಲ್ಲಂದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಜಯಪುರ ವರದಿ: ಜಿಲ್ಲೆಯಾದ್ಯಂತ ಭಾನುವಾರ ರಾತ್ರಿ ಗುಡುಗು, ಸಿಡಿಲಿನೊಂದಿಗೆ ಸುರಿದ ಧಾರಾಕಾರ ಮಳೆಗೆ ಹಳ್ಳ, ಕೊಳ್ಳಗಳು ತುಂಬಿ ಹರಿದಿವೆ. ವಿಜಯಪುರದಲ್ಲಿ ಸಾಧಾರಣ ಮತ್ತು ಇಂಡಿ ತಾಲ್ಲೂಕಿನ ನಿಂಬಾಳದಲ್ಲಿ 12.8 ಸೆಂ.ಮೀ ಮಳೆ ಆಗಿದೆ.

ದೇವರಹಿಪ್ಪರಗಿಯ ಮುಳಸಾವಳಗಿಯಲ್ಲಿ 11.75 ಸೆಂ.ಮೀ, ಇಂಡಿ ತಾಲ್ಲೂಕಿನ ಬಬಲಾದಿ–11.65, ಸಿಂದಗಿ ತಾಲ್ಲೂಕಿನ ಬ್ಯಾಕೋಡ–11.6, ಚಡಚಣ ತಾಲ್ಲೂಕಿನ ದೇವರ ನಿಂಗರಗಿಯಲ್ಲಿ 10.15 ಸೆಂ.ಮೀ ಮಳೆಯಾಗಿದೆ.

ಕುಲಕರ್ಣಿ ವಿರುದ್ಧ ದೋಷಾರೋಪ ನಿಗದಿ ರದ್ದತಿಗೆ ನಕಾರ

ನವದೆಹಲಿ (ಪಿಟಿಐ): ಬಿಜೆಪಿ ಕಾರ್ಯಕರ್ತ ಯೋಗೇಶ್ ಗೌಡ ಗೌಡರ ಹತ್ಯೆ ಪ್ರಕರಣದಲ್ಲಿ ರಾಜ್ಯದ ಮಾಜಿ ಸಚಿವ ವಿನಯ ಕುಲಕರ್ಣಿ ಅವರ ವಿರುದ್ಧ ವಿಶೇಷ ನ್ಯಾಯಾಲಯದಲ್ಲಿ ನಿಗದಿಯಾಗಿರುವ ದೋಷಾರೋಪವನ್ನು ರದ್ದುಪಡಿಸಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

2016ರಲ್ಲಿ ಧಾರವಾಡದಲ್ಲಿ ಯೋಗೇಶ್ ಅವರನ್ನು ಹತ್ಯೆ ಮಾಡಲಾಗಿತ್ತು. ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇದ್ದ ರಜಾಕಾಲದ ವಿಭಾಗೀಯ ಪೀಠವು ಕರ್ನಾಟಕ ಹೈಕೋರ್ಟ್ ನೀಡಿದ ಆದೇಶದಲ್ಲಿ ಮಾರ್ಪಾಡು ಮಾಡಲು ನಿರಾಕರಿಸಿತು.

ಕುಲಕರ್ಣಿ ವಿರುದ್ಧ ವಿಶೇಷ ನ್ಯಾಯಾಲಯವು ದೋಷಾರೋಪ ನಿಗದಿ ಮಾಡಿರುವುದರಲ್ಲಿ ಮಧ್ಯಪ್ರವೇಶ ಮಾಡಲು ಹೈಕೋರ್ಟ್ ಏಪ್ರಿಲ್ 8ರಂದು ನಿರಾಕರಿಸಿತ್ತು. ವಿಚಾರಣೆಯನ್ನು ಪೂರ್ಣಗೊಳಿಸಿ, ಕ್ರಿಮಿನಲ್ ಪ್ರಕರಣ ವನ್ನು ಸಾಧ್ಯ ಆದಷ್ಟುಮಟ್ಟಿಗೆ ಮೂರು ತಿಂಗಳಲ್ಲಿ ಇತ್ಯರ್ಥಪಡಿಸುವಂತೆ ವಿಚಾರಣಾ ನ್ಯಾಯಾಲಯಕ್ಕೆ ಸೂಚಿಸಿತ್ತು.

ಕೆಪಿಎಸ್‌ಸಿ ಸದಸ್ಯರಾಗಿ ಶಿವನಗೌಡ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಸದಸ್ಯರಾಗಿ ಅಬಕಾರಿ ಇಲಾಖೆಯ ನಿವೃತ್ತ ಉಪ ಆಯುಕ್ತ ಶಿವನಗೌಡ ಅವರನ್ನು ನೇಮಿಸಿ ಅಧಿಸೂಚನೆ ಹೊರಡಿಸಲಾಗಿದೆ. ರಾಯಚೂರು ಜಿಲ್ಲೆ ದೇವದುರ್ಗದ ಜಾಲಹಳ್ಳಿಯವರಾದ, ಶಿವನಗೌಡ ಅವರನ್ನು ಅಧಿಕಾರಿ ವಿಭಾಗದಿಂದ ನೇಮಿಸಲಾಗಿದೆ. ನೇಮಕ ಕುರಿತು ಮಾರ್ಚ್ 12ರಂದೇ ಮುಖ್ಯಮಂತ್ರಿ ಸಿದ್ದರಾಮಯ್ಯ ಟಿಪ್ಪಣಿ ಕಳುಹಿಸಿದ್ದರು. ನೀತಿಸಂಹಿತೆ ಇದ್ದುದರಿಂದ ನೇಮಕ ಅಧಿಸೂಚನೆ ಪ್ರಕಟ ಆಗಿರಲಿಲ್ಲ.

ಜನರ ತೀರ್ಪು ನಮಗೆ ಎಚ್ಚರಿಕೆ ಗಂಟೆ, ತಪ್ಪು ತಿದ್ದಿಕೊಳ್ಳೋಣ: ಡಿಕೆಶಿ

'ಶಾಸಕರೇ ಬಾಯ್ಮುಚ್ಕೊಂಡ್ ಇರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭೆ ಚುನಾವಣೆಯಲ್ಲಿ ಪಕ್ಷಕ್ಕೆ ಆಗಿರುವ ಹಿನ್ನಡೆ ವಿಚಾರದಲ್ಲಿ ಶಾಸಕರು ಮರ್ಯಾದೆಯಿಂದ ಬಾಯ್ಮುಚ್ಕೊಂಡು ಕುಳಿತುಕೊಂಡರೆ ಬಹಳ ಒಳ್ಳೆಯದು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದರು.



ಡಿ.ಕೆ. ಶಿವಕುಮಾರ್

'ತಮ್ಮ ಕ್ಷೇತ್ರದಲ್ಲಿ ಮುನ್ನಡೆ ಕೊಡಿಸದ ಸಚಿವರಿಂದ ರಾಜೀನಾಮೆ ಪಡೆಯಲಿ' ಎಂಬ ಚನ್ನಗಿರಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಸವರಾಜು ಶಿವಗಂಗಾ ನೀಡಿರುವ ಹೇಳಿಕೆಯ ಬಗ್ಗೆ ಸುದ್ದಿಗಾರರು ಪ್ರಸ್ತಾಪಿಸಿದಾಗ ಸಿಡಿಮಿಡಿಗೊಂಡ ಶಿವಕುಮಾರ್, 'ಅನಗತ್ಯವಾಗಿ ಬಹಿರಂಗ ಹೇಳಿಕೆಗಳನ್ನು ನೀಡಬಾರದು' ಎಂದು ಸೂಚನೆ ನೀಡಿದರು.

'ಸೋಲಿಗೆ ಕೆಲವು ಶಾಸಕರು ಕಾರಣವೆಂದು ಸಚಿವರು ದೂರು ನೀಡಿದ್ದಾರೆಯೇ' ಎಂದು ಪ್ರಶ್ನಿಸಿದಾಗ, 'ನನ್ನ ಬಳಿ ಬಂದು ಯಾರೊಬ್ಬರೂ ದೂರು ನೀಡಿಲ್ಲ. ಯಾರ ಮೇಲೆ ದೂರು ನೀಡಿದರೂ ಸುಖವಿಲ್ಲ, ಪ್ರಯೋಜನವೂ ಇಲ್ಲ. ಕ್ಷೇತ್ರಗಳ ಜವಾಬ್ದಾರಿ ತೆಗೆದುಕೊಂಡವರು ಕಾರ್ಯಕರ್ತರ ಬಳಿ ಮಾತನಾಡಿ, ಎಲ್ಲಿ ತಪ್ಪಾಗಿದೆ ಎಂದು ಪರಿಶೀಲಿಸಿ, ಪರಿಹಾರ ಸಮೇತ ಉತ್ತರ ಕೊಡಬೇಕು. ಅಷ್ಟೇ' ಎಂದರು.

'ಪ್ರಮುಖ ನಾಯಕರ ಕ್ಷೇತ್ರಗಳಲ್ಲಿ ನಿರೀಕ್ಷೆಯಂತೆ ಮತ ಗಳಿಸಲು ಸಾಧ್ಯವಾಗಿಲ್ಲ. ನನ್ನ ಕ್ಷೇತ್ರದ ಅನೇಕ ನಾಯಕರ ಊರಿನಲ್ಲಿಯೇ ನಿರೀಕ್ಷಿತ ಮಟ್ಟಕ್ಕೆ ಮತಗಳು ಬಂದಿಲ್ಲ. ಇದಕ್ಕೆ ಏನಾದರೂ ಒಂದು ಸಬೂಬು ಹೇಳಿದರೆ ಯಾರೂ ಕೇಳುವುದಿಲ್ಲ. ಆದ ಕಾರಣ ಪರಿಶೀಲನೆ ನಡೆಸುತ್ತೇವೆ' ಎಂದರು.

'ಲೋಕಸಭೆ ಚುನಾವಣೆಯಲ್ಲಿ ಜನರ ತೀರ್ಪು ನಮಗೆ ಎಚ್ಚರಿಕೆ ಗಂಟೆ. ನಮ್ಮಿಂದ ಎಲ್ಲಿ ತಪ್ಪಾಗಿದೆ ಎಂದು ಪರಾಮರ್ಶೆ ನಡೆಸಿ ಅದನ್ನು ಸರಿಪಡಿಸಿಕೊಳ್ಳಬೇಕಿದೆ. ಚುನಾವಣಾ ಫಲಿತಾಂಶದ ಕುರಿತು ಮುಂದಿನ ದಿನಗಳಲ್ಲಿ ಎಲ್ಲ ನಾಯಕರ ಜೊತೆ ಪರಾಮರ್ಶೆ ಸಭೆ ನಡೆಸಲಾಗುವುದು. ಸೋಲು ಸೋಲೇ. ಎಲ್ಲಿ ತಪ್ಪಾಗಿದೆ, ಫಲಿತಾಂಶದಲ್ಲಿ ಏಕೆ ಹೆಚ್ಚು ಕಮ್ಮಿಯಾಗಿದೆ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ' ಎಂದರು.

'ಮುಂದಿನ ದಿನಗಳಲ್ಲಿ ಬೇರೆ ಬೇರೆ ಜಿಲ್ಲೆಗಳ ನಾಯಕರ ಜೊತೆ ಸಭೆ ನಡೆಸಲಾಗುವುದು. ಶೀಘ್ರವೇ ಸಭೆಗೆ ದಿನ ನಿಗದಿಪಡಿಸುತ್ತೇವೆ. ಎಲ್ಲೆಲ್ಲಿ ಏನಾಗಿದೆ ಎನ್ನುವ ಸತ್ಯಶೋಧನೆ ಮತ್ತು ಪರಿಹಾರ ಹುಡುಕುವ ಕೆಲಸ ಮಾಡುತ್ತೇವೆ' ಎಂದೂ ಹೇಳಿದರು.

ಕರ್ನಾಟಕ, ಹಿಮಾಚಲ ಪ್ರದೇಶದಲ್ಲಿ ಪಕ್ಷಕ್ಕೆ ಹಿನ್ನಡೆ ಆಗಿರುವುದಕ್ಕೆ ಎಐಸಿಸಿ ಅಧ್ಯಕ್ಷರು ಬೇಸರ ವ್ಯಕ್ತಪಡಿಸಿರುವ ಬಗ್ಗೆ ಪ್ರಸ್ತಾಪಿಸಿದಾಗ, 'ನಾವು 14- 15 ಸ್ಥಾನಗಳನ್ನು ಗೆಲ್ಲುತ್ತೇವೆ ಎನ್ನುವ ವಿಶ್ವಾಸವಿತ್ತು. ಆದರೆ, ನಿರೀಕ್ಷಿತ ಸ್ಥಾನಗಳನ್ನು ಗಳಿಸಲು ವಿಫಲರಾಗಿದ್ದೇವೆ. ಜನರ ತೀರ್ಪಿಗೆ ನಾವು ತಲೆಬಾಗಲೇ ಬೇಕು' ಎಂದರು.

ಅಭ್ಯರ್ಥಿ ಗೆಲ್ಲಿಸದ ಸಚಿವರನ್ನು ಕೈಬಿಡಿ: ಚನ್ನಗಿರಿ ಶಾಸಕ

ದಾವಣಗೆರೆ: 'ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ತಾವು ಪ್ರತಿನಿಧಿಸುವ ವಿಧಾನಸಭಾ ಕ್ಷೇತ್ರಗಳಲ್ಲೇ ಲೀಡ್ ಕೊಡಿಸದಿರುವ ಹಾಗೂ ಪಕ್ಷವನ್ನು ಗೆಲ್ಲಿಸದಿರುವ ಸಚಿವರನ್ನು ಸಂಪುಟ ದಿಂದ ಕೈಬಿಟ್ಟು, ಹೊಸಬರಿಗೆ ಅವಕಾಶ ನೀಡಬೇಕು' ಎಂದು ಚನ್ನಗಿರಿಯ ಕಾಂಗ್ರೆಸ್ ಶಾಸಕ ಬಸವರಾಜು ಶಿವಗಂಗಾ ಆಗ್ರಹಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೆಪಿಸಿಸಿ ಅಧ್ಯಕ್ಷರು ಪ್ರತಿಯೊಬ್ಬ ಸಚಿವರಿಗೂ, ಕ್ಷೇತ್ರದ ಅಭ್ಯರ್ಥಿಯನ್ನು ಗೆಲ್ಲಿಸುವ ಜವಾಬ್ದಾರಿ ನೀಡಿದ್ದರು. ಆದರೆ, ಅಭ್ಯರ್ಥಿಗಳನ್ನು ಗೆಲ್ಲಿಸುವುದಿರಲಿ, ಸಚಿವರು ಪ್ರತಿನಿಧಿಸುವ ವಿಧಾನಸಭಾ ಕ್ಷೇತ್ರಗಳಲ್ಲೇ ಪಕ್ಷಕ್ಕೆ ಲೀಡ್ ಕೊಡಿಸಿಲ್ಲ. ಅಂಥ ಸಚಿವರು ರಾಜೀನಾಮೆ ನೀಡಬೇಕು' ಎಂದು ಒತ್ತಾಯಿಸಿದರು.

'ರಾಹುಲ್ ಗಾಂಧಿ ಹಾಗೂ ಪಕ್ಷದ ಹಿರಿಯ ನಾಯಕರು ಇಂತಹ ಸಚಿವರ ವಿರುದ್ಧ ಕ್ರಮ ಕೈಗೊಳ್ಳಬೇಕು. ನಮಗೆ ಪಕ್ಷ ಮುಖ್ಯವೇ ಹೊರತು, ವ್ಯಕ್ತಿ ಮುಖ್ಯವಲ್ಲ. 5 ಗ್ಯಾರಂಟಿ ಯೋಜನೆಗಳನ್ನು ನೀಡಿದರೂ ಹೆಚ್ಚು ಸೀಟು ಬಂದಿಲ್ಲ. ಕಾರ್ಯಕರ್ತರೊಂದಿಗೆ ಹಗಲಿರುಳು ಶ್ರಮಿಸಿ ನಮ್ಮ ಕ್ಷೇತ್ರಗಳಲ್ಲಿ ಲೀಡ್ ಕೊಡಿಸಿದ್ದೇವೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ತಾವು ಪ್ರತಿನಿಧಿಸುವ ದಾವಣಗೆರೆ ಉತ್ತರ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಲೀಡ್ ಕೊಡಿಸದಿದ್ದರೂ, ಅವರನ್ನು ಗೆಲ್ಲಿಸಿದ್ದಾರೆ' ಎಂದರು.

'ಅದೃಷ್ಟದ ಬಂಗಲೆ'ಗೆ ಡಿಕೆಶಿ ಪ್ರವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಲೋಕಸಭಾ ಚುನಾವಣೆಯಲ್ಲಿ ಹಿನ್ನಡೆ ಅನುಭವಿಸಿದ ಬೆನ್ನಲ್ಲೇ ರಾಜಕೀಯ ವಲಯದಲ್ಲಿ 'ಅದೃಷ್ಟದ ಬಂಗಲೆ' ಎಂದೇ ಖ್ಯಾತಿ ಪಡೆದಿರುವ ಕುಮಾರ ಪಾರ್ಕ್‌ನ 01 ಸಂಖ್ಯೆಯ ಸರ್ಕಾರಿ ಮನೆ ಪ್ರವೇಶಿಸಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದು ವರ್ಷ ಕಳೆದಿದೆ. ಆರಂಭದಲ್ಲೇ ಶಿವಕುಮಾರ್ ಅವರಿಗೆ ಕುಮಾರ ಪಾರ್ಕ್ ಪೂರ್ವದಲ್ಲಿ ರೈಲ್ವೆ ಹಳಿ ಪಕ್ಕದಲ್ಲೇ ಇರುವ 01ನೇ ಸಂಖ್ಯೆಯ ಬಂಗಲೆಯನ್ನು ಹಂಚಿಕೆ ಮಾಡಲಾಗಿತ್ತು. ಒಂದು ವರ್ಷದಿಂದ ಅಲ್ಲಿಗೆ ಕಾಲಿಡದೇ ಇದ್ದ ಅವರು, ಸೋಮವಾರ ಬಂಗಲೆ ಪ್ರವೇಶ ಮಾಡಿದ್ದಾರೆ.

ಎಸ್. ಬಂಗಾರಪ್ಪ, ಧರ್ಮಸಿಂಗ್, ಸಿದ್ದರಾಮಯ್ಯ ಸೇರಿದಂತೆ ರಾಜ್ಯದ ಹಲವು ನಾಯಕರು ಕುಮಾರ ಪಾರ್ಕ್ ಪೂರ್ವದ 01ನೇ ಸಂಖ್ಯೆಯ ಬಂಗಲೆಯಲ್ಲಿ ನೆಲೆಸಿದ ಬಳಿಕ ಮುಖ್ಯಮಂತ್ರಿ ಹುದ್ದೆಗೇರಿದ್ದರು. ಇದೇ ಕಾರಣಕ್ಕಾಗಿ ಈ ಬಂಗಲೆಗಾಗಿ ರಾಜಕೀಯ ನಾಯಕರ ಮಧ್ಯೆ ಕಿತ್ತಾಟ ನಡೆದಿದ್ದೂ ಇದೆ.

ಬಿ.ಎಸ್. ಯಡಿಯೂರಪ್ಪ ಅವರು ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಈ ಬಂಗಲೆಯಲ್ಲಿದ್ದ ಆಗಿನ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಅಲ್ಲಿಂದ ಹೊರಕ್ಕೆ ಕಳುಹಿಸಿ, ಅದೃಷ್ಟದ ಬಂಗಲೆಯನ್ನು ಸಚಿವರಾಗಿದ್ದ ಶೋಭಾ ಕರಂದ್ಲಾಜೆ ಅವರಿಗೆ ಹಂಚಿಕೆ ಮಾಡುವ ಪ್ರಯತ್ನವೂ ನಡೆದಿತ್ತು.

ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಅವರು ಮುಖ್ಯಮಂತ್ರಿ ಗಾದಿಗೆ ಏರಲೇಬೇಕೆಂಬ ಪ್ರಯತ್ನದಲ್ಲಿದ್ದಾರೆ. 'ಅದೃಷ್ಟ'ದ ಬಂಗಲೆ ಪ್ರವೇಶಿಸಿದರೆ ಕನಸು ಕೈಗೂಡುವುದು ಸುಲಭವಾಗಬಹುದು ಎಂಬ ಕಾರಣದಿಂದ ಸರ್ಕಾರಿ ನಿವಾಸ ಬಳಕೆ ಆರಂಭಿಸಿದ್ದಾರೆ ಎಂಬ ವಿಶ್ಲೇಷಣೆ ರಾಜಕೀಯ ವಲಯದಲ್ಲಿ ನಡೆದಿದೆ.

'ಬದಲಾವಣೆ ಬಯಸಿ ಜನ ಮತ ಹಾಕಿದ್ದಾರೆ'

ಬೆಂಗಳೂರು: 'ಲೋಕಸಭೆ ಚುನಾವಣೆಯಲ್ಲಿ ಮತದಾರರು ನೀಡಿದ ತೀರ್ಪನ್ನು ನಾವು ಗೌರವಿಸುತ್ತೇವೆ. ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಹಾಲಿ ಸಂಸದ ಡಿ.ಕೆ. ಸುರೇಶ್ ಅವರು ಉತ್ತಮ ಕೆಲಸ ಮಾಡಿದ್ದರು. ಆದರೂ ಜನ ಬದಲಾವಣೆ ಬಯಸಿ ಮತ ಹಾಕಿದ್ದಾರೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಸುರೇಶ್ ಅವರ ಸೋಲಿನ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ರಾಜ್ಯದ ಇತಿಹಾಸದಲ್ಲಿ ಯಾರ್‍ಯಾರೋ ಸೋತಿದ್ದಾರೆ. ಶಾಂತವೇರಿ ಗೋಪಾಲಗೌಡರು, ನಿಜಲಿಂಗಪ್ಪ ಸೇರಿ ಅನೇಕರು ಸೋತಿಲ್ಲವೇ?' ಎಂದರು.

'ಒಂದು ಸ್ಥಾನ ಇದ್ದ ನಾವು ಈ ಬಾರಿ ಒಂಬತ್ತು ಸ್ಥಾನಗಳನ್ನು ಗೆದ್ದಿದ್ದೇವೆ. ಅದು ಸಮಾಧಾನದ ವಿಷಯ. ಆದರೆ, ಇನ್ನೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ನಿರೀಕ್ಷೆ ಇತ್ತು' ಎಂದರು.

'ಗ್ಯಾರಂಟಿಗಳಿಂದ ಜನರಿಗೆ ಅನುಕೂಲ ಆಗಿದೆ. ಅದರಿಂದ ರಾಜಕೀಯವಾಗಿ ಅನುಕೂಲ ಆಗಿದೆಯೊ, ಬಿಟ್ಟಿದೆಯೊ ಗೊತ್ತಿಲ್ಲ' ಎಂದೂ ಹೇಳಿದರು.

ಶಿಗ್ಗಾವಿ ಅಭ್ಯರ್ಥಿ ಪಕ್ಷದ ತೀರ್ಮಾನ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಪ್ರತಿನಿಧಿಸುತ್ತಿದ್ದ ಶಿಗ್ಗಾವಿ ವಿಧಾನಸಭಾ ಕ್ಷೇತ್ರದಲ್ಲಿ ಯಾರು ಸ್ಪರ್ಧೆ ಮಾಡಬೇಕು ಎನ್ನುವುದನ್ನು ಪಕ್ಷ ತೀರ್ಮಾನ ಮಾಡುತ್ತದೆ' ಎಂದು ಹಾವೇರಿ–ಗದಗ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

'ನಮ್ಮ ಕುಟುಂಬದವರು ಅಭ್ಯರ್ಥಿ-ಆಗಬೇಕೆಂದು ನಾವು ಬೇಡಿಕೆ ಇಟ್ಟಿಲ್ಲ. ನಾನು ಮಾಜಿ ಆಗಿರುವುದರಿಂದ ನನ್ನ ಮಗ ಭರತ್ ಹೆಸರು ಕೇಳಿ ಬರುತ್ತಿದೆ' ಎಂದು ಅವರು ಸುದ್ದಿಗಾರರ ಜತೆ ಮಾತನಾಡಿ ತಿಳಿಸಿದರು.

'ನಾವು ಯಾವುದೇ ಬೇಡಿಕೆ ಇಟ್ಟಿಲ್ಲ. ಅಲ್ಲಿ ಪಕ್ಷ ಸಮೀಕ್ಷೆ ಮಾಡಿ ಯಾರು ಗೆಲ್ಲುತ್ತಾರೆ ಅನ್ನುವುದನ್ನು ನೋಡಿಕೊಂಡು ಟಿಕೆಟ್ ನೀಡಲಿ. ಯಾರಿಗೇ ಟಿಕೆಟ್ ನೀಡಿದರೂ ಗೆಲ್ಲಿಸಿಕೊಂಡು ಬರುವ ಕೆಲಸ ಮಾಡುತ್ತೇವೆ. ಅಲ್ಲದೇ, ಆ ಕ್ಷೇತ್ರದಲ್ಲಿ ಯಾರೇ ಶಾಸಕನಾದರೂ, ಯಾರೇ ಮಂತ್ರಿ ಆದರೂ ಆ ಕ್ಷೇತ್ರದ ಜನತೆಯ ಜೊತೆಗೆ ಅವಿನಾಭಾವ ಸಂಬಂಧ ಇದೆ. ನಾನು ಆ ಕ್ಷೇತ್ರದ ಪ್ರತಿ ಮನೆಯ ಅಣ್ಣ, ತಮ್ಮ, ಮಗ ಆಗಿದ್ದೇನೆ. ಹೀಗಾಗಿ ಆ ಕ್ಷೇತ್ರದ ಜೊತೆಗೆ ಯಾವಾಗಲೂ ಇರುತ್ತೇನೆ' ಎಂದು ಹೇಳಿದರು.

'ಈ ಬಾರಿ ಮೈತ್ರಿ ಪಾಲನೆ ಅಗತ್ಯವಿದೆ. ಪಕ್ಷದವರು ನಮ್ಮಿಂದ ಸಹಕಾರ ಬಯಸಿದ್ದರು. ನಾವು ಸಹಕಾರ ನೀಡಿದ್ದೇವೆ. ಮೋದಿಯವರು ನವ ಭಾರತ ಕಟ್ಟುವ ಗುರಿ ಹೊಂದಿದ್ದಾರೆ. ಆ ದೊಡ್ಡ ಗುರಿಯ ಮುಂದೆ, ನಮ್ಮ ಬಯಕೆ ಏನೇ ಇದ್ದರೂ ಅದನ್ನು ಒಪ್ಪಿಕೊಳ್ಳಬೇಕು' ಎಂದರು.

ಸೋಮಣ್ಣ ಅವರಿಗೆ ಸಚಿವ ಸ್ಥಾನ ನೀಡಿರುವ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿ ಅವರು, 'ಸೋಮಣ್ಣ ಅವರಿಗೆ ಸಚಿವ ಸ್ಥಾನ ನೀಡಿದ್ದರಲ್ಲಿ ಅಚ್ಚರಿಯೇನಲ್ಲ. ಅವರು ಹೋರಾಟಗಾರರು. ವಿಧಾನಸಭಾ ಚುನಾವಣೆಯಲ್ಲಿ ಸೋತಿದ್ದರು. ಹೋರಾಟ ಮಾಡಿ ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಅಂತರದಿಂದ ಗೆದ್ದು ಬಂದಿದ್ದಾರೆ. ಅವರ ಅನುಭವಕ್ಕೆ ಅವಕಾಶ ದೊರೆತಿದೆ. ಅವರ ಅನುಭವದ ಸೇವೆ ದೇಶಕ್ಕೆ ಸಿಗುತ್ತದೆ' ಎಂದರು.

ಮಹಿಳೆಯರಿಗೆ ಹರ್ಷ ತಂದ 'ಶಕ್ತಿ'ಗೆ ವರ್ಷ

ಒಂದನೇ ಪುಟದಿಂದ...

ಬಿಎಂಟಿಸಿಯಲ್ಲಿ ಪ್ರಯಾಣಿಕರು ಅತಿ ಹೆಚ್ಚು ಬಾರಿ (71.49 ಕೋಟಿ) ಪ್ರಯಾಣಿಸಿದ್ದಾರೆ. ಆದರೆ, ಟಿಕೆಟ್ ಮೌಲ್ಯದ ಲೆಕ್ಕದಲ್ಲಿ ಬಿಎಂಟಿಸಿ ಕೊನೇ (₹937 ಕೋಟಿ) ಸ್ಥಾನದಲ್ಲಿದೆ. ಸಂಚಾರದ ವ್ಯಾಪ್ತಿ ನಗರಕ್ಕೆ ಸೀಮಿತವಾಗಿರುವುದು ಇದಕ್ಕೆ ಕಾರಣ. ಕೆಎಸ್‌ಆರ್‌ಟಿಸಿಯಲ್ಲಿ 68.22 ಕೋಟಿ, ಎನ್‌ಡಬ್ಲ್ಯುಕೆಆರ್‌ಟಿಸಿಯಲ್ಲಿ 52.14 ಕೋಟಿ ಹಾಗೂ ಕೆಕೆಆರ್‌ಟಿಸಿಯಲ್ಲಿ 33.29 ಕೋಟಿ ಬಾರಿ ಮಹಿಳೆಯರು ಸಂಚರಿಸಿದ್ದಾರೆ. ಟಿಕೆಟ್ ಮೌಲ್ಯದ ಲೆಕ್ಕದಲ್ಲಿ ಕೆಎಸ್‌ಆರ್‌ಟಿಸಿ ಮೊದಲ (₹2,070 ಕೋಟಿ) ಸ್ಥಾನದಲ್ಲಿದೆ. ಎನ್‌ಡಬ್ಲ್ಯುಕೆಆರ್‌ಟಿಸಿ (₹1,352 ಕೋಟಿ), ಕೆಕೆಆರ್‌ಟಿಸಿ (₹1,130 ಕೋಟಿ) ನಂತರದ ಸ್ಥಾನಗಳಲ್ಲಿವೆ.

ಶಕ್ತಿ ಯೋಜನೆಯಿಂದ ಆದಾಯ ಶೇ 42.5 ಇದ್ದರೆ, 'ಶಕ್ತಿ'ಯೇತರ ಪ್ರಯಾಣಿಕರಿಂದ ಶೇ 57.5 ಆದಾಯ ಅಂದರೆ ₹2,764 ಕೋಟಿ ಗಳಿಸಿದೆ. ಯೋಜನೆಯಿಂದ ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಳವಾಗುವುದರ ಜೊತೆಗೆ ಪುರುಷರ ಪ್ರಯಾಣಿಕರ ಸಂಖ್ಯೆಯೂ ಹೆಚ್ಚಿರುವುದು ಇದಕ್ಕೆ ಕಾರಣ.

ಕೆಎಸ್‌ಆರ್‌ಟಿಸಿಗೆ ಲಾಭ: 'ಶಕ್ತಿ' ಯೋಜನೆ ಜಾರಿ ಮಾಡಿದ ಮೇಲೆ ಕೆಎಸ್‌ಆರ್‌ಟಿಸಿಗೆ ಲಾಭವಾಗಿದೆ. ಬಸ್‌ಗಳು ಶೇ 50ರಿಂದ ಶೇ 60ರಷ್ಟು ಮಾತ್ರ ಭರ್ತಿಯಾಗುತ್ತಿದ್ದವು. ಯೋಜನೆ ಜಾರಿಯಾದ ಮೇಲೆ ಶೇ 85ರಷ್ಟು ಭರ್ತಿಯಾಗುತ್ತಿವೆ. ಹಿಂದೆ ರಜಾದಿನಗಳು, ಹಬ್ಬದ ದಿನಗಳಲ್ಲಿ ಬಸ್‌ಗಳು ತುಂಬಿದ್ದು, ವಾರದ ಮಧ್ಯದ ದಿನಗಳಲ್ಲಿ ಹೆಚ್ಚು ಖಾಲಿ ಇರುತ್ತಿದ್ದವು. ಈಗ ಎಲ್ಲ ದಿನಗಳಲ್ಲಿಯೂ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ. ಕೆಎಸ್‌ಆರ್‌ಟಿಸಿ ವರಮಾನ ಹಿಂದೆ ದಿನಕ್ಕೆ ₹9.7 ಕೋಟಿ ಇದ್ದಿದ್ದು, ಶಕ್ತಿ ಜಾರಿಯಾದ ಮೇಲೆ ₹13.9 ಕೋಟಿಗೆ ಏರಿಕೆಯಾಗಿದೆ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ತಿಳಿಸಿದರು.

ಎಲ್ಲೋ ಬೆರಳೆಣಿಕೆಯ ಪ್ರಕರಣಗಳನ್ನು ಹೊರತುಪಡಿಸಿ ನಮ್ಮ ನೌಕರರು ಪ್ರಯಾಣಿಕರೊಂದಿಗೆ ಅತ್ಯುತ್ತಮವಾಗಿ ನಡೆದುಕೊಂಡಿದ್ದಾರೆ. ವಾರದ ರಜೆ, ಹಬ್ಬದ ದಿನಗಳಲ್ಲಿಯೂ ಕೆಲಸ ಮಾಡಿ ಚಾಲಕರು, ನಿರ್ವಾಹಕರು, ತಾಂತ್ರಿಕ ಸಿಬ್ಬಂದಿ ಸರ್ಕಾರಕ್ಕೆ ಉತ್ತಮ ಹೆಸರು ತಂದಿದ್ದಾರೆ. ಯೋಜನೆಯ ಯಶಸ್ಸಿನಲ್ಲಿ ನೌಕರರ ಪಾತ್ರ ದೊಡ್ಡದು ಎಂದು ಅವರು ಶ್ಲಾಘಿಸಿದರು.

'9,000 ಹುದ್ದೆ ಭರ್ತಿಗೆ ನಿರ್ಧಾರ'

ಹಿಂದಿನ ಸರ್ಕಾರ ಖಾಲಿ ಹುದ್ದೆಗಳನ್ನು ತುಂಬಿರಲಿಲ್ಲ. ಚಾಲಕರು, ನಿರ್ವಾಹಕರು, ತಾಂತ್ರಿಕ ಸಿಬ್ಬಂದಿ ಸೇರಿ ನಾಲ್ಕು ನಿಗಮಗಳಲ್ಲಿ 9,000 ಹುದ್ದೆಗಳನ್ನು ಭರ್ತಿ ಮಾಡಲು ನಿರ್ಧಾರ ಕೈಗೊಂಡಿದ್ದೇವೆ. 2,000 ಹುದ್ದೆಗಳನ್ನು ಈಗಾಗಲೇ ತುಂಬಲಾಗಿದೆ. ಉಳಿದವು ನೇಮಕಾತಿ ಪ್ರಕ್ರಿಯೆಯಲ್ಲಿದೆ. 5,800 ಹೊಸ ಬಸ್‌ಗಳನ್ನು ಖರೀದಿ ಮಾಡಲಾಗುತ್ತಿದ್ದು, ಅದರಲ್ಲಿ ಈಗಾಗಲೇ 2,400 ಬಸ್ ಖರೀದಿಯಾಗಿದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾಹಿತಿ ನೀಡಿದರು.

ಟಿಕೆಟ್ ದರ ಏರಿಸುವ ಬಗ್ಗೆ ಸದ್ಯ ಯಾವ ನಿರ್ಧಾರವನ್ನೂ ಕೈಗೊಂಡಿಲ್ಲ. ಎಲ್ಲ ನಾಲ್ಕು ನಿಗಮಗಳಿಂದ ಪ್ರಸ್ತಾವ ಬರಬೇಕು. ಬಂದ ಮೇಲೆ ಪರಿಶೀಲಿಸಲಾಗುವುದು ಎಂದು ಪ್ರತಿಕ್ರಿಯಿಸಿದರು.

ಟಿಕೆಟ್ ದರ ಏರಿಕೆ?

ಡೀಸೆಲ್ ದರ ಏರಿಕೆಯಾಗಿದೆ. ಅದಕ್ಕೆ ಸರಿಯಾಗಿ ಟಿಕೆಟ್ ಮೌಲ್ಯ ಹೆಚ್ಚಳ ಮಾಡಬೇಕಿತ್ತು. 4 ವರ್ಷಗಳಿಂದ ಹೆಚ್ಚಿಸಿಲ್ಲ. ಈ ವರ್ಷ ಹೆಚ್ಚಿಸಲು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದರು.

2020ರ ಫೆಬ್ರುವರಿಯಲ್ಲಿ ಟಿಕೆಟ್ ದರ ಏರಿಸಲಾಗಿತ್ತು. ಈಗ ಡೀಸೆಲ್‌ಗೆ ದಿನಕ್ಕೆ ₹4.98 ಕೋಟಿ ಬೇಕಾಗಿದೆ.ನೌಕರರ ವೇತನದ ವೆಚ್ಚ ನಾಲ್ಕು ವರ್ಷಗಳ ಹಿಂದೆ ದಿನಕ್ಕೆ ₹4.57 ಕೋಟಿ ಇದ್ದಿದ್ದು, ಈಗ ₹5.87 ಕೋಟಿಗೆ ಏರಿಕೆಯಾಗಿದೆ. ಡೀಸೆಲ್ ಮತ್ತು ನೌಕರರ ವೇತನ ವೆಚ್ಚ ಸೇರಿ ದಿನಕ್ಕೆ ₹2.45 ಕೋಟಿ ಹೆಚ್ಚಾಗಿದ್ದು, ಅದಕ್ಕೆ ಸರಿಯಾಗಿ ಟಿಕೆಟ್ ದರ ಏರಿಸುವುದು ಅನಿವಾರ್ಯ. ಈ ಬಗ್ಗೆ ಸರ್ಕಾರ ನಿರ್ಧಾರ ಕೈಗೊಳ್ಳಬೇಕಿದೆ ಎಂದು ವಿವರಣೆ ನೀಡಿದರು.

ಕಾರ್ಯಕರ್ತರಿಗೆ ಚೂರಿ ಇರಿತ: ವಿಜಯೇಂದ್ರ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳದಲ್ಲಿ ಮೂಲಭೂತವಾದಿಗಳು ನಮ್ಮ ಕಾರ್ಯಕರ್ತರಿಗೆ ಚೂರಿಯಿಂದ ಇರಿದು ಅಟ್ಟಹಾಸ ಮೆರೆದಿದ್ದಾರೆ. ಅವರನ್ನು ಉಗ್ರ ಶಿಕ್ಷೆಗೆ ಗುರಿಪಡಿಸಬೇಕು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದ್ದಾರೆ.

ಪ್ರಧಾನಿ ಮೋದಿಯವರ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದ ಸಂಭ್ರಮಾಚರಣೆ ಮುಗಿಸಿ ಬರುವಾಗ ಕಾರ್ಯಕರ್ತರ ಮೇಲೆ ದುರುಳರಿಂದ ಹಲ್ಲೆ ನಡೆದಿದೆ ಎಂದು ಅವರು 'ಎಕ್ಸ್' ಮೂಲಕ ಖಂಡಿಸಿದ್ದಾರೆ.

ಆಡಳಿತದಲ್ಲಿ ಬಿಗಿ ಕಳೆದುಕೊಂಡ ಪರಿಣಾಮ ದುಷ್ಕರ್ಮಿಗಳ ಅಟ್ಟಹಾಸ ಮೇರೆ ಮೀರುತ್ತಿದೆ. ಮೂಲಭೂತವಾದಿ ಕಿಡಿಗೇಡಿ ಗಳು ಕಾಂಗ್ರೆಸ್ ಸರ್ಕಾರದ ಓಲೈಕೆ ನಿಲುವುಗಳಿಂದ ಕಾನೂನು ಕುಣಿಕೆಯ ಭಯವಿಲ್ಲದ ಕಾರಣದಿಂದಲೇ ದುಷ್ಕೃತ್ಯಗಳಲ್ಲಿ ತೊಡಗಿದ್ದಾರೆ. ಇವರನ್ನು ಶಿಕ್ಷೆಗೆ ಒಳಪಡಿಸದಿದ್ದರೆ ಹೋರಾಟದ ಮೂಲಕವೇ ಉತ್ತರ ಹೇಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

'ಲೈಂಗಿಕ ದೌರ್ಜನ್ಯ – ಅತ್ಯಾಚಾರ' ಎಸಗಿದ ಆರೋಪ: ಎಸ್‌ಐಟಿ ಕಸ್ಟಡಿ ಅವಧಿ ಅಂತ್ಯ

ಪರಪ್ಪನ ಅಗ್ರಹಾರ ಜೈಲಿಗೆ ಪ್ರಜ್ವಲ್ ರೇವಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರ' ಪ್ರಕರಣದ ಆರೋಪಿ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಸದ್ಯ ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದ್ದಾರೆ.

ಪ್ರಜ್ವಲ್ ಅವರನ್ನು ಸೋಮವಾರ ಸಂಜೆ ಬಿಗಿಭದ್ರತೆಯಲ್ಲಿ ಕರೆದೊಯ್ದು ಕೇಂದ್ರ ಕಾರಾಗೃಹಕ್ಕೆ ಎಸ್‌ಐಟಿ ಅಧಿಕಾರಿಗಳು ಬಿಟ್ಟು ಬಂದರು. ಭದ್ರತಾ ದೃಷ್ಟಿಯಿಂದ ಜೈಲಿನ ಮುಂಭಾಗದ ರಸ್ತೆಯಲ್ಲಿ ಬ್ಯಾರಿಕೇಡ್ ಅಳವಡಿಸಿ, ಸಾರ್ವಜನಿಕರ ಓಡಾಟ ನಿರ್ಬಂಧಿಸಲಾಗಿತ್ತು.

ಹೊಳೆನರಸೀಪುರ ಟೌನ್ ಹಾಗೂ ಸಿಐಡಿ ಠಾಣೆಗಳಲ್ಲಿ ದಾಖಲಾಗಿರುವ 'ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರ' ಪ್ರಕರಣದಲ್ಲಿ ಪ್ರಜ್ವಲ್ ಅವರನ್ನು ಮೇ 31ರಂದು ಎಸ್‌ಐಟಿ ಬಂಧಿಸಿತ್ತು. ಮರುದಿನ ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗೆ 10 ಕಸ್ಟಡಿಗೆ ಪಡೆದುಕೊಂಡಿತ್ತು.

ಎಸ್‌ಐಟಿ ಕಸ್ಟಡಿ ಅವಧಿ ಸೋಮವಾರಕ್ಕೆ ಮುಗಿದಿದ್ದರಿಂದ ಪ್ರಜ್ವಲ್ ಅವರನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ನ್ಯಾಯಾಲಯವು 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿ ಆದೇಶಿಸಿದ್ದು ಅವರನ್ನು ಜೈಲಿಗೆ ಕಳುಹಿಸಲಾಯಿತು. ಎಸ್‌ಐಟಿ ಕಸ್ಟಡಿ ಅವಧಿಯಲ್ಲಿ ಪ್ರಜ್ವಲ್ ಅವರನ್ನು ವಿವಿಧ ಸ್ಥಳಗಳಿಗೆ ಕರೆದೊಯ್ದು ಮಹಜರು ನಡೆಸಲಾಗಿತ್ತು.


ಪ್ರಜ್ವಲ್ ರೇವಣ್ಣ

ಅತ್ಯಾಚಾರ ಪ್ರಕರಣ ದಾಖಲಾದ ಮೇಲೆ ಬಂಧನದ ಭೀತಿಯಲ್ಲಿದ್ದ ಪ್ರಜ್ವಲ್, ಲೋಕಸಭೆ ಚುನಾವಣೆ ಮತದಾನದ ನಂತರ ದೇಶದಿಂದ ಪರಾರಿಯಾಗಿ ತಲೆಮರೆಸಿಕೊಂಡಿದ್ದರು. 34 ದಿನಗಳು ಜರ್ಮನಿಯಲ್ಲಿದ್ದರು. ಇವರ ಬಂಧನಕ್ಕೆ ಬ್ಲ್ಯೂ ಕಾರ್ನರ್ ನೋಟಿಸ್ ಹಾಗೂ ನ್ಯಾಯಾಲಯದಿಂದ ವಾರಂಟ್ ಜಾರಿ ಮಾಡಲಾಗಿತ್ತು. ಅದಾದ ನಂತರ ವಿದೇಶದಿಂದಲೇ ವಿಡಿಯೊ ಬಿಡುಗಡೆ ಮಾಡಿ, 'ಮೇ 31ರಂದು ಎಸ್‌ಐಟಿ ಮುಂದೆ ವಿಚಾರಣೆಗೆ ಹಾಜರಾಗುತ್ತೇನೆ' ಎಂದು ಹೇಳಿದ್ದರು. 31ರಂದು ತಡರಾತ್ರಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಾಗ ಅವರನ್ನು ಎಸ್‌ಐಟಿ ಅಧಿಕಾರಿಗಳು ಬಂಧಿಸಿದ್ದರು.

ಪ್ರಜ್ವಲ್ ಅವರನ್ನು ಜೈಲಿಗೆ ದಾಖಲು ಮಾಡಿಕೊಂಡಿರುವ ಸಿಬ್ಬಂದಿ, ಅವರಿಗೆ ವಿಚಾರಣಾಧೀನ ಕೈದಿ ನಂಬರ್ ನೀಡಿದ್ದಾರೆ. ಜೈಲಿನ ಬ್ಯಾರಕ್‌ನಲ್ಲಿ ಸಹ ಕೈದಿಗಳ ಜೊತೆಯಲ್ಲಿ ಅವರನ್ನು ಇರಿಸಿದ್ದಾರೆ. ಜೈಲಿನಲ್ಲಿ ಇತರೆ ಕೈದಿಗಳಿಗೆ ನೀಡುವ ಊಟವನ್ನೇ ಇವರಿಗೂ ನೀಡಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಸ್ಥಳ ಮಹಜರು: ಸೋಮವಾರ ನ್ಯಾಯಾಲಯಕ್ಕೆ ಹಾಜರುಪಡಿಸುವುದಕ್ಕೂ ಮುನ್ನ ನಗರದ ಬಸವನಗುಡಿಯಲ್ಲಿರುವ ಮನೆಗೆ ಪ್ರಜ್ವಲ್ ಅವರನ್ನು ಕರೆದೊಯ್ದು ಎಸ್‌ಐಟಿ ಅಧಿಕಾರಿಗಳು ಸ್ಥಳ ಮಹಜರು ನಡೆಸಿದರು. ಅದೇ ಮನೆಯಲ್ಲಿ ಭವಾನಿ ರೇವಣ್ಣ ಇದ್ದರೂ ಪುತ್ರನನ್ನು ಮಾತನಾಡಿಸಲು ಸಾಧ್ಯವಾಗಲಿಲ್ಲ. ಹೊಳೆನರಸೀಪುರ ಹಾಗೂ ಕೆಆರ್ ನಗರಕ್ಕೆ ತೆರಳದಂತೆ ಹೈಕೋರ್ಟ್ ಷರತ್ತು ವಿಧಿಸಿದ್ದರಿಂದ ಬಸವನಗುಡಿಯ ಮನೆಯಲ್ಲಿ ಭವಾನಿ ವಾಸ್ತವ್ಯ ಮಾಡಿದ್ದಾರೆ.

ಕೋಣೆಗೆ ಹೋಲಿಸಿ ಪರಿಶೀಲನೆ: 'ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದ ಅಶ್ಲೀಲ ವಿಡಿಯೊಗಳಲ್ಲಿ ಪುರುಷನ ಮುಖ ಪ್ರದರ್ಶಿಸಿಲ್ಲ. ಹೀಗಾಗಿ, ವಿಡಿಯೊದಲ್ಲಿರುವ ಕೊಠಡಿಗೂ, ಬಸವನಗುಡಿಯ ಮನೆಯಲ್ಲಿರುವ ಕೋಣೆಗೂ ಹೋಲಿಕೆ ಮಾಡಿ ಸ್ಥಳ ಮಹಜರು ನಡೆಸಲಾಗಿದೆ. ಮನೆಯ ಕೆಲವು ಸ್ಥಳಗಳನ್ನು ಸಾಕ್ಷಿಯಾಗಿ ಪರಿಗಣಿಸುವ ಉದ್ದೇಶದಿಂದ ಈ ಪ್ರಕ್ರಿಯೆ ಮಹತ್ವದ್ದಾಗಿದೆ' ಎಂದು ಮೂಲಗಳು ಹೇಳಿವೆ.

ವಿಚಾರಣೆ ಇದೇ 12ಕ್ಕೆ ಮುಂದೂಡಿಕೆ

'ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರ ಆರೋಪದ ಪ್ರಕರಣಕ್ಕೆ ಸಂಬಂಧಿಸಿದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸ್ವತಂತ್ರ ತನಿಖಾ ಸಂಸ್ಥೆಯಿಂದ ತನಿಖೆ ನಡೆಸಲು ನಿರ್ದೇಶಿಸಬೇಕು' ಎಂದು ಕೋರಲಾದ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಇದೇ 12ಕ್ಕೆ ಮುಂದೂಡಿದೆ.

ಈ ಸಂಬಂಧ 'ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ'ದ (ಕೆಆರ್‌ಎಸ್‌ಪಿ) ಉಪಾಧ್ಯಕ್ಷ ಎಸ್.ಎಚ್.ಲಿಂಗೇಗೌಡ ಸಲ್ಲಿಸಿದ್ದ ರಿಟ್ ಅರ್ಜಿಯು, ಸೋಮವಾರ ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ವಿಚಾರಣೆಗೆ ನಿಗದಿಯಾಗಿತ್ತು. ಆದರೆ, ಕಾಲಾವಕಾಶದ ಕೊರತೆಯ ಕಾರಣ ವಿಚಾರಣೆಯನ್ನು ಇದೇ 12ಕ್ಕೆ ಮುಂದೂಡಲಾಯಿತು.

ಪ್ರಜ್ವಲ್ ಕೈದಿ ನಂಬರ್ 5664

ಪ್ರಜ್ವಲ್ ರೇವಣ್ಣಗೆ ಜೈಲಿನ ಅಧಿಕಾರಿಗಳು ವಿಚಾರಣಾಧೀನ ಕೈದಿ 5664 ನಂಬರ್ ನೀಡಿದ್ದಾರೆ. 'ಪ್ರಜ್ವಲ್ ಅವರ ತಂದೆ ಎಚ್.ಡಿ.ರೇವಣ್ಣ ಅವರನ್ನೂ ಅಪಹರಣ ಪ್ರಕರಣದಲ್ಲಿ ಬಂಧಿಸಿ, ಇದೇ ಜೈಲಿಗೆ ಕಳುಹಿಸಲಾಗಿತ್ತು. ರೇವಣ್ಣ ಅವರಿಗೆ ಅನಾರೋಗ್ಯದ ಕಾರಣಕ್ಕೆ ಕೆಲವು ಸೌಲಭ್ಯ ಕಲ್ಪಿಸಲಾಗಿತ್ತು. ಸೌಲಭ್ಯ ನೀಡಲು ನ್ಯಾಯಾಲಯ ಸಹ ಅನುಮತಿ ನೀಡಿತ್ತು. ಈಗ ಪ್ರಜ್ವಲ್‌ಗೆ ಯಾವುದೇ ಸೌಲಭ್ಯ ಕಲ್ಪಿಸುತ್ತಿಲ್ಲ' ಎಂದು ಮೂಲಗಳು ಹೇಳಿವೆ.

ಸ್ವಾಮೀಜಿ ಕೊಲೆ: ಪಾನಮತ್ತ ಸಹಾಯಕನಿಂದ ಕೃತ್ಯ ಶಂಕೆ

ಪ್ರಜಾವಾಣಿ ವಾರ್ತೆ


ಶಿವಾನಂದ ಸ್ವಾಮೀಜಿ


ರವಿ

ಮೈಸೂರು: ಇಲ್ಲಿನ ಸಿದ್ಧಾರ್ಥನಗರ ಸಮೀಪದ ಬನ್ನೂರು ರಸ್ತೆಯಲ್ಲಿರುವ ಅನ್ನದಾನೇಶ್ವರ ಮಠದ ಶಿವಾನಂದ ಸ್ವಾಮೀಜಿ (92) ಅವರನ್ನು ಸೋಮವಾರ ಮಾರಕಾಸ್ತ್ರದಿಂದ ಕೊಚ್ಚಿ ಬರ್ಬರವಾಗಿ ಕೊಲೆ ಮಾಡಲಾಗಿದೆ. ಅವರ ಸಹಾಯಕ ರವಿ (60) ಕೊಲೆ ಆರೋಪಿ ಎನ್ನಲಾಗಿದೆ.

'ಸ್ವಾಮೀಜಿ 50 ವರ್ಷದಿಂದ ಮಠದ ಕಾರ್ಯಗಳನ್ನು ನಿಭಾಯಿಸಿಕೊಳ್ಳುತ್ತಿದ್ದರು. ತಮಗೆ ನೆರವಾಗಲೆಂದು ಆರೋಪಿಯನ್ನು 3 ವರ್ಷದ ಹಿಂದೆ ಸೇರಿಸಿಕೊಂಡಿದ್ದರು. ಆತ ನಿತ್ಯ ಸಂಬಂಧಿಕರ ಮನೆಯಿಂದ ಆಹಾರ ತರುತ್ತಿದ್ದ, ಪೂಜೆಗೆ ಸಹಾಯ ಮಾಡುತ್ತಿದ್ದ' ಎಂದು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ತಿಳಿಸಿದರು.

'ಆಹಾರ ಪದಾರ್ಥ ತರಲು ಆರೋಪಿಯು ಬಾರದ ಕಾರಣ ಸಂಬಂಧಿಕರು ಕರೆ ಮಾಡಿದ್ದರು. ಆತ ಸ್ಪಂದಿಸದಿದ್ದಾಗ ತಾವೇ ಮಠಕ್ಕೆ ಬಂದ ವೇಳೆ ಕೊಲೆ ಬೆಳಕಿಗೆ ಬಂತು. ಮಠದ ಆವರಣದಲ್ಲೇ ಇದ್ದ ಆರೋಪಿಯು ಪಾನಮತ್ತನಾಗಿದ್ದು, ಜೊತೆಗೆ ವಿಷಪಾನವನ್ನೂ ಕುಡಿದಿದ್ದರಿಂದ ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿದೆ. ಬಟ್ಟೆಯ ಮೇಲಿನ ರಕ್ತದ ಕಲೆ ಹಾಗೂ ಇನ್ನಿತರ ಸಾಕ್ಷ್ಯ ಆಧರಿಸಿ ಆತನೇ ಕೊಲೆ ಮಾಡಿರಬಹುದೆಂದು ಶಂಕಿಸಲಾಗಿದೆ. ಆತ ಗುಣಮುಖನಾದ ಬಳಿಕ ಕೊಲೆಯ ಕಾರಣ ಗೊತ್ತಾಗಲಿದೆ' ಎಂದರು. ನಜರ್‌ಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಂಗ್ರೆಸ್ ಕಾರ್ಯಕರ್ತ ಆತ್ಮಹತ್ಯೆ

ಬಿಡದಿ (ರಾಮನಗರ): ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಗೆಲ್ಲುತ್ತಾರೆ ಎಂದು ಸುಮಾರು ಒಂದು ಕೋಟಿ ಹಣವನ್ನು ಬೆಟ್ಟಿಂಗ್‌ನಲ್ಲಿ ಸೋತ ಕಾಂಗ್ರೆಸ್ ಕಾರ್ಯಕರ್ತರೊಬ್ಬರು ಸೋಮವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತಾಲ್ಲೂಕಿನ ಕೆಂಚನಗುಪ್ಪೆ ಬಳಿಯ ಜನತಾ ಕಾಲೊನಿ ನಿವಾಸಿ ಶಿವರಾಜು (42) ಅವರ ಶವ ಪಟ್ಟಣದ ಧನಲಕ್ಷ್ಮಿ ವಸತಿ ಗೃಹದಲ್ಲಿ ಪತ್ತೆಯಾಗಿದೆ.

ಹೆಣ್ಣು ಭ್ರೂಣ ಹತ್ಯೆ ಆರೋಪಿ ಸೆರೆ


ಆಶಾ

ಮೇಲುಕೋಟೆ (ಮಂಡ್ಯ ಜಿಲ್ಲೆ): ತಾಲ್ಲೂಕಿನಲ್ಲಿ ಇತ್ತೀಚೆಗೆ ನಡೆದ ಹೆಣ್ಣು ಭ್ರೂಣ ಪತ್ತೆ ಹಾಗೂ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿ, ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬೇಮಂಗಲ ಗ್ರಾಮದ ಆಶಾ ಶಿವರಾಜ್ (50) ಎಂಬುವವರನ್ನು ಪೊಲೀಸರು ಇತ್ತೀಚೆಗೆ ಬಾಳೆಹೊನ್ನೂರಿನಲ್ಲಿ ಬಂಧಿಸಿದ್ದಾರೆ.

ಆಕೆ ಗರ್ಭಪಾತಕ್ಕೆ ಸಂಬಂಧಿಸಿದ ಮಾತ್ರೆಗಳನ್ನು ಪೂರೈಸುತ್ತಿದ್ದರು ಎಂದು ಆರೋಪಿಸಲಾಗಿದೆ.

ಮೇ 30ರಂದು ಶ್ರೀರಂಗಪಟ್ಟಣ ತಾಲ್ಲೂಕಿನ ಕೆ.ಶೆಟ್ಟಹಳ್ಳಿಯ ರವಿಕುಮಾರ್ ಅವರ ಪತ್ನಿ ಮಾಲಾಶ್ರೀ ತೀವ್ರ ರಕ್ತಸ್ರಾವದಿಂದ ಪಟ್ಟಣದ ಉಪವಿಭಾಗೀಯ ಆಸ್ಪತ್ರೆಗೆ ದಾಖಲಾಗಿದ್ದ ಸಂದರ್ಭದಲ್ಲಿ, ಪ್ರಕರಣ ಬೆಳಕಿಗೆ ಬಂದಿತ್ತು. ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಬೆಟ್ಟಸ್ವಾಮಿ ನೀಡಿದ ದೂರಿನ ಮೇರೆಗೆ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಕಲುಷಿತ ಕುಡಿಯುವ ನೀರು ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಲುಷಿತ ಕುಡಿಯುವ ನೀರು ಪೂರೈಕೆಯಾಗುತ್ತಿದೆ' ಎಂದು ಆಕ್ಷೇಪಿಸಲಾದ ಸಾರ್ವಜನಿಕ ಅರ್ಜಿಯ ಕುರಿತಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ರಮೇಶ್ ಎಲ್. ನಾಯಕ್ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ, ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಜುಲೈ 1ಕ್ಕೆ ಮುಂದೂಡಿದೆ.

'ರಾಯಚೂರು, ಚಿತ್ರದುರ್ಗ, ಮತ್ತು ತುಮಕೂರು ಜಿಲ್ಲೆಗಳಲ್ಲಿ ಕುಡಿಯುವ ನೀರು ಕಲುಷಿತಗೊಳ್ಳುತ್ತಿರುವ ಪ್ರಕರಣ ಮರುಕಳಿಸುತ್ತಿವೆ. ಆದ್ದರಿಂದ, ಕುಡಿಯುವ ನೀರು ಮಲಿನವಾಗದಂತೆ ಅಗತ್ಯ ಕ್ರಮಕ್ಕೆ ನಿರ್ದೇಶಿಸಬೇಕು. ಸಾರ್ವಜನಿಕರಿಗೆ ಕುಡಿಯುವ ನೀರು ಪೂರೈಕೆಯಾಗುತ್ತಿರುವ ನೀರಿನ ಮೂಲಗಳನ್ನು ಆಗಾಗ್ಗೆ ಪರಿಶೀಲಿಸಬೇಕು. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ನೀರು ಸಂಗ್ರಹಾಗಾರಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸಲು ಸೂಚಿಸಬೇಕು' ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿದೆ.

'ರಾಯಚೂರಿನಲ್ಲಿ 2022ರ ಜೂನ್‌ನಲ್ಲಿ ಕಲುಷಿತ ನೀರು ಕುಡಿದು ನಾಲ್ವರು ಸಾವನ್ನಪ್ಪಿದ್ದರು. 2023ರ ಮೇನಲ್ಲಿ ದೇವದುರ್ಗ ತಾಲ್ಲೂಕಿನ ರೇಕಲಮರಡಿ ಗ್ರಾಮದಲ್ಲಿ 3 ವರ್ಷದ ಮಗು ಸಾವನ್ನಪ್ಪಿತ್ತು. 2023ರ ಜುಲೈ ತಿಂಗಳಲ್ಲಿ ಚಿತ್ರದುರ್ಗ ಜಿಲ್ಲೆಯ ಕವಾಡಿಗರ ಹಟ್ಟಿಯಲ್ಲಿ ಕಲುಷಿತ ನೀರು ಕುಡಿದ ಕಾರಣಕ್ಕೆ ಆರು ಮಂದಿ ಸಾವಿಗೀಡಾಗಿದ್ದರು. ಶುದ್ಧ ಕುಡಿಯುವ ನೀರು ಪೂರೈಕೆಯಲ್ಲಿ ಸರ್ಕಾರದ ಪ್ರಾಧಿಕಾರಗಳು ನಿರ್ಲಕ್ಷ್ಯ ತೋರುತ್ತಿವೆ. ಇದು ಸಂವಿಧಾನದ 21ನೇ ವಿಧಿಯ ಉಲ್ಲಂಘನೆ' ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

ಬಿಜೆಪಿ ಕಾರ್ಯಕರ್ತರಿಗೆ ಚೂರಿ ಇರಿತ: ಐವರ ಬಂಧನ

ಒಂದನೇ ಪುಟದಿಂದ...

'ವಿಜಯೋತ್ಸವ ನಿರತ ಬಿಜೆಪಿ ಕಾರ್ಯಕರ್ತರು ಬೋಳಿಯಾರ್ ಮಸೀದಿ ಬಳಿ ಧ್ವನಿವರ್ಧಕದಲ್ಲಿ ಗಟ್ಟಿಯಾಗಿ ಹಾಡುಗಳನ್ನು ಹಾಕಿದ್ದಲ್ಲದೇ, ಕೆಲ ಹೊತ್ತು ಘೋಷಣೆ ಕೂಗಿದ್ದರು. 20-30 ಮುಸ್ಲಿಂ ಯುವಕರ ಗುಂಪು ಅವರನ್ನು ಬೈಕ್‌ಗಳಲ್ಲಿ ಹಿಂಬಾಲಿಸಿತ್ತು. ಬೋಳಿಯಾರ್ ಸಮಾಧಾನ್ ಬಾರ್ ಆ್ಯಂಡ್ ರೆಸ್ಟೋರೆಂಟ್ ಬಳಿ ಬಿಜೆಪಿ ಕಾರ್ಯಕರ್ತರನ್ನು ಮುಸ್ಲಿಂ ಯುವಕರು ಅಡ್ಡಗಟ್ಟಿದ್ದರು. ಎರಡು ಗುಂಪುಗಳ ನಡುವೆ ವಾಗ್ವಾದ ನಡೆದಿತ್ತು. ಈ ವೇಳೆ ಹರೀಶ್ ಹಾಗೂ ನಂದ ಕುಮಾರ್ ಅವರಿಗೆ ಚೂರಿಯಿಂದ ಇರಿದು, ಕಿಶನ್ ಕುಮಾರ್ ಮೇಲೆ ಹಲ್ಲೆ ನಡೆಸಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

ಬೋಳಿಯಾರ್‌ನಲ್ಲಿ ಸಶಸ್ತ್ರ ಮೀಸಲು ಪಡೆಯ ಮೂರು ವಾಹನಗಳು ಬೀಡು ಬಿಟ್ಟಿವೆ. ಕೃತ್ಯ ನಡೆಸಿದವರನ್ನು ಬಂಧಿಸುವಂತೆ ಆಗ್ರಹಿಸಿ ಬಿಜೆಪಿಯ ಕಾರ್ಯಕರ್ತರು ಕೊಣಾಜೆ ಠಾಣೆಗೆ ಭಾನುವಾರ ರಾತ್ರಿ ಮುತ್ತಿಗೆ ಹಾಕಿದ್ದರು.

ಬೆಳಗಾವಿ ಸೋಲು: ಸಿ.ಎಂ ಕ್ಷಮೆ ಕೇಳಿದರು–ಲಕ್ಷ್ಮೀ ಹೆಬ್ಬಾಳಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಸೋಲಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕ್ಷಮೆ ಕೇಳಿದ್ದಾರೆ. ಅದು ಅವರ ದೊಡ್ಡ ಗುಣ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಸೋಮವಾರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು,'ಬೆಳಗಾವಿ ನಾಯಕರ ಜೊತೆ ಭೇಟಿಯಾದಾಗ ಮುಖ್ಯಮಂತ್ರಿ 'ಸಾರಿ' ಎಂದು ಪ್ರತಿಕ್ರಿಯಿಸಿದರು' ಎಂದರು.

'ಬೆಳಗಾವಿಯ ಚುನಾವಣಾ ಫಲಿತಾಂಶ ಗಮನಿಸಿದರೆ ಬಿಜೆಪಿ ಮತ್ತು ಎಂಇಎಸ್ ಒಂದಾದಂತೆ ಮೇಲ್ನೋಟಕ್ಕೆ ಕಾಣುತ್ತಿದೆ. 25 ವರ್ಷಗಳಿಂದಲೂ ಬೆಳಗಾವಿಯಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಎಂಇಎಸ್ ನಡುವೆ ತ್ರಿಕೋನ ಸ್ಪರ್ಧೆ ಇತ್ತು. ಈ ಬಾರಿ ಆ ರೀತಿ ಆಗಿಲ್ಲ. ಸೋಲಿಗೆ ಅನೇಕ ಕಾರಣಗಳಿವೆ' ಎಂದರು.

'ವಿಧಾನಸಭೆ ಚುನಾವಣೆಯ ವಾತಾವರಣ ಬೇರೆ, ಲೋಕಸಭಾ ಚುನಾವಣೆ ವಾತಾವರಣವೇ ಬೇರೆ. ಚುನಾವಣಾ ಲೆಕ್ಕಾಚಾರದ ಬಗ್ಗೆ ಹೇಳುವುದಾದರೆ, ಒಂದೊಂದು ಕ್ಷೇತ್ರಕ್ಕೆ ಒಂದೊಂದು ದೃಷ್ಟಿಕೋನ ಇರುತ್ತದೆ. ಆದರೆ, ಬೆಳಗಾವಿಯಲ್ಲಿ ಕಾಂಗ್ರೆಸ್ ಗೆಲುವಿಗೆ ಮೊದಲಿನಿಂದಲೂ ಉತ್ತಮ ವಾತಾವರಣ ಇತ್ತು. ಜನಬೆಂಬಲ ಕೂಡ ವ್ಯಕ್ತವಾಗಿತ್ತು. ಈ ನಡುವೆಯೂ ಫಲಿತಾಂಶ ನಮಗೆ ಕೈ ಕೊಟ್ಟಿತು' ಎಂದರು.

ಸಚಿವ ಸತೀಶ ಜಾರಕಿಹೊಳಿ ಮತ್ತು ಅಥಣಿ ಶಾಸಕ ಲಕ್ಷ್ಮಣ ಸವದಿ ನಡುವಿನ ವಾಕ್ಸಮರದ ಬಗ್ಗೆ ಕೇಳಿದ ಪ್ರಶ್ನೆಗೆ

ಪ್ರತಿಕ್ರಿಯಿಸಿದ ಅವರು, 'ನಾನು ಯಾರೊಬ್ಬರ ಪರ ಇಲ್ಲ, ಇಬ್ಬರ ಪರವಾಗಿಯೂ ಇದ್ದೇನೆ. ಇಬ್ಬರೂ ದೊಡ್ಡ ನಾಯಕರು, ಒಟ್ಟಿಗೆ ಕುಳಿತು ಮಾತಾಡಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದು ಸೂಕ್ತ' ಎಂದು ಇಬ್ಬರಿಗೂ ಮನವಿ ಮಾಡಿದರು.



ನೀಟ್, ಜೆಇಇ ಹಾಗೂ ಪಿಯು ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದ ಕಲಬುರಗಿಯ ಎಸ್‌ಬಿಆರ್ ಪಿಯು ಕಾಲೇಜಿನ ವಿದ್ಯಾರ್ಥಿಗಳನ್ನು ಸೋಮವಾರ ಸನ್ಮಾನಿಸಲಾಯಿತು. ಶರಣಬಸವಪ್ಪ ಅಪ್ಪ, ದೊಡ್ಡಪ್ಪ ಎಸ್. ಅಪ್ಪ, ದಾಕ್ಷಾಯಿಣಿ ಎಸ್. ಅಪ್ಪ, ಬಸವರಾಜ ದೇಶಮುಖ ಉಪಸ್ಥಿತರಿದ್ದರು

ಎಸ್‌ಬಿಆರ್ ವಿದ್ಯಾರ್ಥಿಗಳಿಗೆ ನಗದು ಬಹುಮಾನ, ಸನ್ಮಾನ

ಪ್ರಜಾವಾಣಿ ವಾರ್ತೆ

ಕಲಬುರಗಿ: ನೀಟ್, ಜೆಇಇ ಹಾಗೂ ಪಿಯು ದ್ವಿತೀಯ ವಾರ್ಷಿಕ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಗಳಿಸಿದ ಶರಣ ಬಸವೇಶ್ವರ ವಸತಿ ಸಂಯುಕ್ತ (ಎಸ್‌ಬಿಆರ್) ಪದವಿ ಪೂರ್ವ ಕಾಲೇಜಿನ ಸಾಧಕ ವಿದ್ಯಾರ್ಥಿಗಳನ್ನು ಇಲ್ಲಿನ ಶರಣಬಸವೇಶ್ವರ ಮಹಾದಾಸೋಹ ಸಂಸ್ಥಾನದಲ್ಲಿ ಸೋಮವಾರ ಸನ್ಮಾನಿಸಿ, ನಗದು ಬಹುಮಾನ ನೀಡಲಾಯಿತು.

ನೀಟ್ ಪರೀಕ್ಷೆಯಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಪ್ರಥಮ ಶ್ರೇಯಾಂಕ ಪಡೆದ ವಿನಯಕುಮಾರ್ (705/720) ಅವರಿಗೆ ₹1 ಲಕ್ಷ ನಗದು ಹಾಗೂ ಎರಡನೇ ಶ್ರೇಯಾಂಕ ಪಡೆದ ಪಂಚಾಕ್ಷರಿ (700/720) ಅವರಿಗೆ ₹51,000 ನಗದು, ಜೆಇಇ ಪರೀಕ್ಷೆಯಲ್ಲಿ 2,611ನೇ ರ್‍ಯಾಂಕ್ ಗಳಿಸಿದ ಶರಣರಾಜ್, ಪಿಯು ಪರೀಕ್ಷೆಯಲ್ಲಿ ಅಗ್ರ ಶ್ರೇಯಾಂಕ ಪಡೆದ ಸಮರ್ಥ (595/600), ಬನಶಂಕರಿ (590/600) ಅವರಿಗೆ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು.

ವಿದ್ಯಾರ್ಥಿಗನ್ನು ಸನ್ಮಾನಿಸಿ ಮಾತನಾಡಿದ ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘದ ಚೇರ್‌ಪರ್ಸನ್ ದಾಕ್ಷಾಯಿಣಿ ಎಸ್. ಅಪ್ಪ, 'ಜೆಇಇ ಅಡ್ವಾನ್ಸ್‌ಡ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಸಂಸ್ಥೆಯ 13 ವಿದ್ಯಾರ್ಥಿಗಳು ಐಐಟಿ ಪ್ರವೇಶಕ್ಕೆ ಅರ್ಹತೆ ಪಡೆದಿದ್ದಾರೆ. 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ವೈದ್ಯಕೀಯ ವಿಭಾಗಕ್ಕೂ ಅರ್ಹತೆ ಗಳಿಸಿದ್ದಾರೆ. ಜೆಇಇ ಮೇನ್ಸ್‌ನಲ್ಲಿ ತೇರ್ಗಡೆಯಾದ 160 ವಿದ್ಯಾರ್ಥಿಗಳಿಗೆ ಎನ್‌ಐಟಿ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ಅವಕಾಶ ಲಭಿಸಿದೆ' ಎಂದು ಹರ್ಷ ವ್ಯಕ್ತಪಡಿಸಿದರು.

ಸಂಸ್ಥಾನದ 8ನೇ ಪೀಠಾಧಿಪತಿ ಶರಣಬಸವಪ್ಪ ಅಪ್ಪ, 9ನೇ ಪೀಠಾಧಿಪತಿ ದೊಡ್ಡಪ್ಪ ಎಸ್. ಅಪ್ಪ, ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ ಉಪಸ್ಥಿತರಿದ್ದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



❦ ಸುಭಾಷಿತ ❦

ಮನುಷ್ಯರನ್ನು ಹಣ ಬದಲಿಸುವುದಿಲ್ಲ, ಅವರ ಮುಖವಾಡವನ್ನು ಕಳಚುತ್ತದೆ. ಒಬ್ಬ ಮನುಷ್ಯ ಸ್ವಾಭಾವಿಕವಾಗಿಯೇ ಸ್ವಾರ್ಥ, ಸೊಕ್ಕು ಅಥವಾ ದುರಾಸೆಯಿಂದ ಕೂಡಿದ್ದರೆ, ಹಣ ಅವನ್ನೆಲ್ಲ ಹೊರತರುತ್ತದೆ ಅಷ್ಟೆ. –ಹೆನ್ರಿ ಫೋರ್ಡ್

ಮೋದಿ ಮೂರನೇ ಅವಧಿ 'ಸಹಮತ'ವೇ ಮುನ್ನಡೆಗೆ ಸೂತ್ರ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಕೇಂದ್ರದ ನೂತನ ಸಚಿವ ಸಂಪುಟದ ಸದಸ್ಯರು ಪ್ರಮಾಣವಚನ ಸ್ವೀಕರಿಸುವುದರೊಂದಿಗೆ, ತಿಂಗಳುಗಳ ಕಾಲ ನಡೆದ ಲೋಕಸಭಾ ಚುನಾವಣಾ ಪ್ರಕ್ರಿಯೆಯು ಅಂತ್ಯ ಕಂಡಿದೆ. ಸತತ ಮೂರನೆಯ ಬಾರಿಗೆ ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿರುವ ಮೋದಿ ಅವರು ಈ ಬಾರಿ ಮೈತ್ರಿ ಸರ್ಕಾರದ ಮುಖ್ಯಸ್ಥರಾಗಿದ್ದಾರೆ. ಅವರ ಸಂಪುಟದಲ್ಲಿ 71 ಸದಸ್ಯರು ಇದ್ದಾರೆ. ಹಿಂದಿನ ಸಂಪುಟದಲ್ಲಿ ಇದ್ದ ಹಿರಿಯ ಸಚಿವರ ಪೈಕಿ ಬಹುತೇಕರನ್ನು ಮೋದಿ ಅವರು ಈ ಬಾರಿಯೂ ಉಳಿಸಿಕೊಂಡಿದ್ದಾರೆ. ಜೆಡಿಯುಳ್ಳ, ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ (ಎನ್‌ಡಿಎ) ಸದಸ್ಯ ಪಕ್ಷಗಳಿಗೆ ಸ್ಥಾನ ಕಲ್ಪಿಸಿದ್ದಾರೆ. ಹೀಗಾಗಿ, ಹೊಸದಾಗಿ ರಚನೆಯಾಗಿರುವ ಸರ್ಕಾರವು ಹಳೆಯದರ ಮುಂದುವರಿಕೆಯನ್ನೂ ಹೊಸ ಬದಲಾವಣೆಯನ್ನೂ ಸೂಚಿಸುವಂತಿದೆ. ಇದು ಇನ್ನಷ್ಟು ವಿಶಾಲವಾದ ಭಾರತವನ್ನು ಪ್ರತಿನಿಧಿಸುವುದಷ್ಟೇ ಅಲ್ಲದೆ, ವಿಜಯಿಯ ರಾಜಕೀಯ ನಿಲುವುಗಳಿಗಿಂತ ಭಿನ್ನವಾದ ನಿಲುವುಗಳನ್ನು ಹೊಂದಿರುವವರಿಗೆ ಇಲ್ಲಿ ಈಗ ಧ್ವನಿ ಇದೆ. ಹೀಗಿದ್ದರೂ ಸಂಪುಟದಲ್ಲಿನ ಪ್ರಾತಿನಿಧ್ಯವನ್ನು ಗಮನಿಸಿದಾಗ ಬಿಜೆಪಿಯ ಪ್ರಾಬಲ್ಯವು ಎದ್ದುಕಾಣುವಂತಿದೆ. ಸರ್ಕಾರದ ಉಳಿವಿಗೆ ಈಗ ಮಿತ್ರಪಕ್ಷಗಳ ನೆರವು ಅತ್ಯಗತ್ಯವಾಗಿದ್ದರೂ ಮಿತ್ರಪಕ್ಷಗಳಿಗೆ ಸಂಪುಟದಲ್ಲಿ 11 ಸ್ಥಾನಗಳು ಮಾತ್ರ ಸಿಕ್ಕಿವೆ. ಪ್ರಮುಖ ಖಾತೆಗಳ ಪೈಕಿ ಹೆಚ್ಚಿನವು ಬಿಜೆಪಿ ಬಳಿಯೇ ಇವೆ. ಬೇರೆ ಬೇರೆ ರಾಜ್ಯಗಳ ಹಲವು ಹಿರಿಯ ಬಿಜೆಪಿ ನಾಯಕರು ಕೂಡ ಸಂಪುಟ ಸೇರಿದ್ದಾರೆ.



ಬಿಜೆಪಿಯು ಎರಡು ದಶಕಗಳ ಹಿಂದೆ ತಾನೇ ಪಾಲಿಸುತ್ತಿದ್ದ ರಾಜಕೀಯ ಸೂತ್ರಗಳತ್ತ ಮರಳಿ ದೃಷ್ಟಿಹಾಯಿಸಬೇಕಿದೆ

ಹೀಗಿದ್ದರೂ ಸರ್ಕಾರವು ಈ ಬಾರಿ ಭಿನ್ನವಾಗಿ ಇರಲಿದೆ. ಏಕೆಂದರೆ ಅದರ ನೀತಿಗಳು, ಅದು ರೂಪಿಸುವ ಕಾರ್ಯಕ್ರಮಗಳು ಹಿಂದಿನ ಅವಧಿಯ ನೀತಿಗಳು, ಕಾರ್ಯಕ್ರಮಗಳಿಗಿಂತ ಭಿನ್ನವಾಗಿ ಇರಲಿವೆ. ಭಿನ್ನ ದೃಷ್ಟಿಕೋನಗಳನ್ನು ಹಾಗೂ ಹಿತಾಸಕ್ತಿಗಳನ್ನು ಹೊಂದಿರುವ ಪಕ್ಷಗಳು ಸರ್ಕಾರದ ಭಾಗವಾಗಿವೆ ಎಂಬುದೊಂದೇ ಇದಕ್ಕೆ ಕಾರಣವಲ್ಲ; ಚುನಾವಣೆಯ ಮೂಲಕ ಮತದಾರರು ನೀಡಿರುವ ಸಂದೇಶವನ್ನು ಕೂಡ ಸ್ವೀಕರಿಸಬೇಕು ಕೆಲಸವನ್ನು, ಆ ಸಂದೇಶದಿಂದ ಪಾಠ ಕಲಿಯುವ ಕೆಲಸವನ್ನು ಪ್ರಧಾನಿ ಮೋದಿ ಮತ್ತು ಅವರ ಪಕ್ಷವು ಮಾಡಬೇಕಿದೆ. ಮೈತ್ರಿಕೂಟದ ಸರ್ಕಾರವನ್ನು ಮುನ್ನಡೆಸಬೇಕಿದೆ, ಬಿಜೆಪಿಯು ಎರಡು ದಶಕಗಳ ಹಿಂದೆ ತಾನೇ ಪಾಲಿಸುತ್ತಿದ್ದ ರಾಜಕೀಯ ಸೂತ್ರಗಳತ್ತ ಮರಳಿ ದೃಷ್ಟಿಹಾಯಿಸಬೇಕಿದೆ. ಮೋದಿ ಅವರು ಈವರೆಗೆ ಬಿಜೆಪಿಗೆ ಬಹುಮತ ಇದ್ದ ಅವಧಿಯ, ತಮ್ಮ ಸಂಪೂರ್ಣ ನಿಯಂತ್ರಣದ ಒಕ್ಕೂಟ ಸರ್ಕಾರವನ್ನು ಮಾತ್ರ ಮುನ್ನಡೆಸಿದ್ದಾರೆ. ಈಗ ಮೋದಿ ಅವರ ಪರಿಸ್ಥಿತಿ ಬದಲಾಗಿರುವಂತೆ ಕಾಣುತ್ತಿದೆ. ಎನ್‌ಡಿಎ ಮೈತ್ರಿಕೂಟವು ದೇಶದ ಸರಿಸುಮಾರು ಎಲ್ಲ ಭಾಗಗಳಲ್ಲಿ ಒಟ್ಟೊಟ್ಟಿಗೆ ಸಂವಹನವನ್ನು ನಡೆಸಬೇಕಾಗುತ್ತದೆ, ದೇಶವನ್ನು ಮುನ್ನಡೆಸಲು ಸಹಮತ ಬೇಕೇ ಬೇಕು ಎಂದು ಅವರು ಹೇಳಿದ್ದಾರೆ. ಅಲ್ಲದೆ, ಅವರು ಇನ್ನೂ ಎರಡು ಪ್ರಮುಖ ಅಂಶಗಳನ್ನು ಹೇಳಿದ್ದಾರೆ. ಪ್ರಾದೇಶಿಕ ಹಾಗೂ ರಾಷ್ಟ್ರೀಯ ಆಕಾಂಕ್ಷೆಗಳ ಕಿರಿಯೆದುರ ಸಹಕಾರಿ ಒಕ್ಕೂಟ ವ್ಯವಸ್ಥೆಯು ಅಗತ್ಯವನ್ನು ಹೇಳಿದ್ದಾರೆ. ಅವರ ಈಡಿರುವ ಇನ್ನೊಂದು ಮಾತು, ವಿರೋಧ ಪಕ್ಷಗಳು ಸರ್ಕಾರವನ್ನು ವಿರೋಧಿಸುವುದಕ್ಕೆ ವಿನಾ ದೇಶವನ್ನು ಅಲ್ಲ ಎಂಬುದು. ಇವು ಬಹಳ ಮುಖ್ಯವಾದ ಸಂಗತಿಗಳು. ಇವ ಅಲೋಚನೆಗಳು ಮೋದಿ ಅವರನ್ನು ಮುನ್ನಡೆಸಬೇಕು.

ಈಗ ರಚನೆ ಆಗಿರುವ ಸರ್ಕಾರವು ದೇಶದ ಹಲವು ಪ್ರದೇಶಗಳನ್ನು ಪ್ರತಿನಿಧಿಸುತ್ತಿದೆ. ಏಕೆಂದರೆ ಎನ್‌ಡಿಎ ಮೈತ್ರಿಕೂಟವು ದೇಶದ ಎಲ್ಲೆಡೆಯ ಪ್ರತಿನಿಧಿಗಳನ್ನು ಹೊಂದಿದೆ. ಸರ್ಕಾರದಲ್ಲಿ ಬೇರೆ ಬೇರೆ ಸಮುದಾಯಗಳು, ಜಾತಿಗಳು ಹಾಗೂ ಸಾಮಾಜಿಕ ಗುಂಪುಗಳು ಪ್ರಾತಿನಿಧ್ಯ ಪಡೆದಿವೆ. ಹೀಗಿದ್ದರೂ ಸಂಪುಟದಲ್ಲಿ ಮುಸ್ಲಿಮರಿಗೆ ಪ್ರಾತಿನಿಧ್ಯ ಇಲ್ಲ ಎಂಬುದು ಗಮನಾರ್ಹ. ಕ್ರೈಸ್ತ ಸಮುದಾಯಕ್ಕೆ ಸಾಂಕೇತಿಕವಾಗಿ ಪ್ರಾತಿನಿಧ್ಯ ಕಲ್ಪಿಸಲಾಗಿದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ 14ರಷ್ಟು ಇರುವ ಸಮುದಾಯವೊಂದಕ್ಕೆ ಪ್ರಾತಿನಿಧ್ಯ ನಿರಾಕರಿಸುವುದು ಸರಿಯಲ್ಲ. ಪ್ರಧಾನಿ ಸೇರಿ 72 ಮಂದಿ ಸಚಿವರ ಪೈಕಿ ಮಹಿಳೆಯರ ಸಂಖ್ಯೆ ಏಳು ಮಾತ್ರ. ಇದು ಸಂಪುಟದ ಗಾತ್ರದ ಶೇ 10ರಷ್ಟು ಕೂಡ ಅಲ್ಲ. ರಾಜಕೀಯ ಹಾಗೂ ಸರ್ಕಾರದ ವಿವಿಧ ಹಂತಗಳಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಹೆಚ್ಚಿಸಲಾಗುವುದು ಎಂದು ಈ ಹಿಂದೆ ನೀಡಿದ್ದ ಹೇಳಿಕೆಗಳಿಗೆ ಇದು ಅನುಗುಣವಾಗಿ ಇಲ್ಲ.

ದಿನದ ಟ್ವೀಟ್


ಸ್ಥಳೀಯರಿಗೆ ಆದ್ಯತೆಯಿರಲಿ



ನರೇಂದ್ರ ಮೋದಿ ಅವರೇ, ಎಲ್ಲ ಕ್ಷೇತ್ರಗಳಲ್ಲೂ ನೀವೇ ಸ್ಪರ್ಧಿಸಿದ್ದೀರಿ ಎಂದು ಭಾವಿಸಿ ನಾವು ಮತ ಚಲಾಯಿಸಬೇಕೆಂದು ನೀವು ಬಯಸುತ್ತೀರಿ. ಸ್ಥಳೀಯ ಅಭ್ಯರ್ಥಿಗಳು ಮುಖ್ಯ ಎಂಬುದನ್ನು ದಯವಿಟ್ಟು ನೆನಪಿನಲ್ಲಿಡಿ. ಬಿಜೆಪಿ ಬೆಂಬಲಿಗರು ಸ್ಥಳೀಯ ಅಭ್ಯರ್ಥಿಯನ್ನು ದ್ವೇಷಿಸುತ್ತಾರಾದರೆ ಅವರು ಮತದಾನದಿಂದ ದೂರ ಉಳಿಯುತ್ತಾರೆ. ಉತ್ತಮವಾದ ಸ್ಥಳೀಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ. ಬಿಜೆಪಿ ಪರವಾಗಿ ಮತ ಚಲಾಯಿಸಲು ನಿಮ್ಮ ನಾಯಕತ್ವವೊಂದೇ ಸಾಲದು.

ಡಿ.ಮುತ್ತುಕೃಷ್ಣನ್, ಹೂಡಿಕೆದಾರ

ಕಿಡಿನುಡಿ



ಜಮ್ಮುವಿನ ರಿಯಾಸಿಯಲ್ಲಿ ಮುಗ್ಧರ ಮೇಲೆ ನಡೆದಿರುವ ಹೇಡಿತನದ ದಾಳಿಯು ಹೃದಯವಿದ್ರಾವಕ ಮತ್ತು ವಿನಾಶಕಾರಿ... ಭಯೋತ್ಪಾದನೆಯನ್ನು ನಾನು ಖಂಡಿಸುತ್ತೇನೆ ಮತ್ತು ಇಂತಹ ಹಿಂಸಾಚಾರವನ್ನು ಎಂದಿಗೂ ಸಹಿಸುವುದಿಲ್ಲ.

ಸೋಫಿಯಾ ಫಿರ್ದೌಸ್, ಉದ್ಯಮಿ

---

25 ವರ್ಷಗಳ ಹಿಂದೆ

ಶುಕ್ರವಾರ, 11-6-1999

• ಯೋಧರ ಅಂಗಾಂಗ ಛಿದ್ರ ಪಾಕ್‌ಗೆ ಭಾರತ ಖಂಡನೆ

ನವದೆಹಲಿ, ಜೂನ್ 10– ಪಾಕಿಸ್ತಾನದ ಸೈನಿಕರು ಆರು ಮಂದಿ ಭಾರತೀಯ ಯೋಧರ ಕೆಲವು ಅಂಗಾಂಗಗಳನ್ನು ಕತ್ತರಿಸಿದ ದೇಹಗಳನ್ನು ನೀಡಿದ್ದು, ಇದು ಅತ್ಯಂತ ಅಮಾನುಷ ಮತ್ತು ಬರ್ಬರ ಕೃತ್ಯ ಎಂದು ಇಂದು ಭಾರತ ಕಟುವಾಗಿ ಖಂಡಿಸಿದೆ.

ಕಣ್ಮರೆಯಾಗಿದ್ದ ಹದಿನಾಲ್ಕು ಮಂದಿಯಲ್ಲಿ ಈ ಆರು ಮಂದಿ ಯೋಧರು ಪಾಕಿಸ್ತಾನದ ಘೋರ ಕೃತ್ಯಕ್ಕೆ ಒಳಗಾದವರು. ಈ ಅಮಾನುಷ ಕೃತ್ಯವು ಹಿಂದೆಂದೂ ನಡೆದಿಲ್ಲ, ಇದು ಅಂತರರಾಷ್ಟ್ರೀಯ ಸಂಪ್ರದಾಯದ ಉಲ್ಲಂಘನೆಯಾಗಿದೆ ಎಂದು ಭೂಸೇನಾ ಪಡೆಯ ವಕ್ತಾರ ಕರ್ನಲ್ ವಿಕ್ರಂ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಇಂದು ಪಾಕಿಸ್ತಾನದ ನಡೆಯನ್ನು ಖಂಡಿಸಿದರು.

ಈ ನಡುವೆ, ಕಾರ್ಗಿಲ್ ವಲಯದಿಂದ ಅತಿಕ್ರಮಣಕಾರರನ್ನು ಓಡಿಸುವ ತನಕ ಭಾರತೀಯ ಪಡೆಗಳು ವಿರಮಿಸುವುದಿಲ್ಲ ಎಂದು ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಪಟ್ನಾದಲ್ಲಿ ಎಚ್ಚರಿಕೆ ನೀಡಿದ್ದಾರೆ.

• ಅಮೆರಿಕ ಆರ್ಥಿಕ ನಿಷೇಧ ಐದು ವರ್ಷ ಕಾಲ ಸ್ಥಗಿತ

ವಾಷಿಂಗ್ಟನ್, ಜೂನ್ 10 (ಯುಎನ್‌ಐ)– ಅಣ್ವಸ್ತ್ರ ಸ್ಫೋಟಗಳ ಕಾರಣ ಅಮೆರಿಕವು ಭಾರತ ಹಾಗೂ ಪಾಕಿಸ್ತಾನದ ಮೇಲೆ ಹೇರಿರುವ ಎಲ್ಲಾ ಆರ್ಥಿಕ ನಿಷೇಧಗಳನ್ನು ಐದು ವರ್ಷದ ಅವಧಿಗೆ ರದ್ದುಪಡಿಸುವ ತಿದ್ದುಪಡಿಯೊಂದನ್ನು ಅಮೆರಿಕದ ಸೆನೆಟ್ ಅಂಗೀಕರಿಸಿದೆ.

---

50 ವರ್ಷಗಳ ಹಿಂದೆ

ಮಂಗಳವಾರ, 11-6-1974

• ರಾಜ್ಯ ಭೂ ಶಾಸನ ಜಾರಿಗೆ ತೊಡಕು: 'ಶೀಘ್ರವೇ ತುರ್ತು ಕ್ರಮ'

ಬೆಂಗಳೂರು, ಜೂನ್ 10– ಕಳೆದ ಎರಡು ವರ್ಷಗಳಿಂದ ಕೆಲವು ಅಡ್ಡಿ, ಆತಂಕಗಳನ್ನು ದಾಟಿ, ಮಾರ್ಚಿ ತಿಂಗಳಿನಿಂದ ಜಾರಿಗೆ ಬಂದಿರುವ ಕರ್ನಾಟಕ ಭೂಸುಧಾರಣಾ ಶಾಸನವು ಕಾರ್ಯತಃ ಅನುಷ್ಠಾನಕ್ಕೆ ಬರುವ ಮುನ್ನವೇ ಗಂಭೀರ ತೊಡಕಿನಲ್ಲಿ ಮುಗ್ಗರಿಸುವ ಪರಿಸ್ಥಿತಿ ಉದ್ಭವ ಆಗಿದೆ.

ಶಾಸನದ ಪ್ರಕಾರ ಪಂಚಾಯ್ತಿಗಳು ರಚನೆಯಾಗುವ ಮುನ್ನವೇ ಗೇಣಿ ಹಕ್ಕು ವಿವಾದಾಸ್ಪದವಾಗಿರುವ ಪ್ರಕರಣಗಳಲ್ಲಿ, ಗೇಣಿದಾರರಿಗೆ ಜಮೀನು ಕಾಯಂ ಆಗುವುದಕ್ಕೆ ಭೂಮಾಲೀಕರು ನ್ಯಾಯಾಲಯಗಳಿಂದ ತಡೆಯಾಜ್ಞೆ ತರುವುದರಲ್ಲಿ ಯಶಸ್ವಿಯಾಗಿದ್ದಾರೆ.

ಶಾಸನವು ಎಲ್ಲ ರೀತಿಗಳಲ್ಲಿಯೂ ಭದ್ರ ಎಂದು ನಂಬಿಕೊಂಡಿದ್ದ ಅಧಿಕೃತ ವಲಯಗಳಿಗೆ ಈ ಬೆಳವಣಿಗೆ ತೀರಾ ಅನಿರೀಕ್ಷಿತ ಪೆಟ್ಟಿನಂತೆ ಬಿದ್ದಿದ್ದು, ಕಳೆದ ಎರಡು ದಿನಗಳಿಂದ ಅದಕ್ಕೆ ತುರ್ತು ಪರಿಹಾರ ಹುಡುಕುವಲ್ಲಿ ಪರದಾಟ ಆರಂಭವಾಗಿದೆ.

• ನಗರದ ಸಸ್ಯ ಸಂಪತ್ತು ನಶಿಸುತ್ತಿರುವ ಬಗ್ಗೆ ಸುಖಾಡಿಯಾ ವಿಷಾದ

ಬೆಂಗಳೂರು, ಜೂನ್ 10– ದಕ್ಷಿಣ ಭಾರತದ 'ಕಾಶ್ಮೀರ' ಎಂದೇ ಹೆಸರಾಗಿರುವ ಬೆಂಗಳೂರು ನಗರ ತನ್ನ ಹೆಸರನ್ನು ಕಳೆದುಕೊಳ್ಳುತ್ತಿದೆ ಎಂದು ರಾಜ್ಯದ ರಾಜ್ಯಪಾಲ ಶ್ರೀ ಮೋಹನ್ ಲಾಲ್ ಸುಖಾಡಿಯಾ ಅವರು ಇಂದು ವಿಷಾದ ವ್ಯಕ್ತಪಡಿಸಿದರು.

ಇಲ್ಲಿಂದ ಸುಮಾರು 56 ಮೈಲಿ ದೂರದಲ್ಲಿರುವ ದೊಡ್ಡಸಾಗೇರಿ ಗ್ರಾಮದಲ್ಲಿ (ಕೊರಟಗೆರೆ ತಾಲ್ಲೂಕು) ಅಹೋಬಲಾ ನರಸಿಂಹಸ್ವಾಮಿ ತೋಟವನ್ನು ಉದ್ಘಾಟಿಸಿದ ರಾಜ್ಯಪಾಲರು, ಬೆಂಗಳೂರು ನಗರದಲ್ಲಿ ಸಸ್ಯ ಸಂಪತ್ತು ನಶಿಸಿ ಹೋಗುತ್ತಿದ್ದು, ಇದನ್ನು ತಪ್ಪಿಸಲು ಮುಂಜಾಗ್ರತೆ ಕ್ರಮ ಕೈಗೊಳ್ಳುವುದು ಅಗತ್ಯ ಎಂದು ಹೇಳಿದರು.

ರಾಜಕಾರಣಿಗಳಿಂದ ನಿಂದನೆಗೆ ಒಳಗಾಗುವುದು ಮತದಾರರಿಗೆ ಹೊಸದೇನಲ್ಲ!

ಮತದಾರರ ಋಣದ ಪರೀಕ್ಷೆಯೇ?



ವಿಶ್ಲೇಷಣೆ

ಚಂದ್ರಕಾಂತ ವಡ್ಡು

ರಾಜ್ಯ ಸರ್ಕಾರದ ಸುಮಾರು 52 ಸಾವಿರ ಕೋಟಿ ರೂಪಾಯಿ ವಾರ್ಷಿಕ ಅಂದಾಜು ವೆಚ್ಚದ ಪಂಚ ಗ್ಯಾರಂಟಿ ಯೋಜನೆಗಳು ಅವುಗಳ ನಿಜಸ್ವರೂಪದಲ್ಲಿ ಜನಕಲ್ಯಾಣದ ಆದರ್ಶ ಹೊತ್ತ ಅನುಕರಣೀಯ ಮಾದರಿಗಳಾಗಿ, ಮಾರ್ಗವಾಗಿ ದೇಶದ ಇತರ ರಾಜ್ಯಗಳಿಗೆ ಮತ್ತು ಒಕ್ಕೂಟ ಸರ್ಕಾರಕ್ಕೆ ಒದಗಬೇಕಾಗಿತ್ತು. ಆದರೆ ಸಾಮಾಜಿಕ ಕಾಳಜಿಯ ಈ ಯೋಜನೆಗಳು ಹಾಗಾಗುವ ಬದಲು 'ಚುನಾವಣೆ ಗೆಲ್ಲಿಸುವ ಮಾದರಿಗಳು' ಎಂಬಂತೆ ಬಿಂಬಿತವಾಗಿರುವುದು ವಿಪರ್ಯಾಸ ಮಾತ್ರವಲ್ಲ ಸಮಕಾಲೀನ ರಾಜಕಾರಣದ ದುರಂತ ಕೂಡ.

2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿಗೆ ಪ್ರಭಾವ ಬೀರಿವೆ ಎಂದು ಭಾವಿಸಲಾಗುವ ಗ್ಯಾರಂಟಿ ಯೋಜನೆಗಳು ಈಗಿನ ಲೋಕಸಭಾ ಚುನಾವಣೆ ಫಲಿತಾಂಶದ ನಂತರ ಮತ್ತೆ ಚರ್ಚಾವೇದಿಕೆ ಏರಿವೆ. ರಾಜ್ಯ ಸರ್ಕಾರ ಕೊಡಮಾಡಿದ ಐದೂ ಜನಪ್ರಿಯ ಯೋಜನೆಗಳ ಫಲಾನುಭವಿಗಳು ಈ ಬಾರಿಯ ಚುನಾವಣೆಯಲ್ಲಿ 'ಕೈ' ಹಿಡಿಯುವ ಬದಲು 'ಕೈ'ಯಲ್ಲಿ ಸೋಲನ್ನು ಇಟ್ಟರು ಎಂಬುದು ಮತದಾರರ ಮೇಲೆ ಹೊರಿಸಲಾಗುತ್ತಿರುವ ಗಂಭೀರ ಆರೋಪ. ಪ್ರತಿಫಲಾಕಾಂಕ್ಷೆಯಿಂದ ಒಡ್ಡುವ ಆಮಿಷಗಳಿಗೂ ಜನಕಲ್ಯಾಣ ಕಾರ್ಯಕ್ರಮಗಳಿಗೂ ಇರುವ ವ್ಯತ್ಯಾಸವೇ ಮಸುಕಾದಂತಾಗಿದೆ.

'ಬಿಟ್ಟಿ ಭಾಗ್ಯವಂತರು' ಎಂದು ಕರೆಯುವ ಮೂಲಕ ವಿರೋಧ ಪಕ್ಷಗಳು ಮತ್ತು ಸಮಾಜದ ಒಂದು ವರ್ಗವು ಯೋಜನೆಯ ಫಲಾನುಭವಿಗಳನ್ನು ಹೀಯಾಳಿಸಿದ್ದನ್ನು ಒಂದು ವರ್ಷದಿಂದ ನೋಡಿದ್ದಾಯಿತು. ಈಗ ಫಲಾನುಭವಿಗಳನ್ನು 'ಕೃತಘ್ನ ಪ್ರಜೆಗಳು' ಎಂದು ಹೆಸರಿಸುವ ಮುಖೇನ ಆಡಳಿತ ಪಕ್ಷ ಹಾಗೂ ಅವರ ಬೆಂಬಲಿಗ ಗುಂಪುಗಳು ಮತದಾರರನ್ನು ನಿಂದನೆಗೆ ಈಡುಮಾಡುವ ಕಾಲ ಬಂದಿದೆ. ಎರಡೂ ರಾಜಕೀಯ ಸಂದರ್ಭಗಳ ಗುರಿ ಜನಸಾಮಾನ್ಯರೇ ಆಗಿರುವುದು ವಿಶೇಷ.

ಮತದಾರರು ಕ್ಷೇತ್ರದ ಅಭಿವೃದ್ಧಿಯನ್ನು ಮಾನದಂಡವಾಗಿ ಪರಿಗಣಿಸಿ ಮತ ಚಲಾಯಿಸುವುದಿಲ್ಲ ಎಂಬ ರಾಜಕಾರಣಿಗಳ ತಕರಾರು ಬಹಳ ಹಿಂದಿನದು. ಆದರೆ ಜನಪ್ರಿಯ ಯೋಜನೆಗಳೂ ಮತಗಳಾಗಿ, ಗೆಲುವಾಗಿ ಪರಿವರ್ತನೆಯಾಗುತ್ತಿಲ್ಲ ಎಂಬ ಅಳಲು ಕೇಳಿಬರುತ್ತಿರುವುದು ಹೊಸ ಬೆಳವಣಿಗೆ.

ಮೈಸೂರು- ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಪರಾಜಿತರಾದ ಕಾಂಗ್ರೆಸ್ ಪಕ್ಷದ ವಕ್ತಾರ ಎಂ.ಲಕ್ಷ್ಮಣ ಅವರು, 'ರಾಜ್ಯ ಕಾಂಗ್ರೆಸ್ ನೇತೃತ್ವದ ಸರ್ಕಾರದ ಗ್ಯಾರಂಟಿ ಯೋಜನೆ ಜನರಿಗೆ ಇಷ್ಟ ಆಗಿಲ್ಲ. ಹೀಗಾಗಿ ಯೋಜನೆಗಳನ್ನು ನಿಲ್ಲಿಸುವುದೇ ಒಳ್ಳೆಯದು' ಎಂದು ಬಹಳಷ್ಟು ಗಟ್ಟಿಯಾಗಿಯೇ ಮಾತನಾಡಿದ್ದಾರೆ. ಅವರ ಹೇಳಿಕೆಯನ್ನು ಸೋಲಿನ ಹತಾಶ ಮನೋಭಾವ ಎಂದು ಕಡೆಗಣಿಸುವಂತಿಲ್ಲ. ಏಕೆಂದರೆ ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ, ರಾಮನಗರ ಶಾಸಕ ಇಕ್ಬಾಲ್ ಹುಸೇನ್, ಗುಬ್ಬಿ ಶಾಸಕ ಎಸ್.ಆರ್.ಶ್ರೀನಿವಾಸ್ ಸೇರಿದಂತೆ ಅನೇಕರು ಮತದಾರರ ವರ್ತನೆಯನ್ನು ತಮ್ಮದೇ ಆದ ನಿರೀಕ್ಷೆಯಲ್ಲಿ ವಿಮರ್ಶಿಸಿದ್ದಾರೆ.

ಈ ಅಭಿಪ್ರಾಯಗಳಿಗೆ ವ್ಯತಿರಿಕ್ತವಾಗಿ ಸಚಿವ ಸತೀಶ್ ಜಾರಕಿಹೊಳಿ, 'ಗ್ಯಾರಂಟಿ ಯೋಜನೆಗಳು ನಮ್ಮ ಕೈ ಹಿಡಿದಿವೆ. ಆದ್ದರಿಂದ ಮುಂದುವರಿಸುವುದು ಸೂಕ್ತ' ಎಂದಿದ್ದಾರೆ. 'ಗ್ಯಾರಂಟಿ ಯೋಜನೆಗಳನ್ನು ರಾಜಕೀಯ ಲಾಭಕ್ಕಾಗಿ ಜಾರಿ ಮಾಡಿಲ್ಲ. ಕೇಂದ್ರ ಸರ್ಕಾರದ ನೀತಿಗಳಿಂದಾಗಿ ಎದುರಾದ ಬೆಲೆ ಹೆಚ್ಚಳದಿಂದ ತತ್ತರಿಸಿ ಹೋಗಿದ್ದ ಬಡವರಿಗೆ ನೆರವು ನೀಡಲು ಯೋಜನೆ ತಂದಿದ್ದೇವೆ. ಯಾವುದೇ ಕಾರಣಕ್ಕೂ ಗ್ಯಾರಂಟಿ ಯೋಜನೆ ನಿಲ್ಲೋದಿಲ್ಲ' ಎಂಬ ಭರವಸೆ ನೀಡಿದ್ದಾರೆ ಗೃಹ ಸಚಿವ ಪರಮೇಶ್ವರ. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಕಡೆಯಿಂದ ಯೋಜನೆಗಳನ್ನು ನಿಲ್ಲಿಸುವುದಿಲ್ಲ ಎಂಬ ಭರವಸೆ ನಿರಂತರವಾಗಿ ಕೇಳಿಬರುತ್ತಿರುವುದು ಫಲಾನುಭವಿಗಳಲ್ಲಿ ಆಶಾಭಾವನೆಗೆ ಕಾರಣವಾಗಿದೆ.

ಮತದಾರರ ಮೇಲೆ ಋಣಭಾರ ಹೊರಿಸುವ ಕೆಲವು ಕಾಂಗ್ರೆಸ್ ನಾಯಕರ ಹೇಳಿಕೆಗಳು ಸೋಲಿನ ಸಂದರ್ಭದ ಭಾವಾವೇಶದ ಮಾತುಗಳು ಎಂಬುದು ಒಂದು ಹಂತದವರೆಗೆ ನಿಜ. ಆದರೆ ಬಹುತೇಕ ಶಾಸಕರ ಅಸಮಾಧಾನದ ಹಿಂದೆ ಗ್ಯಾರಂಟಿ ಯೋಜನೆಗಳ ಬಗ್ಗೆ ಅವರಲ್ಲಿ ಅಂತರ್ಗತವಾಗಿರುವ ಅಸಹನೆಯ ವರಸೆಯನ್ನೂ ಗಮನಿಸಬೇಕಾಗುತ್ತದೆ. ಮಾತು ಉಳಿಸಿಕೊಳ್ಳುವ ಭರದಲ್ಲಿ ಗ್ಯಾರಂಟಿ ಯೋಜನೆಗಳಿಗೆ ಹಣಕಾಸು ಒದಗಿಸುವುದು ಸರ್ಕಾರಕ್ಕೆ ಸವಾಲಾಗಿರುವುದರಿಂದ ತಮ್ಮ ಕ್ಷೇತ್ರಗಳಿಗೆ ನಿರೀಕ್ಷಿತ ಪ್ರಮಾಣದಲ್ಲಿ ಅನುದಾನ ಬರುತ್ತಿಲ್ಲ ಎಂಬ ಕೊರಗು ಶಾಸಕರಿಗಿದೆ.

ಲೋಕಸಭಾ ಚುನಾವಣೆಯಲ್ಲಿ ಶಾಸಕರಿಂದ ಅಪೇಕ್ಷಿತ ಮಟ್ಟದ ಸಹಕಾರ, ತೊಡಗುವಿಕೆ ದೊರೆಯದಿರುವುದಕ್ಕೆ ಹಾಗೂ ಪಕ್ಷದ ಹಿನ್ನಡೆಗೆ ಇದೂ ಒಂದು ಕಾರಣವಾಗಿರಬಹುದೇ ಎಂಬ ಅಂಶವು ಕಾಂಗ್ರೆಸ್ ಪಕ್ಷದ ಆಂತರಿಕ ವಲಯದಲ್ಲಿ ವಿಶ್ಲೇಷಣೆಗೆ ಎಡೆಮಾಡಿದೆ. ಪಂಚ ಗ್ಯಾರಂಟಿಗಳ ವೆಚ್ಚವನ್ನು ತಗ್ಗಿಸಬೇಕು ಎಂಬ ಚಿಂತನೆ ಶಾಸಕರದು.

ಕಾಂಗ್ರೆಸ್ ಪಕ್ಷದ, ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆ ಕುರಿತಂತೆ ಏಕಾಏಕಿ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿಲ್ಲ. ಈ ಕುರಿತು ಅಧ್ಯಯನ ನಡೆಸಲು ಒಂದು ಸಮಿತಿ ರಚಿಸುವ ಬಗ್ಗೆ ಚರ್ಚೆ ನಡೆದಿದೆ. ಒಟ್ಟಾರೆ ಸಂವಾದ ಮತ್ತು ಅನುಭವದ ಫಲಶ್ರುತಿಯಾಗಿ ಯೋಜನೆಗಳನ್ನು ನಿಜಕ್ಕೂ 'ಅರ್ಹರಿಗೆ' ಮಾತ್ರ ತಲುಪಿಸಬೇಕು ಎಂಬ ವಿಷಯದಲ್ಲಿ ಭಿನ್ನಮತ ಇರಲಾರದು. ಚುನಾವಣಾ ಸಂದರ್ಭದಲ್ಲಿ ಒಂದು ರಾಜಕೀಯ ಪಕ್ಷವಾಗಿ ಆಡುವ ಮಾತು ಮತ್ತು ಒಂದು ಸರ್ಕಾರವಾಗಿ ತೆಗೆದುಕೊಳ್ಳಬೇಕಾದ ತೀರ್ಮಾನದಲ್ಲಿ ತಕ್ಕಮಟ್ಟಿನ ಅಂತರ ಇರುವುದು ಸಹಜ. ಹಾಗಾಗಿ 'ನನಗೂ ಫ್ರೀ, ನಿನಗೂ ಫ್ರೀ, ಎಲ್ಲರಿಗೂ ಫ್ರೀ...' ಎಂಬ ಚುನಾವಣಾ ಘೋಷಣೆಯಿಂದ ಹೊರಬಂದು 'ಅರ್ಹರಿಗೆ ಮಾತ್ರ ಫ್ರೀ' ಧೋರಣೆ ಅಳವಡಿಸಿಕೊಂಡರೆ ಪ್ರಜೆಗಳು, ಶಾಸಕರು ಮತ್ತು ಸರ್ಕಾರದ ಹಿತಾಸಕ್ತಿಯನ್ನು ಒಟ್ಟಿಗೇ ಕಾಪಾಡಿದಂತೆ ಆಗಬಹುದು.

ಇವೆಲ್ಲಾ ಕಾಂಗ್ರೆಸ್ ವಲಯದಲ್ಲಿ ನಡೆಯುತ್ತಿರುವ ವಿದ್ಯಮಾನಗಳಾದರೆ, ಈ ವಿಷಯದಲ್ಲಿನ ಬಿಜೆಪಿಯ ನಿಲುವು ಮತ್ತೊಂದು ಬಗೆಯ ಗೊಂದಲ ಸೃಷ್ಟಿಸಿದೆ. ಹಿಂದಿನ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಆರ್ಥಿಕವಾಗಿ ಕಾರ್ಯಸಾಧುವಲ್ಲದ ಸುಳ್ಳು 'ಗ್ಯಾರಂಟಿ' ನೀಡುತ್ತಿದೆಯೆಂದು ಬಿಜೆಪಿ ನಾಯಕರು ಹಾರಾಡಿದರು. ಕಾಂಗ್ರೆಸ್, ಸರ್ಕಾರ ರಚಿಸಿದ ನಂತರ ಯೋಜನೆಗಳನ್ನು ಕೂಡಲೇ ಜಾರಿ ಮಾಡಲು ಆಗ್ರಹಿಸಿದರು. ಸರ್ಕಾರ ಮಾತಿನಂತೆ ನಡೆದಾಗ ರಾಜ್ಯದ ಬೊಕ್ಕಸ ಖಾಲಿಯಾಗಿ ಅಭಿವೃದ್ಧಿ ನಿಲುಗಡೆ ಆಯಿತೆಂದು ಕ್ಯಾತೆ ತೆಗೆದರು. ಕೊನೆಗೆ ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಗಳು ಮತ್ತು ಲೋಕಸಭಾ ಚುನಾವಣೆಯ ಸಮಯದಲ್ಲಿ 'ಮೋದಿ ಗ್ಯಾರಂಟಿ' ಘೋಷಣೆ ಮಾಡಿದ ಬಿಜೆಪಿಯ ದ್ವಂದ್ವ ನಿಲುವು ದಾಖಲೆ ಸೇರಿದೆ.

ಇನ್ನು, ಮತದಾರರಿಂದ ಋಣಭಾರ ಇಳಿಸಿಕೊಳ್ಳುವ ಇರಾದೆ ಬಿಜೆಪಿಯವರನ್ನೂ ಬಿಟ್ಟಿಲ್ಲ. ಅಯೋಧ್ಯೆ ನಗರ ಒಳಪಡುವ ಉತ್ತರಪ್ರದೇಶದ ಫೈಜಾಬಾದ್ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯ ಸೋಲಿಗಾಗಿ ಸ್ವತಃ ಶ್ರೀರಾಮನೇ ನಿಂದನೆಗೆ ಗುರಿಯಾಗಬೇಕಾಗಿದೆ. ರಾಮದೇವರನ್ನು ಟೆಂಟ್‌ನಲ್ಲೇ ಇರಲು ಬಿಡಬೇಕಿತ್ತು, ಭವ್ಯ ಮಂದಿರ ಕಟ್ಟಿಕೊಟ್ಟಿದ್ದೇ ತಪ್ಪು ಎಂದು ಹೀಯಾಳಿಸಿದ್ದಾರೆ ರಾಮಭಕ್ತರು. ಅಯೋಧ್ಯೆಗೆ ಹೋದವರು ಅಲ್ಲಿ ತಂಗದೆ, ಖರೀದಿಸದೆ ಸ್ಥಳೀಯ ಮತದಾರರಿಗೆ ನಷ್ಟ ಉಂಟು ಮಾಡಬೇಕೆಂದು ಕರೆ ಕೊಡಲಾಗಿದೆ. ದಾವಣಗೆರೆಯಲ್ಲಿ ಸೋತ ಅಭ್ಯರ್ಥಿಯ ಗಂಡ ಜಿ.ಎಂ.ಸಿದ್ಧೇಶ್ವರ ಅವರಿಗೆ, '300 ರೂಪಾಯಿ ಬದಲು 500 ರೂಪಾಯಿ ಕೊಟ್ಟಿದ್ದರೆ ಗೆಲ್ಲುತ್ತಿದ್ದಿರಿ...' ಎಂದು ಹೇಳಿದ ಕಾರ್ಯಕರ್ತನ ಆಡಿಯೊ ಬಯಲಾಗಿದೆ. 'ಹಿಂದಿನ ವಿಧಾನಸಭೆ ಚುನಾವಣೆಯಲ್ಲಿ ಮತದಾರರಿಗೆ ಹಂಚಲು ಕೊಟ್ಟಿದ್ದ ಹಣ ಸರಿಯಾಗಿ ಹಂಚಿಕೆಯಾಗಲಿಲ್ಲ. ಹಾಗಾಗಿ ನಾನು ಸೋಲಬೇಕಾಯಿತು' ಎಂದು ಮುಚ್ಚುಮರೆ ಇಲ್ಲದೆ ಬಿಚ್ಚಿಟ್ಟಿದ್ದ ಎಂಟಿಬಿ ನಾಗರಾಜ್, 'ಹಣ, ಉಡುಗೊರೆ ಪಡೆದು ಮತ ಹಾಕುವುದಾಗಿ ಅಲ್ಲಾ, ಕುರಾನ್ ಮೇಲೆ ಪ್ರಮಾಣ ಮಾಡಿದ ಮುಸ್ಲಿಮರು ಮತ ಹಾಕದೆ ಮೋಸ ಮಾಡಿದ್ದಾರೆ' ಎಂದೂ ಬಿಜೆಪಿ ಆತ್ಮಾವಲೋಕನ ಸಭೆಯಲ್ಲಿ ಆರೋಪಿಸಿದ್ದರು.

ಹಾಗಾಗಿ, ರಾಜಕಾರಣಿಗಳು, ಅವರ ಹಿಂಬಾಲಕರು ಮತ್ತು ರಾಜಕೀಯ ಪಕ್ಷಗಳಿಂದ ನಿಂದನೆಗೆ ಒಳಗಾಗುವುದು ಮತದಾರರಿಗೆ ಹೊಸದಲ್ಲ. ಪುರಂದರದಾಸರು ಹೇಳಿದಂತೆ, 'ನಿಂದಕರಿರಬೇಕು/ ಹಂದಿಯಿದ್ದರೆ ಕೇರಿ ಹೇಗೆ ಶುದ್ಧಿಯೋ ಹಾಗೆ' ಎನ್ನುವ ಮೂಲಕ ಮತದಾರರೂ ಪ್ರತಿನಿಂದಿಸಬಹುದೇನೋ!



ಚುರುಮುರಿ



ಎಂಟ್ರೆನ್ಸ್ ಟೆಸ್ಟುಗಳು

• ಡಿ.ಎಸ್.ಲಿಂಗರಾಜು

'ನಾನೇ ದೇವರು ಅಂದೋರು, ಕಿಚಡಿ ಸರ್ಕಾರ ಅಂದೋರು, ಗ್ಯಾರೆಂಟಿ ಜನ ವೋಟಾಕ್ತರೆ ಅಂತ ತಿಳಕಂದೋರಿಗೆ ಮತದಾರ ಕೊನೆಗೂ ಅವನ ಆಟ ತೋರಿಸಿದ' ಅಂತ ತುರೇಮಣೆ ತೀರ್ಪು ಕೊಟ್ಟರು.

'ಸೋತೋರೆಲ್ಲಾ ಹಿನ್ನಡೆಯಾದುದ್ಕೆ ಏನಾದ್ರೂ ಬೂತುಚೇಷ್ಟೆ ನಡೆದಿತ್ತಾ ಅಂತ ಪರಿಶೀಲನೆ, ವಿಶ್ಲೇಷಣೆ ಮಾಡಿಕ್ಯತ್ತವರಂತೆ' ಚಂದ್ರು ಹೇಳಿದ.

'ಆಯ್ತು ಕಾ ಬುಡಿ. ನೀಟ್ ಪರೀಕ್ಷೇಲಿ ಹುಡ್ಲು ಭಾರೀ ಸಂಖ್ಯೇಲಿ ಪಾಸಾಗ್ಯವಂತೆ. ಎಲ್ಲಾ ಕೋಚಿಂಗ್ ಸೆಂಟರುಗಳು ನಾವೇ ಮಾಡಿದ್ದು ಅಂತ ಕೊಚ್ಚಿಗ್ಯತಾವೆ, ಏನಂತೀರಾ?' ಅಂತ ಕ್ವೆಸ್ಚನಿಸಿದೆ.

'ಅನ್ನದೇನ್ಲಾ! ರಾಜಕಾರಣಿಗಳಿಗೂ ಇದೇ ಥರಾ ಪೀಟ್ ಪರೀಕ್ಷೆ ಮಡಗಬೇಕು' ಅಂದ ತುರೇಮಣೆ ಮಾತು ಅರ್ಥಾಗಲಿಲ್ಲ.

'ಪೀಟ್ ಅಂದ್ರೇನ್ಸಾ?' ಪ್ರಶ್ನೆ ಮಾಡಿದೆ.

'ಪೊಲಿಟಿಕಲ್ ಎಲಿಜಿಬಿಲಿಟಿ ಎಂಟ್ರೆನ್ಸ್ ಟೆಸ್ಟ್ ಕಲಾ. ಇದು ಜನರಲ್ ಪೇಪರ್. ತಾವು ಯಂಗೆ ನವರಂಗಿ ಆಟ ಆಡಿ ಕಾಮನ್ ಪೀಪಲ್‌ನಿಂದ ತಪ್ಪಿಸ್ಕಬಕು ಅಂತ ತಿಳಿಸಕ್ಕೆ ಕಾಮನ್ ಎಸ್ಕೇಪಿಂಗ್ ಟೆಸ್ಟು- ಸಿಇಟಿ, ಹಗರಣಗಳಲ್ಲಿ ಸಿಗೇಬೀಳದೇ ಬ್ಯಾರೇರನ್ನ ಕೆಡವದೆಂಗೆ ಅಂತ ಹೇಳಿಕೊಡಕ್ಕೆ ಜಾಯ್‌ಫುಲ್ ಎಸ್ಕೇಪಿಂಗ್ ಟೆಸ್ಟು- ಜೆಇಇ ಪಾಸಾಗಬಕು' ಅಂತಂದ್ರು.

'ಪಾಸಾದ ರಾಜಕಾರಣಿಗಳ ಮುಸುಡಿಗಳನ್ನೆಲ್ಲಾ ಪೇಪರಿನ ಮೊದಲನೇ ಪುಟದೇಲಿ ಅನೌನ್ಸ್ ಮಾಡಿದರೆ, ಪಕ್ಷಗಳು ಅವರ ಯೇಗ್ತೆ, ರೇಟು ನೋಡಿ ಖರೀದಿ ಮಾಡಿಕ್ಯತ್ತವೆ. ಜಾಸ್ತಿ ಮಾರ್ಕ್ಸ್ ತೆಗೆದೋರು ನಾಯಕರಾದರೆ, ಉಳಿದೋರನ್ನ ಅವರ ರ‍್ಯಾಂಕಿಂಗ್ ಪ್ರಕಾರ ಮ್ಯಾಗಲಮನೆ, ಕೆಳಗಲಮನೆ ನೆಂಬ್ರು ಮಾಡಬ್ಯದು!' ಯಂಟಪ್ಪಣ್ಣ ಹೇಳಿತು.

'ಪರೀಕ್ಷೆ ಚೆನ್ನಾಗಿ ಬರೆದಿಲ್ಲ ಅಂತ ಬೇಜಾರಲ್ಲಿ ಪಾಪದ ಹುಡ್ಲು ನ್ಯಾಣಾಕ್ಯತಾವೆ. ಪೀಟ್, ಸಿಇಟಿ, ಜೆಇಇ ಪರೀಕ್ಷೆ ಪಾಸಾಗದ ರಾಜಕಾರಣಿಗಳೂ ಆತ್ಮಹತ್ಯೆ ಮಾಡಿಕ್ಯಂದಾರೇನೋ?' ಕೇಳಿದೆ.

'ಅವರು ರಾಜಕಾರಣಿಗಳು ಕಲಾ! ಪ್ರಾಣ ತಗೀತರೇ ಹೊರತು ಕೊಟ್ಟು ವಾಡಿಕೆ ಇಲ್ಲ. ಆತ್ಮವೇ ಇಲ್ಲದೆ ಆತ್ಮಾವಲೋಕನ ಮಾಡಿಕ್ಯತರೆ. ಅಧಿಕಾರಕ್ಕೋಸ್ಕರ ಎಂತಾ ಲೋಪವಾದ್ರೂ ಮಾಡ್ತರೆ' ಅಂತ ನೀಟಾಗಿ ಹೇಳಿದರು ತುರೇಮಣೆ.

ಸಂಗತ

ಗುಂಡಿ ಬಾಯ್ತೆರೆದಿದೆ... ಕಣ್ತೆರೆಯಿರಿ

ರಸ್ತೆ ಗುಣಮಟ್ಟದ ಬಗ್ಗೆ ಗಂಭೀರ ಚಿಂತನೆ ನಡೆಸಿ ದೂರದೃಷ್ಟಿಯ ನಿರ್ಧಾರ ಕೈಗೊಳ್ಳಬೇಕಿದೆ

• ಡಾ. ಕೆ.ಎಸ್.ಚೈತ್ರಾ

ಮಳೆ ಬೀಳತೊಡಗಿದೆ. ಬಿಸಿಲಬೇಗೆ ತಗ್ಗಿ ವಾತಾವರಣ ತಂಪಾಗಿದೆ. ಸದ್ಯ ಕುಡಿಯುವ ನೀರಿಗೆ ತೊಂದರೆ ಇಲ್ಲ, ಉತ್ತಮ ಬೆಳೆಯೂ ಬರಲಿ ಎಂಬ ಸಂತಸಭಾವದಲ್ಲಿ ಇರುವಾಗಲೇ ರಸ್ತೆಯಲ್ಲಿ ಗುಂಡಿಗಳು ರಾರಾಜಿಸುತ್ತಿವೆ. ರಾಜಧಾನಿ ಬೆಂಗಳೂರಿನ ಕೆಲವು ಪ್ರದೇಶಗಳಲ್ಲಂತೂ ಸಾವಿರಾರು ರಸ್ತೆಗುಂಡಿಗಳಿವೆ. ಇವುಗಳಲ್ಲಿ ಹೆಚ್ಚಿನವು ಮುಖ್ಯರಸ್ತೆಗಳಲ್ಲಿಯೇ ಇವೆ! ರಾಜ್ಯದೆಲ್ಲೆಡೆ ಆಗುವ ರಸ್ತೆ ಅಪಘಾತಗಳಿಗೆ ಚಾಲಕರ ನಿರ್ಲಕ್ಷ್ಯದ ಜತೆಗೆ ರಸ್ತೆಗುಂಡಿಗಳು ಪ್ರಮುಖ ಕಾರಣ.


ಇವುಗಳನ್ನು ಮುಚ್ಚಲು ಸರ್ಕಾರದಿಂದ ವಿಶೇಷ ಕಾರ್ಯಪಡೆ ಘೋಷಣೆ ಆಗಿತ್ತು, ತಿಂಗಳೊಳಗೆ ಎಲ್ಲವನ್ನೂ ಮುಚ್ಚಬೇಕೆಂದು ಗಡುವನ್ನು ಕೂಡ ನೀಡಲಾಗಿತ್ತು. ಅವಧಿ ಮುಗಿದಿದೆ, ಒಂದಷ್ಟು ಕೆಲಸವಾಗಿದೆ, ಗುಂಡಿಗಳು ಇನ್ನೂ ಇವೆ ಮತ್ತು ಹೊಸದಾಗಿ ಕಾಣಿಸಿಕೊಳ್ಳುತ್ತಿವೆ!

ರಸ್ತೆಗುಂಡಿಗಳು ಉಂಟಾಗಲು ಮೂರು ಅಂಶಗಳು ಪ್ರಮುಖ ಪಾತ್ರ ವಹಿಸುತ್ತವೆ. ಮೇಲ್ಮೈನಲ್ಲಿ ಇರುವ ಬಿರುಕುಗಳು, ಒಳಗೆ ಸೇರುವ ನೀರು ಮತ್ತು ಹೆಚ್ಚಿದ ವಾಹನ ಸಂಚಾರ. ಆರಂಭದಲ್ಲಿ ನಯವಾಗಿ ಇದ್ದರೂ ಕ್ರಮೇಣ ಡಾಂಬರು ರಸ್ತೆಯ ಮೇಲ್ಮೈನಲ್ಲಿ ಅಲ್ಲಲ್ಲಿ ಬಿರುಕುಗಳು ಉಂಟಾಗುತ್ತವೆ. ವಾಹನ ಸಂಚಾರ ಹೆಚ್ಚಿದಾಗ ಒತ್ತಡ ಹೆಚ್ಚಿ ಬಿರುಕುಗಳು ಹಿಗ್ಗುತ್ತವೆ. ನೀರು ಇವುಗಳ ಮೂಲಕ ಒಳಸೇರಿ ರಸ್ತೆಯ ಅಡಿಪದರವನ್ನು ತಲುಪುತ್ತದೆ. ನಿಧಾನವಾಗಿ ಪದರಗಳೆಲ್ಲ ದುರ್ಬಲವಾಗಿ ಕಿತ್ತು ಬರುತ್ತವೆ. ಕ್ರಮೇಣ ಇವು ದೊಡ್ಡದಾಗಿ ಗುಂಡಿಗಳಾಗುತ್ತವೆ. ಮಳೆ ಬಂದಾಗ ಇವುಗಳಲ್ಲಿ ನೀರು ತುಂಬುವುದು ಸಹಜ. ಅದರೊಂದಿಗೆ ಒಳಚರಂಡಿ, ರಸ್ತೆಬದಿಯ ಕಾಲುವೆಗಳಲ್ಲಿ ನೀರು ಹರಿಯುವ ಸಮರ್ಪಕ ವ್ಯವಸ್ಥೆ ಇಲ್ಲದಿದ್ದಾಗ ರಸ್ತೆ ಮತ್ತಷ್ಟು ಶಿಥಿಲವಾಗುತ್ತದೆ. ಇದನ್ನು ತಡೆಯಲು ರಸ್ತೆ ನಿರ್ಮಾಣ ಉತ್ತಮವಾದ ಗುಣಮಟ್ಟದ್ದಾಗಿರಬೇಕು. ಓಡಾಡುವ ವಾಹನಗಳ ಒತ್ತಡವನ್ನು ತಡೆಯುವ ಸಾಮರ್ಥ್ಯ ಹೊಂದಿರಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಕಾಲಕಾಲಕ್ಕೆ ತಕ್ಕಂತೆ ರಸ್ತೆಗಳ ನಿರ್ವಹಣಾ ಕಾರ್ಯ ನಡೆಯಬೇಕು.

ರಸ್ತೆಗುಂಡಿಗಳಿಂದ ಆಗುವ ಅಪಾಯಗಳು ಅನೇಕ. ವಾಹನ ಚಲಿಸುವಾಗ ಟಯರ್, ಡಿಸ್ಕ್, ಸಸ್ಪೆನ್ಷನ್‌ನ ಬಿಡಿಭಾಗಗಳಿಗೆ ಹಾನಿಯಾಗುವ ಸಾಧ್ಯತೆ ಇರುತ್ತದೆ. ವೇಗವಾಗಿ ಬರುತ್ತಿರುವ ವಾಹನಚಾಲಕರು ರಸ್ತೆಗುಂಡಿಗಳನ್ನು ಕಂಡಾಗ ಇದ್ದಕ್ಕಿದ್ದಂತೆ ಬ್ರೇಕ್ ಒತ್ತಿ, ಗುಂಡಿಗಳನ್ನು ತಪ್ಪಿಸುವ ಪ್ರಯತ್ನ ಮಾಡುತ್ತಾರೆ. ದಿಢೀರನೆ ನಿಲ್ಲುವುದರಿಂದ ಹಿಂದಿರುವ ಗಾಡಿಗಳು ಗುದ್ದುವ ಸಂಭವ ಇರುತ್ತದೆ. ಅನಿರೀಕ್ಷಿತವಾಗಿ ವಾಹನದ ಸ್ಟಿಯರಿಂಗ್ ಅನ್ನು ಅತ್ತಿತ್ತ ಆಡಿಸುವುದರಿಂದ ನಿಯಂತ್ರಣ ಕಳೆದುಕೊಳ್ಳಬಹುದು. ಇದರಿಂದ ಅಪಘಾತ ಉಂಟಾಗಬಹುದು.

ಹದಗೆಟ್ಟ ರಸ್ತೆ ಕಾರಣಕ್ಕೆ ವಾಹನಗಳ ಅಡ್ಡಾದಿಡ್ಡಿ ಚಾಲನೆಯಿಂದ ಪಾದಚಾರಿಗಳಿಗೂ ಅಪಾಯ ತಪ್ಪಿದ್ದಲ್ಲ. ಮಳೆಗಾಲದಲ್ಲಂತೂ ತಿರುವುಗಳಿರುವ ಕಡೆ ನೀರು ತುಂಬಿದ ರಸ್ತೆಗುಂಡಿಗಳು ಮೃತ್ಯುಕೂಪಗಳೇ ಸರಿ. ಹೀಗಾಗಿಯೇ ಮಳೆಗಾಲದಲ್ಲಿ ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚು. ಬೆಂಗಳೂರಿನಲ್ಲಿ ಮೂರರಲ್ಲಿ ಒಂದು ರಸ್ತೆ ಅಪಘಾತಕ್ಕೆ ಈ ಗುಂಡಿಗಳು ಕಾರಣ ಎಂದು ಅಧ್ಯಯನದ ವರದಿಗಳು ತಿಳಿಸಿವೆ.

ಈ ಕುರಿತು ಅಧಿಕಾರಿಗಳು 'ರಸ್ತೆಗಳ ನಿರ್ವಹಣೆಯು ಕಾಲಕಾಲಕ್ಕೆ ಸರಿಯಾಗಿ ನಡೆಯುತ್ತಿದೆ. ವಾಹನಗಳ ದಟ್ಟಣೆ ತೀರಾ ಹೆಚ್ಚಿರುವಾಗ ಸಹಜವಾಗಿಯೇ ರಸ್ತೆ ಸವೆತ ಮತ್ತು ಗುಂಡಿಗಳಾಗುತ್ತವೆ. ಹಾಟ್ ಮಿಕ್ಸ್, ಕೋಲ್ಡ್ ಮಿಕ್ಸ್ ಎರಡೂ ವಿಧಾನಗಳ ಮೂಲಕ ಹಗಲು- ರಾತ್ರಿ ರಸ್ತೆಗುಂಡಿಗಳನ್ನು ಮುಚ್ಚುವ ಕಾರ್ಯ ನಡೆದಿದೆ. ಮಳೆಗಾಲದಲ್ಲಿ ಡಾಂಬರು ಹಾಕಿ ಗುಂಡಿ ಮುಚ್ಚುವುದು ಕಷ್ಟ. ಹಾಗಾಗಿ ಕೋಲ್ಡ್ ಮಿಕ್ಸ್ ವಿಧಾನ ಬಳಸುತ್ತಿದ್ದೇವೆ. ಇದು ಹೆಚ್ಚು ಬಾಳಿಕೆ ಬರದಿದ್ದರೂ ಮಳೆಗಾಲದಲ್ಲಿ ಉಂಟಾಗುವ ಹಾನಿಯನ್ನು ತಪ್ಪಿಸಲು ಅನುಕೂಲಕರ. ಪ್ರತಿ ವಾರ್ಡ್‌ನಲ್ಲಿ ಎಂಜಿನಿಯರ್‌ಗಳು, ಸಂಚಾರ ಪೊಲೀಸರು ರಸ್ತೆಗುಂಡಿಗಳನ್ನು ಪತ್ತೆ ಮಾಡಿ ಮುಚ್ಚುವಲ್ಲಿ ನಿರತರಾಗಿದ್ದಾರೆ. ಹಾಗೆಯೇ ಸಾರ್ವಜನಿಕರು ಕೂಡ ರಸ್ತೆಗುಂಡಿಗಳ ಬಗ್ಗೆ ದೂರನ್ನು ನೀಡಬಹುದು. ಚುನಾವಣಾ ಕಾಲ, ಮೆಟ್ರೊದಂತಹ ಕಾಮಗಾರಿಗಳು ನಡೆಯುತ್ತಿರುವಾಗ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರನ್ನು ಕೆಲಸಕ್ಕೆ ಬಳಸುವುದು ಸ್ವಲ್ಪ ಕಷ್ಟವಾಗಿತ್ತು. ಆದರೂ ಬಹಳಷ್ಟು ರಸ್ತೆಗುಂಡಿಗಳನ್ನು ಮುಚ್ಚಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.



'ಕೋಲ್ಡ್ ಮಿಕ್ಸ್ ಉಪಯೋಗಿಸುವುದೇನೋ ಸರಿ. ಆದರೆ ಹೀಗೆ ಮುಚ್ಚಿದ ಗುಂಡಿಗಳು ವಾರದಲ್ಲೇ ಕಿತ್ತು ಬರುತ್ತಿವೆ' ಎಂಬ ಆರೋಪಗಳಿವೆ. ಈ ಸಮಸ್ಯೆ ವರ್ಷವಿಡೀ ಇದ್ದದ್ದೇ, ಮಳೆಗಾಲದಲ್ಲಿ ಹೆಚ್ಚಾಗುತ್ತದೆ ಅಷ್ಟೆ. ಈ ರಸ್ತೆಗುಂಡಿಗಳಿಂದ ಪ್ರಾಣಹಾನಿಯಾಗಿ ಗಲಾಟೆಯಾದಾಗ ಒಂದಷ್ಟು ಕಾರ್ಯ ನಡೆಯುತ್ತದೆ. ಇದು ಬರೀ ತೇಪೆ ಹಚ್ಚುವ ಕೆಲಸ. ನಿಜವಾಗಿ ಆಗಬೇಕಾದದ್ದು ಉತ್ತಮ ರಸ್ತೆಗಳ ನಿರ್ಮಾಣ. ಪ್ರತಿವರ್ಷ ಕೋಟ್ಯಂತರ ರೂಪಾಯಿಯನ್ನು ರಸ್ತೆಗಾಗಿ ಮೀಸಲಿಡುತ್ತಾರೆ. ಆದರೂ ನಿರ್ಮಾಣವಾದ ಕೆಲವೇ ತಿಂಗಳಲ್ಲಿ ರಸ್ತೆಯಲ್ಲಿ ಗುಂಡಿಗಳು ಬೀಳುತ್ತವೆ. ಮಣ್ಣಿನ ಮೇಲೆ ಹಾಕುವ ತಳಪದರ ಗಟ್ಟಿಯಾಗಿ ಇರದಿದ್ದರೆ ಮೇಲೆ ಎಷ್ಟೇ ಡಾಂಬರು ಸುರಿದರೂ ಗುಂಡಿಗಳು ಖಚಿತವೇ. ರಸ್ತೆ ನಿರ್ಮಿಸುವಾಗ ನಿಯಮಗಳನ್ನು ಪಾಲಿಸಲಾಗುತ್ತಿದೆಯೇ ಎಂದು ಗಮನಿಸುವವರು ಯಾರು? ರಸ್ತೆ ನಿರ್ಮಾಣವಾದ ಬಳಿಕ ಗುಣಮಟ್ಟವನ್ನು ಪರೀಕ್ಷಿಸಿ, ನಂತರವೇ ದುಡ್ಡನ್ನು ಬಿಡುಗಡೆ ಮಾಡುವ ವ್ಯವಸ್ಥೆ ಜಾರಿಯಾಗಬೇಕು. ಇಲ್ಲದಿದ್ದರೆ ಈ ಗಡುವು, ರಸ್ತೆಗುಂಡಿ ಮುಚ್ಚುವುದು ಇವೆಲ್ಲವೂ ಪ್ರತಿವರ್ಷದ ಪ್ರಹಸನ ಎಂಬ ಆಕ್ರೋಶದ ಮಾತುಗಳಲ್ಲಿ ಹುರುಳಿಲ್ಲದೇ ಇಲ್ಲ.

ಮಳೆ ಬರುವಾಗ, ಅಪಘಾತವಾದಾಗ ತುರ್ತು ಕ್ರಮ ಕೈಗೊಳ್ಳುವುದು ಸರಿ. ಆದರೆ ನಿತ್ಯದ ಜೀವನ-ವ್ಯವಹಾರಕ್ಕೆ ಸಾಧನವಾದ ರಸ್ತೆಗಳ ಗುಣಮಟ್ಟದ ಬಗ್ಗೆ ಗಂಭೀರ ಚಿಂತನೆ ನಡೆಸಿ ದೂರದೃಷ್ಟಿಯ ನಿರ್ಧಾರ ಕೈಗೊಳ್ಳುವುದು ಅಗತ್ಯ!

ವಾಚಕರ ವಾಣಿ

ಯುವ ಜೋಡಿಯ ಮಾದರಿ ನಡೆ

ಚಂದನ್ ಶೆಟ್ಟಿ ಮತ್ತು ನಿವೇದಿತಾ ಗೌಡ ದಂಪತಿ ವಿಚ್ಛೇದನ ನೀಡಿದ ಸುದ್ದಿ ತಿಳಿದು ಮನಸ್ಸಿಗೆ ಬೇಜಾರಾದರೂ ಅವರು ವಿಚ್ಛೇದನ ನೀಡಿದ ಕ್ರಮ ಮಾದರಿಯಾಗಿದೆ ಎನಿಸಿತು. ದೇಶದಲ್ಲಿ ದಿನಂಪ್ರತಿ ಬಹಳಷ್ಟು ವಿಚ್ಛೇದನಗಳು ನಡೆಯುತ್ತಿರುತ್ತವೆ. ಇವುಗಳಲ್ಲಿ ಎಷ್ಟೋ ಪ್ರಕರಣಗಳು ಕಲಹ, ಕೊಲೆ, ಹಲ್ಲೆ, ವೈಮನಸ್ಸು, ಕೋರ್ಟು ಕಚೇರಿ, ಪರಸ್ಪರ ದೋಷಾರೋಪಗಳಿಂದ ತಾರ್ಕಿಕ ಅಂತ್ಯ ಕಾಣುತ್ತವೆ. ಆದರೆ ಚಂದನ್ ಮತ್ತು ನಿವೇದಿತಾ ಜೋಡಿಯು ವಿಚ್ಛೇದನ ನೀಡುವ ದಿನವೂ ಒಂದೇ ಮನೆಯಲ್ಲಿ ವಾಸವಾಗಿದ್ದು, ನ್ಯಾಯಾಲಯಕ್ಕೆ ಹಾಜರಾಗಿ, ವಿಚ್ಛೇದನದ ಪ್ರಕ್ರಿಯೆಗಳನ್ನು ಮುಗಿಸಿ, ನಂತರ ನಗುನಗುತ್ತ, ಪರಸ್ಪರ ಕೈಹಿಡಿದು ತೆರಳಿತು. ವಿಚ್ಛೇದನ ನೀಡಿದ ನಂತರವೂ ತಾವು ಪರಸ್ಪರರನ್ನು ಗೌರವಿಸುವುದಾಗಿ ಹೇಳಿಕೆ ನೀಡಿದ್ದಾರೆ. ಈ ಜೋಡಿಯ ನಡೆ ನಿಜಕ್ಕೂ ಮಾದರಿ ಆಗಿದೆ.

ಸುರೇಶ ಅರಳಿಮರ, ಬಾದಾಮಿ

ಅಚ್ಚರಿ ತಾರದ ಮುಖಭಂಗ

1992ರಲ್ಲಿ ಬ್ರಿಟನ್ನಿನಲ್ಲಿ ಸಾರ್ವತ್ರಿಕ ಚುನಾವಣೆ ನಡೆದ ಬಳಿಕ ಬಿಬಿಸಿ ಪ್ರಕಟಿಸಿದ್ದ ಮತಗಟ್ಟೆ ಸಮೀಕ್ಷೆ, 'ಯಾವುದೇ ಪಕ್ಷಕ್ಕೂ ಬಹುಮತ ಸಾಧ್ಯವಿಲ್ಲ, ಆದರೆ ಆಡಳಿತಾರೂಢ ಕನ್ಸರ್ವೇಟಿವ್ (ಟೋರಿ) ಪಕ್ಷ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮುತ್ತದೆ' ಎಂದು ತಿಳಿಸಿತ್ತು. ಆದರೆ ಫಲಿತಾಂಶ ಪ್ರಕಟವಾದಾಗ ಕನ್ಸರ್ವೇಟಿವ್ ಪಕ್ಷ ಅನಿರೀಕ್ಷಿತ ಬಹುಮತ ಪಡೆದಿತ್ತು. ಚುನಾವಣಾಪೂರ್ವ ಸಮೀಕ್ಷೆಗಳೆಲ್ಲವೂ ಲೇಬರ್ ಪಕ್ಷ ಬಹುಮತ ಪಡೆಯುತ್ತದೆ ಎಂದು ಘೋಷಿಸಿದ್ದನ್ನು ಪರಿಗಣಿಸಿದರೆ ಬಿಬಿಸಿಯ ಮತಗಟ್ಟೆ ಸಮೀಕ್ಷೆಯ ತಪ್ಪು ಸಣ್ಣದಾಗಿ ಕಾಣಿಸಬಹುದು. ಆದರೆ ಈ ಸಮೀಕ್ಷೆಯನ್ನು ನಡೆಸಿದ್ದ ಪರಿಣತರು ಮಾತ್ರ ಇದನ್ನು ಹಗುರವಾಗಿ ಪರಿಗಣಿಸಲಿಲ್ಲ. ಮತದಾರರ ಮನದಾಳವನ್ನು ಸಂಪೂರ್ಣವಾಗಿ ಗ್ರಹಿಸಲು ಸಾಧ್ಯವಾಗದೇ ಹೋದದ್ದು ಅವರನ್ನು ಕಾಡಿತ್ತು. ಆದ ತಪ್ಪನ್ನು ಹೇಗೆ ಸರಿಪಡಿಸಬಹುದೆಂಬ ಕಡೆ ಅವರು ಗಮನಹರಿಸಿದ ಪರಿಣಾಮವೇ ಬಿಬಿಸಿ ಇನ್ನೆರಡು ವಾಹಿನಿಗಳ (ಐಟೀವಿ ಮತ್ತು ಸ್ಕೈ ಟೀವಿ) ಜೊತೆಗೂಡಿ ಪ್ರಕಟಿಸುವ ಚುನಾವಣೋತ್ತರ ಸಮೀಕ್ಷೆ. ಇದು ಇಂದು ಜಗತ್ತಿನ ಅತ್ಯಂತ ವಿಶ್ವಾಸಾರ್ಹ ಸಮೀಕ್ಷೆಗಳಲ್ಲಿ ಒಂದು ಎಂದು ಪರಿಗಣಿಸಲ್ಪಟ್ಟಿದೆ. ಮತದಾನದ ದಿನದ ರಾತ್ರಿ 10 ಗಂಟೆಗೆ ಪ್ರಕಟಿಸಲಾಗುವ ಈ ಸಮೀಕ್ಷೆಯನ್ನು ಬ್ರಿಟಿಷ್ ಪ್ರಜೆಗಳು ಫಲಿತಾಂಶದಷ್ಟೇ ಕಾತರದಿಂದ ವೀಕ್ಷಿಸುತ್ತಾರೆ.

ಭಾರತೀಯ ಚುನಾವಣಾ ಸಮೀಕ್ಷಕರು ಬಿಬಿಸಿ ಆಗ ಎದುರಿಸಿದ್ದಕ್ಕಿಂತ ಹಲವು ಪಟ್ಟು ಹೆಚ್ಚಿನ ಮುಜುಗರ ಎದುರಿಸಬೇಕಾದ ಪರಿಸ್ಥಿತಿ ಬಂದದ್ದು 2004ರ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ. ಅಂದು ಅಧಿಕಾರದಲ್ಲಿದ್ದ ಎನ್‌ಡಿಎ ಅಧಿಕಾರ ಕಳೆದುಕೊಳ್ಳಬಹುದೆಂದು ಊಹಿಸುವಲ್ಲಿ ಎಲ್ಲ ಸಮೀಕ್ಷಕರೂ ವಿಫಲರಾಗಿದ್ದರು. ಆದರೆ ಈ ವೈಫಲ್ಯದಿಂದ ಪಾಠ ಕಲಿಯಬೇಕೆನ್ನುವ ಬಯಕೆ ಅವರಲ್ಲಿ ಇದ್ದಂತಿರಲಿಲ್ಲ. ಅವರನ್ನು ಪೋಷಿಸುವ ಮಾಧ್ಯಮಗಳಿಗೂ ಅದು ಬೇಕಿರಲಿಲ್ಲ. ಅದಾಗಲೇ ಪ್ರಚಾರ ಸಾಧನಗಳಾಗಿ ಬದಲಾಗುತ್ತಿದ್ದ ಕೆಲವು ದೃಶ್ಯ ಮಾಧ್ಯಮಗಳು ಈ ಸಮೀಕ್ಷಕರನ್ನು ತಮ್ಮ ಅಸ್ತ್ರಗಳನ್ನಾಗಿ ಬಳಸಿಕೊಳ್ಳಲಾರಂಭಿಸಿದ್ದವು. ಹಲವು ಬಾರಿ ತಪ್ಪು ಸಮೀಕ್ಷೆ ಮಾಡಿದವರು ಈ ಮಾಧ್ಯಮಗಳಲ್ಲಿ ಸ್ಟಾರ್ ಸಮೀಕ್ಷಕರು ಎನಿಸಿಕೊಂಡರು. ಎಂದೋ ಈ ವೃತ್ತಿಯಿಂದ ನಿವೃತ್ತಿ ಪಡೆಯಬೇಕಿದ್ದವರು ಅನುಭವಿಗಳಂತೆ ಅಭಿಪ್ರಾಯ ನೀಡುತ್ತಿದ್ದರು. ಹೀಗಿರುವಾಗ, ಈ ಎಲ್ಲ ಸಮೀಕ್ಷಕರು ಮತ್ತು ಮಾಧ್ಯಮಗಳು ಮೊನ್ನೆ ಇನ್ನೊಮ್ಮೆ ಹೀನಾಯವಾಗಿ ಮುಖಭಂಗ ಅನುಭವಿಸಿದ್ದು ಆಶ್ಚರ್ಯ ಉಂಟು ಮಾಡುವುದಿಲ್ಲ. ಆದರೆ 20 ವರ್ಷಗಳ ಹಿಂದೆ ಪ್ರಹಸನದಂತೆ ತೋರಿದ್ದು ಈ ಬಾರಿ ದುರಂತದಂತೆ ಕಾಣಿಸುತ್ತಿದೆ. ಇನ್ನಾದರೂ ಇವರು ಪಾಠ ಕಲಿಯುವರೆಂದು ಯಾರಾದರೂ ಭಾವಿಸಿದರೆ ಅವರಂತಹ ಮುಗ್ಧರು ಯಾರೂ ಇರಲಾರರು.

ಸುನೀಲ ನಾಯಕ, ಬೆಂಗಳೂರು

ಶಿಕ್ಷಕರ ಕ್ಷೇತ್ರ: ಶಿಕ್ಷಕರೇ ಅಭ್ಯರ್ಥಿಗಳಾಗಲಿ

ವಿಧಾನಪರಿಷತ್‌ನ ಶಿಕ್ಷಕರ ಕ್ಷೇತ್ರಗಳಿಗೆ ಇತ್ತೀಚೆಗೆ ಚುನಾವಣೆ ನಡೆಯಿತು. ಇದು ಹೆಸರಿಗೆ ಮಾತ್ರ ಶಿಕ್ಷಕರ ಕ್ಷೇತ್ರ. ಅದಕ್ಕೆ ಅಭ್ಯರ್ಥಿಯಾಗಿ ನಿಲ್ಲಲು ವೃತ್ತಿ ಸಂಬಂಧಿತ ಮಾನದಂಡವೇ ಇಲ್ಲದಿರುವುದು ವಿಪರ್ಯಾಸ. ಈ ಕ್ಷೇತ್ರಕ್ಕೆ ಯಾರು ಬೇಕಾದರೂ ಸ್ಪರ್ಧೆ ಮಾಡುವುದಾದರೆ ಶಿಕ್ಷಕರ ಕ್ಷೇತ್ರ ಎಂದು ಏಕೆ ಕರೆಯಬೇಕು? ಈ ಕ್ಷೇತ್ರದ ಚುನಾವಣಾ ಸ್ಪರ್ಧೆಗೆ ಇಂತಹ ಮಾನದಂಡಗಳು ಏಕಿಲ್ಲ? ಸರ್ಕಾರ ಈ ಬಗ್ಗೆ ಚಿಂತನೆ ಮಾಡಬೇಕಾದ ಅಗತ್ಯವಿದೆ.

ಶಿಕ್ಷಕರ ಕ್ಷೇತ್ರ ಎಂದ ಮೇಲೆ ಮೊದಲನೆಯದಾಗಿ ಶಿಕ್ಷಕರು ಮಾತ್ರ ಸ್ಪರ್ಧೆ ಮಾಡುವಂತೆ ನಿಯಮ ಜಾರಿಗೆ ಬರಬೇಕು. ಎರಡನೆಯದು, ಕನಿಷ್ಠ 15 ವರ್ಷಗಳ ಕಾಲ ಶಿಕ್ಷಕರಾಗಿ ಸೇವೆ ಸಲ್ಲಿಸಿರಬೇಕು ಇಲ್ಲವೆ ನಿವೃತ್ತ ಶಿಕ್ಷಕರಾಗಿರಬೇಕು. ಮೂರನೆಯದಾಗಿ, ಈ ಕ್ಷೇತ್ರದಲ್ಲಿ ರಾಜಕಾರಣಕ್ಕೆ ಆಸ್ಪದ ನೀಡದೆ ಪಕ್ಷಾತೀತ ಶಿಕ್ಷಕರು ಮಾತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಬೇಕು. ಆಗ ಮಾತ್ರ ಶಿಕ್ಷಕರ ಕ್ಷೇತ್ರಕ್ಕೆ ಒಂದು ಬೆಲೆ, ಗೌರವ ಇರುತ್ತದೆ. ಸ್ಪರ್ಧೆಗೆ ವೃತ್ತಿಸಂಬಂಧದ ಮಾನದಂಡ ಇಲ್ಲದೇ ಇರುವುದರಿಂದ ಈ ಕ್ಷೇತ್ರವೂ ಕಲುಷಿತಗೊಂಡಿದೆ. ಈ ಬಗ್ಗೆ ಸರ್ಕಾರ ಚಿಂತನೆ ಮಾಡಲಿ, ಜೊತೆಗೆ ಶಿಕ್ಷಕರು ಸಹ ತಮ್ಮ ಹಕ್ಕನ್ನು ಇತರರಿಗೆ ನೀಡದೆ ತಮ್ಮದಾಗಿಸಿಕೊಳ್ಳಲಿ.

ಸಿ.ಸಿದ್ದರಾಜು ಆಲಕೆರೆ, ಮಂಡ್ಯ

'...ಬಡಾ ಸ್ವಪ್ನ' ಕರಗಿಹೋಗುತ್ತಿದೆ!

'ನೀಟ್' ತರಬೇತಿ ಕೇಂದ್ರವೊಂದಕ್ಕೆ ಇತ್ತೀಚೆಗೆ ಭೇಟಿ ನೀಡಿದ್ದೆ. ಕೇಂದ್ರದ ಹೊರಭಾಗದ ಗೋಡೆಯಲ್ಲಿ 'ಎಂಬಿಬಿಎಸ್– 'ಮಾ ಬಾ ಕಾ ಬಡಾ ಸ್ವಪ್ನ' ಎಂದು ಬರೆಸಿದ್ದರು. ಆದರೆ ಈ ಬಾರಿಯ ನೀಟ್‌ನಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ, ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ತಪ್ಪಾಗಿದ್ದರ ಪರಿಣಾಮದಿಂದ ಕೃಪಾಂಕ ನೀಡುವುದು, ಪರೀಕ್ಷೆಯಲ್ಲಿ ನಕಲು, ಅಕ್ರಮದ ಆರೋಪಗಳೆಲ್ಲ ಪುಂಖಾನುಪುಂಖವಾಗಿ ಕೇಳಿಬರುತ್ತಿರುವುದನ್ನು ನೋಡಿದಾಗ, ಬಡ ಮತ್ತು ಪ್ರತಿಭಾವಂತ ಮಕ್ಕಳ ಪೋಷಕರ ಈ ದೊಡ್ಡ ಕನಸು ಧುತ್ತೆಂದು ಬೀಳುತ್ತದೆಯೇ ಎಂದು ಅನುಮಾನವಾಯಿತು. ಲಕ್ಷಾಂತರ ರೂಪಾಯಿ ನೀಡಿ ತರಬೇತಿ ಪಡೆದುಕೊಂಡರೂ ಪರೀಕ್ಷಾ ದೋಷದ ಫಲದಿಂದ ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳು ಆತ್ಮವಿಶ್ವಾಸ ಕಳೆದುಕೊಂಡು ಕುಗ್ಗುವಂತೆ ಆಗಿದೆ.

ಶಿಕ್ಷಕರು ಮತ್ತು ಪಾಲಕರು ಮಕ್ಕಳನ್ನು ಡಾಕ್ಟರ್, ಎಂಜಿನಿಯರ್ ಮಾಡುವುದನ್ನೇ ಗುರಿಯಾಗಿಸಿಕೊಳ್ಳಬೇಕಾದ ಅಗತ್ಯವಿಲ್ಲ. ಮಕ್ಕಳು ಬದುಕನ್ನು ಸುಂದರವಾಗಿ ಕಟ್ಟಿಕೊಳ್ಳಲು ಇನ್ನೂ ಹಲವಾರು ಶೈಕ್ಷಣಿಕ ವೃತ್ತಿಪರ ಕ್ಷೇತ್ರಗಳಿವೆ. ಅವುಗಳನ್ನು ಪರಿಚಯಿಸಿ, ಆ ಮಾರ್ಗದಲ್ಲಿಯೂ ದೊಡ್ಡದಾದದ್ದನ್ನು ಸಾಧಿಸಬಹುದು ಎಂಬ ಮನೋಧೈರ್ಯವನ್ನು ಅವರಲ್ಲಿ ತುಂಬಬೇಕು.

ಸೋಮನಾಥ ಡಿ., ಹಾವೇರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಆಟ: ಸಾಮರಸ್ಯದ ಪಾಠ



ವಿಶ್ವ ಸಂಸ್ಥೆಯ ಸಮೀಕ್ಷಾ ದತ್ತಾಂಶ

- **16** ಕೋಟಿ ಮಕ್ಕಳು ವಿಶ್ವದಾದ್ಯಂತ ಆಟದ ಸಮಯದಲ್ಲಿ ದುಡಿಮೆಯಲ್ಲಿ ತೊಡಗಿದ್ದಾರೆ
- **71%**ರಷ್ಟು ಮಕ್ಕಳು ಆಟವಾಡುವುದರಿಂದ ತಾವು ಖುಷಿಯಾಗಿರುತ್ತೇವೆ ಎಂದು ಹೇಳಿದ್ದಾರೆ
- **58%**ರಷ್ಟು ಮಕ್ಕಳು ಆಟದ ಮೂಲಕ ತಾವು ಹೊಸ ಸ್ನೇಹಿತರನ್ನು ಹುಡುಕಿಕೊಂಡಿದ್ದೇವೆ ಎಂದು ಹೇಳಿದ್ದಾರೆ
- **41%**ರಷ್ಟು ಮಕ್ಕಳು ತಮ್ಮ ಪೋಷಕರು ಮತ್ತು ಅಕ್ಕ-ಪಕ್ಕದ ಮನೆಯ ಹಿರಿಯರು ಆಟವಾಡುವುದನ್ನು ನಿಲ್ಲಿಸಿ ಎಂದು ಹೇಳುತ್ತಾರೆ ಎಂದು ಹೇಳಿಕೊಂಡಿದ್ದಾರೆ
- ಪ್ರತಿ ನಾಲ್ವರಲ್ಲಿ ಒಂದು ಮಗು ಮಾತ್ರ ತಾನು ಬೀದಿಯಲ್ಲಿ ಆಟವಾಡುತ್ತೇನೆ ಎಂದು ಹೇಳಿಕೊಂಡಿದೆ. ಎರಡು ದಶಕಗಳ ಹಿಂದೆ ಪ್ರತಿ ನಾಲ್ವರಲ್ಲಿ ಮೂವರು ಮಕ್ಕಳು ಬೀದಿಯಲ್ಲಿ ಆಟವಾಡುತ್ತಿದ್ದವು

ಇಂದು ಅಂತರರಾಷ್ಟ್ರೀಯ ಆಟದ ದಿನ. ಪ್ರತಿ ವರ್ಷದ ಜೂನ್ 11ರಂದು ಆಟದ ದಿನವನ್ನು ಆಚರಿಸಬೇಕು ಎಂದು ವಿಶ್ವಸಂಸ್ಥೆ ಘೋಷಿಸಿದೆ. ವಿಶ್ವ ಸಂಸ್ಥೆಯ 140 ಸದಸ್ಯ ದೇಶಗಳು ಇದನ್ನು ಒಪ್ಪಿಕೊಂಡಿವೆ. ಹೀಗಾಗಿ ಮೊದಲ 'ಅಂತರರಾಷ್ಟ್ರೀಯ ಆಟದ ದಿನ'ವನ್ನು ಇಂದು ಆಚರಿಸಲಾಗುತ್ತಿದೆ. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಈ ದಿನವನ್ನು ಆಚರಿಸಬೇಕು ಎಂದು ರಾಜ್ಯ ಸರ್ಕಾರವೂ ಸುತ್ತೋಲೆ ಹೊರಡಿಸಿದೆ. ಮಕ್ಕಳ ಬೆಳವಣಿಗೆಯಲ್ಲಿ, ಸಾಮಾಜೀಕರಣದಲ್ಲಿ ಆಟದ ಪಾತ್ರ ಏನು ಎಂಬುದನ್ನು ವಿವರಿಸಲು ಮತ್ತು ಆಟದ ಅಗತ್ಯವನ್ನು ಹೇಳಲು ಈ ದಿನವನ್ನು ಆಚರಿಸಲಾಗುತ್ತಿದೆ..

• ಸುಕೃತ ಎಸ್.

ಇತ್ತೀಚಿನ ವರ್ಷಗಳಲ್ಲಿ ಆಟ ಎಂಬುದು ಮಕ್ಕಳ ಬದುಕಿನ ಭಾಗವಾಗಿ ಉಳಿದಿಲ್ಲ. ಆಟವು ಯಾವುದೇ ಕುಟುಂಬದ, ಸರ್ಕಾರದ, ಶಾಲೆಯ, ಒಟ್ಟಿನಲ್ಲಿ ಇಡೀ ಸಮಾಜದ ಆದ್ಯತೆಯಾಗಿಯೂ ಉಳಿದಿಲ್ಲ. ಮಕ್ಕಳು ಆಟವಾಡುತ್ತಾರೆ ಎಂದರೆ, ಅದು ಸಮಯ ವ್ಯರ್ಥ ಮಾಡಿದಂತೆಯೇ ಎಂದು ಭಾವಿಸುವ ಸ್ಥಿತಿಯಲ್ಲಿ ಸಮಾಜವಿದೆ. ಮಕ್ಕಳು ಆಟ ಆಡುವುದು ಅವರ ಹಕ್ಕು ಎಂಬುದಾಗಿ ವಿಶ್ವಸಂಸ್ಥೆ ಪರಿಗಣಿಸಿದೆ. ಆದರೆ, ವಿಶ್ವದೆಲ್ಲೆಡೆ ಮಕ್ಕಳ ಈ ಹಕ್ಕನ್ನು ಕಸಿದುಕೊಳ್ಳಲಾಗುತ್ತಿದೆ.

'ಆರಾಮ ಮಾಡುವುದು ಮತ್ತು ವಿರಾಮ ಪಡೆದುಕೊಳ್ಳುವುದು, ಆಟವಾಡುವುದು ಮತ್ತು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು ಮಕ್ಕಳ ಹಕ್ಕು. ಈ ಮೂಲಕ ಅವರು ಸಾಂಸ್ಕೃತಿಕ ಜೀವನಕ್ಕೆ ಮತ್ತು ಕಲೆಗಳಿಗೆ ಯಾವುದೇ ನಿರ್ಬಂಧ ಇಲ್ಲದೆ ತೆರೆದುಕೊಳ್ಳಬೇಕು' ಎನ್ನುತ್ತದೆ ವಿಶ್ವಸಂಸ್ಥೆ. ಆದರೆ, ಸಮಾಜದ ಇಡೀ ವ್ಯವಸ್ಥೆಯು ಮಕ್ಕಳನ್ನು ಅಂಕ ಗಳಿಸುವ ಯಂತ್ರಗಳನ್ನಾಗಿಸುತ್ತಿದೆ.

ಶಾಲೆಗಳಲ್ಲಿ ಆಟದ ಸಮಯವನ್ನೇ ತೆಗೆದುಹಾಕಲಾಗುತ್ತಿದೆ ಇಲ್ಲವೆ ಕಡಿತಗೊಳಿಸಲಾಗುತ್ತಿದೆ. ಶಾಲೆಯೆಂದರೆ, ಆಟದಂಗಳ ಇರಲೇಬೇಕು ಎಂಬ ನಿಯಮವು ಈಗ ಸಡಿಲಗೊಂಡಿದೆ. ಆಟದ ಸಮಯವನ್ನು ಈಗ ಪಠ್ಯಗಳೇ ನುಂಗುತ್ತಿವೆ. ಇನ್ನು ತಾನು ಆಟಗಾರನಾಗಬೇಕು, ಆಟಗಾರ್ತಿ ಆಗಬೇಕು ಎಂದು ಮಕ್ಕಳು ಕನಸು ಕಾಣುವುದು ತಪ್ಪು ಎನ್ನುವ ಪರಿಸ್ಥಿತಿ ಇದೆ. ಆಟವನ್ನೇ ಪ್ರಧಾನವಾಗಿಸಿ, ಪಠ್ಯಗಳನ್ನು ಆಟದ ಮೂಲಕವೇ ಹೇಳಿಕೊಡುವ ಶಾಲೆಗಳು ಇತ್ತೀಚೆಗೆ ತೆರೆಯುತ್ತಿವೆ. ಆದರೆ, ಇಂಥ ಶಾಲೆಗಳಿಗೆ ಮಕ್ಕಳನ್ನು ಸೇರಿಸುವುದು ಭವಿಷ್ಯಕ್ಕೆ ಹಾನಿ ಎನ್ನುವ ಮನಃಸ್ಥಿತಿ ಇದೆ.

'ಪಠ್ಯವನ್ನು ಆಟದ ಮೂಲಕ ಹೇಳಿಕೊಡುವ ಶಾಲೆಗೆ ನಮ್ಮ ಮಕ್ಕಳನ್ನು ಸೇರಿಸಿದ್ದೆವು. ಇದಕ್ಕಾಗಿ ನಮ್ಮ ಸಂಬಂಧಿಕರು, ಸ್ನೇಹಿತರು ನಮ್ಮನ್ನು ದೂರಿದರು. ನಮ್ಮ ಮಗಳೊಬ್ಬಳು ಬ್ಯಾಡ್ಮಿಂಟನ್ ಆಟಗಾರ್ತಿ ಆಗಬೇಕು ಎಂದು ನಮ್ಮ ಬಳಿ ಹೇಳಿದಾಗ ನಮಗೆ ಸಂತೋಷವೇ ಆಯಿತು. ಆದರೆ, ಮತ್ತದೇ ಸಂಬಂಧಿಕರು, ಸ್ನೇಹಿತರು ದೂರಿದರು. ನನ್ನ ಗಂಡ ವೈದ್ಯ. ವೈದ್ಯನ ಮಗಳು ಆಟಗಾರ್ತಿಯಾಗುವುದು ಎಂದರೆ ಹೇಗೆ? ಓದು ಮುಖ್ಯ, ಮಗಳಿಗೆ ಓದಿಸಿ ಎಂದವರೇ ಹೆಚ್ಚು' ಎನ್ನುತ್ತಾರೆ ಹೈದರಾಬಾದ್‌ನ ಪ್ರತೀಕಾ.

ಕ್ರೀಡೆ ಎಂಬುದು ಸಮಯ ವ್ಯರ್ಥದ ಚಟುವಟಿಕೆ, ಆಟಗಾರ, ಆಟಗಾರ್ತಿ ಆಗಬೇಕು ಎನ್ನುವುದು ತಪ್ಪು ನಿರ್ಧಾರ ಎನ್ನುವ ಈ ಗದ್ದಲದ ನಡುವೆ ಮಕ್ಕಳಿಗೆ ಏನು ಬೇಕು ಎಂದು ಕೇಳುವ ಗೊಡವೆಗೇ ಹೋಗದ ಸ್ಥಿತಿ ಇದೆ. ಆದರೆ, 'ರೈಟ್ ಟು ಪ್ಲೇ' ಎನ್ನುವ ಅಂತರರಾಷ್ಟ್ರೀಯ ಮಟ್ಟದ ಸ್ವಯಂ ಸೇವಾ ಸಂಸ್ಥೆಯೊಂದು ಈ ಕೆಲಸ ಮಾಡಿದೆ. ಅವರು ವರದಿಯೊಂದನ್ನು ತಯಾರಿಸಿದ್ದು, 'ನಮಗೆ ಯಾಕೆ ಆಟ ಬೇಕು' ಎಂಬುದನ್ನು ಮಕ್ಕಳೇ ಹೇಳಿಕೊಂಡಿದ್ದಾರೆ.

'ಆಟಕ್ಕೆ ಸಮಯ, ವ್ಯವಸ್ಥೆ ಬೇಕು'

ಒಂದು ಕಟುಂಬವನ್ನೇ ತೆಗೆದುಕೊಳ್ಳುವುದಾದರೆ, ಆಟ ಎಂಬುದು ನಿಕೃಷ್ಟ ಎನ್ನುವ ಭಾವನೆ ಇದೆ. ಆದರೆ, ಸಣ್ಣ ಮಕ್ಕಳು ಆಡಿ ಆಡಿಯೇ ಕಲಿಯುವುದು. ಮನೆಯಲ್ಲಿಯೂ ಆಟಕ್ಕೆ ಸಮಯವಿಲ್ಲ, ಶಾಲೆಗಳಲ್ಲಿಯೂ ಆಟಕ್ಕೆ ಸಮಯವಿಲ್ಲ. ಕಲಿಕಾ ವಿಧಾನದಲ್ಲಿಯೂ ಆಟಕ್ಕೆ ಪ್ರಾಮುಖ್ಯ ಇಲ್ಲದೇ ಇರುವುದು ಸಮಸ್ಯೆ. ಇನ್ನು ಬಾಲ್ಯ ವಿವಾಹ ಮಾಡುತ್ತಾರೆ. ಆಗ ವಿವಾಹವಾದ ಸಣ್ಣ ವಯಸ್ಸಿನ ಮಕ್ಕಳಿಗೆ ಯಾಕೆ ಆಟಬೇಕು ಎಂದು ಕೇಳಲಾಗುತ್ತದೆ. ಇನ್ನು ಯುದ್ಧದ ಸಮಯದಲ್ಲಿ ನಿರಾಶ್ರಿತರ ಶಿಬಿರಗಳಲ್ಲಿ ಇರುವ ಮಕ್ಕಳ ಆಟದ ಬಗ್ಗೆ ಯಾರು ಯೋಚಿಸುತ್ತಾರೆ? ಅಂಗವಿಕಲ ಮಕ್ಕಳು ಇರುತ್ತಾರೆ ಅವರು ಎಲ್ಲಿ ಆಡಬೇಕು? ಇಂಥ ಮಕ್ಕಳಿಗಾಗಿ ನಮ್ಮ ಬಳಿ ಯಾವ ವ್ಯವಸ್ಥೆ ಇದೆ?

ನಮಗೆ ತಿಳಿಯದೆಯೇ ಹಕ್ಕುಗಳನ್ನು ಕಸಿದುಕೊಳ್ಳುವುದು ಒಂದು. ಆಟವು ಯಾವುದೇ ಮಗುವಿನ ಬೆಳವಣಿಗೆಯಲ್ಲಿ ಪ್ರಮುಖ ಭಾಗ ಎಂದು ಭಾವಿಸದೇ ಅವರ ಹಕ್ಕುಗಳನ್ನು ಕಸಿದುಕೊಳ್ಳುವುದು ಇನ್ನೊಂದು. ಮಕ್ಕಳ ಕೈಯಲ್ಲಿ ಮೊಬೈಲ್ ಕೊಡಬೇಡಿ ಎನ್ನುತ್ತೇವೆ. ಆದರೆ, ಅವರು ಹೊರಗೆ ಎಲ್ಲಿಗೆ ಆಡಲು ಹೋಗಬೇಕು? ಅದಕ್ಕೇನು ವ್ಯವಸ್ಥೆ ಮಾಡಿದ್ದೇವೆ? ಇದಕ್ಕೆಲ್ಲಾ ಉತ್ತರ ಕಂಡುಕೊಳ್ಳಬೇಕಿದೆ

ಕವಿತಾರತ್ನ, ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್ ಸಂಸ್ಥೆಯ ನಿರ್ದೇಶಕಿ



- 'ಆಟವಾಡುತ್ತಲೇ ನಾವು ಸಂವಹನ ಕಲೆಯನ್ನು ಕರಗತ ಮಾಡಿಕೊಳ್ಳುತ್ತೇವೆ. ಆಡುವ ಸಮಯದಲ್ಲಿ ಜಗಳವಂತೂ ಆಗೇ ಆಗುತ್ತದೆ. ಆ ಸಂದರ್ಭದಲ್ಲಿ ನಾವೇ ನಮ್ಮ ಜಗಳಗಳನ್ನು ಇತ್ಯರ್ಥ ಮಾಡಿಕೊಳ್ಳುತ್ತೇವೆ. ನಮ್ಮ ಸ್ನೇಹವನ್ನು ನಾವು ಇನ್ನಷ್ಟು ಗಟ್ಟಿ ಮಾಡಿಕೊಳ್ಳುತ್ತೇವೆ'
- 'ಆಟವಾಡುವಾಗ ನಾವು ನಮ್ಮ ಮನೆಯ ಪರಿಧಿಯನ್ನು ದಾಟಿ, ಎಲ್ಲರೊಟ್ಟಿಗೂ ಸೇರಿಕೊಳ್ಳಲು, ಎಲ್ಲರೊಂದಿಗೂ ಒಂದಾಗಲು ಸಾಧ್ಯವಾಗುತ್ತದೆ'
- 'ಮನೆಯ ಮುಂದಿನ ರಸ್ತೆಯಲ್ಲೊ, ಮನೆಯ ಹತ್ತಿರದ ಮೈದಾನದಲ್ಲೊ ಆಟವಾಡುವಾಗ ಅಕ್ಕ-ಪಕ್ಕದ ಮನೆಯವರು, ನಮ್ಮ ಸ್ನೇಹಿತರೂ ಸೇರಿಯೇ ಆಟವಾಡುತ್ತೇವೆ. ನಮಗೆ ಜಾತಿ-ಧರ್ಮಗಳೆಂಬ ಸಾಮಾಜಿಕ ಕಟ್ಟಳೆ ಇಲ್ಲ'
- 'ಆಟದ ಕಾರಣಕ್ಕಾಗಿ ನಾವು ಅಳುತ್ತೇವೆ, ನಗುತ್ತೇವೆ, ಸೋತರೆ ನೋವಾಗುತ್ತದೆ, ಬಿದ್ದಾಗ ಪೆಟ್ಟಾಗುತ್ತದೆ.. ಹೀಗೆ ನಮ್ಮ ಹಲವು ಭಾವನೆಗಳನ್ನು ನಾವು ನಿರ್ವಹಣೆ ಮಾಡಿಕೊಳ್ಳುತ್ತೇವೆ. ನಮ್ಮ ಈ ಭಾವನೆಗಳನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳುತ್ತೇವೆ ಕೂಡ'
- 'ಆಟದ ಸಮಯದಲ್ಲಿ ನಾವು ಏಕಾಗ್ರತೆಯಿಂದ ಇರುತ್ತೇವೆ. ಆಟವಾಡುವಾಗ ನಮ್ಮ ಅನುಭವಕ್ಕೆ ಬಂದಿದ್ದನ್ನು, ಅದರಿಂದ ಕಲಿತ ಪಾಠವನ್ನು ನಾವು ನಮ್ಮ ಜೀವನದಲ್ಲಿಯೂ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ'
- 'ತಪ್ಪುಗಳು ಆಗುತ್ತವೆ. ಅದರಿಂದ ಕಲಿಯುತ್ತೇವೆ. ಮತ್ತೆ ಅದೇ ತಪ್ಪುಗಳು ಆಗದಂತೆ ಎಚ್ಚರವನ್ನೂ ವಹಿಸುತ್ತೇವೆ. ಸಮಸ್ಯೆಗಳಿಗೆ ವಿನೂತನ ಉಪಕ್ರಮಗಳನ್ನೂ ಕಂಡುಕೊಳ್ಳುತ್ತೇವೆ' ಎಂಬುದು ಮಕ್ಕಳ ಅಭಿಪ್ರಾಯ.

ಮಕ್ಕಳ ಈ ಮೇಲಿನ ಅಭಿಪ್ರಾಯಗಳು ಹಲವು ಮುಖ್ಯ ವಿಚಾರಗಳನ್ನು ತೆರೆದಿಟ್ಟಿವೆ. ಆಟ ಎನ್ನುವುದು ಕೇವಲ ದೈಹಿಕ ಚಟುವಟಿಕೆಯಲ್ಲ, ಇದು ಮಕ್ಕಳಿಗೆ ಸಾಮರಸ್ಯದ ಪಾಠವೂ ಹೌದು ಎಂಬುದನ್ನು ಮಕ್ಕಳ ಈ ಅಭಿಪ್ರಾಯಗಳು ಹೇಳುತ್ತಿವೆ.


ಆಧಾರ: ವಿಶ್ವ ಸಂಸ್ಥೆ, 'ರೈಟ್ ಟು ಪ್ಲೇ' ಮತ್ತು 'ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್' ಸ್ವಯಂ ಸೇವಾ ಸಂಸ್ಥೆಗಳ ವರದಿಗಳು

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

2ನೇ ಆವೃತ್ತಿ



'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಎರಡನೇ ಆವೃತ್ತಿಗೆ 'ಅತ್ಯುತ್ತಮ ಸಂಗೀತ ನಿರ್ದೇಶನ' ವಿಭಾಗದಲ್ಲಿ ನಾಮನಿರ್ದೇಶಿತಗೊಂಡವರ ಪರಿಚಯ. ಇನ್ನಷ್ಟು ಮಾಹಿತಿಗಳಿಗಾಗಿ ವೆಬ್‌ಸೈಟ್ ನೋಡಿ. prajavani.net/cinesamman/season2



ವಿ.ಹರಿಕೃಷ್ಣ

'ಕಾಟೇರ' ಚಿತ್ರದ ಸಂಗೀತಕ್ಕಾಗಿ **ವಿ.ಹರಿಕೃಷ್ಣ** ನಾಮನಿರ್ದೇಶನಗೊಂಡಿದ್ದಾರೆ. ಇವರು 1990ರ ದಶಕದಲ್ಲಿ ಹಂಸಲೇಖ, ವಿ.ರವಿಚಂದ್ರನ್, ಸಾಧು ಕೋಕಿಲ, ಗುರುಕಿರಣ್ ಸೇರಿದಂತೆ ಅನೇಕ ಪ್ರಮುಖ ಸಂಗೀತ ನಿರ್ದೇಶಕರಿಗೆ ಸಹಾಯಕರಾಗಿ ಕೆಲಸ ಮಾಡಿದ್ದಾರೆ. 2006ರಲ್ಲಿ ನಟ ದರ್ಶನ್ ಅವರ ಮೊದಲ ನಿರ್ಮಾಣದ 'ಜೊತೆ ಜೊತೆಯಲಿ' ಚಿತ್ರದ ಮೂಲಕ ಸ್ವತಂತ್ರ ಸಂಗೀತ ನಿರ್ದೇಶಕರಾದರು. ಎರಡು ದಶಕಗಳಲ್ಲಿ 50ಕ್ಕೂ ಹೆಚ್ಚು ಚಿತ್ರಗಳಿಗೆ ಸಂಗೀತ ನೀಡಿದ್ದಾರೆ. 2008 ರಲ್ಲಿ 'ಗಾಳಿಪಟ', 2009 ರಲ್ಲಿ 'ರಾಜ್ ದಿ ಶೋ ಮ್ಯಾನ್' ಮತ್ತು 2010 ರಲ್ಲಿ 'ಜಾಕಿ' ಚಿತ್ರದ ಅತ್ಯುತ್ತಮ ಸಂಗೀತಕ್ಕಾಗಿ ಸತತವಾಗಿ ಫಿಲ್ಮ್‌ಫೇರ್ ಪ್ರಶಸ್ತಿಯನ್ನು ಪಡೆದಿದ್ದಾರೆ. 2013 ರಲ್ಲಿ ತಮ್ಮದೇ 'ಡಿ-ಬೀಟ್ಸ್' ಎಂಬ ಆಡಿಯೊ ಕಂಪನಿಯನ್ನು ಪ್ರಾರಂಭಿಸಿದರು. ದರ್ಶನ್ ಅವರ ಬಹುತೇಕ ಸಿನಿಮಾಗಳಿಗೆ ಇವರದ್ದೇ ಸಂಗೀತ. ಸಾಕಷ್ಟು ಹಿಟ್ ಗೀತೆಗಳು ಇವರ ಹೆಸರಿನಲ್ಲಿದೆ.



ಮಣಿಕಾಂತ್ ಕದ್ರಿ

'ವಿರಾಟಪುರ ವಿರಾಗಿ' ಚಿತ್ರದ ಸಂಗೀತಕ್ಕಾಗಿ **ಮಣಿಕಾಂತ್ ಕದ್ರಿ** ನಾಮನಿರ್ದೇಶನಗೊಂಡಿದ್ದಾರೆ. ಸವಾರಿ ಚಿತ್ರದ 'ಮರಳಿ ಮರೆಯಾಗಿ', 'ಬಿಸಿಲು ತಾಗಿ' ಮೊದಲಾದ ಸೂಪರ್ ಹಿಟ್ ಗೀತೆಗಳಿಂದ ಜನಪ್ರಿಯರಾದವರು. ಜಿಂಗಲ್ಸ್ ಮತ್ತು ಭಕ್ತಿಗೀತೆಗಳನ್ನು ಸಂಯೋಜನೆ ಮಾಡುವ ಮೂಲಕ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದ ಇವರು ಮಲಯಾಳದ ಧಾರಾವಾಹಿ 'ಅಣ್ಣು ಮಜಯಾಯಿರುನ್ನು' ಶೀರ್ಷಿಕೆ ಗೀತೆಗಾಗಿ ಕೇರಳ ರಾಜ್ಯ ಪ್ರಶಸ್ತಿಯನ್ನು ಪಡೆದಿದ್ದಾರೆ. ಮಲಯಾಳದಿಂದಲೇ ಸಿನಿಪಯಣ ಪ್ರಾರಂಭಿಸಿ ಕನ್ನಡದಲ್ಲಿ 'ಸವಾರಿ' ಚಿತ್ರದ ಮೂಲಕ ಗುರುತಿಸಿಕೊಂಡರು. ಅಲ್ಲಿಂದ ಇಲ್ಲಿತನಕ 50ಕ್ಕೂ ಹೆಚ್ಚು ಚಿತ್ರಗಳಿಗೆ ಸಂಗೀತ ಸಂಯೋಜಿಸಿದ್ದಾರೆ. 'ನಡುವೆ ಅಂತರವಿರಲಿ' ಚಿತ್ರದ 'ಶಾಕುಂತಲೆ ಸಿಕ್ಕಳು' ಗೀತೆ ಕೂಡ ಸೂಪರ್ ಹಿಟ್ ಆಗಿತ್ತು. ತುಳು, ತೆಲುಗು, ತಮಿಳು ಭಾಷೆಗಳಲ್ಲಿ ಕೆಲಸ ಮಾಡಿದ್ದಾರೆ.



ರಘು ದೀಕ್ಷಿತ್

'ಆರ್ಕೆಸ್ಟ್ರಾ ಮೈಸೂರು' ಚಿತ್ರದ ಸಂಗೀತಕ್ಕಾಗಿ **ರಘು ದೀಕ್ಷಿತ್** ನಾಮನಿರ್ದೇಶನಗೊಂಡಿದ್ದಾರೆ. ಗಾಯಕರಾಗಿ ಜನಪ್ರಿಯರಾಗಿರುವ ಇವರು, ತಮ್ಮದೇ 'ದಿ ರಘು ದೀಕ್ಷಿತ್ ಪ್ರಾಜೆಕ್ಟ್' ಬ್ಯಾಂಡ್‌ನೊಂದಿಗೆ ಪ್ರಪಂಚಾದ್ಯಂತ ಹಲವಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಭರತನಾಟ್ಯದಲ್ಲಿ ವಿದ್ವತ್ ಪದವಿ ಪಡೆದಿದ್ದಾರೆ. ಸ್ವಲ್ಪ ಸಮಯ ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಕೆಲಸ ಮಾಡಿದರು. ಇಂಗ್ಲಿಷ್ ಭಾಷೆಯಲ್ಲಿ ಹಾಡುಗಳನ್ನು ನುಡಿಸುತ್ತಿದ್ದ ಇವರು, 'ಸೈಕೋ' ಚಿತ್ರದಲ್ಲಿ ಸಂಗೀತ ನೀಡಿ 'ನಿನ್ನ ಪೂಜೆಗೆ ಬಂದೆ ಮಹದೇಶ್ವರ' ಹಾಡಿನಿಂದ ಜನಪ್ರಿಯರಾದರು. ಜನಪದ ಗೀತೆಗಳನ್ನು ಇಂದಿನ ಟ್ರೆಂಡ್‌ನೊಂದಿಗೆ ಸಂಯೋಜಿಸುವ ಇವರು ಶಿಶುನಾಳ ಶರೀಫರ ತತ್ವಪದಗಳನ್ನು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಜನಪ್ರಿಯಗೊಳಿಸಿದ್ದಾರೆ. ತಮ್ಮ ಬ್ಯಾಂಡ್‌ನಲ್ಲಿಯೇ ಮಗ್ನರಾಗಿರುವ ಇವರು, 'ಲವ್ ಮಾಕ್ಟೇಲ್' ಸೇರಿದಂತೆ ಕೆಲವಷ್ಟು ಚಿತ್ರಗಳಿಗೆ ಸಂಗೀತ ಸಂಯೋಜಿಸಿದ್ದಾರೆ.



ಮಿದುನ್ ಮುಕುಂದನ್

'ಸ್ವಾತಿ ಮುತ್ತಿನ ಮಳೆ ಹನಿಯೇ' ಚಿತ್ರದ ಸಂಗೀತಕ್ಕಾಗಿ **ಮಿದುನ್ ಮುಕುಂದನ್** ನಾಮನಿರ್ದೇಶನಗೊಂಡಿದ್ದಾರೆ. ಕನ್ನಡ ಮತ್ತು ಮಲಯಾಳ ಚಿತ್ರರಂಗದಲ್ಲಿ ಗುರುತಿಸಿಕೊಂಡಿರುವ ಇವರು 2016ರಲ್ಲಿ 'ಕಹಿ' ಚಿತ್ರದೊಂದಿಗೆ ಸ್ಯಾಂಡಲ್‌ವುಡ್‌ನಲ್ಲಿ ವೃತ್ತಿ ಪ್ರಾರಂಭಿಸಿದರು. 'ಒಂದು ಮೊಟ್ಟೆಯ ಕಥೆ' ಚಿತ್ರದ 'ಚೆಂದ ಅವಳ ಕಿರು ಲಜ್ಜೆ' ಗೀತೆಯ ಮೂಲಕ ಗಮನಸೆಳೆದರು. 'ಶ್ರೀನಿವಾಸ ಕಲ್ಯಾಣ', 'ಗರುಡ ಗಮನ ವೃಷಭ ವಾಹನ', 'ರೋಶಾಕ್', 'ಟೋಬಿ' ಸೇರಿದಂತೆ 10ಕ್ಕೂ ಹೆಚ್ಚು ಚಿತ್ರಗಳಿಗೆ ಸಂಗೀತ ಒದಗಿಸಿದ್ದಾರೆ. ಹಿನ್ನೆಲೆ ಸಂಗೀತ ಇವರ ದೊಡ್ಡ ಶಕ್ತಿ. 'ಸ್ವಾತಿ ಮುತ್ತಿನ ಮಳೆ ಹನಿಯೇ' ಚಿತ್ರದ 'ಮೆಲ್ಲಗೆ ಧ್ಯಾನಿಸು' ಗೀತೆ ಕೂಡ ಇವರ ಜನಪ್ರಿಯ ಗೀತೆಗಳ ಪಟ್ಟಿ ಸೇರಿದೆ.



ಬಿಂದುಮಾಲಿನಿ

'ಆಚಾರ್ ಆ್ಯಂಡ್ ಕೋ.' ಚಿತ್ರದ ಸಂಗೀತಕ್ಕಾಗಿ **ಬಿಂದುಮಾಲಿನಿ** ನಾಮನಿರ್ದೇಶನಗೊಂಡಿದ್ದಾರೆ. ಗಾಯಕಿಯಾಗಿ ಜನಪ್ರಿಯವಾಗಿರುವ ಇವರು ಸಂಗೀತ ಸಂಯೋಜಿಸಿದ್ದು ಕಡಿಮೆ. ಗ್ರಾಫಿಕ್ ವಿನ್ಯಾಸಕಿ ಮತ್ತು ರಂಗಕರ್ಮಿಯಾಗಿಯೂ ಗುರುತಿಸಿಕೊಂಡಿದ್ದಾರೆ. ತಾವೇ ಸಂಯೋಜಿಸಿ, ಹಾಡಿದ 'ನಾತಿಚರಾಮಿ' ಚಿತ್ರದ 'ಮಾಯಾವಿ ಮನವೇ' ಹಾಡಿಗೆ, 2019ರಲ್ಲಿ 66ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಲ್ಲಿ 'ಅತ್ಯುತ್ತಮ ಹಿನ್ನೆಲೆ ಗಾಯಕಿ' ಪ್ರಶಸ್ತಿಗೆ ಪುರಸ್ಕೃತರಾಗಿದ್ದಾರೆ. ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತವನ್ನು ಗುರುಗಳಾದ ಕಿರಣವಲ್ಲಿ, ಮಂಗಳಾ ಶಂಕರ್, ಉಸ್ತಾದ್ ಅಬ್ದುಲ್ ರಶೀದ್ ಖಾನರ ಬಳಿ ಅಭ್ಯಾಸ ಮಾಡಿದ್ದಾರೆ. 'ಆಚಾರ್ ಆ್ಯಂಡ್ ಕೋ.' ಚಿತ್ರದಲ್ಲಿನ ಅನನ್ಯವಾದ ಹಿನ್ನೆಲೆ ಸಂಗೀತ ಗಮನ ಸೆಳೆದಿತ್ತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು 1,000ಕ್ಕೂ ಕಡಿಮೆ ಮತಗಳ ಅಂತರದಿಂದ 100 ಸ್ಥಾನಗಳನ್ನು ಮತ್ತು 500ಕ್ಕೂ ಕಡಿಮೆ ಮತಗಳ ಅಂತರದಿಂದ 30 ಸ್ಥಾನಗಳನ್ನು ಗೆದ್ದಿದೆ ಎಂದು ಹೇಳುತ್ತಾ, ಈ ಕ್ಷೇತ್ರಗಳ ಫಲಿತಾಂಶದ ಬಗ್ಗೆ ಅನುಮಾನ ವ್ಯಕ್ತಪಡಿಸಿ ಹಲವು ಸಾಮಾಜಿಕ ಜಾಲತಾಣ ಬಳಕೆದಾರರು ಪೋಸ್ಟ್‌ಗಳನ್ನು ಹಂಚಿಕೊಳ್ಳುತ್ತಿದ್ದಾರೆ. ಫೇಸ್‌ಬುಕ್ ಬಳಕೆದಾರರೊಬ್ಬರು ಇದೇ 8ರಂದು ಮಾಡಿದ ಈ ಪೋಸ್ಟ್ ಅನ್ನು ಇನ್ನೂ ಹಲವರು ಫೇಸ್‌ಬುಕ್, 'ಎಕ್ಸ್' ವೇದಿಕೆಗಳಲ್ಲಿ ಹಂಚಿಕೊಂಡಿದ್ದಾರೆ. ಆದರೆ, ಇದು ಸುಳ್ಳು.



ಪಿಟಿಐ ಸುದ್ದಿಸಂಸ್ಥೆಯು ಈ ಪೋಸ್ಟ್‌ಗಳ ಸತ್ಯಾಸತ್ಯತೆಯನ್ನು ಭಾರತೀಯ ಚುನಾವಣಾ ಆಯೋಗದ ವೆಬ್‌ಸೈಟ್‌ನಲ್ಲಿರುವ ಅಂಕಿ ಅಂಶಗಳನ್ನು ಆಧಾರವಾಗಿಟ್ಟು ಪರಿಶೀಲಿಸಿದೆ. ಬಳಕೆದಾರರ ವಾದ ಸುಳ್ಳು ಎಂಬುದನ್ನು ದೃಢಪಡಿಸಿದೆ. ಈ ಚುನಾವಣೆಯಲ್ಲಿ ಬಿಜೆಪಿಯು ಒಡಿಶಾದ ಜಜ್ಪುರ ಕ್ಷೇತ್ರದಲ್ಲಿ ಅತ್ಯಂತ ಕಡಿಮೆ ಅಂತರದಿಂದ ಜಯಗಳಿಸಿದೆ. ಈ ಕ್ಷೇತ್ರದಿಂದ ಕಣಕ್ಕಿಳಿದಿದ್ದ ಕಮಲ ಪಾಳಯದ ಅಭ್ಯರ್ಥಿ ರವೀಂದ್ರ ನಾರಾಯಣ್ ಬೆಹೆರಾ ಅವರು 1,587 ಮತಗಳ ಅಂತರದಿಂದ ಗೆಲುವು ಕಂಡಿದ್ದಾರೆ. ಹಾಗಾಗಿ, ಸಾಮಾಜಿಕ ಜಾಲತಾಣ ಬಳಕೆದಾರರ ವಾದ ಸುಳ್ಳು ಎಂದು ಪಿಟಿಐ ಫ್ಯಾಕ್ಟ್‌ಚೆಕ್ ಪ್ರತಿಪಾದಿಸಿದೆ.

ಗೆಲುವು

ನುಡಿ ಬೆಳಗು



ಪಿ. ಚಂದ್ರಿಕಾ

ಯುದ್ಧೋನ್ಮಾದಿಯಾದ ಅಲೆಗ್ಸಾಂಡರನಿಗೆ ಯುದ್ಧದ ನಿರರ್ಥಕತೆಯನ್ನು ಹೇಳುವುದು ಅವನ ಗುರುವಾದ ಡಯೋನಿಜ್‌ನಿಗೆ ಅನಿವಾರ್ಯವಾಯಿತು. 'ಜಗತ್ತನ್ನು ಗೆದ್ದು ಏನು ಮಾಡುತ್ತೀಯಾ ಅಲೆಗ್ಸಾಂಡರ್?' ಎಂದು ಪದೇ ಪದೇ ಕೇಳುತ್ತಿದ್ದರೂ, 'ಗುರು ಯಾಕೆ ನನ್ನನ್ನು ಹೀಗೆ ಪ್ರಶ್ನಿಸುತ್ತಾನೆ?' ಎಂದು ಅವನು ಯೋಚಿಸಲೂ ಇಲ್ಲ. ಬದಲಿಗೆ, 'ಯುದ್ಧವಿಲ್ಲದೆ ಜಗತ್ತನ್ನು ಗೆಲ್ಲಲು ಹೇಗೆ ಸಾಧ್ಯ? ಯುದ್ಧವೊಂದೇ ಅಂತಿಮ' ಎನ್ನುತ್ತಿದ್ದ.

ಡಯೋನಿಜ್ ಇನ್ನು ತಾನು ಸುಮ್ಮನಿರಬಾರದು ಎಂದು ನಿರ್ಧರಿಸಿ ಯುದ್ಧಭೂಮಿಯಲ್ಲಿ ಹೆಣಗಳ ರಾಶಿಯಲ್ಲಿ ಉಳಿದ ತಲೆಬುರುಡೆ ಎಲುಬುಗಳನ್ನು ಸಂಗ್ರಹಿಸತೊಡಗಿದ. ಈ ಸುದ್ದಿ ಅಲೆಗ್ಸಾಂಡರನಿಗೆ ತಿಳಿಯಿತು. ಎಂಥಾ ಅಪದ್ಧವಿದು ಮಹಾನ್ ಗುರುವೆಂದು ತಾನು ನಂಬಿದವ ಏನು ಮಾಡುತ್ತಿದ್ದಾನೆ ಎಂದು ಡಯೋನಿಜ್‌ನನ್ನು ಹುಡುಕುತ್ತ ಬಂದ.

ಯುದ್ಧಭೂಮಿಯಲ್ಲಿ ಒಂದಿಷ್ಟು ತಲೆ ಬುರುಡೆ, ಮೂಳೆಗಳನ್ನು ಮುಂದಿಟ್ಟು ಯೋಚಿಸುತ್ತಾ ಕುಳಿತಿದ್ದ ಡಯೋನಿಜ್ ಕಣ್ಣಿಗೆ ಬೀಳುತ್ತಿದ್ದಂತೆ ಅಲೆಗ್ಸಾಂಡರ್ ಅಸಮಾಧಾನದಿಂದ 'ಇದೇನು ಡಯೋನಿಜರೇ ನಾನು ನಿಮ್ಮ ಬಗ್ಗೆ ಎಲ್ಲೆಡೆಗೆ ಮಹಾಜ್ಞಾನಿ ಎಂದು ಪ್ರಚಾರ ಮಾಡುತ್ತಿದ್ದರೆ ನೀವಿಲ್ಲಿ ಹೀಗೆ ಹೆಣದ ಅವಶೇಷದ ಜೊತೆ ಏನನ್ನು ಮಾಡುತ್ತಿರುವಿರಿ' ಎಂದು ಕೇಳಿದ.

'ಅಲೆಗ್ಸಾಂಡರ್ ಸಾಮ್ರಾಟ ನಾನು ತುಂಬಾ ತಲೆಕೆಡಿಸಿಕೊಂಡು ನೋಡುತ್ತಲಿದ್ದೇನೆ, ನನಗೆ ಇದರಲ್ಲಿ ಸಾಮಾನ್ಯ ಸೈನಿಕನ ತಲೆಬುರುಡೆ ಯಾವುದು? ಸೇನಾನಿಯ ತಲೆಬುರುಡೆ ಯಾವುದು? ಮತ್ತು ನೀನು ಕೊಂದ ಸಾಮ್ರಾಟನ ತಲೆಬುರುಡೆ ಯಾವುದು ಎನ್ನುವುದೇ ಗೊತ್ತಾಗುತ್ತಿಲ್ಲ, ಸ್ವಲ್ಪ ತಿಳಿಸಿ ಹೇಳುತ್ತೀಯಾ' ಎಂದನು. ಅಲೆಗ್ಸಾಂಡರನಿಗೆ ಇದು ಹುಚ್ಚುತನದ ಪರಮಾವಧಿ ಎನ್ನಿಸಿ, 'ನಿಮ್ಮನ್ನು ಪರಮ ಜ್ಞಾನಿಗಳು ಎಂದುಕೊಂಡಿದ್ದೆ. ಸತ್ತುಹೋದ ಮೇಲೆ ಎಲ್ಲವೂ ಒಂದೇ ಅಲ್ಲವೇ?' ಎಂದ.

ಪರಮ ಆಶ್ಚರ್ಯವನ್ನು ವ್ಯಕ್ತಪಡಿಸುತ್ತಾ 'ಹೌದೇ ಹೌದೇ. ನಾಳೆ ಅಲೆಗ್ಸಾಂಡರ್ ದೊರೆಯ ತಲೆ ಬುರುಡೆಯದ್ದೂ ಇದೇ ಕಥೆಯೇ?' ಎಂದು ಡಯೋನಿಜ್ ಗಟ್ಟಿಯಾಗಿ ಕೂಗಿದ. ಆ ಮಾತನ್ನು ಕೇಳಿ ಅಲೆಗ್ಸಾಂಡರ್ ಬೆಚ್ಚಿಬಿದ್ದು 'ಏನು ಹೇಳುತ್ತಿರುವಿರಿ. ನನ್ನ ಸಾವು ನನ್ನ ತಲೆಬುರುಡೆ ಇದರ ಬಗ್ಗೆ ಹೇಗೆ ಮಾತನಾಡಲು ಸಾಧ್ಯ?' ಎಂದ.

'ಸಾವು ಎಲ್ಲರಿಗೂ ಸಮಾನವೇ. ವಿಶ್ವವನ್ನು ಗೆಲ್ಲ ಹೊರಟ ನೀನು ಸಾವನ್ನು ಗೆಲ್ಲಲಾರೆ. ನಿನ್ನ ತಲೆಯ ಮೇಲಿನ ಕಿರೀಟವೂ ಇನ್ನೊಬ್ಬರ ಪಾಲೇ. ಆದರೆ ಯುದ್ಧವಿಲ್ಲದೆ ಪ್ರೇಮದಿಂದ ಜಗತ್ತನ್ನು ಗೆಲ್ಲು. ಮಹಾನ್ ಸಾಮ್ರಾಟನಿಗೂ ದಯಾರ್ದ್ರ ಹೃದಯವಿತ್ತು ಎಂದು ಜಗತ್ತು ಪ್ರೀತಿಯಿಂದ ನೆನೆಯುತ್ತದೆ' ಎಂದ ಡಯೋನಿಜ್ ನಗುತ್ತಾ. ಅಲೆಗ್ಸಾಂಡರ್ ತಲೆ ತಗ್ಗಿಸಿದ.

ಡಯೋನಿಜ್ ಹೇಳಿದ, 'ನೀನು ಸಾಮ್ರಾಟ, ನಿನ್ನ ರಾಜ್ಯವನ್ನು ಪ್ರಜೆಗಳನ್ನು ಕಾಪಾಡಿಕೊಳ್ಳಲು ಮಾತ್ರ ಯುದ್ಧ ಮಾಡಬೇಕು. ಗಡಿಗಳನ್ನು ವಿಸ್ತಾರ ಮಾಡುವುದನ್ನು ಬಿಡು, ನಿನ್ನ ಮನಸ್ಸನ್ನು ವಿಸ್ತಾರ ಮಾಡಿಕೋ. ಇಡೀ ಜಗತ್ತೇ ನಿನ್ನದಾಗುತ್ತದೆ. ಗೆದ್ದ ಜಾಗವನ್ನು ನಿನ್ನ ಸೋಲಿಸಿ ಇನ್ನೊಬ್ಬ ಕಸಿದುಕೊಳ್ಳಬಹುದು, ಪ್ರೀತಿಸುವ ನಿನ್ನ ಹೃದಯವನ್ನು ಯಾರೂ ಕಸಿಯಲಾರರು' ಎಂದ.

ನಿಜ, ಗೆಲ್ಲುವುದು ಎಂದರೆ ಇನ್ನೊಬ್ಬರನ್ನು ನೋಯಿಸುವುದೆಂದಲ್ಲ. ನನ್ನದಲ್ಲದ್ದಕ್ಕೆ ಆಸೆಪಡುವುದೂ ಅಲ್ಲ. ತನ್ನತನವನ್ನು ಅತ್ಯಂತ ಪ್ರೀತಿಯಿಂದ ಜತನದಿಂದ ಕಾಪಾಡುವುದು ಮಾತ್ರ ಅಲ್ಲವೇ? ❖

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಜೂನ್ 11, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಪಂಚಮಿ ಗಂ. 17-28 ನಕ್ಷತ್ರ: ಆಶ್ಲೇಷ ಗಂ. 23-39 ಯೋಗ: ವ್ಯಾಘಾತ ಗಂ. 16-47 ಕರಣ: ಬಾಲವ ಗಂ. 17-28, ವೃಷಭ ಮಾಸದ ನೇ 28 ದಿನ, ಮಳೆನಕ್ಷತ್ರ: ಮೃಗಶಿರ 2.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-07 ಸೂರ್ಯಾಸ್ತ : 06-54
ಮುಸ್ಲಿಂ ದಿನಾಂಕ : 04 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 1, 8

ಮೇಷ: ಇಂದು ಮಿತ್ರರ ಹಾಗೂ ಸಹೋದ್ಯೋಗಿಗಳ ಮೇಲಿಟ್ಟ ಪ್ರೀತಿ ವಿಶ್ವಾಸವು ಅನುಭವಕ್ಕೆ ಬರಲಿದೆ. ಶಿಶುವಿನ ಜನನ ಕುಟುಂಬದ ಸಂತೋಷಕ್ಕೆ ಕಾರಣವಾಗುತ್ತದೆ. ವಾಣಿಜ್ಯ ವ್ಯವಹಾರಗಳು ಲಾಭ ತರಲಿವೆ.

ವೃಷಭ: ಕುಲದೇವರ ಅಥವಾ ಕಾರಣೀಕ ಸ್ಥಳದ ಭೇಟಿಯಿಂದಾಗಿ ಪಾಪಗಳೆಲ್ಲವೂ ನಾಶವಾದ ದಿವ್ಯ ಅನುಭವವನ್ನು ಹೊಂದುವಿರಿ. ವೈಯಕ್ತಿಕ ಜೀವನ ತೃಪ್ತಿ ಎನಿಸಲಿದೆ, ಮನೆಯಲ್ಲಿಯೂ ನೆಮ್ಮದಿಯ ವಾತಾವರಣ ಇರಲಿದೆ.

ಮಿಥುನ: ಸ್ವಂತ ಉದ್ಯಮದಲ್ಲಿರುವವರು ಕಾರ್ಯಕ್ಷೇತ್ರವನ್ನು ಅಭಿವೃದ್ಧಿ ಪಡಿಸಿಕೊಳ್ಳುವುದರಲ್ಲಿ ಬಹಳ ಉತ್ಸಾಹ ತೋರಿ, ಯಶಸ್ವಿಯಾಗುವರು. ಭೂಮಿಗೆ ಸಂಬಂಧಿಸಿದ ಸಮಸ್ಯೆಗಳು ನಿವಾರಣೆಗೊಳ್ಳುವ ಹಂತಕ್ಕೆ ಬರಲಿವೆ.

ಕರ್ಕಾಟಕ: ಪರೋಪಕಾರದ ಕೆಲಸಗಳಿಗೆ ಸಕಾರಾತ್ಮಕ ಪ್ರತಿಫಲ ಕಟ್ಟಿಟ್ಟ ಬುತ್ತಿ. ಹಿಡಿದ ಕೆಲಸಗಳು ಹಂತ ಹಂತವಾಗಿ ಅಥವಾ ಒಂದೊಂದಾಗಿ ಮುಗಿಸುವ ಪ್ರಯತ್ನವಿರಲಿ. ವಿಶ್ವಾಸವಿರಲಿ.

ಸಿಂಹ: ಸ್ವಾಧ್ಯಯನ ನಡೆಸದೆ ವಿದ್ಯಾರ್ಥಿಗಳ ಮುಂದೆ ಪಾಠ ಮಾಡಲು ತೆರಳಿ ವಿಷಯಗಳು ಅದಲು ಬದಲು ಮಾಡಿಕೊಳ್ಳುವ ಸಾಧ್ಯತೆ ಇದೆ. ಗೌರವಾನ್ವಿತ ವ್ಯಕ್ತಿಯೆಂದು ಅನಿಸಿಕೊಂಡ ನಿಮಗೆ ಸಮಾಜದಲ್ಲಿ ಅಪಮಾನವಾಗಬಹುದು.

ಕನ್ಯಾ: ಸಲಹೆ ಸೂಚನೆಗಳನ್ನು ಹೆಚ್ಚಿನ ಯೋಚನೆ ಇಲ್ಲದೆ ಮೇಲಧಿಕಾರಿಗಳು ಒಪ್ಪುವಂತೆ ಆಗುತ್ತದೆ. ಈ ದಿನ ದೈಹಿಕ ಶ್ರಮ ಕಡಿಮೆ ಇದ್ದರೂ ಹೆಚ್ಚಿನ ಆದಾಯವಿರುವುದರಿಂದ ಮನಸ್ಸಿಗೆ ಸ್ವಲ ನೆಮ್ಮದಿ ತೋರುವುದು.

ತುಲಾ: ಕೆಲವು ವಸ್ತುಗಳ ದರ್ಶನದಿಂದ ಪೂರ್ವಾಶ್ರಮದ ಘಟನೆಗಳು ನೆನಪಾಗಿ ಜೊತೆಗಾರರೊಂದಿಗೆ ಹಂಚಿಕೊಳ್ಳುವಿರಿ. ಬದಲಾದ ಕೆಲವು ಗೃಹೋಪಯೋಗಿ ವಸ್ತುಗಳು ಅಡ್ಡಪರಿಣಾಮ ಉಂಟುಮಾಡುವುದು.

ವೃಶ್ಚಿಕ: ಉತ್ತಮ ಗುಣಮಟ್ಟದ್ದೆಂದು ತಿಳಿದು ತಂದಂಥ ವಸ್ತುಗಳು ಕಳಪೆ ಪ್ರದರ್ಶನ ನೀಡುತ್ತವೆ. ಕುಟುಂಬದ ಅಭಿವೃದ್ಧಿಗಾಗಿ ಉತ್ತಮ ಯೋಚನೆಗಳು ಬರಲಿವೆ. ಅದನ್ನು ಪ್ರಯೋಜನಾಕಾರಿಯಾಗಿ ಉಪಯೋಗಿಸಿಕೊಳ್ಳಿ.

ಧನು: ಕುಟುಂಬದಲ್ಲಿದ್ದ ಭಿನ್ನಾಭಿಪ್ರಾಯವನ್ನು ಹೋಗಲಾಡಿಸಿ ಸಂಘಟಿಸಲು ಸುದಿನ. ಪಿತೃ ಸಮಾನರಿಂದ ಮನೆಯಲ್ಲಿ ನಡೆಯುವ ಶುಭ ಸಮಾರಂಭಕ್ಕೆ ಆಶೀರ್ವಾದ ಪಡೆಯಲು ಮರೆಯದಿರಿ.

ಮಕರ: ಬಾಣಸಿಗರಿಗೆ ಕಾರ್ಯದ ಶುಚಿತ್ವವು ರುಚಿತ್ವದಷ್ಟೇ ಪ್ರಾಮುಖ್ಯ ಪಡೆದುಕೊಳ್ಳುತ್ತದೆ. ಉದ್ಯಮಿ ಹಾಗೂ ಅಧಿಕಾರಿಗಳು ನಿಯಂತ್ರಣದಲ್ಲಿ ಇರುವರು. ಸೌಂದರ್ಯವರ್ಧಕಗಳ ಮಾರಾಟಗಾರರಿಗೆ ಲಾಭದ ದಿನ.

ಕುಂಭ: ನಿಮ್ಮ ಪ್ರಭಾವದಿಂದ ಬೇರೆಯವರು ಲಾಭ ಪಡೆಯುವಷ್ಟು ಯೋಗ್ಯತೆ ನಿಮ್ಮದಾಗುತ್ತದೆ. ಲಾಭದಾಯಕ ನಡೆಯುವ ವ್ಯವಹಾರದ ಮೇಲೆ ನಿಗಾ ಇರಲಿ. ಮುಖ್ಯ ವಿಚಾರ ಮರೆಯದಿರಿ.

ಮೀನ: ಮಕ್ಕಳ ಸರ್ವತೋಮುಖ ಚಟುವಟಿಕೆ ಮತ್ತು ವಿದ್ಯಾಭ್ಯಾಸ ಉತ್ತಮವಾಗಿದ್ದು, ಶಾಂತಿ ತುಂಬಿರುತ್ತವೆ. ದಾಂಪತ್ಯದಲ್ಲಿ ಹೊಂದಾಣಿಕೆಯಿಂದ ಜೀವನ ಹಸನಾಗಲಿದೆ. ಪ್ರಯಾಣದಿಂದ ಆಯಾಸವಾಗಬಹುದು.

ಪದಬಂಧ 5708


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಆಹಾರವನ್ನು ಸೇವಿಸದಿರುವುದು (4)
3.ಅವನ ಅಂತ್ಯ ಹೀಗೆ ಬಂದಿದೆ (4)
5.ಬಿರುಸು ಅಥವಾ ಒರಟು ಎಂದರೂ ಸರಿ! (3)
6.ಪುರಿಯಲ್ಲಿರುವ ಶತ್ರು (2)
7.ಕೆಲಸಕ್ಕೆ ಬಾರದ ಮಾತಿದು (5)
10.ನೆನಪಿನಿಂದ ಮಾಸದ ತಿಂಗಳು! (2)
12.ಒನಪು ತೋರುವಾಗಿನ ಸ್ಮರಣೆ (3)
14.ಈತ ಅದೃಷ್ಟವಿಲ್ಲದವನು (4)
15.ವನದಲ್ಲಿನ ಬೆಳವಣಿಗೆ! (4)

ಮೇಲಿಂದ ಕೆಳಕ್ಕೆ

1.ಉರಿಯೊಳಗಿರುವ ಗೊಡವೆ ಕಾಣುತ್ತಿದೆಯೇ? (4)
2.ಎರಡು ರಾಶಿಗಳು ಸಮವೆಂದು ದೃಢೀಕರಿಸುವುದು (5)
3.ಹನ್ನೆರಡು ಅಂಗುಲದ ಉದ್ದಳತೆ (2)
4.ಅದೇ ತಾನೆ ಅರಳಿದ ಹೂವು (4)
5.ಜಾಗಟೆ ಬಾರಿಸುತ್ತಾ ಮಾಡಿದ ಗದ್ದಲ! (3)
7.ಬಿನ್ನಾಣವನ್ನು ಹೀಗೆ ತೋರಿರಿ (3)
8.ಬೆಳ್ಳಿ ಹಬ್ಬವಿದು (5)
9.ಮನದೊಳಗಿರುವ ಕುಲ (4)
11.ನೆಮ್ಮದಿ ಈ ರೀತಿ ಬಂದಿದೆ (4)
13.ಇಷ್ಟರಲ್ಲೇ ಕಾಣಿಸಿಕೊಂಡಿರುವ ಅಪೇಕ್ಷೆ! (2)



5707ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕಕವ 4.ರಥೋತ್ಸವ
6.ಶತಾಯುಷಿ 8.ನವೀನ
11.ಕಸೂತಿ 13.ಹಸುಗೂಸು
17.ಮದಗಜ 18.ಲಿಲಾವು

ಮೇಲಿಂದ ಕೆಳಕ್ಕೆ:
1.ಕಗ್ಗಂಟು 2.ವರಮಾನ
3.ಅಲ್ಪಾಯು 5.ವಶ
7.ಷಿಕಾರಿ 9.ನಡುಕ
10.ವಿವಾಹ 12.ತಿಲಾಂಜಲಿ
14.ಸುಷುಪ್ತಿ 15.ಸುಮ
16.ಹಗೇವು

ಸುಡೊಕು 6093

	7	6		4				9
	9			7		3		
7	8			2			5	3
			4		5			7
6		5		8			2	
		7					9	5
	5	2			7			
9		1		5	8	2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6092 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಮುಂಬೈ ಧಾರಣೆ

ಶೇಂಗಾ

10-6-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1490 (1480)
ಒಂದು ವಾರದ ಡೆಲಿವರಿ	1485 (1475)
ಸೋಯಾ ಕಚ್ಚಾ	925 (928)
ಪಾಮ್ ವಾರದ ಡೆಲಿವರಿ	913 (911)
ಸೂರ್ಯಕಾಂತಿ ಎಣ್ಣೆ ಕಚ್ಚಾ	915 (920)


ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹70,850 (70,800)
ಬೆಳ್ಳಿ ಕೆ.ಜಿ ₹88,850 (87,900)
ಆವರಣದಲ್ಲಿ ಶನಿವಾರದ ಧಾರಣೆ

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹301-508
ದ್ವಿತಳಿ (ಬಿ.ವಿ)	₹372-615

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	23,290
ಇಂದಿನ ಅಂತ್ಯ	23,259
▼	30
ದಿನದ ಗರಿಷ್ಠ	23,227

ವಿನಿಮಯ ದರ

$ ಡಾಲರ್	83.50
£ ಪೌಂಡ್	106.03
€ ಯೂರೊ	89.71
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹585
12 ಕ್ಕೆ	₹75
ಮೈಸೂರು	
100ಕ್ಕೆ	₹590

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಶನಿವಾರದ ದರ)

ಶೇಂಗಾ (ರಿಫೈನ್ಡ್)	₹1480 (1470)
ಸೋಯಾ (ರಿಫೈನ್ಡ್)	₹960 (955)
ಸೂರ್ಯಕಾಂತಿ (ರಿಫೈನ್ಡ್)	₹970 (975)
ಪಾಮೊಲೀನ್	₹915 (913)

ಮುದ್ರಮನೆ ಕಾಫಿ

(50 ಕೆಜಿಗೆ)

ಎಪಿ	₹15600
ಎಸಿ	9380
ಆರ್‌ಪಿ	₹16500
ಆರ್‌ಸಿ	9880

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹195
ಆರ್‌ಎಸ್‌ಎಸ್-5	₹186
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹176

ನಾಮನಿರ್ದೇಶನ ನಿಯಮ ರದ್ದುಪಡಿಸಿದ ಸೆಬಿ

ನವದೆಹಲಿ (ಪಿಟಿಐ): ನಾಮನಿರ್ದೇಶನದ ಆಯ್ಕೆಯನ್ನು ಸಲ್ಲಿಸದೆ ಇದ್ದವರ ಡಿಮ್ಯಾಟ್ ಖಾತೆಗಳನ್ನು ಹಾಗೂ ಮ್ಯೂಚುವಲ್ ಫಂಡ್ ಫೋಲಿಯೊಗಳನ್ನು ಸ್ಥಗಿತಗೊಳಿಸುವ ನಿಯಮವನ್ನು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ರದ್ದುಪಡಿಸಿದೆ. ಈ ಮೂಲಕ ಅದು ಹೂಡಿಕೆದಾರರಿಗೆ ಒಂದಿಷ್ಟು ಅನುಕೂಲ ಕಲ್ಪಿಸಿದೆ.

ಷೇರುಗಳು, ಬಾಂಡ್‌ಗಳನ್ನು ಭೌತಿಕ ಸ್ವರೂಪದಲ್ಲಿ ಹೊಂದಿರುವವರು ನಾಮನಿರ್ದೇಶನದ ಆಯ್ಕೆಯನ್ನು ಸಲ್ಲಿಸದೆ ಇದ್ದರೂ ಅವರಿಗೆ ಬಡ್ಡಿಯಂತಹ ಯಾವುದೇ ಪಾವತಿಗಳನ್ನು ಸ್ವೀಕರಿಸಲು ಅರ್ಹರು ಎಂದು ಹೇಳಿದೆ.

ಮ್ಯೂಚುವಲ್ ಫಂಡ್ ಹೂಡಿಕೆದಾರರು ತಮ್ಮ ಹೂಡಿಕೆಗಳಿಗೆ ನಾಮನಿರ್ದೇಶನ ಮಾಡಲು ಅಥವಾ ಯಾರನ್ನೂ ನಾಮನಿರ್ದೇಶನ ಮಾಡುತ್ತಿಲ್ಲ ಎಂದು ತಿಳಿಸಲು ಜೂನ್ 30 ಕಡೆಯ ದಿನ ಎಂದು ಸೆಬಿ ಈ ಮೊದಲು ಹೇಳಿತ್ತು. ಇದರಲ್ಲಿ ವಿಫಲರಾದಲ್ಲಿ ಖಾತೆಗಳನ್ನು ಸ್ಥಗಿತಗೊಳಿಸಲಾಗುತ್ತದೆ ಎಂದು ಹೇಳಿತ್ತು.

ಮೊದಲ ಬಾರಿಗೆ 77 ಸಾವಿರ ಅಂಶ ದಾಟಿದ ಸೆನ್ಸೆಕ್ಸ್

ಷೇರುಪೇಟೆ: ಏರಿಳಿತದ ಆಟ

ಮುಂಬೈ (ಪಿಟಿಐ): ಸತತ ಮೂರು ದಿನದ ಏರಿಕೆ ನಂತರ ಸೋಮವಾರ ಷೇರು ಸೂಚ್ಯಂಕಗಳು ಇಳಿಕೆ ಕಂಡಿವೆ.

ಆರಂಭಿಕ ವಹಿವಾಟಿನಲ್ಲಿ ಏರಿಕೆ ಕಂಡಿದ್ದ ಷೇರು ಸೂಚ್ಯಂಕಗಳು ಐ.ಟಿ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಷೇರುಗಳ ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಕುಸಿತ ಕಂಡವು.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 203 ಅಂಶ ಇಳಿಕೆಯಾಗಿ 76,490ಕ್ಕೆ ಅಂತ್ಯಗೊಂಡಿತು. ವಹಿವಾಟಿನ ವೇಳೆ 385 ಅಂಶ ಏರಿಕೆಯಾಗಿ 77,079 ಅಂಶಕ್ಕೆ ಮುಟ್ಟಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 30 ಅಂಶ ಕಡಿಮೆಯಾಗಿ 23,259ಕ್ಕೆ ಕೊನೆಗೊಂಡಿತು. ವಹಿವಾಟಿನ ವೇಳೆ 121 ಅಂಶ ಹೆಚ್ಚಳವಾಗಿ 23,411ಕ್ಕೆ ಏರಿಕೆಯಾಗಿತ್ತು. ಇದೇ ಮೊದಲ ಬಾರಿಗೆ ಸೆನ್ಸೆಕ್ಸ್ 77,079 ಅಂಶ ಮತ್ತು ನಿಫ್ಟಿ 23,411 ಅಂಶಗಳಿಗೆ ತಲುಪಿವೆ.

ದಾಖಲೆಯ ಗರಿಷ್ಠ ಮಟ್ಟ ಮುಟ್ಟಿದ್ದ ಸೆನ್ಸೆಕ್ಸ್, ಐ.ಟಿ, ಲೋಹ, ತೈಲ ಮತ್ತು ಅನಿಲದ ಷೇರುಗಳ ಹೂಡಿಕೆದಾರರು ಮಾರಾಟಕ್ಕೆ ಮುಂದಾಗಿದ್ದರಿಂದ ಇಳಿಕೆ ಕಂಡವು. ಅಮೆರಿಕದ ಫೆಡರಲ್ ದರ ಕಡಿತವು ಶೀಘ್ರದಲ್ಲೇ ಆಗದಿರಬಹುದು ಎಂಬ ಸೂಚನೆಯಿಂದ ಸೂಚ್ಯಂಕಗಳು ಇಳಿದವು ಎಂದು ಮೆಹ್ತಾ ಸೆಕ್ಯುರಿಟೀಸ್‌ನ ಹಿರಿಯ ಉಪಾಧ್ಯಕ್ಷ (ಸಂಶೋಧನೆ) ಪ್ರಶಾಂತ್ ತಾಪ್ಸೆ ಹೇಳಿದ್ದಾರೆ.

ಸೆನ್ಸೆಕ್ಸ್ ಗುಚ್ಛದಲ್ಲಿ ಟೆಕ್ ಮಹೀಂದ್ರ, ಇನ್ಫೊಸಿಸ್, ವಿಪ್ರೊ, ಬಜಾಜ್ ಫೈನಾನ್ಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಎಚ್‌ಡಿಎಫ್‌ಸಿ ಬ್ಯಾಂಕ್, ಎಚ್‌ಸಿಎಲ್ ಟೆಕ್ನಾಲಜೀಸ್ ಮತ್ತು ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಷೇರಿನ ಮೌಲ್ಯ ಇಳಿಕೆ ಕಂಡಿವೆ.

ಅಲ್ಟ್ರಾಟೆಕ್ ಸಿಮೆಂಟ್, ಪವರ್‌ಗ್ರಿಡ್, ನೆಸ್ಲೆ, ಎನ್‌ಟಿಪಿಸಿ ಮತ್ತು ಎಕ್ಸಿಸ್ ಬ್ಯಾಂಕ್ ಗಳಿಕೆ ಕಂಡಿವೆ.


ಬಿಎಸ್‌ಇ ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 1.04 ಮತ್ತು ಮಿಡ್‌ಕ್ಯಾಪ್ ಸೂಚ್ಯಂಕ ಶೇ 0.56ರಷ್ಟು ಏರಿಕೆಯಾಗಿವೆ. ಸರ್ವಿಸಸ್ ಶೇ 1.61, ರಿಯಾಲ್ಟಿ ಶೇ 1.34, ಸರಕುಗಳು ಶೇ 1.28, ಯುಟಿಲಿಟಿ ಶೇ 1.11, ಹೆಲ್ತ್‌ಕೇರ್ ಶೇ 0.77 ಏರಿಕೆ ಕಂಡಿವೆ. ಐ.ಟಿ, ಆಟೊ, ಲೋಹ ಷೇರುಗಳು ಇಳಿಕೆ ಕಂಡಿವೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಶುಕ್ರವಾರದ ವಹಿವಾಟಿನಲ್ಲಿ ₹4,391 ಕೋಟಿ ಮೌಲ್ಯದ ಈಕ್ವಿಟಿಗಳನ್ನು ಖರೀದಿಸಿದ್ದಾರೆ ಎಂದು ಷೇರುಪೇಟೆ ಅಂಕಿ ಅಂಶಗಳು ತಿಳಿಸಿವೆ.

ಏಷ್ಯಾದ ಮಾರುಕಟ್ಟೆಯಲ್ಲಿ ಟೋಕಿಯೊ ಗಳಿಕೆ ಕಂಡರೆ, ಸೋಲ್ ಇಳಿದಿದೆ.

ಜಾಗತಿಕ ಬ್ರೆಂಟ್ ಕಚ್ಚಾ ತೈಲ ದರವು ಪ್ರತಿ ಬ್ಯಾರೆಲ್‌ಗೆ ಶೇ 0.18ರಷ್ಟು ಹೆಚ್ಚಾಗಿದ್ದು, 79.76 ಡಾಲರ್‌ಗೆ (₹6,660) ಮುಟ್ಟಿದೆ.

ಗಳಿಕೆ ಕಂಡ ಕಂಪನಿಗಳು



ಉಕ್ರೇನ್ ಶಾಂತಿ ಸಭೆಯಲ್ಲಿ 90 ದೇಶಗಳು ಭಾಗಿ

ಬಹ್ನ್ (ಸ್ವಿಜರ್ಲೆಂಡ್) (ಎಪಿ): ಸ್ವಿಜರ್ಲೆಂಡ್ ಆತಿಥ್ಯದಲ್ಲಿ ವಾರಾಂತ್ಯದಲ್ಲಿ ನಡೆಯಲಿರುವ ಉಕ್ರೇನ್ ಶಾಂತಿ ಶೃಂಗಸಭೆಯಲ್ಲಿ ಸರಿಸುಮಾರು 90 ದೇಶಗಳು ಹಾಗೂ ಕೆಲವು ಸಂಘಟನೆಗಳು ಪಾಲ್ಗೊಳ್ಳಲಿವೆ. ಆದರೆ, ಇದರಲ್ಲಿ ಭಾಗವಹಿಸಲು ರಷ್ಯಾ ನಿರಾಕರಿಸಿದೆ.

ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಸ್ವಿಜರ್ಲೆಂಡ್ ಅಧ್ಯಕ್ಷೆ ವಯೊಲಾ ಆ್ಯಮ್‌ಹರ್ಡ್,ಶನಿವಾರ, ಭಾನುವಾರ ನಡೆಯಲಿರುವ ಸಭೆಯು ಶಾಂತಿ ಸ್ಥಾಪನೆಯ ಸಾಧ್ಯತೆಯ ಬಗ್ಗೆ ಪರಿಶೀಲಿಸುವ ಗುರಿ ಹೊಂದಿದೆ ಎಂದರು.

ಈಕ್ವಿಟಿ ಎಂಎಫ್: ₹34,697 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಮೇ ತಿಂಗಳಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್ಸ್‌ನಲ್ಲಿ (ಎಂ.ಎಫ್) ₹34,697 ಕೋಟಿ ದಾಖಲೆಯ ಬಂಡವಾಳದ ಒಳಹರಿವಾಗಿದೆ.

ಏಪ್ರಿಲ್‌ನಲ್ಲಿ ₹18,917 ಕೋಟಿ ಒಳಹರಿವಾಗಿತ್ತು. ಈ ಹೂಡಿಕೆಗೆ ಹೋಲಿಸಿದರೆ ಶೇ 83ರಷ್ಟು ಹೆಚ್ಚಳವಾಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಸೋಮವಾರ ತಿಳಿಸಿದೆ.



ಎಸ್‌ಐಪಿ ಹೆಚ್ಚಳ: ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್‌ಐಪಿ) ಮೂಲಕ ಮೇನಲ್ಲಿ ₹20,904 ಕೋಟಿ ಹೂಡಿಕೆಯಾಗಿದೆ. ಏಪ್ರಿಲ್‌ನಲ್ಲಿ ₹20,371 ಕೋಟಿ ಹೂಡಿಕೆಯಾಗಿತ್ತು ಎಂದು ತಿಳಿಸಿದೆ. ಸತತ ಎರಡನೇ ತಿಂಗಳು ಸಹ ಹೂಡಿಕೆಯು ₹20 ಸಾವಿರ ಕೋಟಿ ದಾಟಿದೆ.

ಒಟ್ಟಾರೆಯಾಗಿ, ಮ್ಯೂಚುವಲ್ ಫಂಡ್ ಉದ್ಯಮವು ಮೇನಲ್ಲಿ ₹1.1 ಲಕ್ಷ ಕೋಟಿ ಬಂಡವಾಳ ಒಳಹರಿವಾಗಿದೆ. ಏಪ್ರಿಲ್‌ನಲ್ಲಿ ₹2.4 ಲಕ್ಷ ಕೋಟಿ ಹೂಡಿಕೆಯಾಗಿತ್ತು. ಈಕ್ವಿಟಿ ಹಾಗೂ ಸಾಲ ಯೋಜನೆಗಳಲ್ಲಿನ ಹೂಡಿಕೆಯಿಂದಾಗಿ ಒಳಹರಿವು ಹೆಚ್ಚಾಗಿದೆ. ಈ ಒಳಹರಿವಿನೊಂದಿಗೆ, ಉದ್ಯಮದಲ್ಲಿ ಸಂಗ್ರಹವಾದ ಒಟ್ಟು ಮೊತ್ತವು (ಎಯುಎಂ) ₹57.26 ಲಕ್ಷ ಕೋಟಿಯಿಂದ ₹58.91 ಲಕ್ಷ ಕೋಟಿಗೆ ಹೆಚ್ಚಳವಾಗಿದೆ.

ಎನ್‌ಡಿಎ ನೇತೃತ್ವದ ಸರ್ಕಾರವು ಮತ್ತೆ ಅಧಿಕಾರಕ್ಕೆ ಬರುತ್ತದೆ ಎಂಬ ನಿರೀಕ್ಷೆಯು ಹೂಡಿಕೆದಾರರನ್ನು ಖರೀದಿ ಮಾಡುವಂತೆ ಪ್ರೇರೇಪಿಸಿತು. ಮುಂದಿನ ದಿನಗಳಲ್ಲಿ ಒಳಹರಿವು ಮತ್ತಷ್ಟು ಏರಿಕೆಯಾಗಲಿದೆ ಎಂದು ಮಾರ್ನಿಂಗ್‌ಸ್ಟಾರ್ ಇನ್‌ವೆಸ್ಟ್‌ಮೆಂಟ್ಸ್ ರಿಸರ್ಚ್ ಇಂಡಿಯಾದ ಸಹ ನಿರ್ದೇಶಕ (ಸಂಶೋಧನಾ ವಿಭಾಗ) ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.



ಹುತಾತ್ಮ ದಿನ ಪಂಜಾಬ್‌ನ ಅಮೃತಸರದ ಗೋಲ್ಡನ್ ಟೆಂಪಲ್‌ನಲ್ಲಿ ಸಿಖ್ ಗುರು ಅರ್ಜುನ್ ದೇವ್ ಅವರ ಹುತಾತ್ಮ ದಿನದ ಅಂಗವಾಗಿ ಸೋಮವಾರ ಭಕ್ತರಿಗೆ ವಿತರಿಸಲು ಸ್ವಯಂಸೇವಕರು ಪಾನಕ ತಯಾರಿಸಿದರು –ಪಿಟಿಐ ಚಿತ್ರ

ಕೆನಡಾ: ಭಾರತ ಮೂಲದ ವ್ಯಕ್ತಿಯ ಗುಂಡಿಕ್ಕಿ ಹತ್ಯೆ

ಒಟ್ಟಾವ (ಪಿಟಿಐ): ಕೆನಡಾದ ಬ್ರಿಟಿಷ್ ಕೊಲಂಬಿಯ ಪ್ರಾಂತ್ಯದಲ್ಲಿ 28 ವರ್ಷದ ಭಾರತ ಮೂಲದ ವ್ಯಕ್ತಿಯೊಬ್ಬರನ್ನು ಗುಂಡಿಕ್ಕಿ ಹತ್ಯೆ ಮಾಡಿರುವ ಘಟನೆ ನಡೆದಿದೆ.

ಇದು 'ಉದ್ದೇಶಪೂರ್ವಕ ಕೊಲೆ' ಎಂದು ಶಂಕಿಸಲಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶುಕ್ರವಾರ ಮುಂಜಾನೆ ಸರ್ರೆ ಪ್ರದೇಶದಲ್ಲಿ ಈ ಘಟನೆ ನಡೆದಿದ್ದು, ಮೃತರನ್ನು ಯುವರಾಜ್ ಗೋಯಲ್ ಎಂದು ಗುರುತಿಸಲಾಗಿದೆ. ಯುವರಾಜ್ ಅವರು ಕಾರ್ ಡೀಲರ್‌ಶಿಪ್ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು ಎಂದು ತಿಳಿದು ಬಂದಿದೆ.

ಇವರ ಹತ್ಯೆಗೆ ನಿಖರವಾದ ಕಾರಣ ಗೊತ್ತಾಗಿಲ್ಲ. ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹತ್ಯೆಯಾಗುವ ಮುನ್ನ ಯುವರಾಜ್, ಭಾರತದಲ್ಲಿರುವ ತನ್ನ ತಾಯಿಯೊಂದಿಗೆ ದೂರವಾಣಿಯಲ್ಲಿ ಮಾತನಾಡಿದ್ದ. ಎಂದಿನಂತೆ ಜಿಮ್ ಮುಗಿಸಿ ಮನೆಗೆ ಮರಳುವಾಗ ಕಾರಿನಿಂದ ಇಳಿದ ಕೂಡಲೇ ಹತ್ಯೆ ಮಾಡಲಾಗಿದೆ ಎಂದು ಅವರ ಸಹೋದರ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮಣಿಪುರ ಸಿ.ಎಂ ಬೆಂಗಾವಲು ಪಡೆ ಮೇಲೆ ದಾಳಿ

ಇಂಫಾಲ್ (ಪಿಟಿಐ): ಮಣಿಪುರ ಮುಖ್ಯಮಂತ್ರಿ ಎನ್.ಬೀರೇನ್ ಸಿಂಗ್ ಅವರ ಬೆಂಗಾವಲು ಪಡೆಯ ಮೇಲೆ ಶಂಕಿತ ಉಗ್ರರು ಸೋಮವಾರ ಬೆಳಿಗ್ಗೆ ಹೊಂಚು ದಾಳಿ ನಡೆಸಿದ್ದು, ಒಬ್ಬ ಗಾಯಗೊಂಡಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ಬೆಂಗಾವಲು ಪಡೆಯ ವಾಹನಗಳು ಜಿರಿಬಾಮ್ ಜಿಲ್ಲೆಗೆ ತೆರಳುತ್ತಿದ್ದವು. ಬೆಳಿಗ್ಗೆ 10.30ರ ಸುಮಾರಿಗೆ ಕಾಂಗ್‌ಪೊಕ್ಪಿ ಜಿಲ್ಲೆಯ ಕೊಟ್ಲೆನ್ ಗ್ರಾಮದ ಬಳಿ ತಲುಪಿದಾಗ ದಾಳಿ ನಡೆದಿದೆ ಎಂದು ಮಾಹಿತಿ ನೀಡಿದ್ದಾರೆ. 'ವಾಹನಗಳ ಮೇಲೆ ಉಗ್ರರು ಗುಂಡಿನ ಮಳೆಗರೆದಾಗ, ಭದ್ರತಾ ಸಿಬ್ಬಂದಿ ಪ್ರತಿದಾಳಿ ನಡೆಸಿದ್ದಾರೆ. ಒಂದು ವಾಹನದ ಚಾಲಕನ ಭುಜಕ್ಕೆ ಗುಂಡೇಟು ತಗುಲಿದ್ದು, ಇಂಫಾಲ್‌ನ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು. 'ಘಟನೆ ನಡೆದ ಸ್ಥಳಕ್ಕೆ ಸಶಸ್ತ್ರ ಪಡೆಗಳನ್ನು ಕಳುಹಿಸಲಾಗಿದ್ದು, ಉಗ್ರರಿಗಾಗಿ ಶೋಧ ಕಾರ್ಯ ನಡೆಸಲಾಗಿದೆ' ಎಂದರು.

ಧ್ವನಿವರ್ಧಕ ಅಳವಡಿಸುತ್ತಿರುವ ದಕ್ಷಿಣ ಕೊರಿಯಾ

ಸೋಲ್ (ಎಪಿ): ಉತ್ತರ ಕೊರಿಯಾ ದೇಶವು ಗಡಿಯ ಉದ್ದಕ್ಕೂ ಧ್ವನಿವರ್ಧಕಗಳನ್ನು ಅಳವಡಿಸುವ ಸೂಚನೆ ಕಾಣುತ್ತಿದೆ ಎಂದು ದಕ್ಷಿಣ ಕೊರಿಯಾದ ಸೇನೆಯು ಸೋಮವಾರ ಹೇಳಿದೆ.

ದಕ್ಷಿಣ ಕೊರಿಯಾವು ಉತ್ತರ ಕೊರಿಯಾ ವಿರುದ್ಧ ಪ್ರಚಾರಾಂದೋಲನ ನಡೆಸಿದ ಮಾರನೆಯ ದಿನ ಈ ಹೇಳಿಕೆ ಬಂದಿದೆ. ಉತ್ತರ ಕೊರಿಯಾ ದೇಶವು ತ್ಯಾಜ್ಯ ಹಾಗೂ ಗೊಬ್ಬರ ತುಂಬಿದ್ದ ಒಂದು ಸಾವಿರಕ್ಕೂ ಹೆಚ್ಚು ಬಲೂನುಗಳನ್ನು ಹಾರಿಬಿಟ್ಟ ನಂತರ, ದಕ್ಷಿಣ ಕೊರಿಯಾ ದೇಶವು ಧ್ವನಿವರ್ಧಕಗಳನ್ನು ಬಳಸಿ ಪ್ರಚಾರಾಂದೋಲನಕ್ಕೆ ಮುಂದಾಗಿದೆ. ದಕ್ಷಿಣ ಕೊರಿಯಾದ ಕೆಲವು ನಾಗರಿಕ ಸಂಘಟನೆಗಳು ಬಲೂನು ಗಳನ್ನು ಬಳಸಿ, ತನ್ನನ್ನು ವಿರೋಧಿಸುವ ಕರಪತ್ರಗಳನ್ನು ಗಡಿಯುದ್ದಕ್ಕೂ ಹಾರಿಬಿಡುತ್ತಿದೆ ಎಂದು ಉತ್ತರ ಕೊರಿಯಾ ಆರೋಪಿಸಿದೆ. ಎರಡೂ ದೇಶಗಳು ಏಟು–ಎದಿರೇಟು ಕ್ರಮಕ್ಕೆ ಮುಂದಾಗಿರುವುದು ಬಿಕ್ಕಟ್ಟನ್ನು ತೀವ್ರಗೊಳಿಸಿದೆ.

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹9100-10000
ದಾವಣಗೆರೆ	₹6750-6750
ಕೆ. ಆರ್.ಪೇಟೆ	₹9393-9393
ಮಧುಗಿರಿ	₹5000-7800
ಮಳವಳ್ಳಿ	₹8975-9000
ಸುಳ್ಯ	₹8000-8600

ಸುದ್ದಿ 2 ನಿಮಿಷ

ಪೇಟಿಎಂನಿಂದ ಸಿಬ್ಬಂದಿ ಕಡಿತ

ನವದೆಹಲಿ (ಪಿಟಿಐ): ಸಂಸ್ಥೆಯ ಪುನರ್ ರಚನೆ ಭಾಗವಾಗಿ ಪೇಟಿಎಂನ ಮಾತೃಸಂಸ್ಥೆಯಾದ ಒನ್97 ಕಮ್ಯುನಿಕೇಷನ್ ಸಿಬ್ಬಂದಿ ಕಡಿತಕ್ಕೆ ಮುಂದಾಗಿದೆ.

ಮಾರ್ಚ್ ತ್ರೈಮಾಸಿಕದಲ್ಲಿ ಪೇಟಿಎಂನ ಮಾರಾಟ ವಿಭಾಗದ ನೌಕರರ ಸಂಖ್ಯೆಯು 3,500 ಕಡಿಮೆ ಆಗಿದ್ದು, ಒಟ್ಟು 36,521 ಸಿಬ್ಬಂದಿಯಿದ್ದಾರೆ ಎಂದು ಕಂಪನಿ ತಿಳಿಸಿದೆ. ಪೇಟಿಎಂ ಪೇಮೆಂಟ್ ಬ್ಯಾಂಕ್ ಸೇವೆಗಳ ಮೇಲೆ ಆರ್‌ಬಿಐ ವಿಧಿಸಿದ ನಿರ್ಬಂಧದಿಂದಾಗಿ ಸಂಸ್ಥೆ ಸಿಬ್ಬಂದಿ ಕಡಿತಕ್ಕೆ ಮುಂದಾಗಿದೆ.

ಕಂಪನಿಯ ಪುನರ್ ರಚನೆಯ ಭಾಗವಾಗಿ ಕೆಲಸ ಕಳೆದುಕೊಳ್ಳಲಿರುವ ಸಿಬ್ಬಂದಿಗೆ ಹೊಸ ಕೆಲಸ ಕಂಡುಕೊಳ್ಳಲು ಕಂಪನಿಯು ನೆರವಾಗಲಿದೆ. ಇದಕ್ಕಾಗಿ ಕಂಪನಿಯ ಮಾನವ ಸಂಪನ್ಮೂಲ ವಿಭಾಗವು ಪ್ರಸ್ತುತ ನೇಮಕ ಮಾಡಿಕೊಳ್ಳುತ್ತಿರುವ 30ಕ್ಕೂ ಹೆಚ್ಚು ಕಂಪನಿಗಳೊಂದಿಗೆ ಸಕ್ರಿಯವಾಗಿ ಕೆಲಸ ಮಾಡುತ್ತಿದೆ ಎಂದು ಕಂಪನಿ ಸೋಮವಾರ ತಿಳಿಸಿದೆ. ಆದರೆ, ಕೆಲಸ ಕಳೆದುಕೊಂಡ ಒಟ್ಟು ಉದ್ಯೋಗಿಗಳ ಸಂಖ್ಯೆಯನ್ನು ಪೇಟಿಎಂ ಬಹಿರಂಗಪಡಿಸಿಲ್ಲ.

ಕಂಪನಿ ಉದ್ಯೋಗಿಗಳಿಗೆ ನೀಡಬೇಕಾದ ಬೋನಸ್ ಅನ್ನು ವಿತರಿಸುತ್ತದೆ ಹಾಗೂ ಪ್ರಕ್ರಿಯೆಯಲ್ಲಿ ನ್ಯಾಯಸಮ್ಮತತೆ ಮತ್ತು ಪಾರದರ್ಶಕತೆಯನ್ನು ಕಾಪಾಡಲಿದೆ ಎಂದು ತಿಳಿಸಿದೆ.

ನಾಲ್ಕು ವರ್ಷದಲ್ಲಿ 2.68 ಲಕ್ಷ ಪ್ರಯಾಣಿಕ ವಾಹನಗಳ ರಫ್ತು

ನವದೆಹಲಿ (ಪಿಟಿಐ): ಭಾರತದಿಂದ ಹಿಂದಿನ ನಾಲ್ಕು ಹಣಕಾಸು ವರ್ಷಗಳಲ್ಲಿ 2.68 ಲಕ್ಷ ಪ್ರಯಾಣಿಕ ವಾಹನಗಳು ರಫ್ತಾಗಿವೆ.

ಈ ಪೈಕಿ ಶೇ 70ರಷ್ಟು ವಾಹನಗಳು ಮಾರುತಿ ಸುಜುಕಿ ಇಂಡಿಯದ್ದಾಗಿವೆ ಎಂದು ಕೈಗಾರಿಕಾ ಸಚಿವಾಲಯದ ಅಂಕಿ–ಅಂಶಗಳು ತಿಳಿಸಿವೆ.

2020–21ರ ಹಣಕಾಸು ವರ್ಷದಲ್ಲಿ 4.04 ಲಕ್ಷ ವಾಹನಗಳು ರಫ್ತಾಗಿದ್ದವು. ಇದು 2023–24ರ ವೇಳೆಗೆ 6.72 ಲಕ್ಷಕ್ಕೆ ಏರಿಕೆಯಾಗಿದೆ. ಈ ಅವಧಿಯಲ್ಲಿ ಮಾರುತಿ ಸುಜುಕಿ ಇಂಡಿಯಾದ 1.85 ಲಕ್ಷ ವಾಹನಗಳು ರಫ್ತಾಗಿವೆ.


ಹೆಚ್ಚಿನ ಮಾದರಿಗಳು, ಜಾಗತಿಕ ತಯಾರಿಕಾ ಮಾನದಂಡಗಳ ಅನುಸರಣೆಯಿಂದ ರಫ್ತು ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ಮಾರುತಿ ಸುಜುಕಿ ಇಂಡಿಯಾದ ಅಧಿಕಾರಿ ರಾಹುಲ್ ಭಾರ್ತಿ ತಿಳಿಸಿದ್ದಾರೆ. ಪ್ರಸ್ತುತ, ದಕ್ಷಿಣ ಆಫ್ರಿಕಾ, ಸೌದಿ ಅರೇಬಿಯಾ, ಚಿಲಿ, ಮೆಕ್ಸಿಕೊ, ಫಿಲಿಪ್ಪೀನ್ಸ್, ಇಂಡೊನೇಷ್ಯಾ, ಐವರಿ ಕೋಸ್ಟ್ ಸೇರಿದಂತೆ ಜಗತ್ತಿನ 100ಕ್ಕೂ ಹೆಚ್ಚು ರಾಷ್ಟ್ರಗಳಿಗೆ ಕಂಪನಿ ವಾಹನಗಳನ್ನು ರಫ್ತು ಮಾಡುತ್ತಿದೆ ಎಂದು ಹೇಳಿದರು.

ಹಿಂದಿನ ಹಣಕಾಸು ವರ್ಷದಲ್ಲಿ ಮಾರುತಿ ಸುಜುಕಿ ಇಂಡಿಯಾ ರಫ್ತು ಶೇ 10ರಷ್ಟು ಹೆಚ್ಚಳವಾಗಿದೆ. 2.55 ಲಕ್ಷದಿಂದ 2.80 ಲಕ್ಷಕ್ಕೆ ವಾಹನಗಳ ಮಾರಾಟವು ಏರಿಕೆಯಾಗಿದೆ ಎಂದು ಭಾರತೀಯ ವಾಹನ ತಯಾರಕರ ಒಕ್ಕೂಟ (ಎಸ್‌ಐಎಎಂ) ತಿಳಿಸಿದೆ.

ಬೆಂಗಳೂರು ವಲಯ: ಎಸ್‌ಬಿಐ ಮುಖ್ಯ ಪ್ರಧಾನ ವ್ಯವಸ್ಥಾಪಕರಾಗಿ ಜೈಸ್ವಾಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕರಾಗಿ ವಿನೋದ್ ಜೈಸ್ವಾಲ್ ಅಧಿಕಾರ ವಹಿಸಿ ಕೊಂಡಿದ್ದಾರೆ.



ವಿನೋದ್ ಜೈಸ್ವಾಲ್

1991ರಲ್ಲಿ ಪ್ರೊಬೆಷನರಿ ಅಧಿಕಾರಿಯಾಗಿ ಬ್ಯಾಂಕ್‌ನಲ್ಲಿ ತಮ್ಮ ವೃತ್ತಿ ಜೀವನ ಆರಂಭಿಸಿದ ಅವರು ಬ್ಯಾಂಕ್‌ನ ಕೋಲ್ಕತ್ತ ವೃತ್ತದಲ್ಲಿ ಉಪ ಪ್ರಧಾನ ವ್ಯವಸ್ಥಾಪಕ (ವ್ಯವಹಾರ ಮತ್ತು ಕಾರ್ಯಾಚರಣೆ), ಪ್ರಧಾನ ವ್ಯವಸ್ಥಾಪಕ (ಹಣಕಾಸು ಹಾಗೂ ಮೈಕ್ರೋ ಮಾರ್ಕೆಟ್) ಚೆನ್ನೈ ವೃತ್ತದ ನೆಟ್‌ವರ್ಕ್‌-1ರ ಪ್ರಧಾನ ವ್ಯವಸ್ಥಾಪಕ, ಚಂಡೀಗಢ ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕ ಸೇರಿದಂತೆ ಹಲವು ಪ್ರಮುಖ ಸ್ಥಾನದಲ್ಲಿ ಕಾರ್ಯನಿರ್ವಹಿಸಿದ್ದಾರೆ ಎಂದು ಬ್ಯಾಂಕ್ ತಿಳಿಸಿದೆ.

ರಾಜ್ಯದಲ್ಲಿ ಎಸ್‌ಬಿಐ 1,700ಕ್ಕೂ ಅಧಿಕ ಶಾಖೆ/ಕಚೇರಿಗಳನ್ನು ಹೊಂದಿದ್ದು, ₹4.50 ಲಕ್ಷ ಕೋಟಿಗೂ ಹೆಚ್ಚಿನ ಜಮಾ–ಖರ್ಚು ಪಟ್ಟಿ (ಬ್ಯಾಲನ್ಸ್ ಶೀಟ್) ಹೊಂದಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ವಿಧ	ದರ
ಬಂಟ್ವಾಳ	
ಕೋಕ	18000-28500
ಹೊಸತು	28500-38000
ಹಳತು	38000-46500
ಚಿತ್ರದುರ್ಗ	
ಅಪಿ	52600-53000
ಬೆಟ್ಟೆ	37100-37500
ಕೆಂಪುಗೋಟು	30600-31000
ರಾಶಿ	52100-52500
ಕುಮಟ	
ಚಿಪ್ಪು	20111-25611
ಕೋಕ	5029-21111
ಹಳೆಚಾಲಿ	38409-38709
ಹೊಸಚಾಲಿ	32019-35199
ಸಾಗರ	
ಬಿಳಿಗೋಟು	22701-23001
ಚಾಲಿ	33001-35299
ಕೆಂಪುಗೋಟು	26509-32009
ರಾಶಿ	40009-52219
ಶಿವಮೊಗ್ಗ	
ಬೆಟ್ಟೆ	48569-55509
ಗೊರಬಲು	14141-37069
ರಾಶಿ	34976-53699
ಸರಕು	63920-82999
ಸಿದ್ದಾಪುರ	
ಬಿಳಿಗೋಟು	26699-29899
ಚಾಲಿ	34299-36199
ಕೋಕ	26600-29909
ಹಳೆಚಾಲಿ	35399-35399
ಕೆಂಪುಗೋಟು	27419-29219
ರಾಶಿ	43599-49899
ತಟ್ಟಿಬೆಟ್ಟೆ	35700-41219
ಶಿರಸಿ	
ಬೆಟ್ಟೆ	34320-47099
ಬಿಳಿಗೋಟು	24320-30611
ಚಾಲಿ	33099-37591
ಕೆಂಪುಗೋಟು	15300-30869
ರಾಶಿ	45369-48898
ಯಲ್ಲಾಪುರ	
ಅಪಿ	60379-60379
ಬಿಳಿಗೋಟು	21899-30399
ಕೋಕ	11899-28699
ಹಳೆಚಾಲಿ	38209-38209
ಹೊಸಚಾಲಿ	31799-36899
ಕೆಂಪುಗೋಟು	24009-33509
ರಾಶಿ	45179-53699
ತಟ್ಟಿಬೆಟ್ಟೆ	34999-44100

ಉಗ್ರರಿಗಾಗಿ ಮುಂದುವರಿದ ಶೋಧ

ಜಮ್ಮು (ಪಿಟಿಐ): ಮಾತಾ ವೈಷ್ಣೋದೇವಿ ದೇವಾಲಯಕ್ಕೆ ಯಾತ್ರಿಕರನ್ನು ಕರೆದೊಯ್ಯುತ್ತಿದ್ದ ಬಸ್ಸಿನ ಮೇಲೆ ದಾಳಿ ನಡೆಸಿದ ಉಗ್ರರಿಗಾಗಿ ಭದ್ರತಾ ಪಡೆಗಳು ವ್ಯಾಪಕ ಶೋಧ ಕಾರ್ಯ ಮುಂದುವರಿಸಿವೆ.

ಜಮ್ಮುವಿನ ರಿಯಾಸಿ ಜಿಲ್ಲೆಯ ಪೋನಿ ಪ್ರದೇಶದ ತೇರ್ಯತ್ ಗ್ರಾಮದಲ್ಲಿ ಭಾನುವಾರ ಸಂಜೆ ಉಗ್ರರು ನಡೆಸಿದ ಗುಂಡಿನ ದಾಳಿಯಲ್ಲಿ ಎರಡು ವರ್ಷದ ಮಗು ಒಳಗೊಂಡಂತೆ ಒಂಬತ್ತು ಮಂದಿ ಮೃತಪಟ್ಟಿದ್ದರು. ಉಗ್ರರು ಗುಂಡು ಹಾರಿಸಿದಾಗ ಚಾಲಕನ ನಿಯಂತ್ರಣ ಕಳೆದುಕೊಂಡ ಬಸ್ ಆಳವಾದ ಕಮರಿಗೆ ಬಿದ್ದಿತ್ತು. ಬಸ್ಸಿನಲ್ಲಿದ್ದ ಇತರ 41 ಮಂದಿ ಗಾಯಗೊಂಡಿದ್ದರು.

ಉತ್ತರ ಪ್ರದೇಶ, ರಾಜಸ್ಥಾನ ಮತ್ತು ದೆಹಲಿಯ ಯಾತ್ರಿಕರಿದ್ದ ಬಸ್, ವೈಷ್ಣೋದೇವಿ ದೇಗುಲದ ಬೇಸ್ ಕ್ಯಾಂಪ್‌ನಲ್ಲಿರುವ ಶಿವ ಖೋರಿ ದೇವಾಲಯಕ್ಕೆ ತೆರಳುತ್ತಿತ್ತು.

'ತನಿಖಾಧಿಕಾರಿಗಳು ಬಸ್ಸಿನಲ್ಲಿದ್ದ ಪ್ರಯಾಣಿಕರ ಹೇಳಿಕೆ ದಾಖಲಿಸಿಕೊಂಡಿದ್ದಾರೆ. ಉಗ್ರರ ಪತ್ತೆಗೆ ಶೋಧ ಕಾರ್ಯ ಮುಂದುವರಿದಿದೆ' ಎಂದು ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದರು.

ಈ ದಾಳಿಯ ಬೆನ್ನಲ್ಲೇ ಸೇನೆ, ಪೊಲೀಸರು, ಎಸ್‌ಐಎ, ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಮತ್ತು ಕೇಂದ್ರದ ಇತರ ತನಿಖಾ ಸಂಸ್ಥೆಗಳು ಉಗ್ರರ ಪತ್ತೆಗಾಗಿ ಜಂಟಿ ಕಾರ್ಯಾಚರಣೆ ಆರಂಭಿಸಿದ್ದವು.

ಲಷ್ಕರ್ ಎ ತಯಬಾ ಉಗ್ರ ಸಂಘಟನೆಯ ಘಟಕವಾದ 'ದಿ ರೆಸಿಸ್ಟೆನ್ಸ್ ಫ್ರಂಟ್' (ಟಿಆರ್‌ಎಫ್) ದಾಳಿಯ ಹೊಣೆ ಹೊತ್ತುಕೊಂಡಿತ್ತಾದರೂ, ಆ ಬಳಿಕ ತನ್ನ ಹೇಳಿಕೆ ವಾಪಸ್ ಪಡೆದುಕೊಂಡಿತ್ತು.

ಗಾಯಗೊಂಡವರಲ್ಲಿ 10 ಮಂದಿಗೆ ಗುಂಡೇಟು ತಗುಲಿದೆ. ಗಾಯಾಳುಗಳು ರಿಯಾಸಿ ಮತ್ತು ಜಮ್ಮು ಜಿಲ್ಲೆಗಳ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ರಾಜಸ್ಥಾನದ ಪೂಜಾ ಮತ್ತು ಅವರ ಎರಡು ವರ್ಷದ ಮಗು ಟೀಟೂ ಸಾಹ್ನಿ, ಬಸ್ಸಿನ ಚಾಲಕ ಮತ್ತು ನಿರ್ವಾಹಕ ಮೃತಪಟ್ಟವರಲ್ಲಿ ಸೇರಿದ್ದಾರೆ.

ದಾಳಿಯಲ್ಲಿ ವಿದೇಶದ ಮೂವರು ಉಗ್ರರು ಭಾಗಿಯಾಗಿರುವ ಸಾಧ್ಯತೆಯಿದೆ ಎಂದು ಭದ್ರತಾ ಪಡೆಯ ಅಧಿಕಾರಿಗಳು ಹೇಳಿದ್ದಾರೆ. ಅವರು ರಜೌರಿ ಮತ್ತು ರಿಯಾಸಿ ವಲಯದ ಪರ್ವತ ಪ್ರದೇಶದಲ್ಲಿ ಅಡಗಿಗೊಂಡಿದ್ದಾರೆಂದು ಶಂಕಿಸಲಾಗಿದ್ದು, ಆ ಭಾಗದಲ್ಲಿ ಶೋಧ ಕಾರ್ಯ ಮುಂದುವರಿಸಲಾಗಿದೆ.

ಜಮ್ಮುವಿನಲ್ಲಿ ಪ್ರತಿಭಟನೆ: ಉಗ್ರರ ದಾಳಿ ಖಂಡಿಸಿ ಜಮ್ಮು ವಲಯದಲ್ಲಿ ಸೋಮವಾರ ವಿವಿಧ ಸಂಘಟನೆಗಳು ಪ್ರತಿಭಟನೆ ನಡೆಸಿದವು. ಜಮ್ಮು, ಪೂಂಛ್, ರಜೌರಿ, ಕಿಶ್ತ್‌ವಾಢ, ರಿಯಾಸಿ, ದೋಡಾ ಮತ್ತು ಉಧಂಪುರ ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದವು. ಕಿಶ್ತ್‌ವಾಢ ಪಟ್ಟಣ ಮತ್ತು ರಿಯಾಸಿ ಜಿಲ್ಲೆಯ ಕೆಲವೆಡೆ ಅಂಗಡಿ ಮುಂಗಟ್ಟುಗಳನ್ನು ಮುಚ್ಚಲಾಯಿತು.

ಕಾನೂನು, ಶಾಸನಾತ್ಮಕ ಕ್ರಮಕ್ಕೆ ಸಲಹೆ: ನ್ಯಾಯಮೂರ್ತಿ ರಾಜನ್ ವರದಿ ಹಂಚಿಕೊಂಡ ಎಂ.ಕೆ. ಸ್ಟಾಲಿನ್

ತಮಿಳುನಾಡು: 'ನೀಟ್' ರದ್ದತಿಗೆ ಶಿಫಾರಸು

ಚೆನ್ನೈ (ಪಿಟಿಐ): ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ (ನೀಟ್) ವ್ಯವಸ್ಥೆಯನ್ನು ಕೊನೆಗೊಳಿಸಲು ಕಾನೂನು ಹಾಗೂ ಶಾಸನಾತ್ಮಕ ಪ್ರಕ್ರಿಯೆಗಳ ಮೂಲಕ ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂದು ಮದ್ರಾಸ್ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎ.ಕೆ. ರಾಜನ್ ಅವರು ತಮಿಳುನಾಡು ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ.

ಮೊದಲ ವರ್ಷದ ವೈದ್ಯಕೀಯ ಕೋರ್ಸ್‌ಗಳಿಗೆ ದ್ವಿತೀಯ ಪಿಯು ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಪಡೆಯುವ ಅಂಕವನ್ನು ಮಾತ್ರವೇ ಮಾನದಂಡವನ್ನಾಗಿ ಪರಿಗಣಿಸುವಂತೆಯೂ ಅವರು ಶಿಫಾರಸಿನಲ್ಲಿ ಹೇಳಿದ್ದಾರೆ.

ಬೇರೆ ಬೇರೆ ಶಿಕ್ಷಣ ಮಂಡಳಿಗಳು ರೂಪಿಸುವ ಪಠ್ಯಕ್ರಮಕ್ಕೆ ಅನುಗುಣವಾಗಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಸಮಾನ ಅವಕಾಶಗಳು ಸಿಗುವಂತೆ ಸರ್ಕಾರ ನೋಡಿಕೊಳ್ಳಬೇಕು, ಅಂಕಗಳ ಸಾಮಾನ್ಯೀಕರಣ ಪ್ರಕ್ರಿಯೆಯನ್ನು ಅನುಸರಿಸಬಹುದು ಎಂದು ಉನ್ನತ ಮಟ್ಟದ ಸಮಿತಿಯ ನೇತೃತ್ವ ವಹಿಸಿದ್ದ ಅವರು ಶಿಫಾರಸು ಮಾಡಿದ್ದಾರೆ.

ತಮಿಳುನಾಡಿನಲ್ಲಿ ಡಿಎಂಕೆ ಪಕ್ಷವು 2021ರಲ್ಲಿ ಅಧಿಕಾರಕ್ಕೆ ಮರಳಿದ ನಂತರ ಈ ಸಮಿತಿಯನ್ನು ರಚಿಸಲಾಗಿತ್ತು. ನೀಟ್ ಆಧಾರಿತ ಪ್ರವೇಶ ಪ್ರಕ್ರಿಯೆಯ ಪರಿಣಾಮಗಳ ಬಗ್ಗೆ ಅಧ್ಯಯನ ನಡೆಸಲು ಸಮಿತಿಗೆ ಸೂಚಿಸಲಾಗಿತ್ತು.

ವಿದ್ಯಾರ್ಥಿಗಳು, ಪಾಲಕರು ಹಾಗೂ ಸಾರ್ವಜನಿಕರಿಂದ ಪಡೆದ ಮಾಹಿತಿ, ದತ್ತಾಂಶ ವಿಶ್ಲೇಷಣೆ ಆಧರಿಸಿದ ಸಮಿತಿಯ ವರದಿಯನ್ನು ಬೇರೆ ಬೇರೆ ರಾಜ್ಯ ಸರ್ಕಾರಗಳ ಜೊತೆ ಹಂಚಿಕೊಳ್ಳಲಾಗಿದೆ.

'ನೀಟ್ ವ್ಯವಸ್ಥೆಯ ಅಪಾಯಗಳನ್ನು ಮೊದಲು ಮನಗಂಡಿದ್ದು ಡಿಎಂಕೆ. ಪಕ್ಷವು ಈ ವ್ಯವಸ್ಥೆಯ ವಿರುದ್ಧ ದೊಡ್ಡ ಪ್ರಮಾಣದ ಆಂದೋಲನ ನಡೆಸಿತು' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಎಕ್ಸ್ ಮೂಲಕ ಹೇಳಿದ್ದಾರೆ. ಅವರು ಸಮಿತಿಯ ವರದಿಯನ್ನು ಕೂಡ ಹಂಚಿಕೊಂಡಿದ್ದಾರೆ.

ನೀಟ್ ವ್ಯವಸ್ಥೆಯನ್ನು ವೈದ್ಯಕೀಯ ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಹೋಗಲಾಡಿಸುವ ಅಗತ್ಯವನ್ನು ಹೇಳುವ ಕಾಯ್ದೆಯೊಂದನ್ನು ರೂಪಿಸಿ ತಮಿಳುನಾಡು ಸರ್ಕಾರವು ಅದಕ್ಕೆ ರಾಷ್ಟ್ರಪತಿಯವರ



ನೀಟ್–ಯುಜಿ ಪ್ರವೇಶ ಪರೀಕ್ಷೆ ಫಲಿತಾಂಶದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ವಿರುದ್ಧ ವಿದ್ಯಾರ್ಥಿಗಳು ಕೋಲ್ಕತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಅಂಕಿತ ಪಡೆಯಬಹುದು. ಆ ಮೂಲಕ ಅದು ಸಾಮಾಜಿಕ ನ್ಯಾಯವನ್ನು ಖಾತರಿಪಡಿಸಬಹುದು ಎಂದು ಸಮಿತಿ ಹೇಳಿದೆ.

'ವರದಿಯಲ್ಲಿ ಇರುವ ಶಿಫಾರಸುಗಳನ್ನು ಆಧರಿಸಿ, ಎನ್‌ಇಇಟಿಯಿಂದ ವಿನಾಯಿತಿ ನೀಡುವ ಮಸೂದೆಯನ್ನು ತಮಿಳುನಾಡು ವಿಧಾನಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಗಿತ್ತು. ತಮಿಳುನಾಡು ರಾಜ್ಯಪಾಲರಿಂದ ಅನಗತ್ಯ ವಿಳಂಬ ಕಂಡ ನಂತರದಲ್ಲಿ, ಮಸೂದೆಯು ರಾಷ್ಟ್ರಪತಿಯವರ ಅಂಕಿತಕ್ಕೆ ಕಾಯುತ್ತಿದೆ' ಎಂದು ಸ್ಟಾಲಿನ್ ಹೇಳಿದ್ದಾರೆ.

ಎನ್‌ಇಇಟಿಗೆ ರಾಷ್ಟ್ರದಾದ್ಯಂತ ವಿರೋಧ ಹೆಚ್ಚಾದ ನಂತರದಲ್ಲಿ 'ನಾವು ನ್ಯಾಯಮೂರ್ತಿ ಎ.ಕೆ. ರಾಜನ್ ಸಮಿತಿಯ ವರದಿಯನ್ನು ಇಂಗ್ಲಿಷ್ ಹಾಗೂ ಭಾರತದ ಎಲ್ಲ ಪ್ರಮುಖ ಭಾಷೆಗಳಲ್ಲಿ ಎಲ್ಲರೊಂದಿಗೆ, ನೀಟ್‌ನ ಕೆಟ್ಟ ಪರಿಣಾಮಗಳನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲಿ ಎಂಬ ಉದ್ದೇಶದಿಂದ ಹಂಚಿಕೊಳ್ಳುತ್ತಿದ್ದೇವೆ' ಎಂದು ಸ್ಟಾಲಿನ್ ಅವರು ಎಕ್ಸ್‌ನಲ್ಲಿ ಹೇಳಿದ್ದಾರೆ.

ಹೊಸದಾಗಿ ಪರೀಕ್ಷೆಗೆ ಕೋರಿ ಅರ್ಜಿ

ನವದೆಹಲಿ: ನೀಟ್-ಯುಜಿ 2024 ಫಲಿತಾಂಶವನ್ನು ಹಿಂದಕ್ಕೆ ಪಡೆದು, ಹೊಸದಾಗಿ ಪರೀಕ್ಷೆ ನಡೆಸಬೇಕು ಎಂಬ ಮನವಿಯೊಂದಿಗೆ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ. ಮೇ 5ರಂದು ನಡೆದ ನೀಟ್ ಪರೀಕ್ಷೆಯಲ್ಲಿ ಅಕ್ರಮಗಳು ನಡೆದಿವೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

ಅಬ್ದುಲ್ಲಾ ಮೊಹಮ್ಮದ್ ಫೈಜ್ ಮತ್ತು ಶೇಖ್ ರೋಷನ್ ಮೊಹಿದಿನ್ ಅವರು ಈ ಅರ್ಜಿ ಸಲ್ಲಿಸಿದ್ದಾರೆ. ವಿದ್ಯಾರ್ಥಿಗಳಿಗೆ ನೆರವಾಗುವ ಸಂಘಟನೆಯೊಂದರ ಸದಸ್ಯರು ತಾವು ಎಂದು ಅವರು ಹೇಳಿಕೊಂಡಿದ್ದಾರೆ.

ನೀಟ್ಪರೀಕ್ಷೆಯಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ತ್ವರಿತ ತನಿಖೆಗೆ ಹಾಗೂ ತಪ್ಪು ಮಾಡಿದವರಿಗೆ ತ್ವರಿತವಾಗಿ ಶಿಕ್ಷೆಯಾಗುವಂತೆ ನೋಡಿಕೊಳ್ಳಲು ವಿಶೇಷ ತಂಡವನ್ನು (ಎಸ್‌ಐಟಿ) ರಚಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಪರೀಕ್ಷೆಯಲ್ಲಿ 67 ವಿದ್ಯಾರ್ಥಿಗಳಿಗೆ ಪೂರ್ಣ ಅಂಕ (720ಕ್ಕೆ 720) ಸಿಕ್ಕಿದೆ, ಈ ಪೈಕಿ ಎಂಟು ಮಂದಿ ವಿದ್ಯಾರ್ಥಿಗಳು ಒಂದೇ ಕೇಂದ್ರಕ್ಕೆ ಸೇರಿದವರು. ಇದು ಪರೀಕ್ಷೆ ನಡೆಸಿದ ವಿಧಾನದ ಬಗ್ಗೆ ಅನುಮಾನ ಮೂಡಿಸುವಂತಿದೆ ಎಂದು ವಿವರಿಸಲಾಗಿದೆ.

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು ಕೃಪಾಂಕ ನೀಡಿರುವುದು ಕೆಲವು ವಿದ್ಯಾರ್ಥಿಗಳಿಗೆ ಹಿಂಬಾಗಿಲ ಪ್ರವೇಶ ನೀಡಲು ನಡೆಸಿದ ದುರುದ್ದೇಶದ ಕೆಲಸ ಎಂದು ದೂರಲಾಗಿದೆ.

ರಾಜೀನಾಮೆ ಸುಳ್ಳು: ಸುರೇಶ್ ಗೋಪಿ


ಸುರೇಶ್ ಗೋಪಿ

ನವದೆಹಲಿ/ ತಿರುವನಂತಪುರ (ಪಿಟಿಐ): ಸಚಿವ ಸ್ಥಾನಕ್ಕೆ ತಾವು ರಾಜೀನಾಮೆ ನೀಡಿರುವ ಸುದ್ದಿ ಸಂಪೂರ್ಣ ಸುಳ್ಳು ಎಂದು ನಟ, ಕೇಂದ್ರ ಸಚಿವ ಸುರೇಶ್ ಗೋಪಿ ಸ್ಪಷ್ಟಪಡಿಸಿದ್ದಾರೆ.

ಈ ಬಗ್ಗೆ ಫೇಸ್‌ಬುಕ್‌ನಲ್ಲಿ ಸಂದೇಶವನ್ನು ಪೋಸ್ಟ್ ಮಾಡಿರುವ ಅವರು, 'ನಾನು ಮೋದಿ ಸರ್ಕಾರದ ಸಚಿವ ಸಂಪುಟಕ್ಕೆ ರಾಜೀನಾಮೆ ಸಲ್ಲಿಸಿದ್ದೇನೆ ಎಂದು ಕೆಲವು ಮಾಧ್ಯಮಗಳು ಸಂಪೂರ್ಣ ಸುಳ್ಳು ಸುದ್ದಿಯನ್ನು ಹರಡುತ್ತಿವೆ. ಮೋದಿ ಸರ್ಕಾರದ ಸಂಪುಟದಲ್ಲಿರುವುದು ಮತ್ತು ಕೇರಳದ ಜನರನ್ನು ಪ್ರತಿನಿಧಿಸುತ್ತಿರುವುದು ನನಗೆ ಹೆಮ್ಮೆಯ ವಿಚಾರವಾಗಿದೆ' ಎಂದು ತಿಳಿಸಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿಜೀ ಅವರ ನಾಯಕತ್ವದಲ್ಲಿ ಕೇರಳದ ಅಭಿವೃದ್ಧಿ ಮತ್ತು ಸಮೃದ್ಧಿಗೆ ನಾವು ಬದ್ಧರಾಗಿದ್ದೇವೆ' ಎಂದು ಹೇಳಿದ್ದಾರೆ.

ತಮ್ಮ ಹುದ್ದೆಯಿಂದ ಶೀಘ್ರದಲ್ಲೇ ಬಿಡುಗಡೆಗೊಂಡು, ಹೆಚ್ಚು ಸಿನಿಮಾಗಳಲ್ಲಿ ನಟಿಸಲು ಬಯಸುತ್ತಿರುವುದಾಗಿ ಭಾನುವಾರ ರಾತ್ರಿ ಸುರೇಶ್ ಗೋಪಿ ಮಾಧ್ಯಮವೊಂದಕ್ಕೆ ಹೇಳಿದ್ದು ಚರ್ಚೆಗೆ ಗ್ರಾಸವಾಗಿತ್ತು. ಗೋಪಿ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆ ಎನ್ನುವ ವದಂತಿ ಹರಡಿತ್ತು.


ಸಿಕ್ಕಿಂನ ಗ್ಯಾಂಗ್ಟಕ್‌ನಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಅವರು ಮುಖ್ಯಮಂತ್ರಿ ಪ್ರೇಮ್‌ಸಿಂಗ್ ತಮಾಂಗ್ ಅವರಿಗೆ ಪ್ರಮಾಣವಚನ ಬೋಧಿಸಿದರು –ಪಿಟಿಐ ಚಿತ್ರ

ಸಿಕ್ಕಿಂ: ಪ್ರೇಮ್ ಸಿಂಗ್ ತಮಾಂಗ್ ಮುಖ್ಯಮಂತ್ರಿಯಾಗಿ ಪ್ರಮಾಣ

ಗ್ಯಾಂಗ್ಟಕ್ (ಪಿಟಿಐ): ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ (ಎಸ್‌ಕೆಎಂ) ನಾಯಕ ಪ್ರೇಮ್ ಸಿಂಗ್ ತಮಾಂಗ್ ಸೋಮವಾರ ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿ ನೇಪಾಳಿ ಭಾಷೆಯಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ಇಲ್ಲಿನ ಪಲ್ಜೋರ್ ಸ್ಟೇಡಿಯಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಅವರು ಪ್ರೇಮ್‌ಸಿಂಗ್ ಹಾಗೂ ಸಂಪುಟದ 11 ಮಂದಿ ಸಚಿವರಿಗೆ ಪ್ರಮಾಣವಚನ ಬೋಧಿಸಿದರು. ಸಮಾರಂಭದಲ್ಲಿ ಭಾಗವಹಿಸಿದ್ದ ಪಕ್ಷದ 30 ಸಾವಿರಕ್ಕೂ ಅಧಿಕ ಕಾರ್ಯಕರ್ತರು ತಮಾಂಗ್ ಪರ ಘೋಷಣೆ ಕೂಗಿದರು.

ಪವನ್ ಕಲ್ಯಾಣ್‌ಗೆ ಡಿಸಿಎಂ ಸ್ಥಾನ?

ಸಂಪುಟ ರಚನೆಯತ್ತ ನಾಯ್ಡು ಚಿತ್ತ: ಮುಖ್ಯಮಂತ್ರಿಯಾಗಿ ನಾಳೆ ಪ್ರಮಾಣ

ಪ್ರಜಾವಾಣಿ ವಾರ್ತೆ


ಪವನ್ ಕಲ್ಯಾಣ್

ಹೈದರಾಬಾದ್: ರಾಷ್ಟ್ರ ರಾಜಧಾನಿ ನವದೆಹಲಿಯ ಪ್ರವಾಸದಿಂದ ಮರಳಿರುವ ತೆಲುಗುದೇಶಂ ಪಕ್ಷದ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಈಗ ರಾಜ್ಯ ಸಚಿವ ಸಂಪುಟ ರಚನೆಯತ್ತ ಚಿತ್ತ ಹರಿಸಿದ್ದಾರೆ.

ತೆಲುಗುದೇಶಂ ಪಕ್ಷ ಸ್ಪಷ್ಟ ಬಹುಮತ ಪಡೆದು ರಾಜ್ಯದಲ್ಲಿ ಅಧಿಕಾರಕ್ಕೆ ಮರಳಿದೆ. ಮುಖ್ಯಮಂತ್ರಿಯಾಗಿ ನಾಯ್ಡು ಅವರು ಇದೇ 12ರಂದು ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಪ್ರಮಾಣವಚನಕ್ಕೂ ಮೊದಲೇ ಸಂಪುಟ ರಚನೆಯ ಕಸರತ್ತು ಪೂರ್ಣಗೊಳಿಸಲು ಅವರು ತೀರ್ಮಾನಿಸಿದ್ದಾರೆ. ನಿಯಮಾನುಸಾರ ಸಂಪುಟಕ್ಕೆ 25 ಶಾಸಕರ ಸೇರ್ಪಡೆಗೆ ಅವಕಾಶವಿದೆ. ಆದರೆ, ಆಕಾಂಕ್ಷಿಗಳ ಪಟ್ಟಿ ದೊಡ್ಡದಿದೆ.

ಆಕಾಂಕ್ಷಿಗಳ ನಡುವೆ ಅನುಭವ, ಜಾತಿ, ಪ್ರಾದೇಶಿಕ ನಿರೀಕ್ಷೆಗೆ ಮನ್ನಣೆ ನೀಡುವ ಸವಾಲಿನ ಜೊತೆಗೆ ಮೈತ್ರಿ ಪಕ್ಷ ಜನಸೇನಾ ಪಕ್ಷದ ಅಭ್ಯರ್ಥಿಗಳಿಗೂ ಸ್ಥಾನ ಕಲ್ಪಿಸಬೇಕಾಗಿದೆ.

ಟಿಡಿಪಿ ಪಕ್ಷದ ಮೂಲಗಳ ಪ್ರಕಾರ, 21 ಸ್ಥಾನ ಗೆದ್ದಿರುವ ಮೈತ್ರಿಪಕ್ಷ ಜನಸೇನಾವು ಸಂಪುಟದಲ್ಲಿ ಸೂಕ್ತ ಪ್ರಾತಿನಿಧ್ಯ ಪಡೆಯುವ ಸಾಧ್ಯತೆಗಳಿವೆ. ಜೊತೆಗೆ, ಮತ್ತೊಂದು ಮೈತ್ರಿಪಕ್ಷ 8 ಸ್ಥಾನ ಗೆದ್ದಿರುವ ಬಿಜೆಪಿ ಕೂಡಾ ಆದ್ಯತೆ ಪಡೆಯಲಿದೆ

ಜನಸೇನಾ ಮುಖ್ಯಸ್ಥ ಪವನ್ ಕಲ್ಯಾಣ್ ಸಂಪುಟ ಸೇರುವುದು ಖಚಿತ. ಉಪ ಮುಖ್ಯಮಂತ್ರಿ ಜೊತೆಗೆ ಗೃಹ ಖಾತೆ ಹೊಂದಬಹುದು. ನಾಯ್ಡು ಸಂಪುಟದಲ್ಲಿ ಪವನ್ ಕಲ್ಯಾಣ್ ಅಷ್ಟೇ ಡಿಸಿಎಂ ಆಗಿರುವರು ಎಂದು ಮೂಲಗಳು ತಿಳಿಸಿವೆ. ಹಿಂದಿನ ವೈ.ಎಸ್.ಜಗನ್ ಮೋಹನ್ ರೆಡ್ಡಿ ನೇತೃತ್ವದ ಸರ್ಕಾರದಲ್ಲಿ ಐವರು ಡಿಸಿಎಂಗಳಿದ್ದರು.

ರಾಜ್ಯ ಸಚಿವ ಸಂಪುಟದಲ್ಲಿ ಪಕ್ಷದ ಪ್ರಾತಿನಿಧ್ಯ ಹೆಚ್ಚಿಸುವ ಕ್ರಮವಾಗಿ ಪವನ್ ಕಲ್ಯಾಣ್ ಕೇಂದ್ರ ಸಂಪುಟ ಸೇರುವ ಆಹ್ವಾನವನ್ನು ನಿರಾಕರಿಸಿದ್ದರು ಎಂದು ಹೇಳಲಾಗಿದೆ. ಬಿಜೆಪಿಯು ಮೂರು ಸಚಿವ ಸ್ಥಾನ ಪಡೆಯುವ ಸಾಧ್ಯತೆಯಿದೆ.

ನಾಯ್ಡುಅವರ ಪುತ್ರ ನಾರಾ ಲೋಕೇಶ್ ಅವರೂ ಸಂಪುಟ ಸೇರಲಿದ್ದಾರೆಯೇ, ಇಲ್ಲವೇ ಎಂಬುದು ಖಚಿತವಾಗಿಲ್ಲ. ನಾಯ್ಡು ನೇತೃತ್ವದ ಹಿಂದಿನ ಸರ್ಕಾರದಲ್ಲಿ ಲೋಕೇಶ್ ಅವರು ಐ.ಟಿ. ಖಾತೆ ಸಚಿವರಾಗಿದ್ದರು.

ಮೈತ್ರಿಕೂಟ ರಾಜ್ಯದಲ್ಲಿ ಬಹುಮತ ಗಳಿಸುತ್ತಿದ್ದಂತೆ ನಾರಾ ಲೋಕೇಶ್ ಅವರ ಆಸುಪಾಸಿನಲ್ಲಿ ಮಂತ್ರಿ ಸ್ಥಾನದ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಿದೆ. ಅವರು ಪಕ್ಷದಲ್ಲಿ ಅಧಿಕಾರದ ಕೇಂದ್ರ ಸ್ಥಾನವಾಗುವ ಸಾಧ್ಯತೆಗಳು ಕಂಡುಬರುತ್ತಿವೆ.

ಲೋಕಸಭೆ: ಪುರಂದೇಶ್ವರಿ ಸ್ಪೀಕರ್?


ಪುರಂದೇಶ್ವರಿ

ಹೈದರಾಬಾದ್: ಆಂಧ್ರಪ್ರದೇಶದ ರಾಜಮಂಡ್ರಿ ಕ್ಷೇತ್ರದ ಸಂಸದೆ ದಗ್ಗುಬಾಟಿ ಪುರಂದೇಶ್ವರಿ ಅವರು 18ನೇ ಲೋಕಸಭೆಯ ಸ್ಪೀಕರ್ ಆಗಿ ಆಯ್ಕೆಯಾಗುವ ಸಾಧ್ಯತೆಗಳು ನಿಚ್ಚಳವಾಗಿವೆ.

ಸಚಿವ ಸಂಪುಟ ರಚನೆಯ ಸಂದರ್ಭದಲ್ಲಿ ಬಿಜೆಪಿ ಕೇಂದ್ರ ನಾಯಕತ್ವವು ಇವರ ಹೆಸರು ಪರಿಗಣಿಸದಿರುವುದು ಈ ಮಾತಿಗೆ ಪುಷ್ಟಿ ನೀಡಿದೆ. ಪುರಂದೇಶ್ವರಿ ಅವರು ಪ್ರಸ್ತುತ ಆಂಧ್ರಪ್ರದೇಶ ಬಿಜೆಪಿ ಘಟಕದ ಅಧ್ಯಕ್ಷೆಯೂ ಆಗಿದ್ದಾರೆ.

ಲೋಕಸಭೆ ಸ್ಪೀಕರ್ ಸ್ಥಾನ ನಿರ್ಣಾಯಕವಾದುದಾಗಿದೆ. ಪುರಂದೇಶ್ವರಿ ಅವರು ಎನ್‌ಡಿಎಯ ಪ್ರಮುಖ ಮೈತ್ರಿಪಕ್ಷ ತೆಲುಗುದೇಶಂ ಪಕ್ಷದ ಮುಖ್ಯಸ್ಥ ಎನ್.ಚಂದ್ರಬಾಬುನಾಯ್ಡು ಅವರ ಹತ್ತಿರದ ಬಂಧುವು ಆಗಿದ್ದಾರೆ.

ಆರಂಭದಲ್ಲಿ ನಾಯ್ಡು ಅವರು ಎರಡು ಸಚಿವ ಸ್ಥಾನದ ಜೊತೆಗೆ ಸ್ಪೀಕರ್ ಸ್ಥಾನಕ್ಕೂ ಬೇಡಿಕೆ ಇಟ್ಟಿದ್ದರು. ಅವರು ಈಗ ಬಿಜೆಪಿ ಪುರಂದೇಶ್ವರಿ ಹೆಸರನ್ನು ಪರಿಗಣಿಸಿದರೆ ಆಗಬಹುದು ಎಂಬ ನಿಲುವು ಹೊಂದಿದ್ದಾರೆ ಎನ್ನಲಾಗಿದೆ.

ಆಂಧ್ರದಿಂದ ಆಯ್ಕೆಯಾಗಿರುವ ಸಂಸದರಲ್ಲಿ ಪುರಂದೇಶ್ವರಿ ಅವರ ಹಿರಿತನವನ್ನು ಪಕ್ಷ ಪರಿಗಣಿಸಿದೆ ಎನ್ನಲಾಗಿದೆ. ಇವರು ಮೂರನೇ ಬಾರಿಗೆ ಸಂಸದೆಯಾಗಿ ಆಯ್ಕೆಯಾಗಿದ್ದು, ಯುಪಿಎ ಆಡಳಿತಾವಧಿಯಲ್ಲಿ ಸಚಿವೆಯೂ ಆಗಿದ್ದರು.

'ದಕ್ಷಿಣದತ್ತ ಚಿತ್ತ' ಕಾರ್ಯತಂತ್ರದಡಿ ಆಂಧ್ರದಿಂದ ಆಯ್ಕೆಯಾದ ಪಕ್ಷದ ಸಂಸದರನ್ನು ಸಂಪುಟಕ್ಕೆ ಸೇರ್ಪಡೆಗೆ ಬಿಜೆಪಿ ಚಿಂತನೆ ಹೊಂದಿತ್ತು ಎನ್ನಲಾಗಿದೆ. ಆಂಧ್ರದಲ್ಲಿ ಬಿಜೆಪಿ–ತೆಲುಗುದೇಶಂ–ಜನಸೇನಾ ಮೈತ್ರಿ ಹೊಂದಿದ್ದವು.

ಇನ್ನೊಂದೆಡೆ, ಸಂಪುಟಕ್ಕೆ ಸೇರಲು ಬಿಜೆಪಿ ಕೇಂದ್ರ ನಾಯಕತ್ವವು ನರಸಾಪುರ ಕ್ಷೇತ್ರದ ಸಂಸದ ಭೂಪತಿರಾಜು ಶ್ರೀನಿವಾಸ ವರ್ಮಾರನ್ನು ಆಯ್ಕೆ ಮಾಡಿರುವುದು ಪಕ್ಷದ ವಲಯದಲ್ಲಿ ಅಚ್ಚರಿ ಮೂಡಿಸಿದೆ. ಭೂಪತಿರಾಜು ಇದೇ ಮೊದಲ ಬಾರಿಗೆ ಆಯ್ಕೆಯಾಗಿದ್ದಾರೆ. ಸಿ.ಎಂ.ರಮೇಶ್ ರಾಜ್ಯದಿಂದ ಆಯ್ಕೆಯಾದ ಮತ್ತೊಬ್ಬ ಬಿಜೆಪಿ ಸಂಸದ.

ಪ್ರಸ್ತುತ ಸಂದರ್ಭದಲ್ಲಿ ಬಿಜೆಪಿಯ ಆಂಧ್ರಪ್ರದೇಶ ಘಟಕ ಹಾಗೂ ಟಿಡಿಪಿ ಮೂಲಗಳು ಪುರಂದೇಶ್ವರಿ ಅವರು ಲೋಕಸಭೆಯ ಸ್ಪೀಕರ್ ಆಗಿ ಆಯ್ಕೆಯಾಗುವ ಸ್ಪಷ್ಟ ಸಾಧ್ಯತೆಗಳನ್ನು ದೃಢಪಡಿಸಿವೆ.

3 ಕೋಟಿ ಮನೆ ನಿರ್ಮಾಣಕ್ಕೆ ಕೇಂದ್ರ ಸಂಪುಟ ಒಪ್ಪಿಗೆ

ನವದೆಹಲಿ (ಪಿಟಿಐ): ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ (ಪಿಎಂಎವೈ) ಮೂರು ಕೋಟಿ ಮನೆಗಳ ನಿರ್ಮಾಣಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಮೊದಲ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಯಿತು.

ಮೋದಿ 3.0 ಆಡಳಿತದ ಮೊದಲ ಸಭೆ ಪ್ರಧಾನಿ ಅವರ ನಿವಾಸದಲ್ಲಿ ನಡೆಯಿತು. ಎನ್‌ಡಿಎ ಮಿತ್ರಪಕ್ಷಗಳ ಎಲ್ಲ ಸಚಿವರೂ ಸಭೆಯಲ್ಲಿ ಪಾಲ್ಗೊಂಡರು.

'ಪಿಎಂಎವೈ ಯೋಜನೆಯಡಿ ಫಲಾನುಭವಿಗಳ ಸಂಖ್ಯೆ ಹೆಚ್ಚಾಗಿ ರುವುದನ್ನು ಪರಿಗಣಿಸಿ ಗ್ರಾಮೀಣ ಮತ್ತು ನಗರ ಪ್ರದೇಶಗಳ ಮೂರು ಕೋಟಿ ಕುಟುಂಬಗಳಿಗೆ ಮನೆಗಳನ್ನು ನಿರ್ಮಿಸಲು ಅಗತ್ಯ ನೆರವು ಒದಗಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2015–16ರಲ್ಲಿ ಆರಂಭವಾದ ಪಿಎಂಎವೈ ಯೋಜನೆಯಡಿ ಇದುವರೆಗೆ 4.21 ಕೋಟಿ ಮನೆ ನಿರ್ಮಾಣವಾಗಿದೆ.

	ಖಾತೆಗಳು
ನರೇಂದ್ರ ಮೋದಿ (ಪ್ರಧಾನಿ)	ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ, ಅಣುಶಕ್ತಿ, ಬಾಹ್ಯಾಕಾಶ, ಪ್ರಮುಖ ನೀತಿ ನಿರೂಪಣೆ ಮತ್ತು ಹಂಚಿಕೆಯಾಗದ ಎಲ್ಲ ಖಾತೆಗಳು
ಸಂಪುಟ ದರ್ಜೆ ಸಚಿವರು	
ರಾಜನಾಥ್ ಸಿಂಗ್	ರಕ್ಷಣೆ
ಅಮಿತ್ ಶಾ	ಗೃಹ, ಸಹಕಾರ
ನಿತಿನ್ ಗಡ್ಕರಿ	ರಸ್ತೆ ಸಾರಿಗೆ ಮತ್ತು ಹೆದ್ದಾರಿ
ಜೆ.ಪಿ.ನಡ್ಡಾ	ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ರಾಸಾಯನಿಕ ಮತ್ತು ರಸಗೊಬ್ಬರ
ಶಿವರಾಜ್‌ಸಿಂಗ್ ಚೌಹಾಣ್	ಕೃಷಿ ಮತ್ತು ರೈತರ ಕಲ್ಯಾಣ, ಗ್ರಾಮೀಣಾಭಿವೃದ್ಧಿ
ನಿರ್ಮಲಾ ಸೀತಾರಾಮನ್	ಹಣಕಾಸು, ಕಾರ್ಪೊರೇಟ್ ವ್ಯವಹಾರ
ಎಸ್.ಜೈಶಂಕರ್	ವಿದೇಶಾಂಗ
ಮನೋಹರಲಾಲ್ ಖಟ್ಟರ್	ವಸತಿ ಮತ್ತು ನಗರ ವ್ಯವಹಾರ, ಇಂಧನ
ಎಚ್.ಡಿ.ಕುಮಾರಸ್ವಾಮಿ	ಬೃಹತ್ ಕೈಗಾರಿಕೆ, ಉಕ್ಕು
ಪೀಯೂಷ್ ಗೋಯಲ್	ವಾಣಿಜ್ಯ ಮತ್ತು ಕೈಗಾರಿಕೆ
ಧರ್ಮೇಂದ್ರ ಪ್ರಧಾನ್	ಶಿಕ್ಷಣ
ಜಿತನ್ ರಾಮ್ ಮಾಂಝಿ	ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆ
ರಾಜೀವ್ ರಂಜನ್ ಸಿಂಗ್ (ಲಲನ್ ಸಿಂಗ್)	ಪಂಚಾಯತ್ ರಾಜ್, ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ
ಸರ್ಬಾನಂದ್ ಸೋನೊವಾಲ್	ಬಂದರು, ಹಡಗು ಮತ್ತು ಜಲಮಾರ್ಗ
ಡಾ.ವೀರೇಂದ್ರ ಕುಮಾರ್	ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ
ಕೆ.ರಾಮಮೋಹನ್ ನಾಯ್ಡು	ನಾಗರಿಕ ವಿಮಾನ ಯಾನ
ಪ್ರಲ್ಹಾದ ಜೋಶಿ	ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣೆ, ಹೊಸ ಮತ್ತು ನವೀಕರಿಸಬಹುದಾದ ಇಂಧನ
ಜುಯಲ್ ಓರಮ್	ಬುಡಕಟ್ಟು ವ್ಯವಹಾರ
ಗಿರಿರಾಜ್ ಸಿಂಗ್	ಜವಳಿ
ಅಶ್ವಿನಿ ವೈಷ್ಣವ್	ರೈಲ್ವೆ, ವಾರ್ತಾ ಮತ್ತು ಪ್ರಸಾರ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ
ಜ್ಯೋತಿರಾದಿತ್ಯ ಸಿಂಧಿಯಾ	ಸಂಪರ್ಕ, ಈಶಾನ್ಯ ಪ್ರದೇಶಾಭಿವೃದ್ಧಿ
ಭೂಪೇಂದರ್ ಯಾದವ್	ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ
ಗಜೇಂದ್ರ ಸಿಂಗ್ ಶೆಖಾವತ್	ಸಂಸ್ಕೃತಿ, ಪ್ರವಾಸೋದ್ಯಮ
ಅನ್ನಪೂರ್ಣಾದೇವಿ	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ಕಿರಣ್ ರಿಜಿಜು	ಸಂಸದೀಯ ವ್ಯವಹಾರ, ಅಲ್ಪಸಂಖ್ಯಾತ ವ್ಯವಹಾರ
ಹರ್‌ದೀಪ್‌ಸಿಂಗ್ ಪುರಿ	ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ
ಮನ್ಸುಖ್ ಮಾಂಡವಿಯಾ	ಕಾರ್ಮಿಕ ಮತ್ತು ಉದ್ಯೋಗ, ಯುವ ವ್ಯವಹಾರ ಮತ್ತು ಕ್ರೀಡೆ
ಜಿ.ಕಿಶನ್ ರೆಡ್ಡಿ	ಕಲ್ಲಿದ್ದಲು, ಗಣಿ
ಚಿರಾಗ್ ಪಾಸ್ವಾನ್	ಆಹಾರ ಸಂಸ್ಕರಣಾ ಕೈಗಾರಿಕೆ
ಸಿ.ಆರ್.ಪಾಟೀಲ್	ಜಲಶಕ್ತಿ
ರಾಜ್ಯ ದರ್ಜೆ ಸಚಿವರು (ಸ್ವತಂತ್ರ)	
ರಾವ್ ಇಂದರ್ ಜಿತ್ ಸಿಂಗ್	ಅಂಕಿ ಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ, ಯೋಜನೆ, ಸಂಸ್ಕೃತಿ
ಡಾ.ಜಿತೇಂದ್ರ ಸಿಂಗ್	ವಿಜ್ಞಾನ ಮತ್ತು ತಂತ್ರಜ್ಞಾನ, ಭೂ ವಿಜ್ಞಾನ, ಪ್ರಧಾನಿ ಕಾರ್ಯಾಲಯ, ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆ ಮತ್ತು ಪಿಂಚಣಿ, ಅಣುಶಕ್ತಿ ಮತ್ತು ಬಾಹ್ಯಾಕಾಶ
ಅರ್ಜುನ್ ರಾಮ್ ಮೇಘವಾಲ್	ಕಾನೂನು ಮತ್ತು ನ್ಯಾಯ, ಸಂಸದೀಯ ವ್ಯವಹಾರ
ಜಾಧವ್ ಪ್ರತಾಪ್‌ರಾವ್ ಗಣಪತಿರಾವ್	ಆಯುಷ್ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಜಯಂತ್ ಚೌಧರಿ	ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತೆ, ಶಿಕ್ಷಣ

ರಾಜ್ಯ ದರ್ಜೆ ಸಚಿವರು	
ಜಿತಿನ್ ಪ್ರಸಾದ	ವಾಣಿಜ್ಯ ಮತ್ತು ಕೈಗಾರಿಕೆ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ
ಶ್ರೀಪಾದ್ ನಾಯ್ಕ್	ಇಂಧನ ಮತ್ತು ನವೀಕರಿಸಬಹುದಾದ ಇಂಧನ
ಪಂಕಜ್ ಚೌಧರಿ	ಹಣಕಾಸು
ಕ್ರಿಶನ್ ಪಾಲ್	ಸಹಕಾರ
ರಾಮದಾಸ್ ಅಠಾವಳೆ	ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ
ರಾಮನಾಥ್ ಠಾಕೂರ್	ಕೃಷಿ ಮತ್ತು ರೈತರ ಕಲ್ಯಾಣ
ನಿತ್ಯಾನಂದ ರಾಯ್	ಗೃಹ
ಅನುಪ್ರಿಯಾ ಪಟೇಲ್	ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ರಾಸಾಯನಿಕ ಮತ್ತು ರಸಗೊಬ್ಬರ
ವಿ.ಸೋಮಣ್ಣ	ಜಲಶಕ್ತಿ, ರೈಲ್ವೆ
ಡಾ.ಚಂದ್ರಶೇಖರ್ ಪೆಮ್ಮಸಾನಿ	ಗ್ರಾಮೀಣಾಭಿವೃದ್ಧಿ, ದೂರಸಂಪರ್ಕ
ಪ್ರೊ.ಎಸ್.ಪಿ.ಸಿಂಗ್ ಬಘೇಲ್	ಮೀನುಗಾರಿಗೆ, ಪಶು ಸಂಗೋಪನೆ, ಹೈನುಗಾರಿಕೆ ಹಾಗೂ ಪಂಚಾಯತ್ ರಾಜ್
ಶೋಭಾ ಕರಂದ್ಲಾಜೆ	ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಕಾರ್ಮಿಕ ಮತ್ತು ಉದ್ಯೋಗ
ಕೀರ್ವತಿರ್ಧನ್ ಸಿಂಗ್	ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ,ವಿದೇಶಾಂಗ ವ್ಯವಹಾರ
ಬಿ.ಎಲ್.ವರ್ಮಾ	ಗ್ರಾಹಕರ ವ್ಯವಹಾರ, ಆಹಾರ ಮತ್ತು ನಾಗರಿಕ ಪೂರೈಕೆ ಹಾಗೂ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ
ಶಂತನು ಠಾಕೂರ್	ಬಂದರು, ಒಳನಾಡು, ಜಲಸಾರಿಗೆ
ಸುರೇಶ್ ಗೋಪಿ	ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಹಾಗೂ ಪ್ರವಾಸೋದ್ಯಮ
ಡಾ.ಎಲ್.ಮುರುಗನ್	ಮಾಹಿತಿ ಮತ್ತು ಪ್ರಸಾರ ಹಾಗೂ ಸಂಸದೀಯ ವ್ಯವಹಾರ
ಅಜಯ್ ತಮ್ಟಾ	ರಸ್ತೆ ಸಾರಿಗೆ ಮತ್ತು ಹೆದ್ದಾರಿ
ಬಂಡಿ ಸಂಜಯ್ ಕುಮಾರ್	ಗೃಹ
ಕಮಲೇಶ್ ಪಾಸ್ವಾನ್	ಗ್ರಾಮೀಣಾಭಿವೃದ್ಧಿ
ಭಗೀರಥ ಚೌಧರಿ	ಕೃಷಿ ಮತ್ತು ರೈತರ ಕಲ್ಯಾಣ
ಸತೀಶ್ ಚಂದ್ರ ದುಬೆ	ಕಲ್ಲಿದ್ದಲು ಮತ್ತು ಅದಿರು
ಸಂಜಯ್ ಸೇಥ್	ರಕ್ಷಣೆ
ರಣವೀತ್ ಸಿಂಗ್	ಆಹಾರ ಸಂಸ್ಕರಣೆ ಕೈಗಾರಿಕೆ ಹಾಗೂ ರೈಲ್ವೆ
ದುರ್ಗಾದಾಸ್ ಉಯಿಕೆ	ಬುಡಕಟ್ಟು ವ್ಯವಹಾರ
ರಕ್ಷಾ ನಿಖಿಲ್ ಖಡ್ಸೆ	ಯುವ ವ್ಯವಹಾರ ಮತ್ತು ಕ್ರೀಡೆ
ಸುಕಂತ ಮಜುಂದಾರ್	ಶಿಕ್ಷಣ ಹಾಗೂ ಈಶಾನ್ಯ ಪ್ರದೇಶ ಅಭಿವೃದ್ಧಿ
ಸಾವಿತ್ರಿ ಠಾಕೂರ್	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ತೋಖನ್ ಸಾಹು	ವಸತಿ ಮತ್ತು ನಗರ ವ್ಯವಹಾರ
ರಾಜ್ ಭೂಷಣ್ ಚೌಧರಿ	ಜಲಶಕ್ತಿ
ಭೂಪತಿರಾಜು ಶ್ರೀನಿವಾಸ ವರ್ಮ	ಭಾರಿ ಕೈಗಾರಿಕೆ ಮತ್ತು ಉಕ್ಕು
ಹರ್ಷ ಮಲ್ಹೋತ್ರಾ	ಕಾರ್ಪೊರೇಟ್ ವ್ಯವಹಾರ, ರಸ್ತೆ ಸಾರಿಗೆ ಮತ್ತು ಹೆದ್ದಾರಿ
ನಿಮುಬೆನ್ ಜಯಂತಿಭಾಯಿ ಬಂಭಾನಿಯಾ	ಗ್ರಾಹಕ ವ್ಯವಹಾರ, ಆಹಾರ ಮತ್ತು ನಾಗರಿಕ ಸರಬರಾಜು
ಮುರಳೀಧರ್ ಮೊಹೋಲ್	ಸಹಕಾರ ಮತ್ತು ನಾಗರಿಕ ವಿಮಾನಯಾನ
ಜಾರ್ಜ್ ಕುರಿಯನ್	ಅಲ್ಪಸಂಖ್ಯಾತರ ವ್ಯವಹಾರ , ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ
ಪವಿತ್ರ ಮಾರ್ಗರಿಟಾ	ವಿದೇಶಾಂಗ ವ್ಯವಹಾರ ಮತ್ತು ಜವಳಿ

ಕೇಂದ್ರ ಸಚಿವರಿಗೆ ಖಾತೆ ಹಂಚಿಕೆ

ಒಂದನೇ ಪುಟದಿಂದ..

ಜಲಶಕ್ತಿ ಸಚಿವರಾಗಿ ಗುಜರಾತ್‌ನ ಸಿ.ಆರ್. ಪಾಟೀಲ್ ಬಂದಿದ್ದಾರೆ. ಹಿಂದಿನ ಸರ್ಕಾರದಲ್ಲಿ ಆರೋಗ್ಯ ಸಚಿವರಾಗಿದ್ದ ಮನ್ಸುಖ್ ಮಾಂಡವೀಯಾ ಅವರಿಗೆ ಕಾರ್ಮಿಕ ಹಾಗೂ ಕ್ರೀಡಾ ಖಾತೆ ಸಿಕ್ಕಿದೆ. ಅವರಿಗೆ ಹಿಂಬಡ್ತಿ ನೀಡಲಾಗಿದೆ ಎಂದು ಬಿಜೆಪಿ ವಲಯದಲ್ಲಿ ಚರ್ಚೆಗಳು ಶುರುವಾಗಿವೆ.

ಲೋಕಸಭಾ ಚುನಾವಣೆಯಲ್ಲಿ ತೆಲಂಗಾಣದಲ್ಲಿ ಬಿಜೆಪಿಯು ಎಂಟು ಸ್ಥಾನಗಳನ್ನು ಗೆದ್ದಿದೆ. ಈ ರಾಜ್ಯವನ್ನು ಪ್ರತಿನಿಧಿಸುವ ಜಿ.ಕಿಶನ್ ರೆಡ್ಡಿ ಅವರಿಗೆ ಗಣಿ ಹಾಗೂ ಬಂಡಿ ಸಂಜಯ್ ಅವರಿಗೆ ಗೃಹದಂತಹ (ರಾಜ್ಯ ಸಚಿವ) ಪ್ರಮುಖ ಖಾತೆಗಳು ಸಿಕ್ಕಿವೆ.

ಸ್ಮೃತಿ ಇರಾನಿ ಅವರು ಹಿಂದಿನ ಸರ್ಕಾರದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾಗಿದ್ದರು. ಅವರು ಈ ಸಲ ಸೋತಿದ್ದಾರೆ. ಈ ಬಾರಿ ಈ ಖಾತೆಯನ್ನು ಅನ್ನಪೂರ್ಣ ದೇವಿ ಅವರಿಗೆ ಕೊಡಲಾಗಿದೆ.

ಮಿತ್ರರ ಬೇಡಿಕೆಗೆ ಮಣಿಯದ ಬಿಜೆಪಿ

ಪ್ರಮುಖ ಖಾತೆಗಳನ್ನು ಬಿಜೆಪಿಯೇ ಉಳಿಸಿಕೊಂಡಿದೆ. ನಿರ್ದಿಷ್ಟ ಖಾತೆಗಳ ಸಂಬಂಧ ಮಿತ್ರ ಪಕ್ಷಗಳು ಇಟ್ಟಿದ್ದ ಬೇಡಿಕೆಗೆ ಕಮಲ ಪಾಳಯ ಮಣಿದಿಲ್ಲ.

ಲೋಕಸಭಾ ಚುನಾವಣೆಯಲ್ಲಿ ತೆಲುಗು ದೇಶಂ ಪಕ್ಷವು 16 ಸ್ಥಾನಗಳನ್ನು ಗೆದ್ದಿದೆ. ಮಾಹಿತಿ ತಂತ್ರಜ್ಞಾನದಂತಹ ಪ್ರಮುಖ ಖಾತೆಗಳನ್ನು ನಿಡುವಂತೆ ಪಟ್ಟು ಹಿಡಿದಿತ್ತು. ಪಕ್ಷದ ಕೆ.ರಾಮಮೋಹನ್ ನಾಯ್ಡು ಅವರಿಗೆ ನಾಗರಿಕ ವಿಮಾನಯಾನ ಹಾಗೂ ಡಾ.ಚಂದ್ರಶೇಖರ್ ಪೆಮ್ಮಸಾನಿ ಅವರಿಗೆ ಗ್ರಾಮೀಣಾಭಿವೃದ್ಧಿ ರಾಜ್ಯ ಖಾತೆ ಕೊಟ್ಟು ಸಮಾಧಾನಪಡಿಸಲಾಗಿದೆ.

ತಮ್ಮ ಪಕ್ಷಕ್ಕೆ ರೈಲ್ವೆ ಅಥವಾ ಗ್ರಾಮೀಣಾಭಿವೃದ್ಧಿ ಖಾತೆ ಹಂಚಿಕೆ ಮಾಡುವಂತೆ ಜೆಡಿಯು ನಾಯಕ ನಿತೀಶ್ ಕುಮಾರ್ ಅವರು ಒತ್ತಡ ಹೇರಿದ್ದರು. ಆದರೆ, ಲಲನ್ ಸಿಂಗ್ ಅವರಿಗೆ ಪಂಚಾಯತ್ ರಾಜ್ ಹಾಗೂ ಮೀನುಗಾರಿಕೆ ಖಾತೆ ಹಂಚಿಕೆ ಮಾಡಲಾಗಿದೆ. ರಾಮನಾಥ್ ಠಾಕೂರ್ ಅವರಿಗೆ ಕೃಷಿ ಹಾಗೂ ರೈತರ ಕಲ್ಯಾಣ ರಾಜ್ಯ ಖಾತೆ ನೀಡಲಾಗಿದೆ. ಎಲ್‌ಜೆಪಿಯ ಚಿರಾಗ್ ಪಾಸ್ವಾನ್ ಅವರಿಗೆ ಆಹಾರ ಸಂಸ್ಕರಣೆ ಖಾತೆ ಸಿಕ್ಕಿದೆ. ಎನ್‌ಸಿಪಿಯ ಪ್ರತಾಪ್ ರಾವ್ ಜಾಧವ್ ಅವರು ಆಯುಷ್ ಖಾತೆಗೆ ತೃಪ್ತಿಪಟ್ಟಿದ್ದಾರೆ. ಉಳಿದ ಮಿತ್ರ ಪಕ್ಷಗಳಿಗೆ ಹೋಲಿಸಿದರೆ ಜೆಡಿಎಸ್‌ಗೆ ಪ್ರಮುಖ ಖಾತೆಯೇ ಸಿಕ್ಕಿದೆ.

'ಕಿಸಾನ್ ನಿಧಿ'ಗೆ ₹20 ಸಾವಿರ ಕೋಟಿ

ಒಂದನೇ ಪುಟದಿಂದ....

'ನಮ್ಮ ಸರ್ಕಾರ 'ಕಿಸಾನ್ ಕಲ್ಯಾಣ'ಕ್ಕೆ (ರೈತರ ಅಭಿವೃದ್ಧಿ) ಸಂಪೂರ್ಣ ಬದ್ಧವಾಗಿದೆ. ಆದ್ದರಿಂದ, ಅಧಿಕಾರ ವಹಿಸಿಕೊಂಡ ಬಳಿಕ ನಾನು ಸಹಿ ಮಾಡಿದ ಮೊದಲ ಕಡತವು ರೈತರಿಗೆ ಸಂಬಂಧಿಸಿದ್ದಾಗಿದೆ. ಮುಂದಿನ ದಿನಗಳಲ್ಲಿ ರೈತರು ಮತ್ತು ಕೃಷಿ ಕ್ಷೇತ್ರದ ಅಭಿವೃದ್ಧಿಗಾಗಿ ಇನ್ನಷ್ಟು ಕೆಲಸ ಮಾಡಲು ಬಯಸಿದ್ದೇವೆ' ಎಂದು ಪ್ರಧಾನಿ ಹೇಳಿದರು.

ಬಾಕಿ ಹಣ ಬಿಡುಗಡೆ: 'ಕಿಸಾನ್ ನಿಧಿ'ಯ ಕಳೆದ ತಿಂಗಳ ಬಾಕಿ ಹಣವನ್ನಷ್ಟೇ ಬಿಡುಗಡೆ ಮಾಡಿದ್ದಾರೆ ಎಂದು ಕಾಂಗ್ರೆಸ್ ಪ್ರತಿಕ್ರಿಯಿಸಿದೆ.

'ಮೋದಿ ತಮ್ಮ ಹೊಸ ಸರ್ಕಾರದ ಮೊದಲ ನಿರ್ಧಾರ ಎಂದು ಹೇಳುತ್ತಿರುವ 17ನೇ ಕಂತಿನ ಹಣ ಬಿಡುಗಡೆಯು ಸರ್ಕಾರದ ಯೋಜನೆಯ ಪ್ರಕಾರ ರೈತರಿಗೆ ಲಭಿಸಬೇಕಾದ ನ್ಯಾಯಸಮ್ಮತ ಹಕ್ಕು. ಇದರಲ್ಲಿ ವಿಶೇಷ ಏನೂ ಇಲ್ಲ. 17ನೇ ಕಂತಿನ ಹಣ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಬಿಡುಗಡೆ ಆಗಬೇಕಿತ್ತು. ಆದರೆ ಚುನಾವಣಾ ನೀತಿ ಸಂಹಿತೆ ಜಾರಿಯಿದ್ದ ಕಾರಣ ಹಣ ಬಿಡುಗಡೆ ತಡವಾಗಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಹೇಳಿದ್ದಾರೆ.

'ಪ್ರತಿ ಆಡಳಿತಾತ್ಮಕ ನಿರ್ಧಾರಗಳನ್ನು ಜನರಿಗೆ ನೀಡುತ್ತಿರುವ ದೊಡ್ಡ ಕೊಡುಗೆ ಎಂಬಂತೆ ಬಿಂಬಿಸುವುದನ್ನು ಪ್ರಧಾನಿ ಅವರು ತಮ್ಮ ಹವ್ಯಾಸವನ್ನಾಗಿಸಿಕೊಂಡಿದ್ದಾರೆ' ಎಂದು ಟೀಕಿಸಿದರು.

ರಾಷ್ಟ್ರೀಯ ಬ್ರಿಜ್ ಚಾಂಪಿಯನ್‌ಷಿಪ್

ಮುಂದುವರಿದ ಮೇವರಿಕ್ಸ್ ಓಟ

ಪ್ರಜಾವಾಣಿ ವಾರ್ತೆ

ಮಂಗಳೂರು: ಮೇವರಿಕ್ಸ್ ಮತ್ತು ಏಸ್ ಕಾನ್ಕರರ್ಸ್ ತಂಡಗಳು ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಬ್ರಿಜ್ ಚಾಂಪಿಯನ್‌ಷಿಪ್‌ನ ತಂಡ ವಿಭಾಗದಲ್ಲಿ ಕ್ರಮವಾಗಿ 'ಗೋಲ್ಡ್' ಮತ್ತು 'ಸಿಲ್ವರ್' ವಿಭಾಗದಲ್ಲಿ ಎರಡನೇ ದಿನವಾದ ಸೋಮವಾರವೂ ಅಗ್ರ ಸ್ಥಾನವನ್ನು ಮುಂದುವರಿಸಿವೆ.

ಭಾರತ ಬ್ರಿಜ್ ಫೆಡರೇಷನ್ ಮತ್ತು ಕರ್ನಾಟಕ ರಾಜ್ಯ ಬ್ರಿಜ್ ಸಂಸ್ಥೆಗಳು ಕರಾವಳಿ ಬ್ರಿಜ್ ಸಂಸ್ಥೆಯ ಸಹಯೋಗದಲ್ಲಿ ಮೋತಿ ಮಹಲ್ ಹೋಟೆಲ್‌ನಲ್ಲಿ ಆಯೋಜಿಸಿರುವ ಚಾಂಪಿಯನ್‌ಷಿಪ್‌ನಲ್ಲಿ 8ನೇ ಸುತ್ತು ಮುಕ್ತಾಯಕ್ಕೆ ಈ ತಂಡಗಳು ಕ್ರಮವಾಗಿ 111.69 ಮತ್ತು 130.88 ಸ್ಕೋರು ಗಳಿಸಿವೆ.

ಭಾನುವಾರ 4 ಸುತ್ತುಗಳ ಮುಕ್ತಾಯಕ್ಕೆ ಮೇವರಿಕ್ಸ್ 62.38 ಮತ್ತು ಏಸ್ ಕಾನ್ಕರರ್ಸ್ 67.41 ಸ್ಕೋರು ಗಳಿಸಿ ಮೊದಲ ಸ್ಥಾನದಲ್ಲಿದ್ದವು. 28 ತಂಡಗಳನ್ನು ಒಳಗೊಂಡಿರುವ ಗೋಲ್ಡ್ ವಿಭಾಗದ 6ನೇ ಸ್ಥಾನದಲ್ಲಿದ್ದ ಫಾರ್ಮಿಡೇಬಲ್ ಸೋಮವಾರ ಅಮೋಘ ಸಾಮರ್ಥ್ಯ ತೋರಿ ಎರಡನೇ ಸ್ಥಾನಕ್ಕೆ ಜಿಗಿದಿದೆ. ಎರಡನೇ ಸ್ಥಾನದಲ್ಲಿದ್ದ ಮೋನಿಕಾ ಜಾಜೂ ತಂಡ 5ನೇ ಸ್ಥಾನಕ್ಕೆ ಕುಸಿದಿದೆ.

24 ತಂಡಗಳ ಸಿಲ್ವರ್ ವಿಭಾಗದಲ್ಲಿ ಎರಡನೇ ಸ್ಥಾನದಲ್ಲಿದ್ದ ಅಲ್ಫಾ ಏಸ್ 4ನೇ ಸ್ಥಾನಕ್ಕೆ ಕುಸಿದಿದ್ದು 3ನೇ ಸ್ಥಾನದಲ್ಲಿದ್ದ ಹೆಕ್ಸಗನ್ ಎರಡನೇ ಸ್ಥಾನಕ್ಕೇರಿದೆ.

ಎರಡನೇ ದಿನ ಮೊದಲ 10 ಸ್ಥಾನ ಗಳಿಸಿದ ತಂಡಗಳು: ಗೋಲ್ಡ್ ವಿಭಾಗ: ಮೇವರಿಕ್ಸ್–1 (ಸ್ಕೋರು: 111.69), ಫಾರ್ಮಿಡೇಬಲ್ಸ್–2 (104.70), ಫೆನೆಸ್ತಾ–3 (103.55), ಸರ್ಲಾಫೈಬರ್ಸ್–4 (100.34), ಮೋನಿಕಾ ಜಾಜೂ–5 (91.54), ಡಿಯೊರಾಸ್ ಡೆಕ್‌ಹ್ಯಾಂಡ್ಸ್–6 (91.38), ಶ್ರೀ ರಾಧೇ–7 (89.94), ಶ್ರೀ ಸಿಮೆಂಟ್–8 (87.87), ಅರುಣ್ ಜೈನ್–9 (87.46), ಇಂಡಿಯನ್ ಚೈನ್ ಪ್ರೈವೆಟ್ ಲಿಮಿಟೆಡ್–10 (86.91). ಸಿಲ್ವರ್ ವಿಭಾಗ: ಏಸ್ ಕಾನ್ಕರರ್ಸ್–1 (130.88), ಹೆಕ್ಸಗನ್–2 (115.96), ಯೂನಿಕ್ ಮಾಸ್ಟರ್ಸ್–3 (92.16), ಅಲ್ಫಾ ಏಸ್–4 (91.98), ಜೈ ಜಗನ್ನಾಥ್–5 (91.93), ಅನ್‌ಪ್ರೆಡಿಕ್ಟೇಬಲ್ಸ್–6 (91.62), ಧಂಪುರ್ ಲೆಗಸಿ–7 (90.69), ಜುತಿಕಾ–8 (90.33), ಹಾರ್ಮನಿ–9 (88.62), ಸೂಪರ್ ಲಕ್ಕಿ–10 (84.79).

ಒಲಿಂಪಿಕ್ಸ್: ಕುಸ್ತಿಪಟುಗಳಿಗೆ ಐಒಎ, ಡಬ್ಲ್ಯುಎಫ್‌ಐ ಬೆಂಬಲ

ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ಗೆ ತೆರಳಲಿರುವ ಆರು ಕುಸ್ತಿಪಟುಗಳಿಗೆ ಭಾರತ ಒಲಿಂಪಿಕ್ ಸಂಸ್ಥೆ 'ಪೂರ್ಣಪ್ರಮಾಣದಲ್ಲಿ ಬೆಂಬಲ' ನೀಡಲಿದೆ. ಹೆಚ್ಚಿನ ನೆರವು ಕೋರಿರುವ ಕುಸ್ತಿಪಟು ವಿನೇಶಾ ಫೋಗಾಟ್ ಅವರ ಮನವಿಗೆ ಕೂಡ ರಾಷ್ಟ್ರೀಯ ಒಲಿಂಪಿಕ್ ಸಮಿತಿ ಮತ್ತು ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಸಮ್ಮತಿಸಿದೆ.

ವಿನೇಶಾ ಫೋಗಾಟ್ (50 ಕೆ.ಜಿ), ಅಂತಿಮ್ ಪಂಘಲ್ (53 ಕೆಜಿ), ಅನ್ಶು ಮಲಿಕ್ (57 ಕೆಜಿ), ನಿಶಾ ದಹಿಯಾ (68 ಕೆಜಿ), ರಿತಿಕಾ ಹೂಡಾ (76 ಕೆಜಿ) ಅವರು ಮಹಿಳಾ ವಿಭಾಗದಲ್ಲಿ ಮತ್ತು ಅಮನ್ ಸೆಹ್ರಾವತ್ (57 ಕೆಜಿ) ಅವರು ಪುರುಷರ ವಿಭಾಗದಲ್ಲಿ ಈಗಾಗಲೇ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದಾರೆ.

'ಒಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿರುವ ಕುಸ್ತಿಪಟುಗಳಿಗೆ ಪೂರ್ಣ ಬೆಂಬಲ ಒದಗಿಸುವ ಮೂಲಕ ನಮ್ಮ ಕ್ರೀಡಾಪಟುಗಳು ತರಬೇತಿಗೆ ಉತ್ತಮ ಸೌಲಭ್ಯಗಳನ್ನು ಪಡೆದು ಶ್ರೇಷ್ಠ ಪ್ರದರ್ಶನ ನೀಡುವಂತಾಗಲಿ ಎಂಬುದು ನಮ್ಮ ಗುರಿ' ಎಂದು ಐಒಎ ಅಧ್ಯಕ್ಷೆ ಪಿ.ಟಿ.ಉಷಾ ಸೋಮವಾರ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕುಸ್ತಿಪಟುಗಳು, ತರಬೇತುದಾರರು, ಫಿಸಿಯೋಥೆರಪಿಸ್ಟ್‌ಗಳು, ಪೌಷ್ಟಿಕ ತಜ್ಞರು, ಮೆಂಟಲ್ ಕಂಡಿಷನಿಂಗ್ ಕೋಚ್‌ಗಳು ಮತ್ತು ಇತರ ಅಗತ್ಯ ಸಿಬ್ಬಂದಿಗೆ ಬೆಂಬಲ ನೀಡಲಾಗುವುದು. ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತೆ ವಿನೇಶಾ ಅವರ ತರಬೇತಿಗಾಗಿ ಹೆಚ್ಚಿನ ಸಹಾಯಕ ಸಿಬ್ಬಂದಿಯನ್ನು ಒದಗಿಸಲಾಗುವುದು ಎಂದು ಡಬ್ಲ್ಯುಎಫ್‌ಐ ಅಧ್ಯಕ್ಷ ಸಂಜಯ್ ಸಿಂಗ್ ಹೇಳಿದ್ದಾರೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತ ಪ್ರತಿನಿಧಿಸುವ ಸಾಧ್ಯತೆ

ರ‍್ಯಾಂಕಿಂಗ್: ನಗಾಲ್‌ಗೆ 77ನೇ ಸ್ಥಾನ

ನವದೆಹಲಿ (ಪಿಟಿಐ): ಭಾರತದ ಸುಮಿತ್ ನಗಾಲ್ ಸೋಮವಾರ ಬಿಡುಗಡೆಯಾದ ಎಟಿಪಿ ರ‍್ಯಾಂಕಿಂಗ್ ಪಟ್ಟಿಯಲ್ಲಿ 18 ಸ್ಥಾನ ಮೇಲಕ್ಕೇರಿ ಜೀವನಶ್ರೇಷ್ಠ 77ನೇ ಸ್ಥಾನ ತಲುಪಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯುವ ಹಂತದಲ್ಲಿದ್ದಾರೆ.

ನಗಾಲ್ 713 ಎಟಿಪಿ ಪಾಯಿಂಟ್‌ಗಳನ್ನು ಹೊಂದಿದ್ದಾರೆ. ಜರ್ಮನಿಯಲ್ಲಿ ಭಾನುವಾರ ನಡೆದ ಹೀಲ್‌ಬ್ರಾನ್ ನೆಕಾರ್‌ಕಪ್ 2024 ಚಾಲೆಂಜರ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಹಿನ್ನೆಲೆಯಲ್ಲಿ ಅವರ ರ‍್ಯಾಂಕಿಂಗ್‌ನಲ್ಲಿ ಸುಧಾರಣೆಯಾಗಿದೆ.

ರ‍್ಯಾಂಕಿಂಗ್ ಆಧಾರದಲ್ಲಿ ಒಲಿಂಪಿಕ್ಸ್‌ಗೆ ಆಟಗಾರರ ಆಯ್ಕೆ ನಡೆಯುತ್ತದೆ. ನಿಗದಿಯಾದ ಮಾನದಂಡಗಳ ಪ್ರಕಾರ, ಪುರುಷರ ಮತ್ತು ಮಹಿಳಾ ಸಿಂಗಲ್ಸ್‌ನಲ್ಲಿ ಅಗ್ರ 56 ಆಟಗಾರರು ನೇರವಾಗಿ ಅರ್ಹತೆ ಪಡೆಯುತ್ತಾರೆ. ಆದರೆ ಒಂದೇ ದೇಶದಿಂದ ನಾಲ್ಕಕ್ಕಿಂತ ಹೆಚ್ಚು ಆಟಗಾರರು ಭಾಗವಹಿಸುವಂತಿಲ್ಲ. ಈ ನಿಯಮದಿಂದ ಕಡಿಮೆ ರ‍್ಯಾಂಕಿಂಗ್ ಇರುವ ಆಟಗಾರರಿಗೆ ಮುಖ್ಯ 'ಡ್ರಾ'ದಲ್ಲಿ ಆಡಲು ಅವಕಾಶವಾಗುತ್ತದೆ.


ಭಾರತದ ಸುಮಿತ್ ನಗಾಲ್

ಭಾರತದ ಆಟಗಾರ ಕೊನೆಯ ಬಾರಿ ಒಲಿಂಪಿಕ್ಸ್ ಸಿಂಗಲ್ಸ್‌ನಲ್ಲಿ ಆಡಿದ್ದು 2012ರ ಕ್ರೀಡೆಗಳಲ್ಲಿ. ಲಂಡನ್ ಒಲಿಂಪಿಕ್ಸ್‌ನಲ್ಲಿ ಸೋಮ್‌ದೇವ್ ದೇವ್‌ವರ್ಮನ್ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದರು.

ನಗಾಲ್‌ಗೆ ಪ್ರಶಸ್ತಿ: ಸುಮಿತ್ ನಗಾಲ್ ಅವರು ಭಾನುವಾರ ಎರಡು ಗಂಟೆ 22 ನಿಮಿಷ ನಡೆದ ಫೈನಲ್ ಪಂದ್ಯದಲ್ಲಿ 6-1, 6(5)-7, 6-3 ಸೆಟ್‌ಗಳಿಂದ ಸ್ವಿಟ್ಜರ್‌ಲೆಂಡ್‌ನ ಅಲೆಕ್ಸಾಂಡರ್ ರಿಚರ್ಡ್ ಅವರನ್ನು ಸೋಲಿಸಿ ಹೀಲ್‌ಬ್ರಾನ್ ನೆಕರ್‌ಕಪ್ ಎಟಿಪಿ ಚಾಲೆಂಜರ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಇದು ಸುಮಿತ್‌ಗೆ ಈ ವರ್ಷದ ಎರಡನೇ ಪ್ರಶಸ್ತಿ ಮತ್ತು ವೃತ್ತಿ ಬದುಕಿನ ಆರನೇ ಎಟಿಪಿ ಚಾಲೆಂಜರ್ ಟ್ರೋಫಿ. ಫೆಬ್ರುವರಿಯಲ್ಲಿ ಅವರು ಚೆನ್ನೈ ಓಪನ್ ಚಾಲೆಂಜರ್ ಟೂರ್ನಿ ಗೆದ್ದಿದ್ದರು.

ಗುಲ್ವೀರ್ ಸಿಂಗ್ ರಾಷ್ಟ್ರೀಯ ದಾಖಲೆ


ಗುಲ್ವೀರ್ ಸಿಂಗ್

ಪೋರ್ಟ್‌ಲೆಂಡ್ (ಅಮೆರಿಕ) (ಪಿಟಿಐ): ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತ ಅಥ್ಲೀಟ್ ಗುಲ್ವೀರ್ ಸಿಂಗ್ ಇಲ್ಲಿ ನಡೆದ ಪೋರ್ಟ್‌ಲೆಂಡ್ ಟ್ರ್ಯಾಕ್ ಫೆಸ್ಟಿವಲ್ ಹೈ ಪರ್ಫಾರ್ಮೆನ್ಸ್ ಕೂಟದಲ್ಲಿ ಪುರುಷರ 5,000 ಮೀಟರ್ ಓಟದಲ್ಲಿ ರಾಷ್ಟ್ರೀಯ ದಾಖಲೆಯೊಂದಿಗೆ ಎರಡನೇ ಸ್ಥಾನ ಪಡೆದರು.

ಕಳೆದ ವರ್ಷ ಅವಿನಾಶ್ ಸಾಬ್ಳೆ ಸ್ಥಾಪಿಸಿದ 13 ನಿಮಿಷ 19.30 ಸೆಕೆಂಡ್‌ಗಳ ರಾಷ್ಟ್ರೀಯ ದಾಖಲೆಯನ್ನು 26 ವರ್ಷದ ಸಿಂಗ್ 13 ನಿಮಿಷ 18.92 ಸೆಕೆಂಡುಗಳಲ್ಲಿ ಗುರಿ ತಲುಪಿ, ಮುರಿದರು. ಉತ್ತರ ಪ್ರದೇಶದ ಗುಲ್ವೀರ್ ಈಗ 10,000 ಮೀ ಮತ್ತು 5,000 ಮೀಟರ್ ಓಟಗಳಲ್ಲಿ ರಾಷ್ಟ್ರೀಯ ದಾಖಲೆ ಹೊಂದಿದ್ದಾರೆ.

ದಕ್ಷಿಣ ಆಫ್ರಿಕಾಕ್ಕೆ ರೋಚಕ ಜಯ

ಕ್ಲಾಸೆನ್–ಮಿಲ್ಲರ್ ಜೊತೆಯಾಟ, ಕೇಶವ್‌ಗೆ ಮೂರು ವಿಕೆಟ್; ಬಾಂಗ್ಲಾಕ್ಕೆ ನಿರಾಸೆ

ನ್ಯೂಯಾರ್ಕ್ (ಪಿಟಿಐ): ಬ್ಯಾಟರ್‌ಗಳಿಗೆ ತ್ರಾಸದಾಯಕವಾಗಿದ್ದ ಪಿಚ್‌ನಲ್ಲಿ 113 ರನ್‌ಗಳ ಅಲ್ಪಮೊತ್ತವನ್ನು ರಕ್ಷಿಸುವಲ್ಲಿ ದಕ್ಷಿಣ ಆಫ್ರಿಕಾ ಯಶಸ್ವಿಯಾಯಿತು. ಸೋಮವಾರ ನಡೆದ ಟಿ20 ವಿಶ್ವಕಪ್‌ನ 'ಡಿ' ಗುಂಪಿನ ರೋಚಕ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು ಬಾಂಗ್ಲಾದೇಶ ವಿರುದ್ಧ 4 ರನ್‌ಗಳ ಜಯ ಸಾಧಿಸಿತು.

ಈ ಹಣಾಹಣಿಯು ಇದೇ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಭಾರತ–ಪಾಕಿಸ್ತಾನ ನಡುವಣ ಪಂದ್ಯವನ್ನು ನೆನಪಿಸಿತು. ಭಾರತ ತಂಡವೂ 119 ರನ್‌ಗಳ ಕಡಿಮೆ ಮೊತ್ತವನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿತ್ತು.

ಆಡಿರುವ ಮೂರೂ ಪಂದ್ಯಗಳನ್ನು ಗೆದ್ದಿರುವ ದಕ್ಷಿಣ ಆಫ್ರಿಕಾ ತಂಡವು 6 ಅಂಕಗಳೊಂದಿಗೆ 'ಡಿ' ಗುಂಪಿನಲ್ಲಿ ಅಗ್ರಸ್ಥಾನ ಕಾಯ್ದುಕೊಳ್ಳುವ ಜತೆಗೆ ಸೂಪರ್ ಎಂಟರ ಘಟ್ಟಕ್ಕೆ ಸ್ಥಾನವನ್ನು ಕಾಯ್ದಿರಿಸಿತು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ನಡೆಸಿದ ದಕ್ಷಿಣ ಆಫ್ರಿಕಾ ತಂಡವು ಹೆನ್ರಿಚ್ ಕ್ಲಾಸೆನ್ ಮತ್ತು ಡೇವಿಡ್ ಮಿಲ್ಲರ್ ಅವರ ಅರ್ಧಶತಕದ ಜೊತೆಯಾಟದ ನೆರವಿಂದ 6 ವಿಕೆಟ್ ನಷ್ಟಕ್ಕೆ 113 ರನ್ ಗಳಿಸಿತ್ತು. ಈ ಗುರಿಯನ್ನು ಬೆನ್ನತ್ತಿದ ಬಾಂಗ್ಲಾ ತಂಡವು 50 ರನ್‌ಗೆ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು.

ಆದರೆ, ಮಧ್ಯಮ ಕ್ರಮಾಂಕದಲ್ಲಿ ತೌಹಿದ್ ಹೃದಯ್ (37; 34ಎ) ಮತ್ತು ಅನುಭವಿ ಮಹ್ಮದುಲ್ಲಾ (20) ಅವರು ಚೇತರಿಕೆ ನೀಡಿದರು. ಐದನೇ ವಿಕೆಟ್ ಜೊತೆಯಾಟದಲ್ಲಿ 44 ರನ್ ಸೇರಿಸಿ ತಂಡವನ್ನು ಗೆಲುವಿನತ್ತ ಕೊಂಡೊಯ್ಯಲು ಪ್ರಯತ್ನಿಸಿದರು. ತೌಹಿದ್ ವಿಕೆಟ್ ಬೀಳುತ್ತಿದ್ದಂತೆ ತಂಡವು ಒತ್ತಡಕ್ಕೆ ಒಳಗಾಯಿತು.


ದಕ್ಷಿಣ ಆಫ್ರಿಕಾ ತಂಡದ ಹೆನ್ರಿಚ್ ಕ್ಲಾಸೆನ್ ಮತ್ತು ಡೇವಿಡ್ ಮಿಲ್ಲರ್ –ಪಿಟಿಐ ಚಿತ್ರ

ಮತ್ತೊಂದೆಡೆ ದಕ್ಷಿಣ ಆಫ್ರಿಕಾದ ಬೌಲರ್‌ಗಳು ಬಿಗಿ ದಾಳಿಯ ಮೂಲಕ ಹಿಡಿತ ಸಾಧಿಸಿದರು. ಕೇಶವ್ ಮಹಾರಾಜ ಹಾಕಿದ ಕೊನೆಯ ಓವರ್‌ನಲ್ಲಿ ಬಾಂಗ್ಲಾ ತಂಡದ ಗೆಲುವಿಗೆ 11 ರನ್ ಬೇಕಿತ್ತು. ಅಂತಿಮ ಎರಡು ಎಸೆತದಲ್ಲಿ 6 ರನ್ ಬೇಕಿದ್ದಾಗ ಮಹ್ಮದುಲ್ಲಾ ದೊಡ್ಡ ಹೊಡೆತಕ್ಕೆ ಪ್ರಯತ್ನಿಸಿದರು. ಆದರೆ, ಬೌಂಡರಿ ಲೈನ್ ಬಳಿ ಏಡನ್ ಮರ್ಕರಂ ಕ್ಯಾಚ್ ಹಿಡಿದು ಬಾಂಗ್ಲಾಕ್ಕೆ ನಿರಾಸೆ ಮೂಡಿಸಿದರು. ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗೆ 109 ರನ್ ಗಳಿಸಿ ಸವಾಲನ್ನು ಮುಗಿಸಿತು. ಕೇಶವ್ ಮಹಾರಾಜ ಮೂರು ವಿಕೆಟ್ ಪಡೆದರೆ, ಕಗಿಸೊ ರಬಾಡ ಮತ್ತು ಹೆನ್ರಿಚ್ ನಾರ್ಟ್ಜೆ ತಲಾ ಎರಡು ವಿಕೆಟ್ ಗಳಿಸಿದರು.

ಇದಕ್ಕೂ ಮೊದಲು ತಂಜಿಮ್ ಹಸನ್ ಶಕಿಬ್ (18ಕ್ಕೆ3) ಅವರು ತಸ್ಕಿನ್ ಅಹ್ಮದ್ (19ಕ್ಕೆ2) ಬೆಂಬಲದೊಡನೆ ದಕ್ಷಿಣ ಆಫ್ರಿಕಾದ ಪ್ರಬಲ ಬ್ಯಾಟಿಂಗ್ ಸರದಿಯನ್ನು ಕಾಡಿದರು. ಮುಸ್ತಫಿಝುರ್ (4–0–18–0) ಅವರೂ ಈ ಪ್ರಯತ್ನಕ್ಕೆ ಕೈಜೋಡಿಸಿದರು. ಒಂದು ಹಂತದಲ್ಲಿ ದಕ್ಷಿಣ ಆಫ್ರಿಕಾ ಐದು ಓವರ್‌ಗಳಲ್ಲಿ 23 ರನ್‌ಗಳಾಗುಷ್ಟರಲ್ಲಿ ನಾಲ್ಕು ವಿಕೆಟ್ ಕಳೆದುಕೊಂಡು ಇಕ್ಕಟ್ಟಿಗೆ ಸಿಲುಕಿತ್ತು.

ಹೆನ್ರಿಚ್ ಕ್ಲಾಸೆನ್ (46) ಮತ್ತು ಡೇವಿಡ್ ಮಿಲ್ಲರ್ (29) ಅವರಿಬ್ಬರು ಆರಂಭದ ಕುಸಿತವನ್ನು ತಡೆಗಟ್ಟಿದರೂ ತಂಡ ದೊಡ್ಡ ಮೊತ್ತ ಗಳಿಸಲಾಗಲಿಲ್ಲ. ಸ್ಪಿನ್ನರ್‌ಗಳೂ ಜಿಪುಣರಾಗಿದ್ದರು. ನಾಸೌ ಕೌಂಟಿ ಪಿಚ್ ಬ್ಯಾಟರ್‌ಗಳನ್ನು ಎಂದಿನಂತೆ ಕಾಡಿತು.

ಕ್ಲಾಸೆನ್ ಮತ್ತು ಮಿಲ್ಲರ್ ಐದನೇ ವಿಕೆಟ್ ಜೊತೆಯಾಟದಲ್ಲಿ 79 ರನ್ ಸೇರಿಸಿ ತಂಡವನ್ನು ಚೇತರಿಕೆಯತ್ತ ಒಯ್ದರು. ಆದರೆ ರನ್‌ವೇಗ ಹೆಚ್ಚಿಸಲು ಅವರಿಗೆ ಸಾಧ್ಯವಾಗಲಿಲ್ಲ.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 20 ಓವರುಗಳಲ್ಲಿ 6 ಕ್ಕೆ 113 (ಕ್ವಿಂಟನ್ ಡಿಕಾಕ್ 18, ಹೆನ್ರಿಚ್ ಕ್ಲಾಸೆನ್ 46, ಡೇವಿಡ್ ಮಿಲ್ಲರ್ 29; ತಂಜಿಮ್ ಹಸನ್ ಶಕಿಬ್ 18ಕ್ಕೆ3, ತಸ್ಕಿನ್ ಅಹ್ಮದ್ 19ಕ್ಕೆ2, ರಿಷದ್ ಹುಸೇನ್ 32ಕ್ಕೆ1). **ಬಾಂಗ್ಲಾದೇಶ:** 20 ಓವರ್‌ಗಳಲ್ಲಿ 7 ವಿಕೆಟ್‌ಗೆ 109 (ತೌಹಿದ್ ಹೃದಯ್ 37, ಮಹ್ಮದುಲ್ಲಾ 20; ಕೇಶವ್ ಮಹಾರಾಜ 27ಕ್ಕೆ 3, ಕಗಿಸೊ ರಬಾಡ 19ಕ್ಕೆ 2, ಹೆನ್ರಿಚ್ ನಾರ್ಟ್ಜೆ 17ಕ್ಕೆ 2). **ಪಂದ್ಯದ ಆಟಗಾರ:** ಹೆನ್ರಿಚ್ ಕ್ಲಾಸೆನ್.

ಕುಗ್ಗಿರುವ ಬಾಬರ್ ಬಳಗಕ್ಕೆ ಇಂದು ಕೆನಡಾ ಎದುರಾಳಿ

ಪಾಕ್‌ಗೆ ದೊಡ್ಡ ಗೆಲುವಿನ ಗುರಿ

ನ್ಯೂಯಾರ್ಕ್ (ಪಿಟಿಐ): ಅಮೆರಿಕ ವಿರುದ್ಧ ಆಘಾತಕಾರಿ ಸೋಲು, ನಂತರ ಭಾರತ ವಿರುದ್ಧದ ಅಲ್ಪ ಅಂತರದ ಸೋಲಿನಿಂದ ಕುಗ್ಗಿರುವ ಪಾಕಿಸ್ತಾನ ತಂಡ ಮಂಗಳವಾರ ಇಲ್ಲಿ ನಡೆಯಲಿರುವ ಟಿ20 ವಿಶ್ವಕಪ್ 'ಎ' ಗುಂಪಿನ ಲೀಗ್ ಪಂದ್ಯದಲ್ಲಿ ಕೆನಡಾ ತಂಡವನ್ನು ಎದುರಿಸಲಿದೆ. ಸಹಜವಾಗಿ ಪಾಕಿಸ್ತಾನ ಸುಲಭ ಗೆಲುವಿನ ನಿರೀಕ್ಷೆಯಲ್ಲಿದೆ.


ಕೆನಡಾ ತಂಡದ ನಾಯಕ ಸಾದ್ ಬಿನ್ ಜಾಫರ್

ಸೂಪರ್ ಓವರ್‌ನಲ್ಲಿ ಅಮೆರಿಕಕ್ಕೆ ಮಣಿದ ಪಾಕಿಸ್ತಾನ, ಅಲ್ಪ ಸ್ಕೋರುಗಳನ್ನು ಕಂಡ ಎರಡನೇ ಪಂದ್ಯದಲ್ಲಿ ಸಾಂಪ್ರದಾಯಿಕ ಎದುರಾಳಿ ಭಾರತ ಎದುರು ಭಾನುವಾರ ಆರು ರನ್‌ಗಳ ಸೋಲನುಭವಿಸಿತ್ತು.

ಕೆನಡಾ ಮತ್ತು ಐರ್ಲೆಂಡ್ ಎದುರು ಉಳಿದೆರಡು ಪಂದ್ಯಗಳಲ್ಲಿ ದೊಡ್ಡ ಗೆಲುವಿನ ಜೊತೆಗೆ, ಅಮೆರಿಕ ತಂಡವು ತನ್ನ ಉಳಿದೆರಡು ಪಂದ್ಯಗಳಲ್ಲಿ ಭಾರತ ಮತ್ತು ಐರ್ಲೆಂಡ್ ಎದುರು ಸೋತರಷ್ಟೇ ಪಾಕಿಸ್ತಾನದ ಸೂಪರ್ ಎಂಟು ಅವಕಾಶಕ್ಕೆ ಬಲ ಬರಲಿದೆ. ಸದ್ಯ ಎರಡು ಪಂದ್ಯಗಳ ನಂತರ ಅಮೆರಿಕದ ರನ್ ರೇಟ್ +0.626 ಆಗಿದ್ದು, ಪಾಕಿಸ್ತಾನ ರನ್ ದರ ನಿರಾಶಾದಾಯಕ –0.150 ಆಗಿದೆ. ಹೀಗಾಗಿ ಸಮಾನ ಪಾಯಿಂಟ್ಸ್ ಗಳಿಸಿದಲ್ಲಿ ರನ್‌ರೇಟ್ ನಿರ್ಣಾಯಕವಾಗುವ ಕಾರಣ ಪಾಕ್‌ಗೆ ದೊಡ್ಡ ಅಂತರದ ಗೆಲುವುಗಳು ಅನಿವಾರ್ಯ.

2009ರ ಚಾಂಪಿಯನ್ ಪಾಕಿಸ್ತಾನ ಈಗ ಮೊದಲಿನ ಶಕ್ತ ತಂಡವಾಗಿ ಕಾಣುತ್ತಿಲ್ಲ. ಇತ್ತೀಚೆಗಷ್ಟೇ ಬಾಬರ್ ಆಜಂ ನಾಯಕತ್ವ ವಹಿಸಿಕೊಂಡಿದ್ದಾರೆ. ವಿಶ್ವಕಪ್‌ಗೆ ಸ್ವಲ್ಪ ಮೊದಲು ಶಹೀನ್ ಶಾ ಅಫ್ರಿದಿ ಅವರನ್ನು ನಾಯಕತ್ವದಿಂದ ಬದಲಾಯಿಸಿದ ಕಾರಣ ಅಂತಃಕಲಹ ಪೂರ್ಣವಾಗಿ ಶಮನಗೊಂಡಂತೆ ಇಲ್ಲ.

ಅಮೆರಿಕದ ವಿರುದ್ಧ ಬಾಬರ್ ಮತ್ತು ಶದಾಬ್ ಖಾನ್ ಮಾತ್ರ 40ಕ್ಕಿಂತ ಹೆಚ್ಚು ರನ್ ಗಳಿಸಿದ್ದರು. ಭಾರತ ವಿರುದ್ಧ 120 ರನ್‌ಗಳ ಗುರಿಯನ್ನು ಎದುರಿಸುವಾಗ ಯಾರೊಬ್ಬರೂ ಧೈರ್ಯದಿಂದ ಆಡಲಿಲ್ಲ. ತಂಡ 7 ವಿಕೆಟ್‌ಗೆ 113 ರನ್ ಗಳಿಸಲಷ್ಟೇ ಶಕ್ತವಾಗಿತ್ತು. ಫಖರ್ ಜಮಾನ್, ಇಮದ್ ವಾಸಿಂ, ಶದಾಬ್ ಖಾನ್ ಮತ್ತು ಇಫ್ತಿಕಾರ್ ಅಹ್ಮದ್ ಕೆಟ್ಟ ಹೊಡೆತಗಳಿಗೆ ಹೋಗಿ ವಿಕೆಟ್ ನೀಡಿದ್ದರು.

ಬೌಲರ್‌ಗಳ ಪೈಕಿ ನಸೀಮ್ ಶಾ ಮತ್ತು ಮೊಹಮ್ಮದ್ ಆಮೀರ್ ಉತ್ತಮ ಪ್ರದರ್ಶನ ನೀಡಿರುವುದೊಂದೇ ಸಮಾಧಾನಕರ ಅಂಶ. ಬೌಲರ್ ಶಹೀನ್ ಶಾ ಅಫ್ರಿದಿ ಉತ್ತಮ ಪ್ರದರ್ಶನ ನೀಡಬೇಕಾಗಿದೆ. ಅನುಕೂಲಕರ ಪಿಚ್‌ನಲ್ಲಿ ಅವರೇನೂ ಗಮನಸೆಳೆದಿಲ್ಲ.


ಎರಡು ಪಂದ್ಯಗಳಲ್ಲಿ ಒಂದನ್ನು ಗೆದ್ದಿರುವ ಕೆನಡಾ, 'ಎ' ಗುಂಪಿನಲ್ಲಿ ಮೂರನೇ ಸ್ಥಾನದಲ್ಲಿದೆ. ಅಮೆರಿಕಕ್ಕೆ ಏಳು ವಿಕೆಟ್‌ಗಳಿಂದ ಸೋತರೂ ಪುಟಿದೆದ್ದ ಆ ತಂಡವು ತನಗಿಂತ ಪ್ರಬಲ ಐರ್ಲೆಂಡ್ ತಂಡಕ್ಕೆ 12 ರನ್‌ಗಳಿಂದ ಸೋಲುಣಿಸಿತ್ತು. ಅಮೆರಿಕದ ವಿರುದ್ಧ ಸೋತರೂ, ಕೆನಡಾ 194 ರನ್‌ಗಳ ದೊಡ್ಡ ಮೊತ್ತ ಗಳಿಸಿತ್ತು ಎನ್ನುವುದು ಗಮನಾರ್ಹ ಅಂಶ. ಕೆನಡಾ ತಂಡದ ಯಶಸ್ಸು ಅನುಭವಿ ಬ್ಯಾಟರ್ ನವನೀತ್ ಧಾಲಿವಾಲ್ ಅವರ ನಿರ್ವಹಣೆಯನ್ನು ಅವಲಂಬಿಸಿದೆ.


ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ –ಎಎಫ್‌ಪಿ ಚಿತ್ರ

ಇಂದಿನ ಪಂದ್ಯ
ಪಾಕಿಸ್ತಾನ Vs ಕೆನಡಾ — ರಾತ್ರಿ 8.00
ಲೈವ್: ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಹಾಟ್ ಸ್ಟಾರ್

ಸ್ಕಾಟ್ಲೆಂಡ್‌ಗೆ ಮಣಿದ ಒಮಾನ್

ಆ್ಯಂಟಿಗಾ (ಎಎಫ್‌ಪಿ): ಬ್ರಾಂಡನ್ ಮೆಕ್‌ಮುಲೆನ್ (ಔಟಾಗದೇ 61; 31ಎಸೆತ, 4x9, 6x2) ಅವರ ಅರ್ಧ ಶತಕದ ನೆರವಿನಿಂದ ಸ್ಕಾಟ್ಲೆಂಡ್ ತಂಡವು ಟಿ20 ವಿಶ್ವಕಪ್‌ನ ಪಂದ್ಯದಲ್ಲಿ 7 ವಿಕೆಟ್‌ಗಳಿಂದ ಒಮಾನ್ ತಂಡವನ್ನು ಮಣಿಸಿತು.


ಬ್ರಾಂಡನ್ ಮೆಕ್‌ಮುಲೆನ್

ಈ ಗೆಲುವಿನೊಂದಿಗೆ ಸ್ಕಾಟ್ಲೆಂಡ್ ತಂಡವು 'ಬಿ' ಗುಂಪಿನಲ್ಲಿ ಮತ್ತೆ ಅಗ್ರಸ್ಥಾನಕ್ಕೆ ಏರಿತು. ಮಾತ್ರವಲ್ಲದೆ, ಸೂಪರ್ 8 ಹಂತದ ಹಾದಿಯನ್ನು ಸುಗಮಗೊಳಿಸಿದೆ.

ಭಾನುವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಒಮಾನ್ ತಂಡವು ಪ್ರತೀಕ್ ಆಠವಳೆ (54; 40ಎ, 4x5, 6x2) ಅವರ ಅರ್ಧಶತಕದ ಬಲದಿಂದ 20 ಓವರ್‌ಗಳಲ್ಲಿ ಏಳು ವಿಕೆಟ್‌ಗೆ 150 ರನ್ ಗಳಿಸಿತು. ಮಧ್ಯಮ ಕ್ರಮಾಂಕದಲ್ಲಿ ಅಯಾನ್ ಖಾನ್ (ಔಟಾಗದೆ 41) ಉಪಯುಕ್ತ ಕಾಣಿಕೆ ನೀಡಿದರು. ಸ್ಕಾಟ್ಲೆಂಡ್ ತಂಡವು 13.1 ಓವರ್‌ಗಳಲ್ಲಿ ಮೂರು ವಿಕೆಟ್‌ಗೆ 153 ರನ್ ಗಳಿಸಿ ಗೆಲುವಿನ ದಡ ಸೇರಿತು. ಬ್ರಾಂಡನ್ ಮತ್ತು ಜಾರ್ಜ್ ಮುನ್ಸಿ (41; 20ಎ, 4x2, 6x4) ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.

ಆಡಿರುವ ಮೂರು ಪಂದ್ಯಗಳಲ್ಲಿ ಎರಡರಲ್ಲಿ ಸ್ಕಾಟ್ಲೆಂಡ್ ಗೆದ್ದಿದೆ. ಮತ್ತೊಂದು ಪಂದ್ಯ (ಇಂಗ್ಲೆಂಡ್ ವಿರುದ್ಧ) ಮಳೆಯಿಂದ ರದ್ದಾಗಿದೆ. ಹೀಗಾಗಿ, 5 ಅಂಕದೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಮುಂಚೂಣಿಯಲ್ಲಿದೆ. ಆಸ್ಟ್ರೇಲಿಯಾ (4 ಅಂಕ) ಎರಡನೇ ಸ್ಥಾನದಲ್ಲಿದೆ. ನಮೀಬಿಯಾ ಮತ್ತು ಹಾಲಿ ಚಾಂಪಿಯನ್ ಇಂಗ್ಲೆಂಡ್ ಕ್ರಮವಾಗಿ ಮೂರನೇ ಮತ್ತು ನಾಲ್ಕನೇ ಸ್ಥಾನದಲ್ಲಿವೆ.

ಸಂಕ್ಷಿಪ್ತ ಸ್ಕೋರ್: ಒಮಾನ್: 20 ಓವರ್‌ಗಳಲ್ಲಿ ಏಳು ವಿಕೆಟ್‌ಗೆ 150 (ಪ್ರತೀಕ್ ಅಠವಳೆ 54, ಅಯಾನ್ ಖಾನ್ ಔಟಾಗದೇ 41; ಸಫ್ಯಾನ್ ಷರೀಫ್ 40ಕ್ಕೆ 2). ಸ್ಕಾಟ್ಲೆಂಡ್: 13.1 ಓವರ್‌ಗಳಲ್ಲಿ ಮೂರು ವಿಕೆಟ್‌ಗೆ 153 (ಜಾರ್ಜ್ ಮುನ್ಸಿ 41, ಬ್ರಾಂಡನ್ ಮೆಕ್‌ಮುಲೆನ್ 61; ಬಿಲಾಲ್ ಖಾನ್ 12ಕ್ಕೆ 1). ಪಂದ್ಯದ ಆಟಗಾರ: ಬ್ರಾಂಡನ್ ಮೆಕ್‌ಮುಲೆನ್

ನ್ಯೂಯಾರ್ಕ್: ಅಮೋಲ್ ಕಾಳೆ ನಿಧನ



ಮುಂಬೈ (ಪಿಟಿಐ): ಮುಂಬೈ ಕ್ರಿಕೆಟ್ ಸಂಸ್ಥೆ (ಎಂಸಿಎ) ಅಧ್ಯಕ್ಷ ಅಮೋಲ್ ಕಾಳೆ ಅವರು ನ್ಯೂಯಾರ್ಕ್‌ನಲ್ಲಿ ಹೃದಯಸ್ತಂಭನದಿಂದ ನಿಧನರಾಗಿದ್ದಾರೆ.

ಕಾರ್ಯದರ್ಶಿ ಅಜಿಂಕ್ಯ ನಾಯಕ್ ಮತ್ತು ಅಪೆಕ್ಸ್ ಕೌನ್ಸಿಲ್ ಸದಸ್ಯ ಸೂರಜ್ ಸಮತ್ ಸೇರಿದಂತೆ ಇತರ ಎಂಸಿಎ ಅಧಿಕಾರಿಗಳೊಂದಿಗೆ ಕಾಳೆ ಭಾನುವಾರ ನಾಸೌ ಕೌಂಟಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವಿನ ಪಂದ್ಯ ವೀಕ್ಷಿಸಿದ್ದರು. 2022ರ ಅಕ್ಟೋಬರ್‌ನಲ್ಲಿ ನಡೆದ ಚುನಾವಣೆಯಲ್ಲಿ ಭಾರತದ ಮಾಜಿ ಆಟಗಾರ ಸಂದೀಪ್ ಪಾಟೀಲ್ ಅವರನ್ನು ಸೋಲಿಸಿ, 47 ವರ್ಷದ ಕಾಳೆ ಎಂಸಿಎ ಅಧ್ಯಕ್ಷರಾಗಿದ್ದರು.

ಐಸಿಸಿಗೆ ಕಳುಹಿಸಿದ ವೇಳಾಪಟ್ಟಿಯಲ್ಲಿ ಪಿಸಿಬಿ ಸಲಹೆ

ಲಾಹೋರ್‌ನಲ್ಲಿ ಭಾರತ ಪಂದ್ಯಗಳು?

ಲಾಹೋರ್ (ಪಿಟಿಐ): ಮುಂದಿನ ವರ್ಷ ನಡೆಯಲಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿಗೆ ಅತ್ಯುತ್ತಮ ಭದ್ರತಾ ಸೌಕರ್ಯ ಕಲ್ಪಿಸಲು ಅನುವಾಗುವಂತೆ ಭಾರತ ತಂಡಕ್ಕೆ ಲಾಹೋರ್‌ನಲ್ಲಿ ಅದರ ಎಲ್ಲಾ ಪಂದ್ಯಗಳನ್ನು ನಡೆಸುವುದಾಗಿ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಸಲಹೆ ನೀಡಿದೆ.

ಏಪ್ರಿಲ್ ಅಂತ್ಯದಲ್ಲಿ ಐಸಿಸಿಗೆ ಕಳುಹಿಸಲಾದ ಟೂರ್ನಿಯ ಕರಡು ವೇಳಾಪಟ್ಟಿಯಲ್ಲಿ ಈ ಸಲಹೆ ನೀಡಲಾಗಿದೆ ಎಂದು ಪಿಸಿಬಿಯ ವಿಶ್ವಾಸಾರ್ಹ ಮೂಲಗಳು ತಿಳಿಸಿವೆ.

'ಭಾರತ ತಂಡಕ್ಕೆ ಪ್ರಯಾಣವನ್ನು ಕಡಿಮೆ ಮಾಡಲು ಮತ್ತು ಉತ್ತಮ ಭದ್ರತಾ ವ್ಯವಸ್ಥೆ ಒದಗಿಸಲು ಲಾಹೋರ್ ಅನ್ನು ಸೂಚಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಕಳೆದ ವರ್ಷ ಭದ್ರತಾ ಕಾರಣಗಳಿಂದಾಗಿ ಪಾಕಿಸ್ತಾನದಲ್ಲಿ ಏಷ್ಯಾ ಕಪ್ ಟೂರ್ನಿ ಪಂದ್ಯಗಳನ್ನು ಆಡಲು ಭಾರತ ನಿರಾಕರಿಸಿತ್ತು. ನಂತರ ಆ ಪಂದ್ಯಗಳನ್ನು ಶ್ರೀಲಂಕಾಕ್ಕೆ ಸ್ಥಳಾಂತರಿಸಲಾಗಿತ್ತು. ಪಾಕಿಸ್ತಾನ ಚಾಂಪಿಯನ್ಸ್ ಟ್ರೋಫಿ ಆತಿಥ್ಯ ವಹಿಸಿದ್ದು, ಮುಂದಿನ ವರ್ಷದ ಫೆಬ್ರುವರಿ 19 ರಿಂದ ಮಾರ್ಚ್ 9 ರವರೆಗೆ ನಡೆಸಲು ಯೋಜಿಸಲಾಗಿದೆ.

ಐಸಿಸಿ ಕಾರ್ಯಕಾರಿ ಮಂಡಳಿಯು ಕರಡು ವೇಳಾಪಟ್ಟಿಯನ್ನು ಇನ್ನೂ ಅನುಮೋದಿಸಿಲ್ಲ. ಆದರೆ, ಪಿಸಿಬಿಯು ಕರಾಚಿ ಮತ್ತು ರಾವಲ್ಪಿಂಡಿಯನ್ನು ಚಾಂಪಿಯನ್ಸ್ ಟ್ರೋಫಿಯ ಇತರ ಪಂದ್ಯಗಳಿಗೆ ತಾಣಗಳನ್ನಾಗಿ ಆಯ್ಕೆ ಮಾಡಿದೆ.

ಪಾಕಿಸ್ತಾನ 1996ರ ವಿಶ್ವಕಪ್‌ನ ಜಂಟಿ ಆತಿಥ್ಯ ಬಳಿಕ ಇದೇ ಮೊದಲ ಬಾರಿಗೆ ಐಸಿಸಿ ಟೂರ್ನಿಯೊಂದರ ಆತಿಥ್ಯ ವಹಿಸುತ್ತಿದೆ. 2008ರಲ್ಲಿ ಏಷ್ಯಾಕಪ್ ಹಾಗೂ ಕಳೆದ ವರ್ಷ ಇದೇ ಟೂರ್ನಿಯ ಕೆಲವು ಪಂದ್ಯಗಳನ್ನು ಅದು ತವರಿನಲ್ಲಿ ನಡೆಸಿತ್ತು.

ಚಾಂಪಿಯನ್ಸ್ ಟ್ರೋಫಿಗೆ ಭಾರತ ತಂಡವನ್ನು ಪಾಕಿಸ್ತಾನಕ್ಕೆ ಕಳುಹಿಸಲಾಗುತ್ತದೆಯೇ ಎಂದು ಬಿಸಿಸಿಐ ಇನ್ನೂ ಔಪಚಾರಿಕವಾಗಿ ದೃಢಪಡಿಸಿಲ್ಲ.

ಅಂಪೈರ್ ತೀರ್ಪು ಪ್ರಶ್ನಿಸಿದ ವೇಡ್‌ಗೆ ವಾಗ್ದಂಡನೆ

ಬ್ರಿಜ್‌ಟೌನ್ (ಬಾರ್ಬಡೋಸ್), (ಪಿಟಿಐ): ಇಂಗ್ಲೆಂಡ್ ವಿರುದ್ಧ ಶನಿವಾರ ಕೆನ್ಸಿಂಗ್‌ಟನ್ ಓವಲ್‌ನಲ್ಲಿ ನಡೆದ ಟಿ20 ವಿಶ್ವಕಪ್ ಪಂದ್ಯದ ವೇಳೆ ಅಂಪೈರ್ ನಿರ್ಧಾರಕ್ಕೆ ಅಸಮಾಧಾನ ಸೂಚಿಸಿದ ಆಸ್ಟ್ರೇಲಿಯಾದ ವಿಕೆಟ್ ಕೀಪರ್–ಬ್ಯಾಟರ್ ಮ್ಯಾಥ್ಯೂ ವೇಡ್ ಅವರಿಗೆ ಐಸಿಸಿ ವಾಗ್ದಂಡನೆ ವಿಧಿಸಿದೆ.

ವೇಡ್ ಅವರ ಶಿಸ್ತುಪಾಲನೆ ಕಡತಕ್ಕೆ ಒಂದು ಡಿಮೆರಿಟ್ ಪಾಯಿಂಟ್ ಸೇರ್ಪಡೆಯಾಗಲಿದೆ. ಇದು ಎರಡು ವರ್ಷಗಳಲ್ಲಿ ಅವರ ಎಸಗಿರುವ ಮೊದಲ ತಪ್ಪು ಎಂದು ಐಸಿಸಿ ಮಾಧ್ಯಮ ಪ್ರಕಟಣೆಯಲ್ಲಿ ಸೋಮವಾರ ತಿಳಿಸಿದೆ.

18ನೇ ಓವರಿನಲ್ಲಿ ಲೆಗ್ ಸ್ಪಿನ್ನರ್ ಅದಿಲ್ ರಶೀದ್ ಅವರ ಎಸೆತದಲ್ಲಿ ವೇಡ್ ಬೌಲರ್‌ಗೇ ಕ್ಯಾಚಿತ್ತಿದ್ದರು. ಅದರೆ ಆ ಎಸೆತವನ್ನು ಡೆಡ್‌ಬಾಲ್ ಎಂದು ಕರೆಯಬಹುದೆಂದು 36 ವರ್ಷದ ವೇಡ್ ನಿರೀಕ್ಷಿಸಿದ್ದರು. ಔಟ್ ತೀರ್ಪು ನೀಡಿದ್ದರಿಂದ ಅಸಮಾಧಾನಗೊಂಡ ಅವರು ಅಂಪೈರ್ ನಿರ್ಧಾರ ಪ್ರಶ್ನಿಸಿದ್ದರು.

ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್ ಇಂದಿನಿಂದ

ಲಯಕ್ಕೆ ಮರಳುವ ವಿಶ್ವಾಸದಲ್ಲಿ ಪ್ರಣಯ್

ಸಿಡ್ನಿ (ಪಿಟಿಐ): ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಎಚ್.ಎಸ್.ಪ್ರಣಯ್ ಮಂಗಳವಾರ ಇಲ್ಲಿ ಆರಂಭವಾಗುವ ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಸವಾಲನ್ನು ಮುನ್ನಡೆಸುವುದರೊಂದಿಗೆ ಲಯ ಕಂಡುಕೊಳ್ಳುವ ವಿಶ್ವಾಸದಲ್ಲಿದ್ದಾರೆ.

ಐದನೇ ಶ್ರೇಯಾಂಕದ ಪ್ರಣಯ್ ಅವರು ಕಳೆದ ಎರಡು ಟೂರ್ನಿಗಳಲ್ಲಿ ನಿರಾಸೆ ಮೂಡಿಸಿದ್ದರು. ಕಳೆದ ತಿಂಗಳು ಥಾಯ್ಲೆಂಡ್ ಓಪನ್ ಪುರುಷರ ಸಿಂಗಲ್ಸ್ ಆರಂಭಿಕ ಸುತ್ತಿನಲ್ಲೆ ನಿರ್ಗಮಿಸಿದ್ದರು.

ಅಲ್ಲದೇ ಸಿಂಗಪುರ ಓಪನ್‌ನಲ್ಲಿ ನಡೆದ 45 ನಿಮಿಷಗಳ ಹೋರಾಟದಲ್ಲಿ ಜಪಾನ್‌ನ ಕೆಂಟಾ ನಿಶಿಮೊಟೊ ವಿರುದ್ಧ ಪರಾಭವಗೊಂಡಿದ್ದರು. ಈ ಟೂರ್ನಿಯಲ್ಲಿ ಬ್ರೆಜಿಲ್‌ನ ಯಗೊರ್ ಕೊಯೆಲ್ಹೋ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ.


ಭಾರತದ ಎಚ್‌.ಎಸ್‌ ಪ್ರಣಯ್

ಸಮೀರ್ ವರ್ಮಾ ಆರಂಭಿಕ ಸುತ್ತಿನಲ್ಲಿ ಇಂಡೊನೇಷ್ಯಾದ ಚಿಕೊ ಔರಾ ಡ್ವಿ ವಾರ್ಡೊಯೊ ಅವರನ್ನು ಹಾಗೂ ರವಿ ಅವರು ಸಿಂಗಪುರದ ಎಂಟನೇ ಶ್ರೇಯಾಂಕದ ಲೋಹ್ ಕೀನ್ ಯೂ ಅವರನ್ನು ಎದುರಿಸಲಿದ್ದಾರೆ.

ಕರ್ನಾಟಕದ ಮಿಥುನ್ ಮಂಜುನಾಥ್, ಇಂಡೊನೇಷ್ಯಾದ ಅಲ್ವಿ ಫರ್ಹಾನ್ ವಿರುದ್ಧ; ಕಿರಣ್ ಜಾರ್ಜ್, ಕೆನಡಾದ ಕ್ಸಿಯಾವೊಡಾಂಗ್ ಶೆಂಗ್ ವಿರುದ್ಧ; ಎಸ್.ಶಂಕರ್ ಮುತ್ತುಸಾಮಿ ಸುಬ್ರಮಣಿಯನ್, ಅಗ್ರ ಶ್ರೇಯಾಂಕದ ಇಂಡೊನೇಷ್ಯಾದ ಜೊನಾಟನ್ ಕ್ರಿಸ್ಟಿ ವಿರುದ್ಧ ಸೆಣಸಲಿದ್ದಾರೆ.

ಮಹಿಳಾ ಸಿಂಗಲ್ಸ್‌ನಲ್ಲಿ ಎಂಟನೇ ಶ್ರೇಯಾಂಕದ ಆಕರ್ಷಿ ಕಶ್ಯಪ್ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ. ಅವರು ಆರಂಭಿಕ ಸುತ್ತಿನಲ್ಲಿ ಉಕ್ರೇನ್‌ನ ಪೊಲಿನಾ ಬುಹ್ರೋವಾ ಅವರನ್ನು ಎದುರಿಸಲಿದ್ದಾರೆ. ಅಶ್ಮಿತಾ ಚಾಲಿಹಾ ಅವರು ಪೆರುವಿನ ಇನೆಸ್ ಲೂಸಿಯಾ ಕ್ಯಾಸ್ಟಿಲ್ಲೊ ವಿರುದ್ಧ; ಅನುಪಮಾ ಉಪಾಧ್ಯಾಯ ಅವರು ಮಲೇಷ್ಯಾದ ವಾಂಗ್ ಲಿಂಗ್ ಚಿಂಗ್ ವಿರುದ್ಧ, ಸಮಿಯಾ ಇಮಾದ್ ಫಾರೂಕಿ ಅವರು ಅಗ್ರ ಶ್ರೇಯಾಂಕದ ಜಪಾನ್‌ನ ಅಕಾನೆ ಯಮಗುಚಿ ವಿರುದ್ಧ ಸೆಣಸಲಿದ್ದಾರೆ.

ನೇಪಾಳ ತಂಡಕ್ಕೆ ಲಾಮಿಚಾನೆ

ಕಿಂಗ್‌ಸ್ಟೌನ್ (ಸೇಂಟ್ ವಿನ್ಸೆಂಟ್), (ಪಿಟಿಐ): ಅಮೆರಿಕದ ವೀಸಾ ನಿರಾಕರಣೆಯ ಕಾರಣ ನೇಪಾಳ ತಂಡದ ಎರಡು ಲೀಗ್ ಪಂದ್ಯಗಳನ್ನು ಕಳೆದುಕೊಂಡಿದ್ದ ಪ್ರಮುಖ ಆಟಗಾರ ಸಂದೀಪ್ ಲಾಮಿಚಾನೆ ಅವರು ಕೆರೀಬಿಯನ್ ಲೆಗ್‌ನ ಕೊನೆಯ ಎರಡು ಪಂದ್ಯಗಳಿಗೆ ತಂಡವನ್ನು ಸೇರಿಕೊಳ್ಳಲಿದ್ದಾರೆ ಎಂದು ಆ ದೇಶದ ಕ್ರಿಕೆಟ್ ಸಂಸ್ಥೆ ತಿಳಿಸಿದೆ.

ಲಾಮಿಚಾನೆ ಅವರು ನೇಪಾಳ ಪ್ರಕಟಿಸಿದ್ದ 15 ಸದಸ್ಯರ ಮೂಲ ತಂಡದಲ್ಲಿ ಸ್ಥಾನ ಪಡೆದಿದ್ದರು. ಅತ್ಯಾಚಾರ ಪ್ರಕರಣದಲ್ಲಿ ಎಂಟು ವರ್ಷ ಜೈಲು ಶಿಕ್ಷೆಗೆ ಗುರಿಯಾಗಿದ್ದ ಅವರು ಸಾಕ್ಷ್ಯಗಳ ಕೊರತೆಯಿಂದಾಗಿ ಕೋರ್ಟ್‌ನಿಂದ ಖುಲಾಸೆಗೊಂಡಿದ್ದರು.

ನೇಪಾಳ ಸರ್ಕಾರ ಎರಡು ಬಾರಿ ಮಧ್ಯಪ್ರವೇಶ ಮಾಡಿದರೂ ಅಮೆರಿಕ ಅವರಿಗೆ ವೀಸಾ ನಿರಾಕರಿಸಿತ್ತು. ಹೀಗಾಗಿ ಆ ದೇಶದಲ್ಲಿ ನಡೆದ ಎರಡು ಪಂದ್ಯಗಳಲ್ಲಿ ಅವರು ಆಡಲು ಆಗಿರಲಿಲ್ಲ. ನೇಪಾಳವು ಜೂನ್ 14ರಂದು ದಕ್ಷಿಣ ಆಫ್ರಿಕಾ ವಿರುದ್ಧ, 16ರಂದು ಬಾಂಗ್ಲಾದೇಶ ವಿರುದ್ಧ ಆಡಲಿದೆ.

ಫಿಫಾ ವಿಶ್ವಕಪ್ ಅರ್ಹತಾ ಟೂರ್ನಿಯ 'ಎ' ಗುಂಪಿನ ಪಂದ್ಯ

ಚೆಟ್ರಿ ಇಲ್ಲದ ಭಾರತಕ್ಕೆ ಇಂದು ಕತಾರ್ ಸವಾಲು

ದೋಹಾ (ಪಿಟಿಐ): ಸುಮಾರು ಎರಡು ದಶಕಗಳ ಕಾಲ ಭಾರತದ ಫುಟ್‌ಬಾಲ್ ರಂಗದ ತಾರೆಯಾಗಿ ಮಿನುಗಿದ್ದ ಸುನಿಲ್ ಚೆಟ್ರಿ ಅವರ ನಿವೃತ್ತಿ ಈಗ ತಂಡದಲ್ಲಿ ನಿರ್ವಾತ ಸೃಷ್ಟಿಸಿದೆ. ಅವರಿಲ್ಲದ ಭಾರತ ತಂಡ, ಮಂಗಳವಾರ ನಡೆಯಲಿರುವ ಫಿಫಾ ವಿಶ್ವಕಪ್ ಅರ್ಹತಾ ಟೂರ್ನಿಯ 'ಎ' ಗುಂಪಿನ ಪಂದ್ಯದಲ್ಲಿ ಪ್ರಬಲ ಕತಾರ್ ತಂಡವನ್ನು ಎದುರಿಸಬೇಕಾಗಿದೆ.

ಕಳೆದ ವಾರ ಕುವೈತ್ ವಿರುದ್ಧ ಕೋಲ್ಕತ್ತದಲ್ಲಿ ನಡೆದ ಅರ್ಹತಾ ಪಂದ್ಯದಲ್ಲಿ ಚೆಟ್ರಿ ಕೊನೆಯ ಬಾರಿ ರಾಷ್ಟ್ರೀಯ ತಂಡದ ಪರ ಆಡಿದ್ದರು. ಚೆಟ್ರಿ ಅವರಿಗೆ ಗೆಲುವಿನ ಉಡುಗೊರೆ ನೀಡಲು ತಂಡಕ್ಕೆ ಆಗಿರಲಿಲ್ಲ. ಆ ಪಂದ್ಯ ಗೋಲಿಲ್ಲದೇ 'ಡ್ರಾ' ಆಗಿತ್ತು. 151 ಪಂದ್ಯಗಳನ್ನಾಡಿರುವ ಚೆಟ್ರಿ 94 ಗೋಲುಗಳನ್ನು ಹೊಡೆದಿದ್ದಾರೆ.

72 ಅಂತರರಾಷ್ಟ್ರೀಯ ಪಂದ್ಯಗಳನ್ನಾಡಿರುವ ಗೋಲ್ ಕೀಪರ್ ಗುರುಪ್ರೀತ್ ಸಿಂಗ್ ಸಂಧು ಅವರು ಭಾರತ ತಂಡವನ್ನು ಮುನ್ನಡೆಸಲಿದ್ದಾರೆ. 32 ವರ್ಷದ ಸಂಧು ತಂಡದಲ್ಲಿ ಹೆಚ್ಚಿನ ಅನುಭವ ಹೊಂದಿರುವ ಆಟಗಾರರಾಗಿದ್ದಾರೆ.

ಚೆಟ್ರಿ ಅನುಪಸ್ಥಿತಿಯಲ್ಲಿ ಜಾಸಿನ್ ಬಿನ್ ಹಮದ್ ಕ್ರೀಡಾಂಗಣದಲ್ಲಿ ಭಾರತಕ್ಕೆ ಸತ್ವಪರೀಕ್ಷೆ ಎದುರಾಗಲಿದೆ. ಇಲ್ಲಿ ಸೋಲು ಎದುರಾದರೆ, ವಿಶ್ವಕಪ್ ಅರ್ಹತಾ ಮೂರನೇ ಸುತ್ತಿನಲ್ಲಿ ಆಡುವ ಕನಸು ಕೂಡ ಕೈಜಾರಲಿದೆ ಎಂದು ತಂಡಕ್ಕೂ ತಿಳಿದಿದೆ. ಭಾರತ ಈಗ –3 ಗೋಲು ವ್ಯತ್ಯಾಸದೊಡನೆ ಗುಂಪಿನಲ್ಲಿ ಎರಡನೇ ಸ್ಥಾನದಲ್ಲಿದೆ.


ಅಭ್ಯಾಸದಲ್ಲಿ ನಿರತವಾಗಿರುವ ಭಾರತ ತಂಡದ ಆಟಗಾರರು –ಎಕ್ಸ್ ಚಿತ್ರ

ಸೌದಿ ಅರೇಬಿಯಾದ ಹೌಫ್‌ನಲ್ಲಿ ಕಳೆದ ವಾರ ನಡೆದ ಪಂದ್ಯದಲ್ಲಿ ಕತಾರ್ ಜೊತೆ ಗೋಲಿಲ್ಲದೇ 'ಡ್ರಾ' ಮಾಡಿಕೊಂಡಿದ್ದ ಅಫ್ಗಾನಿಸ್ತಾನ ಮೂರನೇ ಸ್ಥಾನದಲ್ಲಿದೆ. ಭಾರತ ಮತ್ತು ಅಫ್ಗಾನಿಸ್ತಾನ (ತಲಾ 1 ಗೆಲುವು, 2 ಡ್ರಾ) ತಲಾ ಐದು ಪಾಯಿಂಟ್ಸ್ ಗಳಿಸಿವೆ. ಅದರೆ ಅಫ್ಗಾನಿಸ್ತಾನ ಗೋಲು ವ್ಯತ್ಯಾಸ (–10) ಹೆಚ್ಚು ಇದೆ.

ಈ ಎಲ್ಲ ಕಾರಣಗಳಿಂದ ಇಗೊರ್ ಸ್ಟಿಮಾಚ್ ತರಬೇತಿಯಲ್ಲಿರುವ ಭಾರತ ತಂಡದ ಆಟಗಾರರ ಮೇಲೆ ಹೆಚ್ಚಿನ ಒತ್ತಡವೂ ಇದೆ.

ಗುಂಪಿನಲ್ಲಿ ಅಗ್ರಸ್ಥಾನ (13 ಪಾಯಿಂಟ್ಸ್) ಗಳಿಸಿ ಈಗಾಗಲೇ ಮೂರನೇ ಸುತ್ತಿಗೆ ಮುನ್ನಡೆದಿರುವ ಕತಾರ್ ಯುವ ತಂಡವನ್ನು ಹೊಂದಿದೆ. ತಂಡದಲ್ಲಿರುವ 29 ಮಂದಿ ಆಟಗಾರರ ಪೈಕಿ 21 ಮಂದಿ 24 ವರ್ಷಕ್ಕಿಂತ ಕಡಿಮೆ ವಯಸ್ಸಿನವರು.

ದೋಹಾದಲ್ಲಿ ಎರಡು ದಿನ ಅಭ್ಯಾಸ ನಡೆಸಿರುವ ಭಾರತ ಮಂಗಳವಾರದ ಪಂದ್ಯ ಗೆದ್ದಲ್ಲಿ, ಗುಂಪಿನಲ್ಲಿ ಎರಡನೇ ಸ್ಥಾನದೊಡನೆ ಮೂರನೇ ಸುತ್ತಿಗೆ ಹೋಗುವ ದಾರಿ ಸುಲಭವಾಗಲಿದೆ. ಜೊತೆಗೆ ಏಷ್ಯನ್ ಕಪ್‌ನಲ್ಲಿ ಆಡಲು ನೇರ ರಹದಾರಿಯೂ ಸಿಗಲಿದೆ.

ಒಂದೊಮ್ಮೆ ಕತಾರ್ ಎದುರು 'ಡ್ರಾ' ಮಾಡಿಕೊಂಡಲ್ಲೂ ಮೂರನೇ ಸುತ್ತಿಗೆ ಹೋಗುವ ತಂಡಕ್ಕೆ ಅವಕಾಶವಿದೆ. ಆದರೆ ಕುವೈತ್ ಮತ್ತು ಅಫ್ಗಾನಿಸ್ತಾನ ನಡುವಣ ಪಂದ್ಯವೂ 'ಡ್ರಾ' ಆಗಬೇಕಷ್ಟೇ. ಆಗ ಉತ್ತಮ ಗೋಲು ವ್ಯತ್ಯಾಸದಲ್ಲಿ ಭಾರತ ಮುನ್ನಡೆಯಲಿದೆ. 'ಎ' ಗುಂಪಿನಲ್ಲಿ ಕುವೈತ್ ನಾಲ್ಕನೇ ಸ್ಥಾನದಲ್ಲಿದ್ದರೂ, ಗೆದ್ದಲ್ಲಿ ಅದಕ್ಕೂ ಅವಕಾಶ ಇಲ್ಲದಿಲ್ಲ.

ಚೆಟ್ರಿ ನಂತರ ಮುಂದೆ ಯಾರು ಎಂಬ ಪ್ರಶ್ನೆ ದೀರ್ಘ ಕಾಲದಿಂದ ಕೇಳಿಬರುತ್ತಿದೆ. ಅದಕ್ಕೆ ಉತ್ತರ ಇನ್ನೂ ಸಿಕ್ಕಿಲ್ಲ. ಅಂಥ ಪರ್ಯಾಯ ಆಟಗಾರನ ಲಕ್ಷಣ ಇದುವರೆಗೆ ಯಾರಲ್ಲೂ ಕಂಡಿಲ್ಲ.

ಬದಲಿ ಆಟಗಾರನಾಗಿ ಈ ಹಿಂದಿನ (ಕುವೈತ್ ವಿರುದ್ಧ) ಪಂದ್ಯದಲ್ಲಿ ಕಣಕ್ಕಿಳಿದಿದ್ದ ರಹೀಮ್ ಅಲಿ 'ಫಿನಿಷಿಂಗ್ ಕೌಶಲದಲ್ಲಿ' ಹಿಂದೆಬಿದ್ದಿದ್ದರು. ಮುನ್ಪಡೆಯಲ್ಲಿರುವ ಮನ್ವೀರ್ ಸಿಂಗ್, ವಿಕ್ರಮ್ ಪ್ರತಾಪ್ ಸಿಂಗ್ ಮತ್ತು ಡೇವಿಡ್ ಲಾಲನ್‌ಸಂಗ ಇನ್ನೂ ಛಾಪು ಮೂಡಿಸಿಲ್ಲ.

ಭಾರತದ ಈ ದೌರ್ಬಲ್ಯವನ್ನು ಕತಾರ್ ತನ್ನ ಲಾಭಕ್ಕೆ ಬಳಸಲು ಮುಂದಾಗುವುದು ಖಚಿತ. ಹೀಗಾಗಿ ಡಿಫೆಂಡರ್‌ಗಳಾದ ಅನ್ವರ್ ಅಲಿ, ಮೆಹ್ತಾಬ್ ಸಿಂಗ್, ನಿಖಿಲ್ ಪೂಜಾರಿ ಮತ್ತು ರಾಹುಲ್ ಭೆಕೆ ಅವರು ಒತ್ತಡ ನಿಭಾಯಿಸಬೇಕಾಗಲಿದೆ.

ಮಿಡ್‌ಫೀಲ್ಡ್‌ನಲ್ಲಿ ಸಹಲ್ ಅಬ್ದುಲ್ ಸಮದ್, ಅನಿರುದ್ಧ ಥಾಪಾ, ಬ್ರೆಂಡನ್ ಫರ್ನಾಂಡಿಸ್, ಲಿಸ್ಟನ್ ಕೊಲಾಕೊ ಮತ್ತು ಲಾಲಿಯನ್‌ಜುವಾಲ ಚಾಂಗ್ಟೆ ಅವರು ಪಾಸಿಂಗ್‌ನಲ್ಲಿ ಚುರುಕಾದಲ್ಲಿ ಈ ಒತ್ತಡ ಕಡಿಮೆಯಾಗಬಹುದು.

ಪಂದ್ಯ ಆರಂಭ: ರಾತ್ರಿ 9.15